ಸಂಪುಟ ೫
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ
೧೯೭೩

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'**ಕರ್ನಾಟಕ ಭಾರತಿ**'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೫ ಸಂಚಿಕೆ : ೩

ಪ್ರಧಾನ ಸಂಪಾದಕರು
ಡಾ || ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು
ಡಾ || ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೫, ಸಂಚಿಕೆ : ೩
ಜನೇವರಿ ೧೯೭೩

ಸಂಕ್ರಮಣ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ - ೨೦

ಪ ರಿ ವಿ ಡಿ

ಕಪ್ಪು ರಾವಣ

ಕಪ್ಪು ಹೆಪ್ಪುಗಟ್ಟಿದಾಕಾಶದೇಹಿ ದೈತ್ಯರಾವಣನ ಮುಂಡ ಕುಣಿಯುತ್ತಿದೆ.
ಬಾ ಗೆಳೆಯಾ ಬಯಲಿಗೆ.
ಮೂಲೋಕ ತುಂಬ ಕೆಂಡಕಾರುವ ಕೀಸು ನಗೆ
ಮೆರವಣಿಗೆ, ಜಯಧ್ವನಿ ಮೊಳಗುತ್ತಿದೆ.
ತಾಳ ತಮ್ಮಟೆ ಹಿಡಿ, ಶಂಖ ಹೊಡೆ.
ಸುಂಟರಗಾಳಿ ತಿದಿಹೊಟ್ಟೆಯುಬ್ಬಿಸಿ ಸಮ್ಮೋಹನಾಸ್ತ್ರ ವಶೀಕರಣ
ವಿದ್ಯೆಗಿದ್ಯೆಗಳ ದುರ್ಬುದ್ಧಿ ಮಲೆತು
ಹದ್ದು ಮೀರಿದ ಹದ್ದು, ಮುಗಿಲ ಮೋರೆಯ ತುಂಬ
ಗಿರಕಿ ಹಾಕುವ ಗೀಚು ಚಿತ್ರಕ್ಕೆ ಬಣ್ಣಕೊಟ್ಟು,
ಇದ್ದವರ ಎದೆಯಲ್ಲಿ ಒದ್ದೆಯಾಗಿ ನಿಂತಿದ್ದಾನೆ ಹೊಸರಾವಣ.
ಮಜ್ಜಿಗೆಯ ರಾಮಾಯಣದ ಲಂಕಾಧೀಶ್ವರ.

ಹೀಗೆಯೇ—
ಅಂತೆ ಹಾಗೆ ಪೋಲ್ ಕತೆಗಿತೆಗಳ ಹಳೆಹೊಂಡ ದಂತದ ಗಂಗೆ
ನಳನಳಿಸಿ ಅಲ್ಲಲ್ಲಿ ಮುಖ ಎತ್ತಿನಿಂತ ಕಮಲ ಕಣ್ಣಿಗೆ ಸುಣ್ಣಗೆ.
ಗೊತ್ತಿದೆಯಲ್ಲ! ಏನು ಮಾಡಿದ ಭಾರತಧರ್ಮ.
ಅವನೊಬ್ಬ ಹೇಡಿ. ಗೂಟಕ್ಕೆ ಸಿಗಹಾಕಿದ ಹೊಸ ಅಂಗಿ.
ಹಾಕಲಿಲ್ಲಾ ಹರಿಯಲಿಲ್ಲಾ.
ಮಡಿಪವರು ಜೀವಕ್ಕೆ ತತ್ತರಿಸುವಾಗ.ದುಡಿದವರು ದಂಗಾಗಿ ಏದುಸುರುವಾಗ
ನರಳು ಕೂಗು ಭೂತ ಕೇಕೆ ಕುಚೇಷ್ಟೆಗಳ ನಡುವೆ
ಕುಳಿತ ನೆಟ್ಟನೇ.
ಪಟ್ಟಕಟ್ಟಿಸಿಕೊಂಡು ನೀಟಾಗಿ "ಗಂಡರ ಗಂಡ ಭೇರುಂಡ,"
ಕೆನ್ನೆತ್ತರ ಕರಣೆಯಾಗಿದ್ದ ಸಿಂಹಾಸನ ಒರೆಸಿಕೊಂಡು.

ಏನು ಹೇಳಲಿ ಗೆಳೆಯಾ?
ಈ ಹಳೆಪಾಠ ಬಾಯ್‌ಪಾಠ ಹೊಡೆದು ಗಿಟ್ಟಿಸುವ ಖೋಟಾ

ಪ್ರಮಾಣ ಪತ್ರಕ್ಕೆ, ಸುಡಗಾಡಸಿದ್ಧ ಕೊಟ್ಟ ಹೊಟ್ಟೆಯೊಂದಿದೆಯಲ್ಲ!
ಪ್ರತಿದಿನ ಸೂರ್ಯ ಹುಟ್ಟುತ್ತಾನೆಂಬುದಕ್ಕೆ ದೇವರಾಣೆ ಮಾಡುತ್ತೇವೆ.
ಸತ್ಯ, ಶಾಂತಿ, ಅಹಿಂಸೆಯ ಮೆತ್ತನ್ನ ತಲೆದಿಂಬಿನಲ್ಲೆಷ್ಟೋ
ತಗಣೆಗಳ ಹುಟ್ಟಿಸಿಕೊಂಡು, ತಲಿ ಹೇರಿ ಮಲಗುತ್ತೇವೆ.
ಬೆಚ್ಚನ್ನ ಕೌದಿ ಮೈಯೊಳಗಿದ್ದ ತ್ಯಾಪಿ ನಕ್ಷೆಯವೇನೋ
ಅಮ್ಮನ ಹರೆಯ ಕೈಚಳಕ ಗ್ಯಾಸಿಸಿ
ಮತ್ತೆ ಮತ್ತೆ ಬೆರಳಾಡಿಸಿ ಕಣ್ಣು ಮುಚ್ಚುತ್ತಲೇ
ಕತ್ತಲಡಗಿ ಲೋಕ ಬದಲಾಗುತ್ತದೆ.
ಹಗ್ಗಕತ್ತರಿ ಹುಡುಕಿ ಹುಟ್ಟಿದ ಹಸು ಮಕ್ಕಳ ಹೊಕ್ಕುಳದ
ಹುರಿ ಕೊಯ್ದು ಹೊರೆಕಟ್ಟಿ ಮಾರುತ್ತೇವೆ.
ಪ್ರೀತಿ ನಸುಗುಂದಿ ಪುಡಿ ಒರೆಸಿ ಮಾಸ್ತರನ ಕಾಡುತ್ತೇವೆ.
ಹದಾ ಹಾಕಿ ಕದಾ ಹಾಕಿ ಹೊಸ ಕತೆ ಮಾಡುತ್ತೇವೆ.

ಅಗಾ! ಬಾಗಲಿಗೇ ಬಂದಳು ಭಾಗ್ಯದ ಲಕ್ಷ್ಮಿ, ಎಲ್ಲಮ್ಮ
ಚಂದಕ್ಕೆ ಜಿಂಗಾಗಿ ಸೋರಿ, ಜೋತಾಡುವ ಜೋಗತಿಯ ಜೀವ
ಕಾಯ್ದಿದ್ದಾಳೆ ಏಳು ಕೊಳ್ಳದ ತಾಯಿ.
ತನು ಮನ ಜನ ಜಾಗೃತಿ ಭಂಡಾರ ಬಡಿದುಕೊಂಡು,
ಸವೆದ ಸದ್ದಾಗದ ಕಾಲ್ಗೆಜ್ಜೆ ಬಿಗಿದು
ತಿರುಗಿ ತಿಂದು ಕಮುರು ತೇಗು ಹೊಡೆಯುತ್ತಿದ್ದಾಳೆ.
ಗೋದಲೆಯಲ್ಲಿ ಬಿಗಿದಿದ್ದ ಹೋರಿ ಬಾಲ ನಿಗುರಿಸಿ
ನಿಂತಲ್ಲೆ ಘುರುಕಿ ಒಗೆಯುತ್ತಿದೆ.

ಬಾ ಗೆಳೆಯ ಬಯಲಿಗೆ,
ಇತಿಹಾಸ ಬಿಸಿ ಮಾಡಿದವರೂರಿದ ಭಾವೈಕ್ಯ ಬೀಜ
ಮೊಳೆತು ಟಿಸಿಲೊಡೆದು ಬೇರು ಮೇಲಾಗಿ ಬೆಳೆದ ಮರದಲ್ಲಿ
ಕೊಂಬೆಗುಂಟ ಜೋತಾಡಿ ಲಾಗ ಹಾಕುತ್ತಿದೆ ಮಂಗ
ಹಸಿದು ಮರಿಯ ಮೈ ಹೇನು ಹುಡುಕುತ್ತಿದೆ.
ಬುತ್ತಿ ತರುವ ಹೊಲ ಕಾಯ್ವ ಹುಡುಗಿಯ ಹೊಟ್ಟೆಯ ಮೇಲೆ

ಕಾಲ್ಕೊಟ್ಟು ಹಲ್ಕಿಸಿದ ಠೀವಿ. ಎಂಥ ಸುಂದರ, ಭಯಂಕರ
ಮುಂದೆ ಸೀತಾ ವಸ್ತ್ರಾಪಹರಣ ಎಂಥ ಕಥೆ ಎಂಥ ವಸ್ತು!
ಘಟನೆ ಅತಿ ಹೊಸತು.
ರಾವಣಗಾಗದ ಜಯ ಸಾಧಿಸಿದ ಮಂಗಮರಿರಾವಣರ ಉದಯಕ್ಕೆ
ದುಃಶಾಸನ ದುರ್ಯೋಧನರ ದುರಭಿಮಾನದ ಕೋಡು ಚಿಗಿತು
ಹೂ ಬಿಟ್ಟ ವಸಂತ ಕಾಲ.
ಕಳ್ಳಿಯ ಸಾಲ ಕೆಳಗೆ ಕೇದಗೆಯ ನಾತ ಹೊಡೆದದ್ದು
ಚಂದಾಗಿ ಬೆಳೆದ ತೋಟದ ಯಾಲಕ್ಕಿಯ ತುಂಬೆಲ್ಲ
ಇಲಿ ಹಿಕ್ಕಿ ತುಂಬಿದ್ದು ಐಸೋಜಿಗ.

ಬಾ ಗೆಳೆಯಾ ಬಯಲಿಗೆ,
ಹೂವೆಲ್ಲ ಹಾವಾಗಿ ಹೆಡೆಯೆತ್ತಿ ನಡೆದಾಡುವ ಕಾಳ ರಾತ್ರಿ
ಪುಂಗಿ ಊದುವ ಒಂಟಿ ಗಂಟಲ ಒಣಗಿ ಬೇಸತ್ತಾಗ,
ಧಿತ್ತೆಂದು ನೆಲಮುಗಿಲಿಗೇಕಾಗಿ ನಿಂತು
ಹತ್ತೂ ಬಾಯ್ತೆರೆದು ಶಿರ ಬಿಗಿದು ಊದುತ್ತಿದ್ದಾನೆ ಪುಂಗಿ
ಕಪ್ಪು ರಾವಣ.
ಕಾಗೆ ಮೆಟ್ಟು ಕಿಡಿ ಕಿಡಿ ಕಣ್ಣು ತುಂಬುತಿದೆ ಮರಣ.

★ **ಸೋಮಶೇಖರ ಇಮ್ರಾಪೂರ**

ಕೆಲವು ಕರ್ಣಾಟ ವಿಷಯ ಭಾಷಾ ಜಾತಿಗಳು

(ಉತ್ಸಾಹ, ಉತ್ಸಾಹದಂಡಕ, ಲಯೋತ್ತರ, ಉತ್ಸಾಹ ರಗಳೆ)

ಅಕ್ಷರವೃತ್ತ, ಮಾತ್ರಾವೃತ್ತ ಇವುಗಳಿಂದ ಭಿನ್ನವಾದ ಅಚ್ಚಗನ್ನಡದ ಅಂಶಗಣಾತ್ಮಕ ಕೆಲವು ಜಾತಿಛಂದಗಳು ಇರುವುದನ್ನು ಕನ್ನಡ ಛಂದೋಂಬುಧಿಯ ಕರ್ತೃವಾದ ನಾಗವರ್ಮನೂ ಸಂಸ್ಕೃತದಲ್ಲಿ ಛಂದೋನುಶಾಸನವನ್ನು ರಚಿಸಿದ ಜಯಕೀರ್ತಿಯೂ ಹೇಳಿದ್ದಾರೆ. ಈ ಗ್ರಂಥಗಳಲ್ಲಿ ವಿವರಿಸಿದ ಅಚ್ಚಗನ್ನಡ ಜಾತಿಗಳು ಸಾಮಾನ್ಯವಾಗಿ ಒಂದೇ ಆಗಿದ್ದರೂ ನಾಗವರ್ಮನು ಅಚ್ಚಗನ್ನಡ ಜಾತಿಗಳಲ್ಲಿ ಹೇಳಿದ ಉತ್ಸಾಹ (ಉತ್ಸವ), ಉತ್ಸಾಹದಂಡಕ ಇವುಗಳನ್ನು ಜಯಕೀರ್ತಿಯು ಅಚ್ಚಗನ್ನಡ ಜಾತಿಗಳಲ್ಲಿ ಹೇಳುವುದಿಲ್ಲ. ಮಿಶ್ರಾಧಿಕಾರದಲ್ಲಿ ಹೇಳಿದ್ದಾನೆ. ಇವು ಅಂಶಗಣಾತ್ಮಕ ಜಾತಿಗಳಾಗಿರದೆ ಮಾತ್ರಾಕ್ಷರ ಮಿಶ್ರಿತ ಗಣಗಳಿಂದ ಯುಕ್ತವಾದವುಗಳೆಂದು ಜಯಕೀರ್ತಿಯ ಅಭಿಪ್ರಾಯ.

ಉತ್ಸಾಹ

ಅಂಶಗಣಾತ್ಮಕ ಉತ್ಸಾಹದ ಪಾದದಲ್ಲಿ ೭ ಬ್ರಹ್ಮಗಣ+ಗುರು ಎಂದು ನಾಗವರ್ಮನು ಹೇಳುತ್ತಾನೆ. ಇದು ನಾಲ್ಕು ಪಾದಗಳ ವೃತ್ತ. ನಾಗವರ್ಮನು ಹೇಳುವ ಉತ್ಸಾಹದ ಲಕ್ಷ್ಯಲಕ್ಷಣ ಪದ್ಯವಿದು:

1 2 3 4 5 6 7 ಗ

ಭೂಪಿ – ತಾರ್ಥ– ಮೆನಿಸು – ವಜನ – ಗಣಮು–ಮೆಯ್ದು – ಸಪ್ತ – ಸಂ ।
ದೋಹ –ಮತ್ತ – ಮೊಂದೆ – ಗುರು ಬೆ–ಡಂಗ –ನಾಳ್ದು–ನಿಲೆಲ –ಯು ॥
ಗ್ರಾಹಿ –ಯಾಗಿ –ಮಧುರ – ವಚನ – ರಚನೆ –ಮೆತ್ತು – ಬಂದೊ–ಡು ।
ತ್ಸಾಹ –ಮೆಂಬ –ಪೆಸರೊ – ಳಿಸೆವು – ದಬ್ಬ –ಪತ್ರ – ಲೋಚ –ನೇ
॥ ೫-೧೯ ॥

ಉತ್ಸಾಹವು ಅಚ್ಚ ತೆಲುಗುಜಾತಿಯೆಂದು ತೆಲುಗು ಲಾಕ್ಷಣಿಕರೂ ಹೇಳುತ್ತಾರೆ ಎಂದರೆ ಉತ್ಸಾಹವು ಸಂಸ್ಕೃತ ಇಲ್ಲವೆ ಪ್ರಾಕೃತಜನ್ಯ ವೃತ್ತವಾಗಿರದೆ ಅದು ಅಚ್ಚ ದ್ರಾವಿಡ ಭಾಷಾ ಜಾತಿಯಾಗಿ ಬೆಳೆದು ಬಂದುದೆಂಬುದು ಸ್ಪಷ್ಟವಿದೆ. ತೆಲುಗಿನ ಉತ್ಸಾಹದ ಪಾದಕ್ಕೂ ಕನ್ನಡದಂತೆ ೭ ಸೂರ್ಯ (ಬ್ರಹ್ಮ)ಗಣಗಳು+ಗುರು. ಅಪ್ಪಕವೀಯದಲ್ಲಿ ಹೇಳಿದ ಉತ್ಸಾಹದ ಲಕ್ಷ್ಯಲಕ್ಷಣ ಪದ್ಯವಿದು :

1 2 3 4 5 6 7 ೮

ಈಹ – ವಿಂಜಿ – ಸೂರ್ಯ – ಗಣಮುಂ, – ಲೇಡು – ಗಾಂತ – ಪೈನ – ನು |
ತ್ಸಾಹ – ವೃತ್ತ – ಮನ(ఁ)ಗ(ఁ)[1] – ಗೃತುಲ(ఁ), – ಜಾಗು – ಹಂಚು – ಸತ್ರ – ವಿ ||
ವ್ಯೂಹ – ನುತುಲಂ – ಗಾಂಚ – ಕೃಷ್ಣ(ఁ), – ಜೊಡಿಸಿ – ಕಾಳ್ಳ – ನಪ್ಪು – ಪೆನ್ |
ಪ್ರೊಯಿ – ಚಾಪು – ಮನಸುಜು – ಜರುನಿ(ఁ), – ಪ್ರೊಚೆ(ఁ) – ಗಾಳ್ಳ – ಬಿಂ(ఁ)
ಮು – ಗಾನ್ || ೪-೨೭೭ ||

ತೆಲುಗಿನಲ್ಲಿ ದ್ವಿಗುರುಗಳ ಬ್ರಹ್ಮ (ಸೂರ್ಯ) ಗಣವಿಲ್ಲ. ಕನ್ನಡದ ಉತ್ಸಾಹದಲ್ಲಿಯೂ 'ಗಲ' ಇಲ್ಲವೆ ತ್ರಿಲಘುಗಳ ಗಣಗಳು ಮಾತ್ರ ಬಳಸಲ್ಪಟ್ಟಿವೆ. ಅಪ್ಪಕವೀಯದಲ್ಲಿ ಉತ್ಸಾಹದ ಪಾದದಲ್ಲಿ ನಾಲ್ಕನೆಯ ಗಣದ ಕೊನೆಗೆ ಯತಿ ಹೇಳಲಾಗಿದೆ.

ಜಯಕೀರ್ತಿಯು ಉತ್ಸಾಹದ ಪಾದದಲ್ಲಿ ೭ ಗಲಾಂಶಗಳು+ಗು ಇರುತ್ತವೆಂದು ಹೇಳುತ್ತಾನೆ. ಗಲಾಂಶದ ಮೊದಲ ಗುರುವಿಗೆ ಬದಲಾಗಿ ಎರಡು ಲಘುಗಳೂ ಬರಬಹುದಾಗಿದೆ. ಉತ್ಸಾಹಕ್ಕೆ 'ಉತ್ಸವ' ಎಂದೂ ಕರೆಯಲಾಗುತ್ತದೆಂದು ಹೇಳಿದ್ದಾನೆ:

ಊಪಿ – ತೋಂಕ್ತಿ – ತೋಃ ನ – ಲಾಂಶ – ಸಪ್ತ – ಕಂ ನಿ – ರಂತ – ರಂ |
ಗೋಃ ಪ – ನ್ಯೆಫ – ಸೇಃ ನ – ಕಾರ – ಸಪ್ತ – ಕಂ ಯ – ಪಾ ಫ – ಪಾ ||
ಪ್ಯಾಪಿ – ತಂ ತ – ಮುಘಯ – ಮಿಶ್ರ – ಸಪ್ತ – ಕಂ ತ – ಪಾ ತ – ಘೋಃ |
ತ್ಸಾಹ – ಪಾದ – ರಕ್ತ – ಪಂ ಚ – ಗೋಃ ಗ್ರ – ಪಾದಿ – ಕೇಃ ಬು – ಧಾಃ
|| ೬–೨೦ ||

ಜಯಕೀರ್ತಿಯು ಉತ್ಸಾಹವನ್ನು ಮಾತ್ರಾಕ್ಷರ ಮಿಶ್ರ ಗಣದಿಂದ ಕೂಡಿದುದೆಂದು ಹೇಳುತ್ತಾನೆ. ಇದನ್ನು ನೋಡಿದರೆ ಮಾತ್ರಾಗಣದ ಪ್ರಭಾವಕ್ಕೆ ಒಳಪಟ್ಟ ಅಂಶಗಣಾತ್ಮಕ ವೃತ್ತವೊಂದರ ಲಕ್ಷಣವನ್ನು ಅವನು ಹೇಳಹೊರಟಿರುವುದು ವ್ಯಕ್ತವಾಗುತ್ತದೆ. ಸಂಸ್ಕೃತ ಲಕ್ಷಣ ಗ್ರಂಥದಲ್ಲಿ ಬರುವ ಈ ಲಕ್ಷ್ಯಲಕ್ಷಣ ಪದ್ಯದಲ್ಲಿ ಆದಿಪ್ರಾಸವನ್ನು ಸಾಧಿಸಿರುವುದನ್ನು ನೋಡಿದರೆ ಇದು ಕನ್ನಡ ವೃತ್ತವೆಂಬ ನಂಬಿಗೆ ಅವನಿಗೂ ಇದ್ದಿತೆಂದು ಹೇಳಬಹುದು. ಇದನ್ನೆಲ್ಲ ಪರಿಶೀಲಿಸಿದಲ್ಲಿ ಉತ್ಸಾಹವು ಮೂಲತಃ ಅಂಶಗಣಾತ್ಮಕ ಕರ್ಣಾಟ ವಿಷಯ ಜಾತಿಯೆಂಬುದೇ ಸ್ಪಷ್ಟವಾಗುತ್ತದೆ. ಅಂಶಗಣಾತ್ಮಕ ಕನ್ನಡ ತೆಲುಗು ಜಾತಿಗಳು, ಸಂಸ್ಕೃತ, ಪ್ರಾಕೃತ, ಅಪಭ್ರಂಶಗಳ ಪ್ರಭಾವಕ್ಕೆ ಸಿಕ್ಕಿ ಅವುಗಳಲ್ಲಿ ಕೆಲವು ಅಕ್ಷರವೃತ್ತಗಳಲ್ಲಿ ಪರಿಣಮಿಸಿವೆ. ಇನ್ನು ಕೆಲವು ಮಾತ್ರಾವೃತ್ತಗಳಲ್ಲಿ

---

೧ (ఁ) ಇದನ್ನು ತೆಲುಗಿನಲ್ಲಿ ಪ್ರಚಾರದಲ್ಲಿರುವ ಅರ್ಧಾನುಸ್ವಾರದ ಚಿಹ್ನೆಯಾಗಿ ಇಲ್ಲಿ ಬಳಸಲಾಗಿದೆ.

ಪರಿಣಮಿಸಿವೆ. ಜಯಕೀರ್ತಿ ನಾಗವರ್ಮರ ಕಾಲಕ್ಕೆಂದರೆ ಸಾಹಿತ್ಯದಲ್ಲಿ ಬಳಸಲ್ಪಡುವ ಕೆಲವು ಅಂಶಗಣಾತ್ಮಕ ಕನ್ನಡ ಜಾತಿಗಳು ತದರ್ಧಮದರ್ಧಂ ಸ್ಥಿತಿಯಲ್ಲಿದ್ದುವು. ಅಂತಹವುಗಳಲ್ಲಿ ಉತ್ಸಾಹವೂ ಒಂದು.

ಉತ್ಸಾಹವನ್ನು ಹೋಲುವ ಅಕ್ಷರವೃತ್ತವೊಂದನ್ನೂ ಜಯಕೀರ್ತಿ ಹೇಮಚಂದ್ರರು ಹೇಳುತ್ತಾರೆ. ಜಯಕೀರ್ತಿ ಅದಕ್ಕೆ 'ಮಹೋತ್ಸವ' ಎಂದಿದ್ದರೆ[೧] ಹೇಮಚಂದ್ರನು ತೂಣಕ ಎಂದಿದ್ದಾನೆ.[೨] ಪ್ರಾಕೃತಪೈಂಗಲದಲ್ಲಿ ಇದನ್ನು 'ಚಾಮರ' ಎಂದು ಕರೆಯಲಾಗಿದೆ.[೩] ಒಟ್ಟಿನಲ್ಲಿ ಹೇಳುವುದೆಂದರೆ ಈ ಅಕ್ಷರವೃತ್ತವು ಪ್ರಾಕೃತದ ಗ್ರಂಥಗಳಲ್ಲಿಯೂ ಪ್ರಾಕೃತದ ಪ್ರಭಾವದಲ್ಲಿ ರಚಿತವಾದ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿಯೂ ಹೇಳಲ್ಪಡುತ್ತದೆ. ಪ್ರಾಕೃತದ ಪ್ರಭಾವಕ್ಕೆ ಒಳಪಡದ ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಇದರ ಉಲ್ಲೇಖವಿಲ್ಲ. ಕನ್ನಡ ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಉತ್ಸಾಹವು ಕೆಲವೆಡೆ ಶುದ್ಧ ಮಾತ್ರಾವೃತ್ತ ಸ್ವರೂಪದಲ್ಲಿದ್ದರೆ ಇನ್ನು ಕೆಲವೆಡೆ ಅಕ್ಷರವೃತ್ತ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತವೆ:

2 2 2 2 2 2 2 ಗ
ಚಕ್ರ – ರತ್ನ – ಮೊಂದೆ– ಯಲ್ತು –ಚಕ್ರಿ – ಗಾನು – ಮತ್ತೆ – ಹೋ |
ಶ್ಚಕ್ರ –ಮೆಂದು – ಬಂದು – ಮುಂದೆ –ನಿಲ್ವ – ಮಾಟ್ಕೆ – ಯುಂ ಪ್ರ – ಭಾ ||
UUU UUU
ಚಕ್ರ –**ನೊಸೆಯೆ**– ಜಿಲ್ವ – ಪೆತ್ತು –**ದುಮಯ**–ಮೆಂದು–ಪದ್ಮಿ – ನೀ |
ಚಕ್ರ – ವಾಳ – ಚಕ್ರ – ವಾಕ –ಚಕ್ರ– ಚಕ್ರ – ವರ್ತಿ – ಯಾ ||[೪]
ಅಂತ– ಕಾಂತ – ಕಂ ದಿ– ಟಕ್ಕೆ – ದೇಪ –ನೀತೆ –ಘಾಪಿ – ಪಂ |
UUU
ದಂತ– ಜೊಂದೆ – ಕಾಪ್ರ – ದೆಸ್ತ – ನಾಪ –**ತೆಱದೊ**–ಳಂ ಘ–ಯ ||
ಭ್ರಾಂತ–ಸಂ ಬ – ಟೆಕ್ಕ – ಮೊಂತು –ಮಾಪ –ದರ್ಘ –ಯುಕ್ತ–ರೋ |
ಶಾಂತಿ– ಯುಂ ಸ – ಮಂತು– ಮಾಡು –ಪ್ರದು ಗು –ಐಂ ಮ –ಹತ್ತ್ರ ರಂ ||[೫]

ಮೇಲಣ ಪದ್ಯಗಳಲ್ಲಿ ಹೆಚ್ಚಾಗಿ ಗಲಾಂಶದ ಬ್ರಹ್ಮಗಣವಿದ್ದರೂ ಕೆಲವೆಡೆ ತ್ರಿಲಘುಗಳ ಬ್ರಹ್ಮಗಣವು ಬಂದಿರುತ್ತದೆ. ಆದರೆ ಷಡಕ್ಷರದೇವನ ಮುಂದಣ ಪದ್ಯದಲ್ಲಿ ಉತ್ಸಾಹವು ಅಕ್ಷರವೃತ್ತದ ಸ್ವರೂಪದಲ್ಲಿದೆ.

---

೧ "ರಾಜ್ಜರೌ ಜರೌ ಯದಾ ಮಹೋತ್ಸವೋಗತಾಗತಮ್"—ಜಕೀ. ೨-೧೧೦, ಜಯದಾಮನ್ ಪು. ೪೭.

೨ "ಜಿರಜರಾ ಸ್ತೂಣಕಮ್"—ಹೇಛಂ. ೨-೨೫೪; ಜಯದಾಮನ್ ಪು. ೧೦೦.

೩ ಪ್ರಾಕೃತ ಪೈಂಗಲ; ೨-೧೬೮.

೪ ಪಂಪನ ಆದಿಪುರಾಣ ೧೨-೫೫. (ಶ್ರೀ ಕುಂದಣಗಾರ ಮತ್ತು ಚೌಗಲೆ)

೫ ಅಗ್ಗಳನ ಚಂದ್ರಪ್ರಭ ಪುರಾಣ; ೧೩-೭೫.

—◡— ◡— ◡— ◡—◡—◡— ◡—
ನಾಕ ಪುಂಡರೀಕಮುಂಬರಾಪಗಾಪಯಸ್ಸ್ವಿತಾ |
ಸ್ತೋಕ ಪುಂಡರೀಕ ರಾಜಿಯಿಂ ಕರಾಗ್ರದಿಂದೆ ಕೀ |
ಳ್ಕೀಕ ಕಾಲದಲ್ಲಿ ಕೆಲ್ಲಿದಂತೆಪೋಲ್ ಮೃಣಾಳ ನಾ- |
ಳೀಕದಂಬ ರುಪ್ರಮಾಪ್ರಮಾಪ್ರದೊಳ್ ವಿರಾಜಿಕುಂ ||[೭]

ಉತ್ಸಾಹ ದಂಡಕ :

ಉತ್ಸಾಹದ ಲಕ್ಷಣವನ್ನು ಹೇಳಿಯಾದಮೇಲೆ ನಾಗವರ್ಮನು ಉತ್ಸಾಹ ದಂಡಕ ಲಕ್ಷಣವನ್ನು ಕಂದಪದ್ಯದಲ್ಲಿ ಹೇಳುತ್ತಾನೆ:

ಮೃದು ಮಧುರಮೆನಿಸುವುತ್ಸಾ-
ಹ ದಂಡಕಂ ಧರೆಗೆ ನಾಕಿಯೆಂಬಜಗಣದಿಂ ||
ಪುದಿದಬಳಿ ಕಡೆಯಗುರು ಕೆ-
ಲ್ದೊದವಿರೆ ಲಕ್ಷಣನಿಯುಕ್ತಮೆಂದೆ ಪೆಸರ್ವಡೆಗುಂ || ೫-೨೦ ||

'ನಾಕಿ' ಎಂಬ ಅಜಗಣದಿಂದ ಎಂದರೆ ಗಲಾತ್ಮಕ ಬ್ರಹ್ಮಗಣದಿಂದ ಯುಕ್ತವಾಗಿ ಕೊನೆಗೆ ಒಂದು ಗುರುನಿಂದ ಕೂಡಿದ ಪಾದವುಳ್ಳುದು 'ಉತ್ಸಾಹ ದಂಡಕ' ಎಂದು ಇಲ್ಲಿ ಹೇಳಲಾಗಿದೆ. ಗಣಸಂಖ್ಯೆ ಹೇಳುವುದಿಲ್ಲ. ಭಿನ್ನ ಭಿನ್ನ ಗಣಸಂಖ್ಯೆಯಿಂದ ಬೇರೆಬೇರೆ ಉತ್ಸಾಹದಂಡಕಗಳು ಆಗುವುವೆಂದು ನಾಗವರ್ಮನ ಅಭಿಪ್ರಾಯವಿರಬಹುದು. ಜಯಕೀರ್ತಿಯೂ ಉತ್ಸಾಹದಂಡಕ ಹೇಳುತ್ತಾನೆ. ಆದರೆ ಅದನ್ನೂ ಉತ್ಸಾಹದೊಡನೆ ಮಿಶ್ರಾಧಿಕಾರದಲ್ಲಿಯೇ ಸೇರ್ಪಡೆ ಮಾಡಿದ್ದಾನೆ. 'ಯಸ್ತ್ರಿಧೋತ್ಸವೋಕ್ತ ಗಣಮಯೋ ಗುರೂತ್ತರಃ ಸ ಚೋತ್ಸವಾಭಿಧಾನ ದಂಡಕಃ'[೮]. ಇಲ್ಲಿಯೂ ಗಣ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳಿಲ್ಲ.

ಶ್ರೀ ಎಮ್. ಎ. ರಾಮಾನುಜ ಅಯ್ಯಂಗಾರರು ತಾವು ಸಂಪಾದಿಸಿದ ಛಂದೋಂಬುಧಿಯ ಟಿಪ್ಪಣದಲ್ಲಿ ಉತ್ಸಾಹದಂಡಕದ ಬಗೆಗೆ ಹೇಳಿರುವುದು: "ಈ ವೃತ್ತವನ್ನು ದಂಡಕವೆಂದು ವಿಶೇಷಿಸಿ ಹೇಳಿರುವುದರಿಂದ ಬ್ರಹ್ಮಗಣಗಳು ಎಷ್ಟು ಬೇಕಾದರೂ ಬರಬಹುದೆಂದೂ ಉತ್ಸಾಹವೆಂದು ಎಲ್ಲ ಅಜಗಣಗಳೇ ಬರಬೇಕೆಂದೂ ಹೇಳಿದಂತಾಗುವುದು. ಚಿಕದೇವರಾಜವಿಜಯ ಮುಂತಾದ ಕೆಲವು ಪ್ರಸಿದ್ಧ ಕಾವ್ಯಗಳಲ್ಲಿ ಲಯಗ್ರಾಹಿವೃತ್ತವೆಂದು ನಿರ್ದಿಷ್ಟವಾಗಿರುವ ಪದ್ಯಗಳು ಉತ್ಸಾಹದಂಡಕದ ಲಕ್ಷಣವುಳ್ಳವು ಆಗಿರುವುವು. ಲೇಖಕರು

---

೭ ಷಡಕ್ಷರಿಯ ರಾಜಶೇಖರ ವಿಳಾಸ, ೬-೭, (ಶ್ರೀ ಪಿ. ಆರ್. ಕರಿಬಸವಶಾಸ್ತ್ರಿಯವರಿಂದ ಸಂಪಾದಿತ) ಇದೇ ಕಾವ್ಯದಲ್ಲಿಯ ೯-೭೮ ಪದ್ಯವನ್ನೂ ನೋಡಿ.

೮ ಜಕೀ. ಛಂದೋನುಶಾಸನ ೬-೩೪; ಜಯದಾಮನ್ ಪುಟ ೩೩.

ವೃತ್ತಲಕ್ಷಣದಲ್ಲಿರುವ "ಲಯಗ್ರಾಹಿ" ಎಂಬ ವಿಶೇಷಣವನ್ನು ನೋಡಿ ಭ್ರಾಂತಿಯಿಂದ ಲಯಗ್ರಾಹಿ ವೃತ್ತವೆಂಬುದಾಗಿ ಬರೆದಿರುವಂತೆ ತೋರುತ್ತದೆ. ಅವೆಲ್ಲವು ಉತ್ಸಾಹದಂಡಕಗಳೇ ಹೊರತು ಲಯಗ್ರಾಹಿಯಲ್ಲ."[೯]

ಶ್ರೀ ರಾಮಾನುಜ ಅಯ್ಯಂಗಾರರ ಈ ಅಭಿಪ್ರಾಯವು ಸರಿಯಾದುದಲ್ಲ. ಉತ್ಸಾಹ ದಂಡಕವು 'ಲಯಗ್ರಾಹಿ' ವೃತ್ತದಿಂದ ಭಿನ್ನವಾಗಿದೆ. ಕನ್ನಡ ಕೈಪಿಡಿಯಲ್ಲಿ ಚಿಕದೇವರಾಜ ಬಿನ್ನಪದಿಂದ ಉಧೃತವಾದ ಲಯಗ್ರಾಹಿವೃತ್ತದಲ್ಲಿಯ ಮುಂದಣ ಪದ್ಯವನ್ನು ನೋಡಿ:[೧೦]

"ಒಂದು ದೆಸೆಯೊಳ್ತುರುಕರೊಂದು ಕಡೆಯೊಳ್ಮರಸರೊಂದೆಸೆ
ಯೊಳರೆಯರ ಬೃಂದಮಳಪಿಂ ಪೇ ||
ಱೊಂದು ಬಳಿಯೊಳ್ತಿಗುಳರೊಂದಿರಿವಿನೊಳ್ಕೊಡಗರೊಂದು
ಕೆಲದೊಳ್ ಮಲೆಪರೊಂದುಪೆರೆವೆಲ್ಲರ್ ||
ಸಂದಣಿಸಿ ಕಾಳೆಗಕೆ ಮುಂದುವರಿವನ್ನ ಮುದಟಿಂದವರ ತಟ್ಟುಗಳ
ಪಂದಲೆಗಳಿಂದಿ |
ಗ್ಟೆಂದ ಬಲಿಯುತ್ತು ನಲವಿಂದೆ ಚಿಕದೇವನೃಪನಂದಮಿಗೆ
ಪೆರ್ಚಿಸಮನೊಂದಿ ಸೋಗವಾಟ್ಸಿಂ ||"

ಷಡಕ್ಷರಿಯ ರಾಜಶೇಖರ ವಿಳಾಸದಲ್ಲಿ ಬರುವ ಲಯಗ್ರಾಹಿವೃತ್ತವಿದು:[೧೧]

"ಧೀರಜನರಿಂ ರುತವಿಚಾರಪರರಿಂ ಲಸದುದಾರಗುಣರಿಂ ಚರಿತಪೂರ
ತಿಪಥಕ್ರೈ |
ಚಾರಯುತರಿಂ ನಿಗಮಸಾರಮತರಿಂ ಸುಭಗದಾರರತರಿಂ ಹರಿಕುಮಾರ
ಪರಮಾರಾ ||
ಕಾರಮುಪರಿಂ ವಿವಿಧ ವೀರಭಟರಿಂ ವಿಜಿತ ಶೂರಪರರಿಂ ತುರಗವಾರ
ಗಜಶಿಕ್ಷಾ |
ಭಾರವಹರಿಂ ಮಿಳಪಪಾರಧನರಿಂ ಮೆರೆಗುಮಾರ ಚಿರಪಟ್ಟಣ ಮಿಳಾ
ರಮಣಯುಕ್ತಂ ||

ಇಲ್ಲಿ ಉತ್ಸಾಹದಲ್ಲಿ ಬರುವ ಬ್ರಹ್ಮಗಣಕ್ಕೆ ಎಡೆಯಿಲ್ಲ. ಕನ್ನಡ ಕೈಪಿಡಿಯಲ್ಲಿ ಈ ಲಯಗ್ರಾಹಿವೃತ್ತವು ಮಾತ್ರಾವೃತ್ತವೆಂದೂ ಇದು 'ಪ್ರತಿಪಾದದಲ್ಲಿಯೂ ಐದು ಮಾತ್ರೆಯ ಗಣವೇಳೂ ನಾಲ್ಕು ಮಾತ್ರೆಯ ಗಣವೊಂದೂ ಇರುವ ನಾಲ್ಕು ಪಾದಗಳುಳ್ಳದು' ಎಂದೂ ಹೇಳಲಾಗಿದೆ. ಇಲ್ಲಿ ಹೇಳಿದಂತೆ ಇದು ಐದು ಮಾತ್ರೆಗಳ ಪಠನೆಗೆ ಒಳಪಟ್ಟರೂ ಮೂವತ್ತು

---

೯ ಛಂದೋಂಬುಧಿ ಟಿಪ್ಪಣಿ. ಪು. ೩೦-೩೩.

೧೦ ಕನ್ನಡ ಕೈಪಿಡಿ-ಕರ್ನಾಟಕ ಛಂದಸ್ಸು-ಮಾತ್ರಾವೃತ್ತ ಪ್ರಕರಣ.

೧೧ ರಾಜಶೇಖರ ವಿಳಾಸ, ೩-೯೧ (ಶ್ರೀ ಪಿ. ಆರ್. ಕರಿಬಸವಶಾಸ್ತ್ರಿ ಸಂಪಾದಿತ)

ಅಕ್ಷರಗಳ ಸಮವೃತ್ತವಾಗಿದೆ ೨೬ ಅಕ್ಷರಗಳಿಗಿಂತ ಹೆಚ್ಚಿನ ಅಕ್ಷರಗಳ ಪಾದದ ವೃತ್ತಗಳಲ್ಲಿ ಮಾಲಾವೃತ್ತ ಮತ್ತು ದಂಡಕ ಎಂದು ಎರಡು ಭೇದಗಳನ್ನು ಮಾಡಲಾಗಿದೆ. ಮಾಲಾವೃತ್ತದ ಪಾದಗಳಲ್ಲಿ ಬರುವ ಗಣಗಳು ಯಾವುದೇ ರೀತಿಯಲ್ಲಿರಬಹುದು. ಆದರೆ ದಂಡಕಗಳಲ್ಲಿ ಒಂದಾಗಲಿ ಎರಡಾಗಲಿ ಗಣಗಳ ಪುನರಾವರ್ತನೆ ಇರುತ್ತದೆ. ಸಾಮಾನ್ಯತಃ ದಂಡಕಗಳು ಒಂದೊಂದು ಗಣದಿಂದ ವರ್ಧಿಸುತ್ತವೆ. ಕೆಲವುಗಳಲ್ಲಿ ಗುರುಲಘುಗಳ ಪುನರಾವರ್ತನೆಯಾಗುವುದೂ ಉಂಟು. ಉದಾ: ಚಂಡವೃಷ್ಟಿದಂಡಕ = ೨ ನಗಣ + ೭ ರಗಣ; ಅರ್ಣದಂಡಕ :- ೨ನಗಣ+೮ರಗಣ; ಅರ್ಣವದಂಡಕ = ೨ನಗಣ + ೯ ರಗಣ; ಅನಂಗಶೇಖರ ಎಂಬ ದಂಡಕದಲ್ಲಿ ‘ಲಗ’ಗಳ ಜೊತೆ ಇರುತ್ತದೆ.[೧೧] ಅಶೋಕ ಪುಷ್ಪಮಂಜರಿ ದಂಡಕವು ‘ಲಗ’ಗಳ ಪುನರಾವರ್ತನೆಯಿಂದ ಆಗುತ್ತದೆ.[೧೨] ಮೇಲಿನ ಲಯಗ್ರಾಹಿಯಲ್ಲಾದರೊ ‘ಭ ಜ-ಸ-ನ-ಭ-ಜ-ಸ-ನ-ಭ–ಯ’ ಎಂಬ ಅಕ್ಷರಗಣಗಳಿವೆ. ಛಂದೋಗ್ರಂಥಗಳಲ್ಲಿ ಇದನ್ನು ‘ಮಾಲಾವೃತ್ತ’ ಎಂದು ಹೇಳಲಾಗಿದೆ. ನಾಗವರ್ಮನು ಮಾಲಾವೃತ್ತಗಳಲ್ಲಿ ಇದು ‘ಲಲಿತವೃತ್ತ’ ಎಂದು ಹೇಳಿದ್ದಾನೆ.[೧೪] ಜಯಕೀರ್ತಿಯು ಇದನ್ನು ‘ಲಲಿತವೃತ್ತ’ ಎಂದೂ ‘ನೃತ್ತಲಲಿತ’ ಎಂದೂ ಕರೆದಿದ್ದಾನೆ.[೧೩] ಹೇಮಚಂದ್ರನೂ ‘ನೃತ್ತಲಲಿತ’ ಎಂದು ಹೇಳಿದ್ದಾನೆ.[೧೫] ತೆಲುಗು ಛಂದೋಗ್ರಂಥವಾದ ಅಪ್ಪಕವೀಯದಲ್ಲಿ ಇದನ್ನು ‘ಲಯಗ್ರಾಹಿ’ ಎಂದು ಹೇಳಿದೆ.[೧೬] ಈ ಹೆಸರು ಕನ್ನಡ ನಾಡಿನಲ್ಲಿಯೂ ಬಳಕೆಯಲ್ಲಿದ್ದಿರಬೇಕು. ಉತ್ಸಾಹದಂಡಕ ಎಂಬುದು ಅಕ್ಷರ ವೃತ್ತವಲ್ಲ. ಕನ್ನಡದ ಬ್ರಹ್ಮಗಣಗಳು ಪುನರಾವರ್ತನೆಗೊಳ್ಳುವ ದಂಡಕವಾಗಿದೆ. ಈ ಹೆಸರಿನಿಂದ ಕರೆಯಿಸಿಕೊಂಡ ಪದ್ಯಗಳು ಈ ವರೆಗೆ ಕನ್ನಡ ಸಾಹಿತ್ಯದಲ್ಲಿ ಕಂಡು ಬಂದಿಲ್ಲ. ಜಯಕೀರ್ತಿಯು ಹೇಳುವ ಲಯೋತ್ತರದ ಪಂಚಭೇದಗಳಲ್ಲಿ ಉತ್ಸಾಹ ದಂಡಕವೂ ಸೇರುತ್ತದೆ.

ಲಯೋತ್ತರ

ಕನ್ನಡ ಕೈಪಿಡಿಯಲ್ಲಿ ಮಾತ್ರಾವೃತ್ತ ಪ್ರಕರಣದಲ್ಲಿ ‘ಲಯೋತ್ತರ’

---

೧೧ ಹೇ. ಛಂದೋನುಶಾಸನ ೨-೩೯೭—‘ಲ್ಗಾವನಂಗ ಶೇಖರಃ’ ಜಯದಾಮನ್ ಪು. ೧೦೪.

೧೨ ಹೇ. ಛಂದೋನುಶಾಸನ ೨-೩೯೮—‘ಗ್ಲಾವಶೋಕ ಪುಷ್ಪಮಂಜರೀ’ ಜಯದಾಮನ್ ಪು. ೧೦೪.

೧೩ ಛಂದೋಂಬುಧಿ, ೩-೩.

೧೪ ‘ನೃತ್ತಲಲಿತಂ ಲಲಿತವೃತ್ತಮಪಿ ಸುಂದರ ಲಯಾತ್ತಮರಸಂ ಭಜಸನಭಜಸನಾಭ್ಯಾಂ ೨-೨೭೧.

೧೫ ದ್ವಿರ್ಭಜಸನಾಭ್ಯಾಂ ನೃತ್ತಲಲಿತಂ—೨-೩೮೩, ಜಯದಾಮನ್ ಪುಟ ೧೦೪.

೧೬ ಅಪ್ಪಕವೀಯಮು ೪-೨೪೨. ಪುಟ ೩೫೯.

ಎಂಬ ವೃತ್ತವನ್ನು ಹೇಳಿ ಇದು 'ಪ್ರತಿಪಾದದಲ್ಲಿಯೂ ತ್ರಿಮಾತ್ರಾಗಣವು ಹದಿನಾಲ್ಕು. ಪಂಚಮಾತ್ರಾಗಣವೊಂದೂ ಇರುವ ನಾಲ್ಕು ಪಾದಗಳುಳ್ಳದ್ದು' ಎಂದು ಲಕ್ಷಣ ಕೊಡಲಾಗಿದೆ. ಆದಕ್ಕೆ ಉದಾಹರಣೆಯಾಗಿ ಲೀಲಾವತಿಯಲ್ಲಿಯ ಮುಂದಣ ಪದ್ಯವನ್ನೂ ಕೊಡಲಾಗಿದೆ:

ತುಱುಗೆ ತುಂಬಿಗುರುಳ ಬಂಬಲಿದೆ ಕಪೋಲ ರಂಗದೊಳ್,
ತುಟುಂಕೆ ಪೊಂಗರಂಗದೊಳ್ ಮಱಂಗೆ ಪಿಱುಮ ಮುಂಗದೊಳ್ |
ಮಿಱುಗೆ ಪಲ್ಲ ಜವಿಗಳೊಲಿದು ನೆಲಸೆ ಜಿಲ್ವ ಯಾನದೊಳ್,
ಬೆಡಂಗು ಬಳೆಯೆ ಮಾನದೊಳ್, ಮುದಂ ತೊಡಂಕೆ ದಾನದೊಳ್ ||
ನೆಱೆಯೆ ನವಪಯೋಧರೋತ್ಥ ಕುಂಭಮುಲಿಯೆ ಪಾವದೊಳ್,
ಚಲಾಂಮುಕಂ ವಿನೋದದೊಳ್, ಕಡಂಗೆ ಮಧುರ ಮೋದದೊಳ್ |
ಮೆಱೆದು ಪುಗುಗುಮಂಗನೆಯುರುಮುಂಕದಾನೆಯುಂ ನಮ-
ನ್ನಿಕಾಮನಿಖಿಲ ಭುವನಮಂ, ತದೀಯರಾಜಭವನಮಂ || ೭-೨೭ ||

ಲಯೋತ್ತರದ ನಿಜವಾದ ಲಕ್ಷಣವನ್ನರಿಯದ ಕೈಪಿಡಿಯಲ್ಲಿ ಇದನ್ನು ಮಾತ್ರಾವೃತ್ತದಲ್ಲಿ ಎಣಿಸಿದ್ದಾರೆ. ಲಯೋತ್ತರದ ಲಕ್ಷಣವು ನಮಗೆ ದೊರೆಯುವುದು ಜಯಕೀರ್ತಿಯ ಛಂದೋನುಶಾಸನದಲ್ಲಿ. ಅವನು ಈ ವೃತ್ತದ ಲಕ್ಷಣವನ್ನು ಮಿಶ್ರಾಧಿಕಾರದಲ್ಲಿಯೇ ಹೇಳಿದ್ದಾನೆ. ಅವನು ಹೇಳುವ ಲಕ್ಷ್ಯ ಲಕ್ಷಣ ಪದ್ಯವಿದು :–

"ಉತ್ಸವಾಂಹ್ರಿ ಪೂರ್ವಕಂ ಯದಾ ರಮಾಂಹ್ರಿಕೋತ್ತರಂ ರಮಾಂಹ್ರಿಯುಗಲಕೋತ್ತರಂ
ಪ್ರೋತ್ಸಮಾನ್ತರಿತ ತದಂಹ್ರಿಕೋತ್ಸವಾಂಹ್ರಿ ನೈಧನಂ ರಮಾಂಹ್ರಿರಿತಿ ಚ ನೈಧನಂ ||
ಯತ್ಸವೋದ ಯಜ್ಞನಂ ರಮೈಕ ಪಾದದಲಪರಂ ತಥೋತ್ಸವಾದಿ ವಾ ಪರಂ |
ತ(+ತ್ಸ)ವಿಾರಿತಂ ಲಯಾನುಗಾಮಿ ಯಮಕವತ್ತರಂ ವಿಚಿತ್ರಗತಿ
ಲಯೋತ್ತರಂ || ೬–೩೨ ||

ಜಯಕೀರ್ತಿಯ ಈ ಪದ್ಯದ ಅರ್ಥವು ಪೂರ್ಣವಾಗಿ ತಮಗೆ ಆಗಿಲ್ಲವೆಂದು ಅವನ ಛಂದೋನುಶಾಸನದ ಸಂಪಾದಕರಾದ ಶ್ರೀ ಎಚ್. ಡಿ. ವೇಲಣಕರರು ತಮ್ಮದೊಂದು ಲೇಖನದಲ್ಲಿ ಹೇಳಿದ್ದಾರೆ.

" I am not able to understand wholly verse 32. It semingly contains the definition of a metre called ಲಯೋತ್ತರ in all its five verities....which are obtained by a mixture of portions of the lines of ರಮಾ and ಉತ್ಸವ " ೧೮

---

೧೮ Chandonushasan of Jayakirti and ancient Kannada metres—JBBRAS vol. XXI; P. 4.

ಲಯೋತ್ತರ ವೃತ್ತವು ರಮಾ ಮತ್ತು ಉತ್ಸಾಹ ಪಾದಗಳ ಮಿಶ್ರಣ ದಿಂದಾಗುವುದೆಂದು ಇಲ್ಲಿ ಹೇಳಲಾಗಿದೆ. ಮತ್ತು ಅದರಲ್ಲಿ ಪಂಚವಿಧಗಳೆಂದು ವಿವರಿಸಲಾಗಿದೆ. ಈ ಪಂಚವಿಧಗಳನ್ನರಿತುಕೊಳ್ಳುವ ಪೂರ್ವದಲ್ಲಿ ರಮಾ ವೃತ್ತದ ಲಕ್ಷಣವನ್ನು ಸರಿಯಾಗಿ ಗ್ರಹಿಸುವುದು ಅವಶ್ಯವಿರುತ್ತದೆ. ಯಾಕೆಂ-ದರೆ ಶ್ರೀ ವೇಲಣಕರರು ಅಲ್ಲಿಯೇ ಎಡವಿದ್ದಾರೆಂದು ಹೇಳಬೇಕಾಗಿದೆ. ಉತ್ಸಾಹದ ಲಕ್ಷಣವನ್ನು ಈ ಮೊದಲು ವಿವರಿಸಲಾಗಿದೆ. ಜಯಕೀರ್ತಿಯ ಛಂದೋನುಶಾಸನವನ್ನು ಬಿಟ್ಟರೆ ಬೇರೆ ಲಕ್ಷಣ ಗ್ರಂಥಗಳಲ್ಲಿ ರಮಾವೃತ್ತದ ಉಲ್ಲೇಖವಿಲ್ಲ. ಈ ರಮಾವೃತ್ತವನ್ನು ಜಯಕೀರ್ತಿಯು ಮಿಶ್ರಾಧಿಕಾರದಲ್ಲಿ ಉತ್ಸಾಹದ ಲಕ್ಷಣದ ತರುವಾಯ ಹೇಳಿದ್ದಾನೆ. ಉತ್ಸಾಹದ ಲಕ್ಷ್ಯ-ಲಕ್ಷಣ ಪದ್ಯದಲ್ಲಿ ಆದಿ ಪ್ರಾಸವನ್ನು ಸಾಧಿಸಿದಂತೆ ಇಲ್ಲಿಯೂ ಸಾಧಿಸಲಾಗಿದೆ. ಉತ್ಸಾಹದಲ್ಲಿ ಬರುವ ಮೂರು ಮಾತ್ರೆಯ ಬ್ರಹ್ಮಗಣಗಳೇ ಈ ವೃತ್ತ ದಲ್ಲಿಯೂ ಬರುತ್ತವೆ. ಅರ್ಥಾತ್ ಇದು ಸಹ ಮೂಲತಃ ಅಚ್ಚಗನ್ನಡದ ಅಂಶಗಣಾತ್ಮಕ ವೃತ್ತವೆಂಬುದು ಸ್ಪಷ್ಟವಿದೆ.

ಶ್ರೀ ವೇಲಣಕರರು ರಮಾವೃತ್ತದ ಲಕ್ಷಣವನ್ನು ಹೇಳುವುದು :

Rama (ರಮಾ)— A line has first a Jagan (ಜಗಣ) and the long and short letters following one another regularly until the line gets 16 letters in all. In the last 12 letters a long letter may be replaced by a short ones at the option of the poet. JK. 6, 31"[೧೯]

"—ಜಗಣ (⏑–⏑) ದ ಮುಂದೆ ಒಟ್ಟಿಗೆ ೧೬ ಅಕ್ಷರಗಳ ಪಾದವಾಗುವಂತೆ ಗುರು ಲಘುಗಳನ್ನಿಟ್ಟರೆ ಅದು ರಮಾವೃತ್ತದ ಪ್ರಸ್ತಾರವಾಗುವುದು. ಪಾದ ದಲ್ಲಿಯ ಕೊನೆಯ ೧೨ ಅಕ್ಷರಗಳಲ್ಲಿ ಬರುವ ಗುರುವಿಗೆ ಬದಲಾಗಿ ಎರಡು ಬರಬಹುದಾಗಿದೆ."

ಶ್ರೀ ವೇಲಣಕರರು ಜಯಕೀರ್ತಿಯ ರಮಾವೃತ್ತದ ಲಕ್ಷ್ಯ-ಲಕ್ಷಣ ಪದ್ಯವನ್ನು ತಪ್ಪಾಗಿ ಅಚ್ಚುಹಾಕಿಸಿ ಅದಕ್ಕನುಸರಿಸಿ ಲಕ್ಷಣವನ್ನು ಹೇಳಿದ್ದಾರೆ. ಆದರಲ್ಲಿಯೂ ಒಂದು ತಪ್ಪಾಗಿದೆ. ರಮಾ ಪಾದದ ಕೊನೆಯ ಗುರುವಿಗೆ ಬದಲಾಗಿ ಎರಡು ಲಘುಗಳು ಬರುವುದಿಲ್ಲ. ಅದನ್ನುಳಿದು ಜಗಣದ ಮುಂದಿನ ಇನ್ನಿತರ ಗುರುವಿಗೆ ಬದಲಾಗಿ ಎರಡು ಲಘುಗಳು ಬರಬಹುದಾಗಿದೆ. ಶ್ರೀ ವೇಲಣಕರರು ಅಚ್ಚು ಹಾಕಿಸಿದಂತೆ ರಮಾವೃತ್ತದ ಲಕ್ಷ್ಯ-ಲಕ್ಷಣ ಪದ್ಯ:

"ಜಕಾರ ತೋ ಗ್ಲ ಯುಗ್ಮಕಂ ನಕಾರಗಣವಿಕಲ್ಪಿತವ್ ।
ಸ್ವಕಾರಿ ಗುರು ಪರಂ ಯದಾ ಪ್ರಕಾಶ್ಯತೇ ತದಾ ರಮಾ ॥ ೬-೩೧ ॥

೧೯ Jayadaman P. 154.

ರಮಾವೃತ್ತವನ್ನು ದ್ವಿಪದಿಯಾಗಿ ಇಲ್ಲಿ ಅಚ್ಚುಹಾಕಿಸಲಾಗಿದೆ. ಅದು ದ್ವಿಪದಿಯೆಂದೇ ಶ್ರೀ ವೇಲಣಕರರು ತಿಳಿದುಕೊಂಡಂತಿದೆ. ಇದು ಅಚ್ಚುಗನ್ನಡ ವೃತ್ತವೆಂಬುದನ್ನರಿತ ಜಯಕೀರ್ತಿ ಲಕ್ಷ್ಯ-ಲಕ್ಷಣ ಪದ್ಯದಲ್ಲಿ ಪ್ರಾಸವನ್ನಳವಡಿಸಿದ್ದಾನೆ. ಪದ್ಯದಲ್ಲಿಯ ಪ್ರಾಸವನ್ನು ಗಮನಿಸಿದಲ್ಲಿ ಇದು ಚತುಷ್ಪಾದ ಪದ್ಯವೆಂಬುದು ವ್ಯಕ್ತವಾಗುತ್ತದೆ. ಇದು ಶ್ರೀ ವೇಲಣಕರರ ಗಮನಕ್ಕೆ ಬಂದಿಲ್ಲ. ರಮಾವೃತ್ತದ ಪಾದಗಳಲ್ಲಿ ೧೬ ಅಕ್ಷರಗಳಲ್ಲ. ಸಾಮಾನ್ಯವಾಗಿ ಎಂಟು ಅಕ್ಷರಗಳು. ಪಾದಗಳಲ್ಲಿ ಹಿಂದೆ ಹೇಳಿದಂತೆ ಗುರುವಿರುವ ಸ್ಥಳಗಳಲ್ಲಿ ಅದಕ್ಕೆ ಬದಲಾಗಿ ಎರಡು ಲಘುಗಳು ಬರುವುದುಂಟು. ಹಾಗಾದಲ್ಲಿ ಅಕ್ಷರಗಳ ಸಂಖ್ಯೆಯು ಹೆಚ್ಚುವುದು. ಜಯಕೀರ್ತಿಯ ಲಕ್ಷ್ಯ-ಲಕ್ಷಣ ಪದ್ಯವು ಚತುಷ್ಪದಿಯಾಗಿ ಹೀಗಾಗುವುದು:

ᑌ –ᑌ — ᑌ —ᑌ —
ಜ ⁝ ಕಾರ—ತೋ ಗ್ಲ—ಯುಗ್ಮ—ಕಂ |

ᑌᑌ ᑌ
ನ ⁝ ಕಾರ—ಗಣ ವಿ —ಕ ಲ್ಪಿ—ತಂ ||

ᑌ ᑌᑌ
ಸ್ವ ⁝ ಕಾರಿ-–ಗುರುಪ —ದಂ ಯ—ದಾ |
ಪ್ರ ⁝ ಕಾಶ್ಯ–ತೇ ತ —ದಾ ರ —ಮಾ ||

“—ಜಗಣದ ಮುಂದೆ ಎರಡು ಸಾರೆ ಗಲಾಂಶಗಳು ಬಂದು ಕೊನೆಯಲ್ಲಿ ಗುರುವೊಂದು ಬಂದರೆ ರಮಾವೃತ್ತದ ಪಾದವಾಗುವುದು. ಗಲಾಂಶದಲ್ಲಿ ಬರುವ ಗುರುವಿಗೆ ಬದಲಾಗಿ ಎರಡು ಲಘುಗಳೂ ಬರಬಹುದು (ಆಗ ಅದು ನಗಣ).

ರಮಾವೃತ್ತದಲ್ಲಿ ಬರುವ ಗಲಾಂಶಗಳು ಉತ್ಸಾಹದಲ್ಲಿ ಬರುವ ಮೂರು ಮಾತ್ರೆಯ ಬ್ರಹ್ಮಗಣಗಳು ಎಂಬುದು ಸ್ಪಷ್ಟವಿದೆ. ಪದ್ಯದ ಆರಂಭದಲ್ಲಿ ಬರುವ ಜಗಣದಲ್ಲಿಯ ಆದಿಲಘುವು ಹುಸಿಯಲ್ಲಿ ಪಠಿಸಲ್ಪಡುತ್ತದೆ. ಉಳಿಯುವ ಗಲಾಂಶವು ಬ್ರಹ್ಮಗಣವಾಗುತ್ತದೆ.

ಉತ್ಸಾಹ ಮತ್ತು ರಮಾವೃತ್ತಗಳ ಸಂಯೋಜನೆಯಿಂದ ಲಯೋತ್ತರವಾಗುವುದೆಂದೂ ಅದರಲ್ಲಿ ಪಂಚವಿಧಗಳೆಂದೂ ಜಯಕೀರ್ತಿ ಹೇಳುವನಷ್ಟೆ. ಲಯೋತ್ತರದ ಪಂಚವಿಧಗಳನ್ನು ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

೧ ನೆಯ ಬಗೆಯ ಲಯೋತ್ತರ :

“ಉತ್ಸಾಹಾಂಘ್ರಿ ಪೂರ್ವಕಂ ಯದಾ ರಮಾಂಘ್ರಿ ಕೋತ್ತರಂ (ಉತ್ಸಾಹ ಪಾದ,=೭ ಬ್ರಹ್ಮಗಣ+ಗು)+(ರಮಾಪಾದ=ಜಗಣ+೨ ಬ್ರಹ್ಮಗಣ+ಗು).

ಜಯಕೀರ್ತಿಯು ಹೇಳಿದ ಲಯೋತ್ತರದ ಲಕ್ಷಣ ಪದ್ಯವೇ ಇದಕ್ಕೆ ಲಕ್ಷ್ಯವಾಗಿದೆ :

1 2 3 4 5 6 7 ಗ
—∪ —∪ —∪ —∪ ·—∪ —∪ —∪ ಗ
ಉತ್ಸ— ಪಾಂಘ್ರಿ — ಪೂರ್ವ ಕಂ ಯು—ಪಾರ—ವಾಂಘ್ರಿ—ಕೋತ್ತ—ರಂ

ಜ 1 2 ಗ
∪ —∪ ∪∪∪ —∪ ಗ
ರ ⋮ ಮಾಂಘ್ರಿ—ಯುಗಲ— ಕೋತ್ತ — ರಂ

ಇಲ್ಲಿ ಮೊದಲಿನ ಏಳು ಗಣಗಳನ್ನು ಪಠಿಸಿದ ಮೇಲೆ ಬರುವ ಗುರುವನ್ನು ಲಯದಲ್ಲಿ ಹಿಗ್ಗಿಸಿ ತಾಳ ಪೂರ್ತಿಮಾಡಬೇಕು. ರಮಾಪಾದದ ಮೊದಲ ಲಘುವನ್ನು ಅದರ ಜೊತೆಗೆ ಹುಸಿಯಲ್ಲಿ ಪಠಿಸಿ ಮುಂದಿನ ಗಲಾಂಶವನ್ನು ಒಂದು ಗಣವಾಗಿ ಪಠಿಸಬೇಕು. ಕೊನೆಯ ಗುರುವನ್ನು ಹಿಗ್ಗಿಸಿ ಪುನಃ ತಾಳ ಪೂರ್ತಿಗೊಳಿಸಬೇಕು. ಉತ್ಸಾಹ ಪಾದದ ಕೊನೆಯಲ್ಲಿ ಯತಿ. ಇದರ ಕೊನೆಯ ಗುರುವನ್ನು ಪಾದಾಂತ್ಯ ಗುರುವಿನೊಡನೆ ಪ್ರಾಸದಲ್ಲಿ ಸಮನ್ವಯಗೊಳಿಸುವುದರಿಂದ ಲಯಕ್ಕೆ ಸುಭಗತೆ ಬರುತ್ತದೆ.

೨ನೆಯ ಬಗೆಯ ಲಯೋತ್ತರ :

"ಉತ್ಸವಾಂಘ್ರಿ ಪೂರ್ವಕಂ ರಮಾಂಘ್ರಿ ಯುಗಲಕೋತ್ತರಂ" ಮೊದಲು ಉತ್ಸವಪಾದ ಆ ಮೇಲೆ ಎರಡು ರಮಾಪಾದಗಳು. (೭ ಬ್ರಹ್ಮ+ಗು)+ (ಜಗಣ+ ೨ ಬ್ರಹ್ಮಗಣ+ಗು) + (ಜಗಣ + ೨ ಬ್ರಹ್ಮಗಣ+ಗು) :

ಕನ್ನಡ ಕೈಪಿಡಿಯಲ್ಲಿ ಲೀಲಾವತಿಯಿಂದ ಉದ್ಧೃತವಾದ 'ತುಱುಗೆ ತುಂಬಿ' ಎಂಬ ಪದ್ಯವು ಈ ಎರಡನೆಯ ರೀತಿಯ ಲಯೋತ್ತರಕ್ಕೆ ಉದಾಹರಣೆಯಾಗಿದೆ. ಇಲ್ಲಿ ಮೊದಲನೆಯ ಬಗೆಯ ಲಯೋತ್ತರವನ್ನು ಪಠಿಸಿದಂತೆ ಉತ್ಸಾಹ ಮತ್ತು ರಮಾಪಾದಗಳನ್ನು ಪಠಿಸಿ ಎರಡನೆಯ ರಮಾಪಾದದ ಆದಿ ಲಘುವನ್ನು ಹುಸಿಯಲ್ಲಿ ಪಠಿಸಬೇಕು. ಪ್ರತಿಯೊಂದು ಒಳಭಾಗದ ಅಂತ್ಯದ ಪ್ರಾಸದಿಂದ ಲಯಕ್ಕೆ ವಿಶೇಷ ಸೊಬಗು ಉಂಟಾಗುತ್ತದೆ :

1 2 3 4 5 6 7 ಗ
ತು ಱುಗೆ—ತುಂಬಿ—ಗುರುಳ—ಬಂಬ—ಬಿದೆ—ಕ—ಪೋಲ—ರಂಗ—ದೊಳ್

1 2 3 ಗ
ತು ⋮ ಱುಂಕೆ — ಪೊಂಗ — ರಂಗ — ದೊಳ್
ಮ : ಲಂಗೆ — ವಿಜಯ — ಮಂಗ — ದೊಳ್

೩ನೆಯ ಬಗೆಯ ಲಯೋತ್ತರ :

"ಪ್ರೋತ್ಸವಾಂತರಿತ ತದಂಘ್ರಿಕೋತ್ಸವಾಂಘ್ರಿ ನೈಧನಂ ರಮಾಂಘ್ರಿ ರಿತಿ ಚ ನೈಧನಂ" ಉತ್ಸವವೃತ್ತದಪಾದ ರಮಾವೃತ್ತದ ಪಾದಗಳನ್ನು

ಜೊತೆಗೊಳಿಸಿ ಪಠಿಸುವುದು. ಇದರಿಂದ ಪಾದದಲ್ಲಿ ಮೂರು ಮಾತ್ರೆಯ ಬ್ರಹ್ಮ ಗಣಗಳು ಹನ್ನೊಂದು ಮತ್ತು ಕೊನೆಗೆ ಒಂದು ಗುರು ಈ ರೀತಿಯಲ್ಲಿ ಏರ್ಪಡುವುದು. ಎರಡನೆಯ ಬಗೆಯ ಲಯೋತ್ತರವನ್ನು ಈ ರೀತಿ ಜೊತೆಗೊಳಿಸಿದರೆ ಪಾದದಲ್ಲಿ ಬ್ರಹ್ಮಗಣಗಳು ೧೫+ಗು.

1 2 3 4 5 6 7 8
i) ಉತ್ಸ—ಪಾಂಘ್ರಿ—ಪೂರ್ವ—ಕಂಯು—ಪಾದ—ಪಾಂಘ್ರಿ—ಕೋತ್ರ—ರಂ ದ—

9 10 11 ಗ
ಪಾಂಘ್ರಿ—ಯುಗಲ—ಕೋತ್ರ—ರಂ

1 2 3 4 5 6 7 8
ii) ಮಿಱುಗೆ—ಪಲ್ಲ—ಚಿಪಿಗ—ಳೊಲೆದು—ನೆಲಸೆ—ಚೆಲ್ವು—ದಾನ—ದೊಳ್ಪು—

9 10 11 12 13 14 15 ಗ
ಡಂಗು—ಬಳೆದೆ—ಮಾನ—ದೊಳ್ಮೆ—ನಂತೂ—ಡಂಕೆ— ದಾನ—ದೊಳ್

ಈ ರೀತಿಯಲ್ಲಿ ಮೊದಲಿನ ಎರಡು ಬಗೆಗಳಂತೆ ಮಧ್ಯಯತಿಯು ಅವಶ್ಯಕತೆಯಿಲ್ಲ. ಒಳಪ್ರಾಸದ ಅವಶ್ಯಕತೆಯೂ ಇರುವುದಿಲ್ಲ.

೪ನೆಯ ಬಗೆಯ ಲಯೋತ್ತರ:

"ಯುತ್ಸವೋದಯುಜ್ಜನಂ ರಮ್ಯಕಪಾದದಲಪರಂ. ರಮಾವೃತ್ತದ ಎರಡು ಪಾದಗಳಲ್ಲಿ ಒಂದನ್ನು ಉತ್ಸಾಹಪಾದದೊಡನೆ ಜೊತೆಗೂಡಿಸಿ ಇನ್ನೊಂದನ್ನು ಬಿಂಗಡಿಸುವುದು. (೧೧ ಬ್ರಹ್ಮಗಣ+ಗು)+(ಜಗಣ+ ೨ ಬ್ರಹ್ಮಗಣ+ಗು):

1 2 3 4 5 6 7 8
ನೆಱೆಯೆ— ನವಪ— ಯೋಧ — ರೊತ್ತ— ಕುಂಭ—ಮುಲಿಯೆ— ಪಾದ—ದೊಳ್ಪ—

9 10 11 ಗ
ಲಾಂದು — ಕಂಪಿ — ನೋದ — ಮೊಳ್—

1 2 3 ಗ
ಕ : ಡಾಗೆ—ಮಘರ—ಮೋದ—ದೊಳ್

ಇಲ್ಲಿ ರಮಾಂಘ್ರಿಯನ್ನು ಬಿಂಗಡಿಸುವಲ್ಲಿ ಯತಿಯು ಅವಶ್ಯ. ಅದು ಪಾದಾಂತ್ಯ ಗುರುವಿನೊಡನೆ ಪ್ರಾಸದಿಂದ ಕೂಡಿದ್ದರೆ ಹೆಚ್ಚು ಸೊಬಗು.

೫ನೆಯ ಬಗೆಯ ಲಯೋತ್ತರ:

'ತಥೋತ್ಸಪಾದಿ ಮಾ ಪರಮ್' ಉತ್ಸಾಹಪಾದವನ್ನು ಬಿಂಗಡಿಸಿ ರಮಾಪಾದಗಳೆರಡನ್ನು ಸಂಯೋಜಿಸಿ ಹೇಳುವುದು:

(೭ ಬ್ರಹ್ಮಗಣ+ಗ)+(ಜಗಣ+೬ ಬ್ರಹ್ಮಗಣ+ಗ) ಉದಾ :

1 2 3 4 5 6 7 ಗ
ತುಱುಗೆ-ತುಂಬಿ-ಗುರುಳ-ಬಂಬ-ಲಿವೆಕ-ಪ್ರೋಲ-ರಂಗ-ದೊಳ್

ಜ 1 2 3 4 5 6 ಗ
ತುಃ ೞುಂಕೆ-ಪ್ರೊಂಗ-ರಂಗ-ದೊಳ್ಕ-ಲಂಗೆ-ವಿಜಯ-ವಂಗ-ದೊಳ್

ಇಲ್ಲಿ ಉತ್ಸಾಹ ಪಾದದ ಕೊನೆಯಲ್ಲಿ ಯತಿ. ಆದರ ಕೊನೆಯ ಗುರುವನ್ನು ಪಾದಾಂತ್ಯ ಗುರುವಿನೊಡನೆ ಪ್ರಾಸದಲ್ಲಿ ಸಂಯೋಜಿಸಿದರೆ ಹೆಚ್ಚು ಸೊಬಗು. ಮೂರನೆಯ ಬಗೆಯ ಲಯೋತ್ತರವು ಉತ್ಸಾಹ ದಂಡಕವಾಗುವುದು. ಅರ್ಥಾತ್ ಉತ್ಸಾಹದಂಡಕದ ಪಾದದಲ್ಲಿ ೧೫ ಬ್ರಹ್ಮಗಣ+ಗು.

ಉತ್ಸಾಹ ಮತ್ತು ಲಯೋತ್ತರ ರಗಳೆಗಳು :

ಮಂದಾನಿಲ, ಲಲಿತ, ಉತ್ಸಾಹ ಎಂಬೀ ಮೂರು ರಗಳೆಗಳು ಪ್ರಾಮುಖ್ಯವಾಗಿ ಕನ್ನಡದಲ್ಲಿ ಬಳಕೆಯಲ್ಲಿವೆ. ಇವು ಮಾತ್ರಾ ವೃತ್ತಗಳೆಂದೂ ಮಂದಾನಿಲ ಪಾದದಲ್ಲಿ ೧೬, ಲಲಿತ ಪಾದದಲ್ಲಿ ೨೦, ಉತ್ಸಾಹದ ಪಾದದಲ್ಲಿ ೨೪ ಮಾತ್ರೆಗಳೆಂದೂ ಹೇಳಲಾಗಿದೆ. ಈ ಸಂಗತಿ ತಿಳಿಸುವ ಒಂದೆರಡು ಪದ್ಯಗಳು ಛಂದೋಂಬುಧಿಯ ಕೆಲವು ಹಸ್ತಲಿಖಿತ ಪ್ರತಿಗಳು ದೊರೆಯುತ್ತವಂತೆ. ಅವನ್ನು ಕೆಲವರು ಪ್ರಕ್ಷಿಪ್ತವೆಂದೂ ಎಣಿಸಿದ್ದಾರೆ. ಶ್ರೀ ಎಚ್. ಶೇಷ ಅಯ್ಯಂಗಾರರಿಂದ ಸಂಪಾದಿತ ಪ್ರತಿಯಲ್ಲಿ ಮುಂದಣ ಪದ್ಯವನ್ನು ಪ್ರಕ್ಷಿಪ್ತವಾಗಿ ಎಣಿಸಿಲ್ಲ.

ಮಂದಾನಿಲ ಲಲಿತೋತ್ಸವ|
ವೆಂಬೀ ರಗಳೆಗಳ ನಾಮಮಕ್ಕುಂ ಕ್ರಮದಿಂ ||
ದೊಂದಕೆ ಪದಿನಾಱರ್ಪ |
ತ್ತೊಂದಕ್ಕಿಪ್ಪತ್ತುನಾಲ್ಕು ಮಾತ್ರೆಗಳಬಲೇ || ೨-೨೨

ಇದು ಶ್ರೀ ಎಮ್. ಎ. ರಾಮಾನುಜ ಅಯ್ಯಂಗಾರರು ಸಂಪಾದಿಸಿದ ಪ್ರತಿಯಲ್ಲಿ ಇರುವುದಿಲ್ಲ. ಮಂದಾನಿಲ, ಲಲಿತ, ಉತ್ಸಾಹ ಎಂಬೀ ಹೆಸರುಗಳು ೧೧-೧೨ನೆಯ ಶತಮಾನದೀಚೆಗೆ ರಗಳೆಗಳಿಗೆ ಸ್ಥಿರಗೊಂಡವುಗಳಾಗಿವೆ. ಪ್ರಾಚೀನ ಕಾವ್ಯಗಳಲ್ಲಿಯೂ ಶಾಸನಗಳಲ್ಲಿಯೂ ತದ್ಭಿನ್ನವಾದ ಹೆಸರುಗಳು ಕಂಡು ಬರುತ್ತವೆ. ಪಂಪನ ಕಾವ್ಯಗಳಲ್ಲಿ ಕೆಲವುಗಳಿಗೆ ಕೇವಲ ರಗಳೆ ಎಂದೇ ಅಚ್ಚು ಹಾಕಿಸಲಾಗಿದೆ. ನಿರ್ದಿಷ್ಟ ಹೆಸರು ಇಲ್ಲ (ಪಂ. ಭಾ ೧-೫೭). ಇನ್ನು ಕೆಲವುಗಳನ್ನು ಮಟ್ಟೆರಗಳೆ ಎಂದು ಹೆಸರಿಸಲಾಗಿದೆ (ಪಂ. ಭಾ ೪-೧೦). ಪೊನ್ನನ ಶಾಂತಿ ಪುರಾಣದಲ್ಲಿ ತ್ವರಿತ ರಗಳೆ ಎಂಬ ಹೆಸರು ಬರುತ್ತದೆ (೩-೭). ಕ್ರಿ. ಶ. ೧೦೫೫ ರಲ್ಲಿ ಹುಟ್ಟಿದ ಕೋಗಳಿ ಶಾಸನದಲ್ಲಿ[೨೦] ಬರುವ ರಗಳೆಯನ್ನು

೨೦ South Indian Inscriptions, vol. X. Pt No. 117.

ಶಾಸನದಲ್ಲಿಯೇ ತ್ರೋವರ್‍ರಗಳೆ ಎಂದು ಹೆಸರಿಸಲಾಗಿದೆ. ಮಂದಾನಿಲ-ಲಲಿತ, ಉತ್ಸಾಹಗಳ ಹೆಸರನ್ನು ಉಲ್ಲೇಖಿಸದೆ ರಗಳೆಯ ಲಕ್ಷಣವನ್ನು ಹೇಳುವ ಕಂದಪದ್ಯವೊಂದು ಛಂದೋಂಬುಧಿಯಲ್ಲಿ ಇರುತ್ತದೆ.

ಗಣನಿಯಮ ವಿಪರ್ಯಾಸಮೊ |
ಳೆಣೆವಡೆದೊಳ್ಪೆಸೆಯೆ ಮಾತ್ರೆ ಸಮನಾಗಿ ಗುಣಾ ||
ಗ್ರಣಿಯ ಮತದಿಂದೆ ತಾಳದ |
ಗಣನೆಗೊಡಂಬಟ್ಟೊಡದುವೆ ರಘಟಾ ಬಂಧಂ ||೩-೨೨||

"(ಮಾತ್ರೆ ಇಲ್ಲವೆ ಅಕ್ಷರ) ಗಣ ನಿಯಮಕ್ಕೆ ಒಳಪಡದೆ ಕೇಳುವುದಕ್ಕೆ ಇಂಪಾಗಿ ಪ್ರತಿಪಾದದಲ್ಲಿಯೂ ಸಮಮಾತ್ರೆಗಳಿಂದ ಯುಕ್ತವಾಗಿ ತಾಳದ ಲಯಕ್ಕೆ ಹೊಂದಿಕೊಂಡುದು ರಘಟಾಬಂಧವು."

ಇದನ್ನೇ ಹೋಲುವ ರಗಳೆಯ ಲಕ್ಷಣವನ್ನು ಜಯಕೀರ್ತಿಯು ಹೇಳಿದ್ದಾನೆ.

ಸ್ವಚ್ಛಂದಃ ಸಂಜ್ಞಾ ರಘಟಾ ಮಾತ್ರಾಕ್ಷರ ಸಮೋದಿತಾಃ
ಪಾದದ್ವಂದ್ವ ಸಮಾಕೀರ್ಣಾ ಸುಶ್ರಾವ್ಯಾ ಸೈವ ಪದ್ಧತಿಃ || ೮-೨೪ ||

"ರಘಟಿಯು ಸ್ವಚ್ಛಂದವಾದುದು, ಎಂದರೆ ಮಾತ್ರಾಗಣಕ್ಕಾಗಲಿ ಅಕ್ಷರ ಗಣಕ್ಕಾಗಲಿ ಒಳಪಡದಂತಹದು. ಮಾತ್ರಾಕ್ಷರ ಗಣಗಳಿಂದ ಕೂಡಿದುದು. ಎರಡು ಪಾದಗಳಿಂದ ಯುಕ್ತವಾದುದು. ರಘಟಿಗೆ ಪದ್ಧತಿಯೆಂದೂ ಹೆಸರಿದೆ."

ಕೆಲವರು "ಪದ್ಧತಿ" ಎಂಬುದಕ್ಕೂ ಪ್ರಾಕೃತದ ಪಜ್ಝಟಿಕಾ ಎಂಬ ಮಾತ್ರಾವೃತ್ತಕ್ಕೂ ಸಂಬಂಧ ಕಲ್ಪಿಸುತ್ತಾರೆ. ಆದರೆ ಅದು ಸರಿಯಲ್ಲ. ರಗಳೆಯ ಗಣಗಳು ಸ್ವಚ್ಛಂದವಾದುವು. ಕಲ್ಯಾಣ ಚಾಳುಕ್ಯರಾಜನಾದ ಸೋಮೇಶ್ವರ (೧೧೨೬-೧೧೩೮)ನಿಂದ ರಚಿತವಾದ ಮಾನಸೋಲ್ಲಾಸದಲ್ಲಿ ಪದ್ಧಡೀ (ಇದು ಪದ್ಧತಿ ಎಂಬುದರ ತದ್ಭವ) ಎಂಬುದರ ಲಕ್ಷಣ ದೊರೆಯುತ್ತದೆ. ಇದು ಜಯಕೀರ್ತಿಯ ಲಕ್ಷಣಕ್ಕೆ ಹೊಂದಿಕೆಯಾಗುತ್ತದೆ.

ಸ್ವರೈಃ ಪಾಟ್ಯೈಃ ಸಬಿರುಚಸ್ತಾಲೇನದ್ಯೈ ಸಮನ್ವಿತಾ |
ಕಯಾಪಿ ಭಾಷಯಾ ಕ್ಲಪ್ತಾ ಯುಗ್ಮ ಪ್ರಾಸಾತು ಪದ್ಧಡೀ ||

ರಗಳೆ ಎಂಬುದು ಛಂದೋ ಬಂಧದ ಒಂದು ರೀತಿ. ಅದರಲ್ಲಿ ಮಂದಾನಿಲ, ಲಲಿತ, ಉತ್ಸಾಹಗಳೆಂಬ ಮೂರು ಭೇದಗಳು ಮಾತ್ರ ಇರದೆ ಇನ್ನು ಹೆಚ್ಚಾಗಿ ಭೇದಗಳಿವೆ. ಅಪ್ಪಕವೀಯ ಎಂಬ ತೆಲುಗು ಲಕ್ಷಣ ಗ್ರಂಥದಲ್ಲಿ ನವವಿಧ ರಗಳೆಗಳನ್ನು ಹೇಳಲಾಗಿದೆ. ಉತ್ಸಾಹ ರಗಳೆಯ ಪಾದದಲ್ಲಿ ೨೪ ಮಾತ್ರೆಗಳೆಂದು ಹೇಳಲಾಗುವುದಷ್ಟೆ. ೧೨ ಮಾತ್ರೆಗಳ ಪಾದದ ಉತ್ಸಾಹ ರಗಳೆಗಳೂ ಇವೆ:

ಅಪಚಿ – ಬಿಕ್ಕಿ – ದುಷಪ – ನಂಗ |
ಉದಿತ – ಕೇಳೀಕೆ – ಲಸ್ಯ – ನಂಗ ||
ಕೆಸೆವ – ಲೋಕ – ಚೂತ – ವನದ |
ಮಿಸುಪ – ವಕುಳ – ತಿಲಕ – ವನದ ||
ನಾಗ – ನಕ್ತ – ವಾಲ – ವನದ |
ಪೂಗ – ವನ ತ – ಮಾಲ – ವನದ ||[21]

ಲಯೋತ್ತರದಿಂದಾದ ರಗಳೆಗಳೂ ಕನ್ನಡ ಸಾಹಿತ್ಯದಲ್ಲಿ ದೊರೆಯುತ್ತವೆ:

1 2 3 4 5 6 7 ೮
"ಅಪಚಿ – ಪ್ರೋಚಿಪ್ರೋ – ಬಿಲವಿ – ಶಾಕ –, ಕನಕ – ಕೃತಕ – ಗಿರಿಗ – ಳಿಂ
ಜ 1 2
ಫ ⁞ ಳಪ್ರ–ಕೀರ್ಣ–ತರುಗ– ಳಿಂ |
ನನೆಯ–ಕೊನೆಯ– ತಳಿರ–ಮುಗುಳ– ವನ ಲ–ತಾ ನಿ–ಕುಂಜ–ದಿಂ
ಪ್ರ ⁞ ಸೂನ–ರಜದ–ಪುಂಜ– ದಿಂ ||

ಆಜ್ಞಾದ ಪಂಪಭಾರತದಲ್ಲಿ ಇದನ್ನು 'ರಗಳೆ' ಎಂದು ಮಾತ್ರ ಕರೆಯಲಾಗಿದೆ. ಇದನ್ನೇ ಇನ್ನು ಕೆಲವರು ಉತ್ಸಾಹ ರಗಳೆ ಎಂದೂ ಕರೆದಿದ್ದಾರೆ:

ಆ ಸ – ಮಯದ – ವಸಂತ – ನೃಪಮ – ಕುಟಮ – ಣಿಪ್ರ – ಭಾಳಿ – ಯಿಂ
ವಿ ⁞ ಭೂಷ–ಣಾಂಬು–ಮಾಳಿ– ಯಿಂ |
ದರದ– ಫಕ್ಷಿ–ಶ್ರೀರ–ಚಾರು – ಚರಣ – ಕಮಳ – ಯುಗಳ – ಮಂ
ಸು ⁞ ರತ್ನ–ನೂತ್ನ–ನಿಗಳ – ಮುಂ |[22]

ರಗಳೆಗಳು ಮೂಲತಃ ಕನ್ನಡ ಜಾತಿಗಳಲ್ಲವೆಂದೂ ಪ್ರಾಕೃತ ಇಲ್ಲವೆ ಅಪಭ್ರಂಶಗಳಿಂದ ಕನ್ನಡಕ್ಕೆ ಬಂದುವೆಂದೂ ಕೆಲವರ ಅಭಿಪ್ರಾಯ. ಈ ಬಗೆಗೆ ಶ್ರೀ ತೀ. ನಂ. ಶ್ರೀಕಂಠಯ್ಯನವರು ಹೇಳುವುದು: 'ಕ್ರಿ. ಶ. ೧೦ ನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಪುಷ್ಪದಂತ ಕವಿಯ 'ಜಸಹರಚರಿಉ' 'ಣಾಯಕುಮಾರ ಚರಿಉ' 'ಮಹಾಪುರಾಣ' ಮೊದಲಾದ ಅಪಭ್ರಂಶ ಕಾವ್ಯಗಳು ಪ್ರಕಟನೆಯಾದೀಚೆಗೆ ರಗಳೆಯ ಮೂಲ ಯಾವುದೆಂಬುದು ಬಲು-ಮಟ್ಟಿಗೆ ಸ್ಫುಟವಾಗಿದೆ. ಈ ಕಾವ್ಯಗಳಲ್ಲಿ ನಮ್ಮ ರಗಳೆಗಳ ಹಲವು ಬಗೆಗಳನ್ನು ಹೋಲುವ ಪದ್ಯಜಾತಿಗಳು ತುಂಬಿವೆ. ಇವುಗಳ ಲಕ್ಷಣವು ಹಿಂದಿನ ಪ್ರಾಕೃತ ಛಂದೋಗ್ರಂಥಗಳಲ್ಲಿ ನಿರೂಪಿತವಾಗಿವೆ. ಸಂಸ್ಕೃತದಿಂದ ವೃತ್ತಗಳೂ ಪ್ರಾಕೃತದಿಂದ ಕಂದವೂ ಕನ್ನಡಕ್ಕೆ ಬಂದಂತೆ ಬಹುಶಃ ಅಪಭ್ರಂಶದಿಂದ ರಗಳೆಯು

೨೧ ರನ್ನನ ಅಜಿತಪುರಾಣ ಪು. ೩೦ (ಸಂ. ಎಚ್. ದೇವೀರಪ್ಪ ಮತ್ತು ದೇ. ಜವರೇಗೌಡ)
೨೨ ಕುಮುದೇಂದು ರಾಮಾಯಣ ೪-೯೮ ರ ಮುಂದೆ (ಸಂಪಾದಕರು ಕುಂದಣಗಾರ)

ಪ್ರಭೇದಗಳು ಕನ್ನಡಕ್ಕೆ ಬಂದುವೆಂದು ತೋರುತ್ತದೆ. ರಗಳೆ (ರಘಟಾ) ಎಂಬ ಹೆಸರು ಮಾತ್ರ ಅಲ್ಲಿ ಇದುವರೆಗೆ ಕಾಣಬಂದಿಲ್ಲ."[೨೩]

ಅಕ್ಷರವೃತ್ತ, ಕಂದ ಇವುಗಳಲ್ಲಿ ಕಂಡುಬಾರದ ಅಂತ್ಯಪ್ರಾಸವು ರಗಳೆಯಲ್ಲಿ ಕಂಡುಬರುವುದರಿಂದಲೂ ಅಂತ್ಯಪ್ರಾಸವು ಅಪಭ್ರಂಶದ ವೈಶಿಷ್ಟ್ಯವೆನಿಸುವುದರಿಂದಲೂ ರಗಳೆಗಳ ಮೇಲೆ ಅಪಭ್ರಂಶದ ಪ್ರಭಾವ ಬಿದ್ದಿದೆಯೆಂಬುದನ್ನು ಒಪ್ಪಬೇಕು. ಆದರೆ ಇಷ್ಟರಿಂದ ಅವು ಅಪಭ್ರಂಶದ ಮೂಲಕವೇ ಕನ್ನಡಕ್ಕೆ ಬಂದುವೆಂದು ಹೇಳಲಿಕ್ಕೆ ಬರುವುದಿಲ್ಲ. ಅಕ್ಷರವೃತ್ತ, ಕಂದ ಇವುಗಳ ಹೆಸರುಗಳು ಸಂಸ್ಕೃತ ಪ್ರಾಕೃತಗಳಿಂದ ಬಂದುದು ಸ್ಪಷ್ಟವಾಗಿ ಕಂಡು ಬರುವಂತೆ ರಗಳೆಯ ಹೆಸರು ಅಪಭ್ರಂಶದಿಂದ ಬಂದುದಕ್ಕೆ ಆಧಾರ ದೊರೆತಿಲ್ಲವೆಂಬುದು ಗಮನಾರ್ಹವಾಗಿದೆ. ಕನ್ನಡ ತಮಿಳು ತೆಲುಗು ಮೊದಲಾದ ದ್ರಾವಿಡ ವರ್ಗದ ಭಾಷೆಗಳು ಸಾಹಿತಿಕ ಭಾಷೆಗಳಾಗಿ ಬೆಳೆಯುವಾಗ ಸಂಸ್ಕೃತ ಪ್ರಾಕೃತ ಅಪಭ್ರಂಶಗಳಿಂದ ಕೆಲವಂಶಗಳನ್ನು ಹೀರಿಕೊಂಡು ಬೆಳೆದುದು ನಿಜ ಆದರಂತೆಯೇ ಸಂಸ್ಕೃತ ಪ್ರಾಕೃತ ಅಪಭ್ರಂಶಗಳೂ ದ್ರಾವಿಡ ಭಾಷೆಗಳಿಂದ ಹಲವು ಮಾತು ರೀತಿಗಳನ್ನು ಅಳವಡಿಸಿಕೊಂಡಿವೆ. ಸಂಸ್ಕೃತದಲ್ಲಿಯ ಕೆಲವು ಅಕ್ಷರವೃತ್ತಗಳು ದ್ರಾವಿಡ ವರ್ಗದ ಭಾಷಾಜಾತಿಗಳಿಂದ ಉತ್ಪನ್ನವಾದುವುಗಳಾಗಿವೆ. ಹೀಗೆಯೇ ಪ್ರಾಕೃತ ಅಪಭ್ರಂಶಗಳು ಸಹ ತಮ್ಮ ಪರಿಸರದ ದ್ರಾವಿಡ ಭಾಷಾಜಾತಿಗಳನ್ನು ಅಳವಡಿಸಿಕೊಂಡುದೂ ಉಂಟು. ಸಂಸ್ಕೃತ ಛಂದಸ್ಸಿನಲ್ಲಿ ಸ್ಥಾನ ಪಡೆದ ಉತ್ಸಾಹ, ಲಯೋತ್ತರ ಇವು ಶುದ್ಧ ಕನ್ನಡ ಜಾತಿಗಳೆಂಬುದನ್ನು ಈ ಮೊದಲು ಸ್ಪಷ್ಟಪಡಿಸಿದೆ. ಅಂತೆಯೇ ಉತ್ಸಾಹದಿಂದ ಉಂಟಾದ ರಗಳೆಯು ಸಹ ಕನ್ನಡಕ್ಕೇ ಸೇರುವುದು. ಶ್ರೀ.ಬಿ.ಎಂ. ಶ್ರೀಕಂಠಯ್ಯನವರು ಪ್ರಾಚೀನ ಕಾವ್ಯಗಳನ್ನು ಪರಿಶೀಲಿಸಿರಗಳೆಯ ಬಗೆಗೆ ಹೇಳಿದುದು ಹೀಗೆ:— ಒಟ್ಟಿನ ಮೇಲೆ ೩ ಮಾತ್ರೆಯ ೫ ಮಾತ್ರೆಯ ಗಣಗಳಲ್ಲಿ ಮಾತ್ರಾಗಣ ಸ್ಪಷ್ಟವಾಗಿದೆ. ನಾಲ್ಕು ಮಾತ್ರೆಯ ಗಣಗಳಲ್ಲಿ ಅಂಶವೂ ಮಾತ್ರೆಯೂ ಬೆರಸಿದಂತೆ ಕಾಣುತ್ತದೆ. ಜಗಣ, ನಲ ಇವು ಉಂಟೊ ಇಲ್ಲವೊ ನಿರ್ಧರಿಸಿ ಹೇಳುವಂತಿಲ್ಲ. ರಗಳೆ ಸಂಸ್ಕೃತಕ್ಕೆ (ಪ್ರಾಕೃತಕ್ಕೆ) ಸೇರಬೇಕೋ ಅಂಶಗಣದ ಕರ್ನಾಟ ವಿಷಯ ಜಾತಿಯೋ ಸಂಶಯ ಉಳಿಯುತ್ತದೆ. ತೆಲುಗಿನ ರಗಡಗಳು ಏಳು ಬಾರಿ ಎಂದು ಹೇಳಿದ್ದರೂ ಹೆಚ್ಚು ಸಂಗತಿಗಳೇನೂ ಹೊರಪಡುವುದಿಲ್ಲ. ತಮಿಳಿನಲ್ಲಿ ಅಗವಲ್ಪಾವಿನಲ್ಲಿ, ಆಶಿರಿಯವಿರುತ್ತದಲ್ಲಿ ಕೆಲವುಕಡೆ ರಗಳೆಯನ್ನು ಹೋಲುವ ಛಂದಸ್ಸು ಕಾಣುವುದು".[೨೪]

---

೨೩ ಸಮಾಲೋಕನ. ಪುಟ ೧೭೬ ಅಡಿಟಿಪ್ಪಣಿ.

೨೪ ಕನ್ನಡ ಕೈಪಿಡಿ (೨ನೆಯ ಆವೃತ್ತಿ) ಪು. ೧೬೯.

ನಾಲ್ಕು ಮಾತ್ರೆಯದಾಗಿ ಪರಿಣಮಿಸಿರುವ ಮಂದಾನಿಲ ರಗಳೆಗೂ ಐದು ಮಾತ್ರೆಯದಾಗಿ ಪರಿಣಮಿಸಿರುವ ಲಲಿತರಗಳೆಗೂ ಅಂಶಗಣಾತ್ಮಕ ವಿಷ್ಣುಗಣಗಳೇ ಮೂಲ. ಅಂಶಗಣಾತ್ಮಕ ಷಟ್ಪದಿಯು ನಾಲ್ಕು ಮಾತ್ರೆಯ ಶರ ಷಟ್ಪದಿಯಾಗಿ, ಐದುಮಾತ್ರೆಯ ಕುಸುಮಷಟ್ಪದಿಯಾಗಿ ಪರಿಣಮಿಸಿದಂತೆಯೆ ಮಂದಾನಿಲ ಲಲಿತರಗಳೆಗಳು ಉತ್ಪನ್ನವಾದುವೆಂದು ಹೇಳಬಹುದಾಗಿದೆ.

ಈಗ ನಮಗೆ ದೊರೆತ ಕಾವ್ಯಗಳಲ್ಲಿ ಪಂಪನವೇ ಮೊದಲ ಕಾವ್ಯಗಳಾದುದರಿಂದಲೂ ಅವುಗಳಲ್ಲಿ ರಗಳೆಗಳು ಬಳಸಲ್ಪಟ್ಟುದರಿಂದಲೂ ಪಂಪನೆ ರಗಳೆಗಳನ್ನು ಕನ್ನಡದಲ್ಲಿ ಪ್ರಚಾರದಲ್ಲಿ ತಂದವನೆಂದು ಹಲವರು ಹೇಳಿದ್ದಾರೆ. "ಪಂಪನು ಜೈನಕವಿ. ಪ್ರಾಕೃತಭಾಷೆಯ ಸಂಪರ್ಕ ಅವನಿಗೆ ಬಂದಿರಬೇಕು. ಪ್ರಾಕೃತದಲ್ಲಿ ರೂಢವಾಗಿದ್ದ 'ಪದ್ಧತಿ' ಎಂಬ ಛಂದೋರಚನೆ ಅವನ ಮನಸ್ಸನ್ನು ಸೆಳೆದಿರಬೇಕು. ಪದ್ಧತಿಯ ಛಾಯೆಯು ಆದಕ್ಕೆ ಸಮೀಪವಾಗಿದ್ದ ಒಂದು ಕನ್ನಡದ ಮಟ್ಟಿನ ಮೇಲೆ ಬಿದ್ದುದರ ಪರಿಣಾಮವಾಗಿ ಅದು ಪಂಪನ ಕೈಯಲ್ಲಿ ರಗಳೆಯ ರೂಪವನ್ನು ತಳೆದಿರಬಹುದೆ? ಎಂದು ಅನುಮಾನಕ್ಕೆ ಅವಕಾಶವುಂಟು. 'ಸ್ಯೈವ ಪದ್ಧತಿ' ಎಂದು ಜಯಕೀರ್ತಿ ಹೇಳುವ ಲಕ್ಷಣಾಂಶವು ಈ ಊಹೆಗೆ ಪೋಷಣೆ ಕೊಡುತ್ತದೆ." ಎನ್ನುತ್ತಾರೆ ಶ್ರೀ ಕರ್ಕಿಯವರು[೨೫]. "ಪಂಪನು ಛಂದೋವಿಷಯಗಳಲ್ಲಿ ಅನೇಕ ಪ್ರಯೋಗಗಳನ್ನು ನಡೆಯಿಸಿರುವನು. ಪ್ರಾಕೃತದಿಂದ ಕನ್ನಡಕ್ಕೆ ಬಹುಶಃ ಮೊತ್ತ ಮೊದಲು (ಅವನೇ) ರಗಳೆಯನ್ನು ತಂದು ಆದರಲ್ಲಿ ನಾನಾ ಬಗೆಗಳನ್ನು ಕಟ್ಟಿ ನೋಡಿದವನು" ಎನ್ನುತ್ತಾರೆ ಶ್ರೀ ಚಿದಾನಂದ ಮೂರ್ತಿಯವರು.[೨೬] "ಎದುವರೆಗೆ ಪಂಪನಿಗಿಂತ ಪೂರ್ವದಲ್ಲಿ ಪ್ರತ್ಯೇಕವಾಗಿ 'ಪಜ್ಝಟಿ' ಎಂಬ ಛಂದವು ಬಳಕೆಯಲ್ಲಿ ಇದ್ದಂತೆ ತಿಳಿದುಬರುವುದಿಲ್ಲವೊ ಅದುವರೆಗೆ ಅದು ಪಂಪನಿಗಿಂತ ಪೂರ್ವದಲ್ಲಿದ್ದು ಮಾದರಿಯಾಯಿತೆಂದು ನಂಬಲು ಸಾಧ್ಯವಿಲ್ಲ. ಕಾರಣ 'ಕಡವಳ' ಎಂಬ ಪ್ರಾಕೃತ ಪದ್ಧತಿಯೇ ಪಂಪನಿಗೆ ರಗಳೆಯನ್ನು ನಿರ್ಮಿಸಲು ಸ್ಫೂರ್ತಿ ಇತ್ತಿರಬಹುದು." ಎನ್ನುತ್ತಾರೆ ಜಾಗಿರದಾರ್ ಸೀತಾರಾಮ್ ಅವರು[೨೭]

ಜಯಕೀರ್ತಿಯ ಛಂದೋನುಶಾಸನದಲ್ಲಿಯೇ ರಗಳೆಯು ಪ್ರಸ್ತಾಪಿಸಲ್ಪಟ್ಟಿದೆ. ಇವನು ಪಂಪನಿಗಿಂತ ಪ್ರಾಚೀನನೆಂಬುದನ್ನು ನನ್ನದೊಂದು ಲೇಖನದಲ್ಲಿ ಈ ಮೊದಲು ವಿವೇಚಿಸಲಾಗಿದೆ.[೨೮] ಪಂಪನ ಪೂರ್ವದ ಕೆಲವರು ಕವಿಗಳನ್ನೂ ಕಾವ್ಯಗಳನ್ನೂ ಜಯಕೀರ್ತಿ ಉಲ್ಲೇಖಿಸುತ್ತಾನೆ. ಆದರೆ ಆ ಕಾವ್ಯ-

---

೨೫ ಛಂದೋವಿಕಾಸ: ಪುಟ ೧೬೦-೬೧.

೨೬ ಸಂಶೋಧನ ತರಂಗ; ಪುಟ ೧೮೮.

೨೭ ಪ್ರಬುದ್ಧ ಕರ್ನಾಟಕ; ಸಂಪುಟ ೫೧, ಸಂಚಿಕೆ ೧

೨೮ ಕರ್ನಾಟಕ ಭಾರತಿ; ಸಂಪುಟ ೪, ಸಂಚಿಕೆ ೧-ಜಯಕೀರ್ತಿ ಮತ್ತು ನಾಗವರ್ಮರು.

ಗಳಿಂದು ನಮಗೆ ಉಪಲಬ್ಧವಿಲ್ಲ. ಪಂಪನಕಾಲ, ಅವನು ಜೀವಿಸಿದ ಪರಿಸರ ಇವುಗಳನ್ನು ಲಕ್ಷಕ್ಕೆ ತೆಗೆದುಕೊಂಡರೆ ಪಂಪನು ಪ ಯೋಗ ನಡೆಸಿದ ಕವಿಯೆಂಬುದನ್ನು ಒಪ್ಪಲಿಕ್ಕಾಗುವುದಿಲ್ಲ. ಅವನು ಮಹಾಕವಿ, ಶ್ರೇಷ್ಠಕವಿ, ಆದರ್ಶಕವಿ ಇದು ನಿಜವಿದ್ದರೂ ಅವನು ಸಾಂಪ್ರದಾಯಿಕ ಕವಿ; ರಾಜಾಸ್ಥಾನದಲ್ಲಿದ್ದು. ಕೊಂಡು ಶಿಷ್ಟಸಮ್ಮತ ಕಾವ್ಯಗಳನ್ನು ರಚಿಸಿದ ಕವಿಯೆಂಬುದನ್ನು ಮರೆಯುವಂತಿಲ್ಲ. ಅವನು ಕ್ರಾಂತಿಕಾರಿ ಕವಿಯಲ್ಲ; ಛಂದಸ್ಸು ವ್ಯಾಕರಣ ಮೊದಲಾದ ವಿಷಯಗಳಲ್ಲಿ ಸಂಪ್ರದಾಯವನ್ನು ಕಾಯ್ದುಕೊಂಡು ಬಂದು ಅಂದಿನ ರಾಜಾಸ್ಥಾನದ ಪಂಡಿತರ ಮೇಲೆ ತನ್ನ ಪ್ರಭಾವ ಬೀರಿದ್ದಾನೆ. ಆದುದರಿಂದ ರಗಳೆಗಳು ಅವನ ಸೃಜನೆಯಾಗಲಾರವು. ಅವನ ಪೂರ್ವದಿಂದಲೂ ಇವು ಸಾಗಿ ಬಂದಿವೆಯೆಂದು ಹೇಳುವುದೇ ಯೋಗ್ಯವಾದುದು.

★ ಪ್ರ. ಗೋ. ಕುಲಕರಣಿ

ಉತ್ತರಕರ್ನಾಟಕದ ಜಾನಪದ ಗದ್ಯಸಾಹಿತ್ಯ

ಉದ್ದೀಪನಗೊಂಡ ಭಾವ ಅಭಿವ್ಯಕ್ತಿಯ ಸಮಯದಲ್ಲಿ ಭಾಷೆಯನ್ನು ಬಳಸಿಕೊಳ್ಳುವ ರೀತಿಯನ್ನವಲಂಬಿಸಿ ಗದ್ಯ, ಪದ್ಯಗಳು ಭಿನ್ನರೂಪ ಪಡೆಯುತ್ತವೆ. ಅದಕ್ಕಾಗಿ ಗದ್ಯಪದ್ಯಗಳು ತಂತ್ರದೃಷ್ಟಿಯಿಂದ ಬೇರೆಯೇ ಹೊರತು ಸತ್ವದೃಷ್ಟಿಯಿಂದ ಅವು ಒಂದೇ. ಭಾಷೆಯನ್ನು ಬಳಸಿಕೊಳ್ಳುವ ಈ ತಂತ್ರ ಒಂದು "ವರದಾನ" ಎನ್ನುವದಕ್ಕಿಂತ ಒಂದು ರೀತಿಯ "ತರಬೇತಿ" ಎಂದು ಹೇಳಬಹುದು.

ಹೀಗೆ ಸತ್ವ ಒಂದೇ, ತಂತ್ರ ಬೇರೆಯೆಂದು ಹೇಳಬಹುದಾದ ಈ ಗದ್ಯಪದ್ಯಗಳು ಸಾಹಿತ್ಯಲೋಕದ ಮೂಲ ಮತ್ತು ಮುಖ್ಯಪ್ರಕಾರಗಳು. ಆದರೆ ಗದ್ಯದಂತಹ ಸಾಹಿತ್ಯಗುಣದ ಜೊತೆಗೆ ಪದ್ಯ ಹೆಚ್ಚಿನದಾಗಿ 'ಗೇಯ ಗುಣ'ವನ್ನು ಗಳಿಸಿಕೊಂಡ ಕಾರಣ, ಜಗತ್ತಿನ ಎಲ್ಲ ಭಾಷೆಗಳ ಲಿಖಿತಸಾಹಿತ್ಯದಲ್ಲಿ ಗದ್ಯಕ್ಕೆ ಆಕರ್ಷಣೆ ಕಡಿಮೆ, ಪದ್ಯಕ್ಕೆ ಹೆಚ್ಚು. ಈ ಆಕರ್ಷಣೆಗೆ ಒಳಗಾಗಿ ಕವಿಗಳು, ಕವಿಗಳಲ್ಲದವರು ಅದರತ್ತ ಧಾವಿಸಲು ಪದ್ಯಕೃಷಿ ವಿಪುಲಗೊಂಡಿತು. ಆದರೆ ಗದ್ಯವನ್ನು ಹಿಂದೆಹಾಕುವಲ್ಲಿ ಅನುಸರಿಸಿದ ಈ ಗೇಯಗುಣ ಪದ್ಯದ ಕೃತಕಗುಣವೆಂದು ಭಾವಿಸಿರಬಹುದಾದ ಕಾರಣ ದಂಡಿ, ಬಾಣರು "ಗದ್ಯಂ ಕವೀನಾಂ ನಿಕಷಂ ವದಂತಿ" ಎಂದು ಹೇಳಿದಂತಿದೆ. ಇದೆಲ್ಲವನ್ನು ಮನದಂದರೆ ಆಕರ್ಷಣೆ ಪದ್ಯಕ್ಕೆ ಹೆಚ್ಚು ಎಂದು ಕೆಲವರು ಭಾವಿಸಿದರೆ, ಬಹುಶಃ ಕೆಲವರು ಗದ್ಯದ ಈ ಸಹಜತೆಯಲ್ಲಿ ಸಿದ್ಧಿ ತೋರಿಸುವುದು ಅಸಾಧ್ಯವೆನಿಸಿ, ಪದ್ಯಕೃಷಿಗೆ ಕೈಯಿಕ್ಕಿರಲೂ ಸಾಧ್ಯ.

ಈ ಎಲ್ಲ ಕಾರಣಗಳ ಮೂಲಕ ಲಿಖಿತಕವಿಸಾಹಿತ್ಯದಲ್ಲಿ ತನ್ನ ಪಾಲನ್ನು ಕಳೆದುಕೊಂಡ ಗದ್ಯ, ಜನಪದಸಾಹಿತ್ಯದಲ್ಲಿ ಮಾತ್ರ ಬಹುಮಟ್ಟಿಗೆ ಉಳಿಸಿಕೊಂಡಿದೆ. ಹೀಗಾಗಿ ಕವಿಸಾಹಿತ್ಯದ ಗದ್ಯ ಕೊರತೆಯನ್ನು ತುಂಬಿಕೊಳ್ಳಲು ನಾವು ಜನಪದ ಸಾಹಿತ್ಯಕ್ಕೆ ಮೊರೆಹೊಗಬೇಕಾಗುತ್ತದೆ.

ಕವಿಸಾಹಿತ್ಯವನ್ನು ಶ್ರದ್ಧೆವಹಿಸಿ ಲಿಪಿಸಿದ ಪ್ರಾಚೀನ ಲಿಪಿಕಾರರು ಜಾನಪದ ಸಾಹಿತ್ಯದ ಕಡೆಗೆ ಹೊರಳಿ ನೋಡಲಿಲ್ಲ. ಹೀಗಾಗಿ ಅದು ನಾಲಿಗೆಯ ಮೇಲೆ ಹುಟ್ಟಿ, ನಾಲಗೆಯ ಮೇಲೆ ಬೆಳೆದು, ನಾಲಿಗೆಯ ಮೇಲೆ ಬದುಕುವುದು ಅನಿವಾರ್ಯವಾಯಿತು. ಇವುಗಳಲ್ಲಿ ನೆನಪಿಗೆ ಸುಲಭವಾಗುವ ಪದ್ಯ ಉಳಿದಷ್ಟು, ನೆನಪಿಗೆ ದುರ್ಲಭವಾದ ಗದ್ಯ ಉಳಿಯಲಿಲ್ಲ; ಉಳಿಯುವದು ಸಾಧ್ಯವೂ ಇಲ್ಲ. ಹೀಗಿದ್ದರೂ ಹೇಳಿದುದನ್ನು ಕೇಳಿ, ಕೇಳಿದುದನ್ನು ಮತ್ತೆ ಹೇಳಿ ತಲೆಮಾರಿನಿಂದ ತಲೆಮಾರಿಗೆ ಅದನ್ನು ಹೊತ್ತು ತಂದಿದ್ದಾರೆ, ಜನಸಾಮಾನ್ಯರು. ಆದರೆ ಲಿಖಿತ

ಸಾಹಿತ್ಯ ತನ್ನ ಮೂಲಸ್ಥಿತಿಯಲ್ಲಿ ಉಳಿದು ಬಂದರೆ, ಈ ಜಿಹ್ವಾಸಾಹಿತ್ಯ ಕಾಲದಿಂದ ಕಾಲಕ್ಕೆ ಅವಸ್ಥೆಗಳಿಗೆ ತನ್ನನ್ನು ಅರ್ಪಿಸಿಕೊಳ್ಳುತ್ತ, ಪ್ರಾಂತದಿಂದ ಪ್ರಾಂತಕ್ಕೆ ತನ್ನ ರೂಪ ಬದಲಿಸಿಕೊಳ್ಳುತ್ತ ಸಾಗಿಬಂದಿತು; ಮೇಲಾಗಿ ಹೊಸ ಹೊಸ ಸಾಹಿತ್ಯವನ್ನು ಹುಟ್ಟಿಸುತ್ತ ಬಂದಿತು. ಹೀಗಾಗಿ ಇಂದು ನಾಡಿನ ಉದ್ದಗಲಕ್ಕೂ ಸಿಗುವ ಈ ಜಾನಪದ ಗದ್ಯಸಾಹಿತ್ಯದಲ್ಲಿರಬಹುದಾದ ರಚನೆಗಳ ಪ್ರಾಚೀನತೆಯನ್ನು ಗುರುತಿಸುವುದು, ಪ್ರಾಚೀನದಿಂದ ಅರ್ವಾಚೀನಗಳನ್ನು ಬಿಡಿಸಿ ಹೇಳುವುದು ಅಸಾಧ್ಯವಾಗಿದೆ. ಹೀಗೆ ಪರಿವರ್ತನಶೀಲ ಮತ್ತು ನಿತ್ಯ ಸೃಜನಶೀಲವಾಗುತ್ತ ಬಂದ ಈ ಸಾಹಿತ್ಯದಲ್ಲಿ ಹತ್ತಾರು ಪ್ರಕಾರಗಳು ಈಗ ಲಭಿಸುತ್ತವೆ. ಇವುಗಳನ್ನು

೧) **ಹಿರಿಯ ಪ್ರಕಾರ** : ಕಥೆ, ಬಯಲಾಟದ ಮಾತು.

೨) **ಕಿರಿಯ ಪ್ರಕಾರ** : ಪಡೆನುಡಿ, ಗಾದೆ, ಉಪಮೆ, ಒಗಟು, ಒಡಪು, ಒಡಬು, ಪರಾಕು, ಲಾಲಿ, ಮಕ್ಕಳಾಟ

ಎಂದು ವಿಭಾಗಿಸಬಹುದು. ಈ ಒಂದೊಂದು ಪ್ರಕಾರ ಬಹುಕಾಲ ಹಿಂದಿನವು. ಅಂದಿನಿಂದ ಸಾಗಿಬಂದು ಇನ್ನೂ ಜೀವ ಹಿಡಿದಿರುವ ಇವುಗಳ ಸ್ವರೂಪ, ಉದ್ದೇಶ, ಪರಿಣಾಮ ಇತ್ಯಾದಿಗಳ ವಿವೇಚನೆ ಈ ಲೇಖನ.

ಹಿರಿಯ ಪ್ರಕಾರ

ಕಥೆ

ಕಥೆ ಕೇಳದ ಜನವಿಲ್ಲ ಜನಾಂಗವಿಲ್ಲ; ಕಥೆ ಹೇಳದ ದೇಶವಿಲ್ಲ ಭಾಷೆಯಿಲ್ಲ. ಕುತೂಹಲವನ್ನು ಮುಂದುಮಾಡಿಕೊಂಡು ನಡೆಯುವ ಸಾಹಿತ್ಯಲೋಕದ ಈ ಬೆಳ್ಳಿಚಿಕ್ಕಿ ಹಿರಿಕಿರಿಯರನ್ನು ಆಕರ್ಷಿಸುವ ಮೋಡಿವುಳ್ಳದು. ರಾಮಾಯಣ ಮಹಾಭಾರತಗಳು ಮಾಡಲಾರದ ಪರಿಣಾಮವನ್ನು ಒಂದು ಕಥೆ ಮಾಡುತ್ತದೆ; ವೇದ ಉಪನಿಷತ್ತುಗಳು ತಿಳಿಸಲಾರದ ಒಂದು ತತ್ವವನ್ನು ಒಂದು ಕಥೆ ತಿಳಿಸುತ್ತದೆ ಎನ್ನುವಷ್ಟು ಅದರ ಪರಿಣಾಮ ಪ್ರಗಾಢ. ಮೂರ್ಖ ಮಕ್ಕಳನ್ನು ತಿದ್ದಲು ವಿಷ್ಣುಶರ್ಮನು ಪಂಚತಂತ್ರ ರಚಿಸಿದುದು; ಬೌದ್ಧ, ಜೈನ ಧರ್ಮಗಳು ಪ್ರಚಾರಕ್ಕೋಸುಗ ಜಾತಕಕಥೆ, ಆರಾಧನಾಕಥೆ ರಚಿಸಿದುದು ಈ ಕಾರಣಕ್ಕಾಗಿ

ಹಾಡಿನ ರೂಪದಲ್ಲಿ ಗೊಂದಲಿಗರು, ಕುರುಬರು, ಚೌಡಕಿಯರು. ಕೀರ್ತನ–ಪುರಾಣ ರೂಪದಲ್ಲಿ ವಿದ್ವಾಂಸರು, ವಾಚಿಕ ರೂಪದಲ್ಲಿ ಸಾಮಾನ್ಯರು ಕಥೆಗಳನ್ನು ನಿರೂಪಿಸುತ್ತಾರೆ. ಇವುಗಳಲ್ಲಿ ಜಾನಪದ ಗದ್ಯಸಾಹಿತ್ಯಕ್ಕೆ ಸಂಬಂಧಪಟ್ಟುವು ವಾಚಿಕರೂಪದ ಕಥೆಗಳು.

ಆನಂದಪ್ರಾಪ್ತಿಗೋಸುಗ ಹೇಳುವ ಕಥೆಗಳ ನಿರೂಪಣೆಗೆ ಇರುಳು ತಕ್ಕ ವಾತಾವರಣ. ಶ್ರಮಪರಿಹಾರ, ಬೇಸರ ನಿವಾರಣೆಗಾಗಿ ಹಿರಿಯರು, ಆನಂದಪ್ರಾಪ್ತಿಗಾಗಿ ಕಿರಿಯರು ಕಥೆ ಕೇಳುತ್ತಾರೆ. ಅದರಲ್ಲಿಯೂ ಉದ್ಯೋಗವಿಲ್ಲದ ಮಕ್ಕಳು ಮತ್ತು ಅಜ್ಜ-ಅಜ್ಜಿಯರು ಕಥಾ ಸಾಹಿತ್ಯದ ನಿರ್ಮಾತೃಗಳು. ಮಕ್ಕಳಿಗೆ ಕಥೆ ಹೇಳುವಲ್ಲಿ ಈ ಅಜ್ಜ-ಅಜ್ಜಿ ಅಯಸ್ಕಾಂತದ ಪಾತ್ರವಹಿಸುತ್ತಾರೆ. ಸುತ್ತಲೂ ಕುಳಿತು ಮೈಯೆಲ್ಲ ಕಿವಿಯಾಗಿ ಕೇಳುವ ಮಕ್ಕಳಲ್ಲಿ ಚುಂಬಕಪ್ರವಾಹವನ್ನು ಹರಿಸುತ್ತಾರೆ. ಅವರನ್ನು ಕಥೆಯ ತರಂಗದಲ್ಲಿ ತೇಲಿಬಿಟ್ಟು ಸ್ವರ್ಗ, ಮರ್ತ್ಯ ಪಾತಾಳಗಳಲ್ಲಿ ವಿಹಾರಮಾಡಿಸಿಕೊಂಡು ಬರುತ್ತಾರೆ.

ಈ ಕಥೆಗಳಲ್ಲಿ ಕೆಲವು ಜನಪದದಲ್ಲಿ ಹುಟ್ಟಿ ಕಾವ್ಯಗಳಲ್ಲಿ ಕಾಲಿಟ್ಟರೆ, ಇನ್ನು ಕೆಲವು ಕಾವ್ಯಗಳಲ್ಲಿ ಹುಟ್ಟಿ ಜನಪದದಲ್ಲಿ ಸಂಚರಿಸುತ್ತವೆ. ರಾಮಾಯಣಾದಿ ಕಾವ್ಯಗಳಲ್ಲಿಯ ಅನೇಕ ಕಥೆಗಳು ಜನಪದದಿಂದ ಸೇರಿದುವು. ಜನಪದದಲ್ಲಿಯ ಅನೇಕ ಕಥೆಗಳು ರಾಮಾಯಣಾದಿ ಕಾವ್ಯಗಳಿಂದ ಬಂದವು. ಹೀಗೆ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಪರಿಚಲಿಸುತ್ತ ಜನಪದಕಥೆಗಳು ಜನರ ನಾಲಗೆಯ ಮೇಲೆ ಬದುಕಿಬಂದಿವೆ.

ಈ ಕಥೆಗಳದು ಪರ್ಯಟನ ಸ್ವಭಾವ. ಒಂದು ದೇಶದ ಒಂದು ಮೂಲೆಯಲ್ಲಿಯ ಕಥೆ, ಇನ್ನೊಂದು ದೇಶದ ಇನ್ನೊಂದು ಮೂಲೆಯಲ್ಲಿ ಸಿಕ್ಕರೆ ಆಶ್ಚರ್ಯಪಡುವ ಕಾರಣವಿಲ್ಲ. ಹೀಗೆ ದಿಕ್ಕುದೇಶಗಳನ್ನು ತುಂಬಿಕೊಂಡ ಈ ಕಥಾಪ್ರಪಂಚವನ್ನು ಪೌರಾಣಿಕ, ಐತಿಹಾಸಿಕ ಮತ್ತು ಇತರ ಎಂದು ವರ್ಗೀಕರಿಸಬಹುದು.

ಪೌರಾಣಿಕಕಥೆಗಳು ರಾಮಾಯಣ, ಮಹಾಭಾರತ ಮತ್ತು ದೇವಲೋಕಕ್ಕೆ ಸಂಬಂಧಿಸಿದುವು. ದೈವತ್ವದ ಪರಿಚಯದ ಹಿನ್ನೆಲೆಯಲ್ಲಿ ಮತ್ತೊಂದು ಲೋಕವನ್ನು ತೆರೆದು ತೋರಿಸುವ ಪ್ರಕಾರವಿದು.

ಐತಿಹಾಸಿಕ ಕಥೆಗಳು ಈ ನೆಲದ ಮೇಲೆ ನಡೆದ ಒಂದು ಘಟನೆಯನ್ನು ಕಥೆಯ ರೂಪದಲ್ಲಿ ನಿರೂಪಿಸುತ್ತವೆ. ಅಂದರೆ ನಡೆದುದನ್ನು ನಡೆದ ಹಾಗೆ ಹೇಳಿದರೆ ಇತಿಹಾಸವಾಗುತ್ತದೆ. ಅದಕ್ಕೆ ಕಲ್ಪನೆ ಕೂಡಿದರೆ ಕಥೆಯಾಗುತ್ತದೆ. ಈ ಐತಿಹಾಸಿಕಕಥೆಗಳು ಪ್ರಾದೇಶಿಕ ಮತ್ತು ಸ್ಥಾನಿಕ ಎಂದು ಎರಡು ಬಗೆಯಾಗಿವೆ ಶರಣರಕಥೆ, ಸಂತರ ಕಥೆ, ಕುಮಾರ ರಾಮ, ಸಿಂಧೂರ ಲಕ್ಷ್ಮಣರಂಥ ವೀರರಕಥೆಗಳು ಪ್ರಾದೇಶಿಕ. ಆ ಆ ಊರುಗಳಲ್ಲಿ ಕೇಳಿಬರುವ ಕಥೆಗಳು ಸ್ಥಾನಿಕ. ಇಲ್ಲಿ ಅಂಗೈ ಅಗಲದ ಐತಿಹಾಸಿಕ ಅಂಶದ ಸುತ್ತ ಕಾಲ್ಪನಿಕ ರೆಂಬೆಕೊಂಬೆಗಳು ಹುಟ್ಟಿಕೊಂಡಿರುತ್ತವೆ. ಆದರೆ ಇದರ ತಾಯಿಬೇರು ಐತಿಹಾಸಿಕ ಸತ್ಯ. ವೀರನಾಗಿ ಹುಟ್ಟಿ ವೀರನಾಗಿ ಬದುಕಿ ವೀರನಾಗಿಸತ್ತ ಕುಮಾರ ರಾಮನ ಕಥೆ ಒಂದು ಸತ್ಯಘಟನೆಯಾದರೂ ಕಥೆಗಾರ ಅದಕ್ಕೆ ಪೂರ್ವಜನ್ಮದ ವೈರ, ದೈವೀಸ್ವರೂಪದ

ಕಲ್ಪನೆಗಳ ಗರಿ ಕಟ್ಟಿ ರಮ್ಯತೆಯ ರಂಗು ಹಚ್ಚಿದ. ಇದೇ ರೀತಿ ಒಂದೊಂದು ಪ್ರದೇಶಕ್ಕೆ ಇಲ್ಲವೆ ಸ್ಥಾನಕ್ಕೆ ಸಂಬಂಧಪಟ್ಟ ಪ್ರಾಚೀನಘಟನೆಗಳು ಅಲ್ಲಿಯ ಸಮಾಜದ ನಾಲಗೆಯಿಂದಾಗಿ ನಯಗೊಂಡಿರುತ್ತವೆ.

ಕೆಲವು ಸಲ ಇತಿಹಾಸ ಸೋಗಿನ ಸುಳ್ಳು ಕಥೆಗಳೂ ಜೀವಪಡೆದಿರುತ್ತವೆ. ಉದಾ : ಗುಬ್ಬೇವಾಡ, ಸಿಂದಗಿ ತಾಲೂಕಿನ ಒಂದು ಹಳ್ಳಿ. ಊರ ಹೊರಗೆ ಒಂದು ಹೆಣ್ಣು ಶಿಲಾವಿಗ್ರಹವಿದೆ. ಇದನ್ನು "ಗಂಗಾಳ ನುಂಗಿದ ದೇವರು" ಎಂದು ಜನ ಕರೆಯುತ್ತಾರೆ. ಇದರ ಬಗ್ಗೆ ಅವರು ಹೇಳುವ ಕಥೆ ಇದು : ಒಬ್ಬ ಹೆಣ್ಣ ಮಗಳು ಈ ದೇವರಿಗೆ ನೆವ್ದೆ ತಂದಿದ್ದಳು. ದೀಪ ಹಚ್ಚಲಾಕ ಎಣ್ಣಿ ಮರತ ಬಂದಿದ್ಳು. ನೆವ್ದೆ ಅಲ್ಲೆ ಇಟ್ಟು ಮನಿಗಿ ಹೋಗಿ ಎಣ್ಣಿ ತರೂದರಾಗ ಹಸ್ತಿದ್ದ ದೇವ್ರು ನೆವ್ದೆ ಸಹಿತ ಗಂಗಾಳ ನುಂಗಿದ್ದ. ನನ್ನ ಗಂಗಾಳ ಕೊಡು ಅಂತ ಆಕಿ ಕಲ್ಲೆ ಹೊಡದ್ಳು. ಝುಣ್ ಝುಣ್ ಅಂತ ಸಪ್ಪ ಕೇಳಸ್ತು. ಊರ ಜನರಿಗೆ ನಡ್ಡ ಸಂಗತಿ ಹೇಳಿದ್ಳು. ಅವರೂ ಕಲ್ಲೆ ಹೊಡದ್ರು ಗಂಗಾಳ ದನಿ ಕೇಳಸ್ತು–ಇದು ಕಥೆ. ಅಂದಿನಿಂದ ಆ ದಾರಿಯಲ್ಲಿ ಹೋಗುವವರು ಬರುವವರು ಕಲ್ಲಿನಿಂದ ಹೊಡೆದು ಧ್ವನಿಕೇಳಿ, ಕರ್ಣಸುಖ ಪಡೆಯುತ್ತಾರೆ. ವಿಗ್ರಹ ಮಾತ್ರ ದಿನವೂ ಮುಕ್ಕಾಗುತ್ತ ನಡೆದಿದೆ. ಈ ದೇವತೆಯ ಸುತ್ತ ಕಲ್ಲಿನ ರಾಶಿ ಬೆಳೆಯುತ್ತ ನಡೆದಿದೆ. ನಾದಮಾಧುರ್ಯ ಆ ಕಲ್ಲಿನ ಗುಣಧರ್ಮ. ಜನಮಾತ್ರ ಅದರ ಸುತ್ತು ಈ ಕಥೆ ಕಟ್ಟಿದರು. ಇದಲ್ಲದೆಯೇ ಕೆಲವು ಸಲ ಕಿಡಿಗೇಡಿ ಕಥೆಗಾರರು "ಒದರವ್ವ ಗಸ್ತಿ ತಿರುಗುವ" "ಊರ ನಡುಮನೆಯಲ್ಲಿ, ದಾರಿಯ ಮೇಲಣ ಗಿಡದಲ್ಲಿ, ಹಾಳು ದೇಗುಲಗಳಲ್ಲಿ ದೆವ್ವ ವಾಸವಾಡಿರುವ" ತಳಬುಡವಿಲ್ಲದ ಕಥೆ ಕಟ್ಟಿರುತ್ತಾರೆ, ಜನರಲ್ಲಿ ಭಯ ಹುಟ್ಟಿಸುತ್ತಾರೆ.

ಇತರ ಕಥೆಗಳನ್ನು ನೀತಿಬೋಧೆಗಾಗಿಯೇ ಹುಟ್ಟಿದ ಕಾಲ್ಪನಿಕ ಕಥೆಗಳು (ಮಂಗ ಬೆಣ್ಣೆ ತೂಗಿದ ಕಥೆ ಇತ್ಯಾದಿ), ಮನರಂಜನೆಗಾಗಿ ಹುಟ್ಟಿದ ರೋಚಕ ಕಥೆಗಳು (ರಾಜಕುಮಾರಿಯ ಕಥೆಗಳು ಇತ್ಯಾದಿ) ಎಂದು ವಿಭಾಗಿಸಬಹುದು. ಪಂಚತಂತ್ರ, ಬೇತಾಳ ಪಂಚವಿಂಶತಿ, ಬತ್ತೀಸಪುತ್ಥಳಿ ಕಥೆಗಳು ಈ ವರ್ಗಕ್ಕೆ ಸೇರುತ್ತವೆ ಇಲ್ಲಿ ದೇವ, ನಾರಕ, ಮನುಷ್ಯ, ತಿರ್ಯಕ್ ಜೀವಿಗಳೆಲ್ಲ ಪಾತ್ರ ವಹಿಸುತ್ತವೆ

ಕಥೆ ಯಾವುದೇ ವರ್ಗದ್ದಿರಲಿ ಅದರ ಪ್ರಾರಂಭದ ಸೆರಗು, ಹೊಟ್ಟೆಯೊಳಗಿನ ನೂಲು ತಕ್ಕಮಟ್ಟಿಗೆ ಪೂರ್ವಸಿದ್ಧವಿರುತ್ತದೆ. "ಹೀಂಗೊಂದು ಊರಿತ್ತು… …" ಎಂದೇ ಪ್ರಾರಂಭ ರಾಜಕೀಯವಾಗಿದ್ದರೆ ಏಳು ಮಲ್ಲಿಗೆಯ ತೂಕದ ರಾಜಕುಮಾರಿ, ಏಳು ಅಂತಸ್ತಿನ ಅರಮನೆ, ಏಳು ಸಮುದ್ರ ದಾಟುವುದು, ಏಳು ಸುತ್ತಿನ ಕೋಟೆ ಇವೆಲ್ಲ ಬೇಕು. ಮಾಟಗಾರನಿದ್ದರೆ ಎಡಮುರಿ ಶಂಖ, ಬಲಮುರಿ ಬೇರು, ಬಾಣಂತಿ ಎಲವು, ಮಂತ್ರದ ಹರಳು ಇವೆಲ್ಲ ಬೇಕು.

ರಾಕ್ಷಸ, ದೆವ್ವ ಇದ್ದರೆ ಕಪ್ಪುಬಣ್ಣ, ಕವಡಿಯಂಥ ಹಲ್ಲು, ಚೂರಿಯಂತಹ ಕೋರೆಗಳು ಅವಶ್ಯ. ಮಧ್ಯಮಧ್ಯ ಕೀಳು ಇಲ್ಲವೆ ಮೇಲು ವರ್ಣನೆ ಬರಲಿ, ಅಲ್ಲಿ ಅತಿಶಯೋಕ್ತಿ, ವಿನೋದ, ಕುತೂಹಲ ಸಹಜ. ಈ ಎಲ್ಲ ಪರಿಕರಗಳನ್ನು ಕಟ್ಟಿಕೊಂಡು ಕಥೆ ಕಣ್ಣು ತೆರೆಯುತ್ತದೆ.

ಸಾಮಾನ್ಯವಾಗಿ ಗಾತ್ರದಲ್ಲಿ ಕಥೆ ಸಣ್ಣದಾದರೂ ಮಿಕ್ಕ ಜಾನಪದಗದ್ಯ ಪ್ರಕಾರಗಳಿಗಿಂತ ದೊಡ್ಡದು. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಹೆಜ್ಜೆ ಹಾಕುವುದು ಇದರ ನಡಿಗೆ. ಪ್ರತಿಯೊಂದು ವಾಕ್ಯದ ಕೊನೆಗೆ ಕೇಳುಗ 'ಹೂಂ ಗುಟ್ಟಬೇಕು. ಈ ಪದ್ಧತಿ ಕಥೆಯ ಅನಿವಾರ್ಯ ಅಂಗವಾಗಿ ಅಂದೇ ಹುಟ್ಟಬಂದಿದೆ. "ಕಥೆಯಂ ಕೇಳೆಲೆ ಕಂದ ಹುಂ, ರಘುಜನೆಂಬಂ ಹುಂ...." ಎಂಬ ಜಗನ್ನಾಥ ವಿಜಯದ ಪದ್ಯವನ್ನು ಇಲ್ಲಿ ನೆನೆಯಬೇಕು.

ಕಥೆ ಯಾವುದೇ ವರ್ಗದ್ದಿರಲಿ ನೀತಿನಿರೂಪಣೆ, ಮನರಂಜನೆ ಅದರ ಉದ್ದೇಶ. ಜೀವನದ ಪರಮಮೌಲ್ಯಗಳಾದ ಸತ್ಯ, ತ್ಯಾಗ, ದಯೆ, ಧರ್ಮ ಗಳನ್ನು ಬಿತ್ತರಿಸ ಹೊರಟ ಇವು, ಸಾಮಾನ್ಯವಾಗಿ ಸುಖಾಂತವಾದುವು ಮಧ್ಯ ಮಧ್ಯ ದುಷ್ಟಪಾತ್ರಗಳ ತ್ಯಾಜ್ಯಘಟನೆಗಳ ಪ್ರಸ್ತಾಪ ಬಂದರೂ ಅದೆಲ್ಲ ಕ್ಷಣಿಕವಾಗಿ ಸುಬೋಧೆ ಸ್ಥಾಯಿಯಾಗಿ ಮೆರೆಯುತ್ತದೆ. ಈ ಪರಿಣಾಮ ದೊಂದಿಗೆ ಮಕ್ಕಳಲ್ಲಿ ಕಲ್ಪನಾಶಕ್ತಿ, ಲೋಕಪರಿಚಯ, ಲೋಕಾನುಭವ ಗಳನ್ನೂ ಬೆಳೆಸಿ ಅವರ ಹೃದಯಕ್ಕೆ ಸಂಸ್ಕಾರನೀಡುತ್ತವೆ ಕಥೆಗಳು.

ಈ ಕಥಾಪ್ರಪಂಚ ಜಾನಪದಪ್ರಕಾರಗಳಲ್ಲಿ ಹೆಚ್ಚು ವಿಸ್ತಾರವೂ ವೈವಿಧ ಪೂರ್ಣವೂ ಆಗಿರುವ ಜಾತಿ. ಇದರ ಆಶಯ ಮತ್ತು ಮಾದರಿಗಳ ಅಧ್ಯಯನ ಬೇರೆ ರಾಷ್ಟ್ರಗಳಲ್ಲಿ ನಡೆಯುತ್ತಲಿದೆ. ನಮ್ಮ ಕಥೆಗಳ ವಿಷಯವಾಗಿ ಇಂತಹ ಸಮಗ್ರಕಾರ್ಯ ನಡೆಯುವುದು ಅತ್ಯವಶ್ಯವಿದೆ.

ಬಯಲಾಟ

ಕಥೆಯನ್ನು ವಾಚಿಕರೂಪದಲ್ಲಿ ಒಬ್ಬನು ನಡೆಸಿಕೊಂಡು ಹೋದರೆ ಬಯ ಲಾಟವನ್ನು ಮಾತು-ಗೀತಗಳ ಮೂಲಕ ಹಲವರು ನಡೆಸಿಕೊಂಡು ಹೋಗು ತ್ತಾರೆ. ಕಥೆ ಕೇವಲ ಶ್ರಾವಣವಾಗಿದ್ದರೆ. ಬಯಲಾಟ ಶ್ರಾವಣವೂ ಹೌದು ಚಾಕ್ಷುಷವೂ ಹೌದು. ಇದು ದೃಶ್ಯಜಾತಿಗೆ ಸೇರುವುದಾದರೂ ಪದ್ಯದಷ್ಟೇ ಗದ್ಯವೂ ಇಲ್ಲಿ ಪ್ರಮುಖವಾದುದರಿಂದ ಜಾನಪದ ಗದ್ಯವಿವೇಚನೆಯ ಪ್ರಸಂಗ ದಲ್ಲಿ ಇದನ್ನೂ ಗಮನಿಸುವುದು ಅವಶ್ಯವಾಗಿದೆ.

ಉತ್ತರ ಕರ್ನಾಟಕದಲ್ಲಿ ದೊಡ್ಡಾಟ-ಸಣ್ಣಾಟ, ಪಾರಿಜಾತ-ದಾಸರಾಟ, ಗೊಂಬೆಯಾಟ-ತೊಗಲುಗೊಂಬೆಯಾಟ ಎಂಬ ಮೂರು ವರ್ಗಗಳಲ್ಲಿ ಸಮಾವೇಶ ಗೊಳ್ಳಬಹುದಾದ ಆರುಬಗೆಯ ಬಯಲಾಟಗಳಿವೆ. ಇವುಗಳಲ್ಲಿ ಮೊದಲಿನ

ನಾಲ್ಕು, ವ್ಯಕ್ತಿಗಳ ಮೂಲಕ ಕೊನೆಯವೆರಡು ಗೊಂಬೆಗಳ ಮೂಲಕ ಅಭಿನಯಿಸಲ್ಪಡುವ ಬಯಲಾಟಗಳು. ಪಾರಿಜಾತ ಮತ್ತು ದಾಸರಾಟಗಳು ಪದ್ಯನಿಷ್ಠವಾದುವು. ಹೀಗಾಗಿ ಜಾನಪದಗದ್ಯ ದೃಷ್ಟಿಯಿಂದ ಗಮನಾರ್ಹವಾದುವೆಂದರೆ ದೊಡ್ಡಾಟ ಮತ್ತು ಸಣ್ಣಾಟಗಳು. ಆದರೆ ಈಗ ವಿವರಣರೂಪದ ಗದ್ಯವನ್ನೊಳಗೊಂಡಿದ್ದರೂ ಸಣ್ಣಾಟ ಮೂಲತಃ ಪದ್ಯಮಯವಾದುದು.[೧] ಆದಕ್ಕಾಗಿ ಮೊದಲಿನಿಂದಲೂ ಪದ್ಯಕ್ಕೆ ಸಮಪ್ರಮಾಣದಲ್ಲಿ ಸ್ಥಳವ್ಯಾಪಿಸಿದ ದೊಡ್ಡಾಟದ ಗದ್ಯದ ಅಭ್ಯಾಸವೇ ಶುದ್ಧವೈಜ್ಞಾನಿಕವೆನಿಸುತ್ತದೆ. ದೊಡ್ಡಾಟದ ಈ ಗದ್ಯವನ್ನು ೧. ಸಭಾಮಾತಿನ ಮಾರ್ಗಶೈಲಿ ೨ ಸಂಭಾಷಣ ರೂಪದ ವ್ಯಾವಹಾರಿಕ ಗಂಭೀರಶೈಲಿ ೩. ಸಾರಥಿ ಬಳಸುವ ದೇಶೀಶೈಲಿಯೆಂದು ವಿಭಾಗಿಸಬಹುದು.

೧. ಪ್ರತಿಯೊಂದು ಪಾತ್ರವೂ ಪ್ರಥಮಸಲ ರಂಗದ ಮೇಲೆ ಬರುವಾಗ ಸಾರಥಿಯ ಮೂಲಕ ತನ್ನ ಪರಿಚಯವನ್ನೊದಗಿಸುವುದೇ ಸಭಾಮಾತು. ಇದು ಸಂಸ್ಕೃತವ್ಯಾಮೋಹ, ಪ್ರಾಸಸಂಯೋಜನೆ, ಸುದೀರ್ಘಸಮಾಸಗಳಿಂದ ಹೆಣೆಯಲ್ಪಟ್ಟ ಬಂಧುರಮಾರ್ಗಮಾಲೆ. ಉದಾ:

ಸಾರಥಿ: ಅಯ್ಯಾ ನೀನು ಧಾರು.

ಭೀಮ: ಎಲೈ ರಂಗದ್ವಜ್ರಮಣಿಯೇ, ಗಾಂಗೇಯಸಂಘಟಿತ ಶೃಂಗಾರ ಸಭಾರಂಗ ಪ್ರಾಂಗಣದೊಳ್ ಅಂಗಜಪಿತನ ಹಿಂಗದೆ ಧ್ಯಾನಿಸುವ ಮಂಗಳಾತ್ಮಕ ನೀನು ಧಾರು.

ಸಾರಥಿ: ಅಯ್ಯಾ ನೀನು ಧಾರು.

ಭೀಮ: ಧರ್ಮಗುಣಕಲಾಪ, ಭೂಪಕುಲದೀಪ, ಸತ್ಪ್ರತಾಪ, ಛಪ್ಪನ್ನೈವತ್ತಾರು ದೇಶದೊಳ್ ಕಪ್ಪುಕಾಣಿಕೆಯಂ ಮೆಪ್ಪಗೊಂಡಿಪ್ಪ ರಾಯರ ತಲೆಚಿಪ್ಪುಗಳು ಗಪ್ಪನೆ ಉದುರುವಂತೆ ಚಪ್ಪಳಿಸಿ ಕೆಡಗಿದ ಕಡು ಸೌರ್ಯಧೀರನಲ್ಲದೆ ಹೆಕ್ಕಳಿ ಬಲದಿ ಕದನಕ್ಕೆ ಬಂದ, ಬಕ ಹಿಡಂಬ ರಕ್ಕಸರ ಕಕ್ಕಿಸಿ, ಧಿಕ್ಕರಿಸಿ, ಒಕ್ಕಲಿಕ್ಕಿ ದಿಕ್ಕುಪಾಲ್ ಮಾಡಿಕ್ಕಿದ ಪ್ರಚಂಡ ಭಂಡನೋದ್ದಾಮ ಹರಿಬಲವಿರಾಮ ಭೀಮಸೇನನೆಂದು ಢಣ ಢಣಲ್ ಎಂದು ಜಯಭೇರಿಯಂ ಬಡಿಸಲೈ ದೂತ–ಸೌಖ್ಯಪ್ರದಾತ."

೨ ರಂಗಭೂಮಿಯ ಮೇಲೆ ಬಂದ ಎಗಡು ಇಲ್ಲವೆ ಹಲವು ಪಾತ್ರಗಳು "ನಾನು ಹೇಳುತ್ತೇನೆ ಕೇಳುವಂಥವನಾಗು" "ಅದೇನಿರುವದು ಹೇಳುವಂಥವನಾಗು" ಎಂದು ನುಡಿದು ಒಂದು ಪಲ್ಲವಿಯನ್ನು ಹೇಳುತ್ತ ಕುಣಿಯುವಷ್ಟರಲ್ಲಿ

೧. 'ಉತ್ತರಕರ್ನಾಟಕದ ಜಾನಪದ ರಂಗಭೂಮಿ' (ಮುನ್ನಂತರ) ಪ್ರಬಂಧದಲ್ಲಿಯ ಪ್ರೊ. ಕಂಬಾರ ಅವರ ಹೇಳಿಕೆಯನ್ನು ಗಮನಿಸಬೇಕು.

ಹಿಮ್ಮೇಳದವರು ಆ ಪದ್ಯವನ್ನು ನಡೆಸಿಕೊಂಡು ಹೋಗುತ್ತಾರೆ. ಈ ಹಾಡನ್ನೇ ಪಾತ್ರಗಳು ಸರಳಗಂಭೀರಶೈಲಿಯಲ್ಲಿ ವಿವರಿಸುವುದುಂಟು. ಕೆಲವು ಸಲ ಹಾಡಿನ ಹಿನ್ನೆಲೆಯಿಲ್ಲದೆಯೇ ಸಂಭಾಷಣೆ ನಡೆಸುವುದುಂಟು. ಇದು ಸಭಾಮಾತಿನಷ್ಟು ಆಡಂಬರವುಳ್ಳುದಲ್ಲ. ಈ ಎರಡು ರೀತಿಗಳಿಗೆ ಎರಡು ಉದಾಹರಣೆ:

ಅ. **ದುರ್ಯೋಧನ** : ಕ್ಷಿತಿಪತಿಯೆಂದೆನಿಸಿ। ಸಾಮಾನ್ಯಳಾಸತಿಗೆ ಮಾನವನೊಪ್ಪಿಸಿ
ಗತಿಗೆಟ್ಟು ಬಾಳಿ ಜಗತಿಯನಾಳ್ವರೆ
ಮುಂದೆ ಗತಿಯ ಪೇಳ್ವಸ್ತುರಿಸಿ ||

ಹೇ, ದಿವಾಕರಾತ್ಮಜಾ ಈ ಸಮಯದಲ್ಲಿ ಸಕಲರಾಜಪೂಜಿತ ನಾಂ ಇಂದಿನ ದಿನದಿ ಈ ಸಾಮಾನ್ಯಳಾದ ದ್ರೌಪದಿಯೆಂಬ ಸತಿಗೆ ಮಾನಧನವ ಸೂರೆ ಗೊಟ್ಟೆನೋ ರಾಧೇಯಾ! ಮುಂದೆ ಗತಿಯೇನೋ ಕರ್ಣಾ, ಕೇಳಿದೇನಯ್ಯಾ ಮಿತ್ರತನಯಾ. ಈ ಪೃಥ್ವಿಮಂಡಲದಲ್ಲಿ ಪ್ರತ್ಯಕ್ಷವಾಗಿ ಸಂಪೂರ್ಣಚಂದ್ರ ಪ್ರಕಾಶದಂತೆ ಇದ್ದಂಥಾ ಎನ್ನ ಸತ್ಪ್ರಕಾಶವನ್ನು ಅನೇಕರಾಜರ ಸಮ್ಮುಖದಲ್ಲಿ ಆ ವಾರಾಂಗನೆಯರ ಸಮಾನ ಚೇಷ್ಟೆಯುಳ್ಳ ಪಾಂಡವರೈವರ ರಾಣಿಯಾದ ಪಾಂಚಾಲಿಯು ಎನ್ನಗೆ ರಾಹುವಿನಂತೆ ತುಡುಕಿ ಎನ್ನಗೆ ವ್ಯರ್ಥ ಅಪಮಾನವನ್ನು ಮಾಡಿದಳಲ್ಲ. ಹೀಗೆ ಗತಿಗೆಟ್ಟು ಮಾನಹೀನನಾಗಿ ಭಂಡಬಾಳ್ವೆಯಿಂದಾ ಇನ್ನು ಬಾಳಲಾರೆ, ಬಾಳಲಾರೆ. ಇಲ್ಲಿಗೆ ಸಾಕಯ್ಯ ರವಿತನಯಾ.

ಕರ್ಣ: ಹೇ, ಅಣ್ಣಾ ಕೌರವೇಶ್ವರಾ, ನೀನು ಇಂಥ ಧೈರ್ಯಶಾಲಿಯಾಗಿದ್ದು ಇಂಥ ಅಪಕಾರ್ಯಕ್ಕೆ ಅನುವು ಮಾಡುತ್ತಾರೇನೋ ಅಗ್ರಜಾ. ಇಕೋ ಈ ಸಮಯದಲ್ಲಿ ನಿನ್ನ ಮಾತು ಕೇಳಿ ಅತೀತೀವ್ರದಿಂದ ಪೋಗಿ ಆ ಪಾಂಚಾಲಿಯನ್ನು ತಂದು ನಿನ್ನ ಚರಣಾರವಿಂದಕ್ಕೆ ಒಪ್ಪಿಸುವೆನೋ ಅಗ್ರಜಾ.

ಬ. **ಧೃತರಾಷ್ಟ್ರ:** ಹೇ, ಎನ್ನವಲ್ಲಭಿಯಾದ ಗಾಂಧಾರಿಯೇ, ಈ ವೇಳೆಯಲ್ಲಿ ಕುರುಪತಿಯನ್ನು ಹಾಗೂ ಶಕುನಿಯನ್ನು ಕರೆಸಿ ಅವರೀರ್ವರ ಸಮ್ಮುಖದಲ್ಲಿ ಒಂದು ವಿಧವಾಗಿ ಹೇಳುತ್ತೇನೆ. ಈ ಸಮಯದಲ್ಲಿ ಭೀಮೇಶನಂತಃಕರಣವು ಅವರಿಗೆ ಸಲ್ಲುವದಿಲ್ಲ ಕಂಡೆಯಾ ಕಾಂತೀ ಸದ್ಗುಣವಂತೀ.

ಗಾಂಧಾರಿ : ಹೇ, ವಲ್ಲಭಾ ನಾನು ನನ್ನಮಂದಿರಕ್ಕೆ ಹೋಗುತ್ತೇನೆ ಅಪ್ಪಣೆಯನ್ನ ಕೊಡ್ತೋ ವಲ್ಲಭಾ.

ಧೃತರಾಷ್ಟ್ರ : ಹೇ, ಎನ್ನವಲ್ಲಭಿಯೇ ಕೇಳು, ನೀನು ನಿನ್ನ ಮಂದಿರಕ್ಕೆ ತೆರಳು. ನಾನು ಕುರುಪತಿಯನ್ನ ಶಕುನಿಯನ್ನು ಕರೆಸುತ್ತೇನೆ. ನೀನು ಹೋಗು ವಂತಾಕಿಯಾಗೇ ವಲ್ಲಭಿ. ಎಲಾ ಸಾರಥಿ! ಎನ್ನ ತನಯನಾದ ಕೌರವೇಶ್ವರನನ್ನು ಕರೆದುಕೊಂಡು ಬರುವಂಥವನಾಗು.

೩. ಹೀಗೆ ಮುಖ್ಯ ಪಾತ್ರಗಳನ್ನು ಬಿಟ್ಟರೆ ಮಾತನಾಡುವ ಇನ್ನೊಂದು ಪಾತ್ರವೇದರೆ ಸಾರಥಿ. ಬಯಲಾಟದುದ್ದಕ್ಕೂ ಚಟುವಟಿಕೆಯಿಂದ ಇರುವ ಈತನ ಕೆಲಸವೆಂದರೆ ಪಾತ್ರಗಳ ಪರಿಚಯ ಮಾಡಿಕೊಡುವುದು ಮತ್ತು ಸಭಿಕರನ್ನು ವಿನೋದದಲ್ಲಿಡುವುದು. ಈ ವಿನೋದ ಒಮ್ಮೊಮ್ಮೆ ಶ್ರುತಿಕಷ್ಟ, ಅರ್ಥದುಷ್ಟ, ಕಲ್ಪನೋಕ್ತಿ ಕಷ್ಟವಾಗುವುದೂ ಉಂಟು. ಕವಿರಾಜಮಾರ್ಗಕಾರನು ಈ ಪಾತ್ರದ ಇಂಥ ಮಾತುಗಳನ್ನು ಮನ್ನಿಸುವಂತೆ ತೋರುತ್ತದೆ.

ನಿಮ್ಮ ಹೆಸರೇನು ರಾಜಾ? ರವಿಕೋಟಿ ತೇಜಾ
ನಿಮ್ಮ ಬಲಭಾಗದಲ್ಲಿದ್ದಾರೆ ನೋಡೇ ತಾಯೀ, ಮಧುರ ಮಾವಿನಕಾಯೀ

ಎನ್ನುವ ಈತನ ಬಾಯಿಯಿಂದ

ತಾವು ಬಂದವರು ಧಾರು ದೊರಿಯೇ ಬೆಕ್ಕಿನ ಮರಿಯೇ
ಹೇಳಬೇಕು ತಾಯೀ ಹಾಳೂರ ಹುಚ್ಚನಾಯೀ

ಎಂಬಂಥ ಕೆಳಮಟ್ಟದ ಮಾತುಗಳೂ ಆಗಾಗ ಹೊರಡುತ್ತವೆ. (ಕೆಲವುಸಲ ರಾಜಪಾತ್ರಗಳೂ ತಮ್ಮ ಅಂತಸ್ತನ್ನು ಮರೆತು "ಎಲೈ ಸಾರಥೀ ಹೊಲಸ ನಾರತೀ" ಇತ್ಯಾದಿ ಲಘು ಮಾತುಗಳನ್ನೂ ಹೇಳುತ್ತವೆ.) ಯಾವುದೇ ಕಾರಣದಿಂದ ರಂಗಭೂಮಿ ತೆರವು ಉಳಿದರೆ ಪೂರ್ವಸಿದ್ಧ ಆಶುರಚನೆಯಿಂದ ಅದನ್ನು ತುಂಬಿ ಬಿಡುತ್ತಾನೆ, ಪ್ರೇಕ್ಷಕರ ಗಮನವನ್ನು ಎಚ್ಚರವಾಗಿಡುತ್ತಾನೆ. ಆಗ ಹೇಳುವ ಹಲವು ಬಗೆಯ ಚತುರಮಾತುಗಳಲ್ಲಿ ಉದಾಹರಣೆಗೆ ಒಂದು ಸರ ಮಾತನ್ನು ನೋಡಬಹುದು.

ಸಾರಥಿ : ನನಗಂತಾರ ವಿದೂಷಕ. ಪರಿಚಾರಕ, ದ್ವಾರಪಾಲಕ, ದೂತ, ಸಾರಥಿ ಎಂದು, ಪರಮೇಶ್ವರನಂತೆ ನನಗೆ ಹಲವು ನಾಮಗಳಿವೆ. ಹೀಗಾಗಿ ಬೇಕಾದ ಹೆಸರಿನಿಂದ ನೀವು ನನ್ನನ್ನು ಕರೆಯಬಹುದು. ನಾನು ಕೋಳೂರ ಸಂತಿಗೆ ಹೋಗಬೇಕೆಂದು ನನ್ನ ಬೋಳ ಹೋರೀಗಿ ವಾಳ್ಳಿ ಹಾಕ್ಕೊಂಡು ಕೋಳೂರ ಸಂತೆಯ ಕಾಳಿನ ಓಣ್ಯಾಗ ಹಾಯ್ದು ಹೊಂಟಿದ್ದೆ. ಅಲ್ಲಿ ಒಬ್ಬ ಸಾಳ್ಯಾರ ಹುಡಗಿ ಬ್ಯಾಳಿ ಹಚ್ಚಿದ್ದಳು. ನನ್ನ ಬೋಳಹೋರಿ ಹೋಗಿ ಆಕಿ ಬ್ಯಾಳಿ ಬುಟ್ಯಾಗ ಬಾಯಿ ಹಾಕ್ತು. ಆವ್ಯಾಗ ಕಾಳಿಗಿ ಕಾಳs ಕಕ್ತು, ನೀರಿಗಿ ನೀರs ಕಕ್ತು. ಎಲ್ಲಿ ತೋರಿಸಿದರೂ ನೆಟ್ಟಗಾಗಲಿಲ್ಲ. ಧಾರವಾಡ ಹುಬ್ಬಳ್ಳಿ ದವಾಖಾನ್ಯಾಗ ತೋರಿಸಿದರೂ ನೆಟ್ಟಗಾಗಲಿಲ್ಲ. ನಿನ್ನ ಹೋರಿ ಬ್ಯಾಳಿತಿಂದ ಆ ಸಾಳ್ಯಾರ ಹುಡಗಿ ಹತ್ತರ ಹೋಗಿ ಕೇಳಂತ ಡಾಕ್ಟರ ಹೇಳಿದ್ರು. ಆದರಂತೆ ನಾನು ಸಾಳ್ಯಾರ ಹುಡಿಗಿ ಹತ್ತರ ಹೋಗಿ ನನ್ನ ಹೋರಿ ನಿನ್ನ ಬ್ಯಾಳಿ ತಿಂದು ಕಾಳಿಗಿ ಕಾಳs ಕಕ್ಕತಾದ, ನೀರಿಗ ನೀರs ಕಕ್ಕತಾದ. ಎಲ್ಲಿ ತೋರಿಸಿದರೂ

ನೆಟ್ಟಗಾಗಲ್ದು. ಆದಕ ನೀ ಏನ ಬೇಡತಿ ಬೇಡು ಅಂದೆ. ಆಗ ಆ ಸಾಳ್ಯಾರ ಹುಡಗಿ ಬೇಡಿದ್ದೇನಂದರೆ— ಸೀರಿಗಿ ಬೇಡ್ಯಾಳ ಸಿರಹಟ್ಟಿ ನಾಡ. ಕುಬಸಕ ಬೇಡ್ಯಾಳ ಕುಸುಗಲ್ಲ ನಾಡ. ಕೂಕಮುಕ ಬೇಡ್ಯಾಳ ಕುಕನೂರ ನಾಡ. ಅರಿಷಿಣಕ ಬೇಡ್ಯಾಳ ಸಿರಸಿ ಬಾಗಿಲತನಕ. ಹಲ್ಬಿಟ್ಟಿಗಿ ಬೇಡ್ಯಾಳ ಮಲ್ಲೂರ ಗ್ರಾಮ. ಗಂಧಕ ಬೇಡ್ಯಾಳ ಇಂದರಬಾಗಮಟ.

ಮುತ್ತಿನ ಮೂಬೆರಕಿ ಮತ್ತೇನ ಬಯಸ್ಯಾಳ ? ಮೆಕ್ಯಾನ ಮೂರಹಳ್ಳಿ, ಮಂಗ್ಯಾನ ಕ್ವಾಟಿ, ಒತನಬೇಡ್ಯಾಳ ೯೩ಹಳ್ಳಿ. ಬೆಳ್ಳಬೆಳತನಕ ಬೆಳಗಾಂವಿ ಶಾರ, ಬಾಡ ಬಂಕಾಪೂರ ಸಿಗ್ಗಾವಿ ಊರ. ನೋಡೆನಂತಾಳ ಬೆಣ್ಣಿಹಳ್ಳಸಾಲ. ಪಂಚ ಪಾಂಡವರಿರುವ ಹಾನಗಲ್ಲೂರ. ಸಂತಿ ಮಾಡೇನಂತಾಳ ಮೇಲಗೈಯಲ್ಲಾಪೂರ. ಕುಂತುನೋಡೇನಂತಾಳ ಕುರಬೆಟ್ಟನಾಡ. ಹೆಣ್ಣ ಹೆಂತ ಹೆಣ್ಣು ನಿಂಬಿ ಪುತಳಿ ಹಣ್ಣ. ಒಂದಿನ ಹಾಸಿಗ್ಗ ಬಂದೆನಂದಾಳ. ಹುಬ್ಬಚ್ಚಿ ನೋಡ್ಯಾಳ ಹುಬ್ಬಳ್ಳಿ ಶ್ಯಾರ. ದಾರಿಮಾಡೇನಂತಾಳ ಧಾರವಾಡ ಊರ. ಹರದಾರಿ ಬಂದು ಬೇಡ್ಯಾಳ ಜೀವದಾಹಾರ. ನಾ ಹೆದರಿ ನನ ಬೋಳಹೋರಿ ಉಳೀದಿಲ್ಲಂತ ತಾಳಗೆಟ್ಟು ಮೇಳತಪ್ಪಿ ಬಂದು ನಿಮ್ಮ ಬಯಲಾಟದಲ್ಲಿ ಒಂದು ಕೆಲಸಿದ್ರ ಕುಡ್ರಿ ಅಂತಾ ಬೇಡಿಕೊಳ್ಳತೀನಿ. ಅಯ್ಯಾ ಸೂತ್ರಧಾರನೇ.

ಸೂತ್ರಧಾರ : ಹಾಗಾದರೆ ಒಂದು ವರ್ಷಕ್ಕೆ ಏನ ತಗೆದುಕೊಳ್ಳುತ್ತೀ?
ಸಾರಥಿ : ೩೬೫ ದಿವಸ.
ಸೂತ್ರಧಾರ : ಅಂದರೆ ತಿಂಗಳಿಗೆ ?
ಸಾರಥಿ : ೩೦ ದಿವಸ.
ಸೂತ್ರಧಾರ : ಒಂದು ದಿವಸಕ್ಕೆ ?
ಸಾರಥಿ : ೨೪ ತಾಸ.
ಸೂತ್ರಧಾರ ; ಒಂದು ತಾಸಿಗೆ ?
ಸಾರಥಿ : ೬೦ ಮಿನಿಟ.
ಸೂತ್ರಧಾರ ; ಒಂದು ಮಿನಿಟಗೆ?
ಸಾರಥಿ : ಒಂದು ಕಪ್ಪ ಉಪ್ಪಿಟ್ಟು, ಒಂದು ಪ್ಲೇಟ ಚಹ.

ಸೂತ್ರಧಾರ : ಹಾಗಾದರೆ ನೀನು ಹೇಳಿದ್ದನ್ನು ಕೊಡುತ್ತೇನೆ ನಮ್ಮ ಬಯಲಾಟದಲ್ಲಿ ದೊಡ್ಡ ರಾಜರು, ರಾಜಸ್ತ್ರೀಯರು ಬರುತ್ತಾರೆ, ಅವರನ್ನು ನಯವಿನಯದಿಂದ ಮಾತನಾಡಿಸುವಂಥವನಾಗು.

ಸಾರಥಿ: ಹೋ. ಹಾಗೆ ಆಗಲಿ.

ಪಾತ್ರಧಾರಿಗಳ ಜೊತೆ ರಂಗದರ್ಶನವನ್ನು ಮುಂದುವರಿಸುವ ಈತ ಕೆಲವೊಮ್ಮೆ ಹೀಗೆ ಸೂತ್ರಧಾರನ ಜೊತೆ ಮುಂದುವರಿಸುತ್ತಾನೆ. ನಿಜ ಹೇಳುವುದಾ

ದರೆ ಸಾರಥಿಗೆ ಇಂಥವೇ ಮಾತುಹೇಳಬೇಕೆಂಬ ನಿಯಮವಿಲ್ಲ. ಹೀಗಾಗಿ ಊರೂರುಗಳಲ್ಲಿ ಸಿಗುವ ಬಯಲಾಟದ ವಹಿಯಲ್ಲಿ ಕೇವಲ ಪಾತ್ರಗಳ ಸಭಾಮಾತು ಸಂಭಾಷಣ ಮಾತು ಗೀತಗಳನ್ನು ಬರೆದಿರುವರೇ ಹೊರತು ಸಾರಥಿಯ ಮಾತುಗಳನ್ನು ಬರೆದಿರುವುದಿಲ್ಲ. (ಬಯಲಾಟವನ್ನು ಹೀಗೆ ಬರೆದಿಡುವ ಪದ್ಧತಿ ಮೊದಲಿನಿಂದಲೂ ಕಂಡುಬರುವುದರಿಂದ ಇದನ್ನು "ಲಿಖಿತ ಜನಪದ ಸಾಹಿತ್ಯ" ವೆನ್ನಬಹುದೇನೋ.)

ಒಟ್ಟಿನಲ್ಲಿ ಬಯಲಾಟಗಳಲ್ಲಿ ಪ್ರಮುಖ ಪಾತ್ರಗಳು ಮಾರ್ಗಶೈಲಿಯ, ವ್ಯಾವಾರಿಕ ಗಂಭೀರಶೈಲಿಯ, ಸಾರಥಿಯ ಪಾತ್ರ ದೇಶೀಶೈಲಿಯ ಗದ್ಯವನ್ನು ಬಳಸಿ ಒಂದು ರೀತಿಯ ಮೇಳ, ಕೆಲವುಸಲ ವಿಪರ್ಯಸ್ತ ಮೇಳವನ್ನು ಸೃಷ್ಟಿಸುತ್ತಾರೆ.

ಕಿರಿಯ ಪ್ರಕಾರ

ಪಡೆಮಾತು

ಪಡೆಮಾತು, ಮತ್ತು ಗಾದೆಮಾತು ಮಾತುಮಾತಿಗೂ ಬಳಕೆಗೊಳ್ಳುವ ಜೀವಂತ ಪ್ರಕಾರ. ಇವುಗಳಿಂದ ಮಾತಿಗೆ ಒಂದು ಶಕ್ತಿ.ಬೆಡಗು ಸಂಪ್ರಾಪ್ತವಾಗಿ ಅದರ ಅರ್ಥವ್ಯಾಪ್ತಿ ಸಾವಿರಪಟ್ಟು ಹಿಗ್ಗುತ್ತದೆ. ಆಲಂಕಾರಿಕರು ಹೇಳುವಂತೆ ಮಾತಿಗೆ ಸ್ತರಗಳು ಮೂರು. ಅವು; ವಾಚ್ಯ, ಲಕ್ಷ್ಯ ಮತ್ತು ವ್ಯಂಗ್ಯ. ಇವು ಒಂದಕ್ಕಿಂತ ಒಂದು ಹೆಚ್ಚು ಪರಿಣಾಮಕಾರಿ. ಪಡೆಮಾತು ಮತ್ತು ಗಾದೆ ಮಾತು ಬಹಳಷ್ಟುಸಲ ಲಕ್ಷ್ಯದಲ್ಲಿ ವ್ಯವಹರಿಸಿ ಒಮ್ಮೊಮ್ಮೆ ವ್ಯಂಗ್ಯವನ್ನು ಮುಟ್ಟುವುದುಂಟು.

ಪಡೆಮಾತು ಒಂದು ನುಡಿಗಟ್ಟು, ಗಾದೆಮಾತು ಒಂದುವಾಕ್ಯ. ಒಂದು ನುಡಿಗಟ್ಟು ವಾಚ್ಯದಲ್ಲಿಯೇ ನಿಂತರೆ ಸಮಾಸ, ಲಕ್ಷ್ಯದಲ್ಲಿ ವ್ಯವಹರಿಸಿದರೆ ಪಡೆಮಾತು. ಉದಾ: ಕೈಕಟ್ಟು (=ಕೈಕಡಗ), ಇದು ಕ್ರಿಯಾಸಮಾಸ. "ಅಸಾಯಕನಾಗಿ ಮಾಡು" ಎಂದು ಭಾವಿಸಿಕೊಂಡರೆ ಇದು ಪಡೆನುಡಿ." ಕೈತೋರಿಸಿ ಅವಲಕ್ಷಣ ಎನಿಸಿಕೋ" ಇದು ಗಾದೆ. ಇದೇ ರೀತಿ 'ಗಾಳಿಗೋಪುರ' ಇದು ಪಡೆಮಾತು. 'ಗಾಳಿ ಗುದ್ದಿ ಮೈನೋಯಿಸಿಕೊ' ಇದು ಗಾದೆಮಾತು. ಹೀಗೆ ಪಡೆಮಾತು, ಮತ್ತು ಗಾದೆಮಾತುಗಳಲ್ಲಿ ಅಂತರವಿದೆ.

ಮಾತುಮಾತಿಗೆ ಬಳಕೆಯಾಗುವ ಪಡೆಮಾತು ಭಾಷೆ ಹುಟ್ಟಿದಂದಿನಿಂದ ಬಳಕೆಗೊಂಡಿದೆ. "ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನ್", "ಮೊಲೆವೊತ್ತಳೆ ವೀರಜನನಿವೆಸರಂ ಪೆತ್ತಳ್" ಇತ್ಯಾದಿ ಪಡೆನುಡಿಗಳು ಆ ಆ ಕಾವ್ಯಗಳ ಸಂದರ್ಭಕ್ಕೆ ವಾಚ್ಯವನ್ನು ಮೀರಿ ಲಕ್ಷ್ಯಶಕ್ತಿಯನ್ನೀಯುತ್ತವೆ. ಇಂತಹ ಸಾವಿರಾರು ವಾಗ್ರೂಢಿಗಳು ಕನ್ನಡದಲ್ಲಿ ಹುಟ್ಟಿಬಂದಿವೆ, ಹುಟ್ಟುತ್ತಲಿವೆ

ಉದಾ: ಕಣ್ಣನಕಸ, ಕೈಮುರಿ, ಹಲ್ಲುತಿನ್ನು, ಮೂಗುಮುರಿ, ಉಗುಳುಹಚ್ಚು, ಹೊಟ್ಯಾಗ ಹಾಕ್ಕೊ, ಗೋಣ್ಮುರಿ.
ಉಡದ ಹಿಡಿತ, ನಾಯಿಬಾಲ, ಕಪಿಮುಷ್ಠಿ, ಕೋಳಿ ಜಗಳ, ಕುದುರಿ ಏರು, ಗ್ವಾದಾಲ್ಯಾನ ನಾಯಿ, ಗಿಳಿಪಾಠ.
ಅಳಿಲು ಸೇವೆ,ಉತ್ತರಕುಮಾರ,ಕುರುಕ್ಷೇತ್ರ,ಯಕ್ಷಪ್ರಶ್ನೆ,ಪ್ರಮಿಳಾರಾಜ್ಯ
ಬೆಣ್ಣೆಹಚ್ಚು, ಹಣ್ಣುಗು, ಹುಳಿಹಿಂಡು, ಉಪ್ಪುಣ್ಣು.
ದೀಪ ದೊಡ್ಡದಾಗು, ಮೂಡಲ ಹರಿ, ಅಡಿಗೆ ಬೆಳೆ,
ಗಾಂಧಿಕ್ಲಾಸು, ಮೊಗಲಾಯಿ, ಫೋರ್‌ಟ್ವೆಂಟಿ, ಟ್ಯೂಬಲಾಯಿಟ, ಬಾಜೀರಾಯ

ಈ ಪದಗಳಿಗೆ ನಿಘಂಟುವಿನ ಅರ್ಥ ನಿಷ್ಪ್ರಯೋಜಕ. ಪರಂಪರೆಯ ಅರ್ಥವೇ ಪ್ರಯೋಜಕ. ಈ ಪಡೆಮಾತುಗಳು ಬದುಕಿನ ಸಮಗ್ರ ವಸ್ತುಗಳನ್ನವಲಂಬಿಸಿ ಹುಟ್ಟಿ ವಿಶಿಷ್ಟ ಅರ್ಥದಿಂದ ಚಲಾವಣೆಗೊಳ್ಳುತ್ತವೆ. ಕೆಲವು ಸಲ ಇವು ಪ್ರದೇಶ ವಿಶಿಷ್ಟಗಳಾಗಿ ಬೆಳೆದುಬಂದಿವೆ. ಉದಾ: ಅಂಡಿಗೆ ನೀರು ಬಿಡು = ಮಾಡಿದ್ದನ್ನು ಮರೆ, ಅಂಡುಮಾಡಿಕೊ = ಆಶ್ರಯಪಡೆ, ಅಬೆಹಿಡಿ = ಸಾಕಾಗಿ ಬೇಸರ ಬರು, ದೋಂದಲು ಬಾಚು = ಯಾರೂ ಮಾಡದೇ ಉಳಿದ ಕೆಲಸ ಮಾಡು. ದಕ್ಷಿಣಕನ್ನಡ ಜಿಲ್ಲೆಯ ಈ ಪಡೆನುಡಿಗಳು ಬೇರೆ ಪ್ರದೇಶದವರಿಗೆ ಅರ್ಥವಾಗುವುದಿಲ್ಲ.

ಪಡೆನುಡಿಗಳು ಲಕ್ಷ್ಯಾರ್ಥದಿಂದ ಕೂಡಿದ್ದರೂ ಅತಿ ಬಳಕೆಯ ಮೂಲಕ ಅವು ವಾಚ್ಯಾರ್ಥದಷ್ಟು ಸುಲಭವಾಗಿ ವ್ಯವಹರಿಸುತ್ತವೆ ಆದರೂ ಬಿಡಿನುಡಿಗಳಿಗಿಂತ ಬೇರೆಯಾದ ಸಾಂಕೇತಿಕ ಅರ್ಥವನ್ನೊಳಗೊಂಡ ಇವು, ಭಾಷೆಗೆ ಬೇರೊಂದು ಬಲವನ್ನು ನೀಡುತ್ತವೆ

ಗಾದೆ ಮಾತು

ಸಂಸ್ಕೃತದ 'ಗಾಥಾ" ಪ್ರಾಕೃತದಲ್ಲಿ 'ಗಾಹೆ'ಯಾಗಿ ಕನ್ನಡಕ್ಕೆ 'ಗಾದೆ' ಎಂಬ ರೂಪತಾಳಿ ಬಂದಿತು. ಹಳೆಯಮಾತು ಎಂಬ ಅರ್ಥದಲ್ಲಿ ತಮಿಳರು ಪಟಿಮೊಟ ಎಂದು, ಮಲಯಾಳಿಗಳು ಪಟಿಂಚೊಲ್ ಎಂದು ಕರೆದರೆ ನಾಡವರ ವಾಣಿ ಎಂಬ ಅರ್ಥದಲ್ಲಿ ತೆಲುಗರು ನಾನುಡಿ ಎಂದು, ಕನ್ನಡಿಗರು ನಾಣ್ನುಡಿ ಎಂದು ಕರೆದಿದ್ದಾರೆ. ಕವಿರಾಜಮಾರ್ಗಕಾರ ಹೇಳುವ " ನಾಣ್ನುಡಿಯಬೆಡಂಗೆ ಕನ್ನಡದ ಮಾತಿನೊಳ್" ಎಂಬುದು ಇದರ ಜನಪ್ರಿಯತೆಯ ದ್ಯೋತಕ. ಸಂಕ್ಷಿಪ್ತತೆ, ಅರ್ಥಪೂರ್ಣತೆ, ಪರಿಣಾಮ ತೀಕ್ಷ್ಣತೆ, ಜನಪ್ರಿಯತೆ ಇವು ಗಾದೆಯ ಮುಖ್ಯ ಲಕ್ಷಣಗಳು. "As the country so the proverb" "As the people so the proverb" ಎಂಬಷ್ಟರ ಮಟ್ಟಿಗೆ ಪ್ರದೇಶ ವಿಶಿಷ್ಟ, ಪ್ರಜಾವಿಶಿಷ್ಟವಾಗಿರುವ ಇದು ರೂಪಪಡೆಯುವುದು ಎರಡು ರೀತಿಯಲ್ಲಿ. ಒಂದು: ಸಾಮಾಜಿಕಅನುಭವ ವ್ಯಕ್ತಿ ಮೂಲಕ ಗಾದೆಯಾಗಿ ಹೊಮ್ಮ

ಬಹುದು. ಎರಡು: ಶಿಷ್ಟ ಅನುಭವಿಯೊಬ್ಬ ಹೇಳಿದ ಮಾತು ಸಾಮಾಜಿಕ ಗಾದೆಯಾಗಿ ಬಳಕೆಯಾಗಬಹುದು. ಹೀಗಾಗಿ ಗಾದೆ ನಾಣ್ಣುಡಿಯೂ ಹೌದು, ಜಾಣ್ನುಡಿಯೂ ಹೌದು.

ದೇಶ ಬೇರೆ, ಭಾಷೆ ಬೇರೆಯಾದರೂ ಬಹಳಷ್ಟು ನಾಣ್ಣುಡಿ ಮಾತ್ರ ಸಮಾನವಾಗಿರುವದು ಗಮನಾರ್ಹ ಅಂಶ.

ಕನ್ನಡ : ತುಂಬಿದ ಕೊಡ ತುಳುಕುವದಿಲ್ಲ
ತೆಲಗು : ನಿಂಡ ಕುಂಡ ತೊಣಕದು
ತಮಿಳು : ನಿಱೈಕುಡಂ ನೀರ್ ತುಬುಂಬಾದು.
ಮಲಯಾಳ : ನಿಱಕುಟಂ ತುಳುಂಬುಕು ಇಲ್ಲ

ಈ ಸಮಾನತೆ ಜಾಗತಿಕವಾಗಿ ಕಂಡರೂ ಆಶ್ಚರ್ಯವಿಲ್ಲ. ಇಷ್ಟರ ಮಟ್ಟಿಗೆ ಇವುಗಳ ಹಿಂದೆ ಅಡಗಿದ ತತ್ವ ಸಾರ್ವತ್ರಿಕವಾಗಿರುತ್ತದೆ. ಗಾದೆಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ೧ ಪ್ರಾಚೀನತೆ ೨ ನಿತ್ಯಸೃಷ್ಟಿ ೩. ರೂಪಾಂತರ ೪. ಪಾಠಾಂತರ ೫. ಅರ್ಥಾಂತರ ೬. ಅದೃಶ್ಯವೆಂಬ ಗುಣಗಳು ಎದ್ದು ತೋರುತ್ತವೆ.

೧. ಪ್ರಾಚೀನತೆ : ಮಾನವನು ಮಾತನ್ನು ಶೋಧಿಸಿದ ಕೆಲದಿನಗಳಲ್ಲಿಯೇ ಗಾದೆ ರೂಪಗೊಂಡಿರಲು ಸಾಧ್ಯವಿದೆಯೆನ್ನುವಷ್ಟು ಇದು ಪ್ರಾಚೀನವಾದುದು. ಕನ್ನಡದಲ್ಲಿ,

ಮುಱುಗುವ ಪಾಲ್ಗಳೆಯು ಪನಿಗಳಂ ಬೆರಸಿದವೊಲ್
ಪಡೆನೋಡಲ್ ಬಂದವಂ ಗುಡಿ ಪೊಱಿಸಿದರೆಂಬವೊಲಾಯ್ತು
ಪೆಣನಿಱಿದು ಪಗೆಗೊಂಡರೆಂಬ ನಾಣ್ನುಡಿಯಂತೆ

ಮೊದಲಾದ ಗಾದೆಗಳು ೯–೧೦ ನೆಯ ಶತಮಾನಗಳಷ್ಟು ಪ್ರಾಚೀನ. ಈ ಗಾದೆಯು ಪರಿಣಾಮ ಪ್ರಖರವೆಂದು ಜನತೆ ಯಾವಕಾಲಕ್ಕೂ ತಿಳಿದಿದ್ದರೆಂದು ತೋರುತ್ತದೆ "ನಾಣ್ನುಡಿಯ ಬೆಡಂಗೆ ಕನ್ನಡದ ಮಾತಿನೊಳ್" ಎಂದು ಮಾರ್ಗಕಾರ "ನಾಣ್ನುಡಿಗಳಂ ಛಂದಕ್ಕೆ ಬರ್ಪಂತೆ ಕಟ್ಟುವಬಲ್ಮೆ" ಎಂದು ಬೇರೊಬ್ಬ ಕವಿ ಹೇಳಿದ ಮಾತುಗಳಲ್ಲಿ ಆ ಅಭಿಪ್ರಾಯ ಧ್ವನಿಸುತ್ತದೆ.

೨. ನಿತ್ಯಸೃಷ್ಟಿ : ಸಮಕಾಲೀನ ಅನುಭವಗಳು ಗಟ್ಟಿಗೊಂಡು ಗಾದೆಗಳು ಕಾಲಕಾಲಕ್ಕೆ ಹುಟ್ಟಿಬರುವುದು ಸ್ವಾಭಾವಿಕ.

ಪಳ್ಳಿದೇವರ ತಲೆಹೊಡೆದು ಡಿಳ್ಳಿದೇವರು ಡೊಳ್ಳ ಬಳೆಸಿದ.
ಬುಕ್ಕರಾಯ ಮೆಚ್ಚಿ ಬೆಕ್ಕಿನಮರಿ ಕೊಟ್ಟ
ವಿಜಾಪುರದಲ್ಲಿ ಇಜಾರದವರು ಹಜಾರಮಂದಿ.
ಚಾರಣೇದ ಮಂಗ್ಯಾ ಬಾರಣೇದ ಬೆಣ್ಣಿ ತಿಂದಿತು.
ನವಾಜ ಮಾಡಾಕ ಹ್ವಾದರ ಮಸೀದಿ ಕೊಳ್ಳಿಗಿ ಬಿತ್ತು.

೩. ರೂಪಾಂತರ: ಕೆಲವು ಗಾದೆಗಳು ಅರ್ಥವನ್ನು ಹಾಗೆ ಇಟ್ಟುಕೊಂಡು ರೂಪಗಳನ್ನು ಬದಲಿಸಿಕೊಂಡಿವೆ.

೧ ಪಡೆನೋಡಲ್ ಬಂದವರಂ ಗುಡಿವೊಱಿಸಿದರೆಂಬವೊಲಾಯ್ತು.
ದಂಡ ನೋಡಲಾಕ ಬಂದರ ದಂಡಗಿ ಹೊರಸಿದರು.

೨ ಕಿರ್ಚೆರ್ದ ಬಳಿಕ ಅಚ್ಚಿಗದಿಂ ಬಾವಿದೋಡುವಂತಿರೆ.
ಗದ್ದಕ್ಕ ಬೆಂಕಿ ಹತ್ತಿದಾಗ ಬಾವಿ ತೋಡಿದರು.

೪. ಪಾಠಾಂತರ: ಎಷ್ಟೋ ಸಲ ಕೆಲವು ಗಾದೆಗಳಿಗೆ ಪಾಠಾಂತರಗಳು ಹುಟ್ಟಿವೆ. ಆದರೆ ಅರ್ಥ ಬದಲಾಗಿಲ್ಲ.

೧ ಹೊತ್ತಿಲ್ಲದ ಹೊತ್ತಿನಾಗ ಕತ್ತೆ ಮೈನರೆಯಿತು.
ಹೊತ್ತಿಲ್ಲದ ಹೊತ್ತಿನಾಗ ತೊತ್ತು ಮೈನರೆಯಿತು.

೨ ಕೊಡಲಿಯು ಕಾವು ಕುಲಕ್ಕೆ ಮೃತ್ಯು
ಕೊಡಲಿಯು ಕಾವು ಕುಲಕ್ಕೆ ಮೂಲ.
ಕೊಡಲಿಯ ಕಾವು ಕುಲಕ್ಕೆ ಸಾವು.

೫. ಅರ್ಥಾಂತರ: ಕೆಲವು ಗಾದೆಗಳಿಗೆ ಪಾಠಾಂತರ ತಲೆದೋರಿ ಅರ್ಥ-ವ್ಯತ್ಯಾಸ ಉಂಟಾಗಿದೆ.

೧. ನೆಗಡಿ ಜಡ್ಡ ಅಲ್ಲ, ಬುಗಡಿ ವಸ್ತು ಅಲ್ಲ.
ನೆಗಡಿಯಂಥ ಜಡ್ಡ ಇಲ್ಲ, ಬುಗುಡಿಯಂಥ ವಸ್ತು ಇಲ್ಲ.

೨. ಸೆಟ್ಟಿಯ ಸಹವಾಸ ಸೇರು, ಲಿಂಗದ ಅಡಿಸೇರು.
ಸೆಟ್ಟಿ ಸವ್ವಾಸೇರು, ಲಿಂಗ ಅಡಿಚ್ಛೇರು.

೩. ನೆಚ್ಚಿದ ಎಮ್ಮಿ ಕೋಣ ಇತ್ತು.
ನೆಚ್ಚಿದ ಎಮ್ಮಿ ಕೋಣ ಈಯಿತು.

೪. ಶಿವಪೂಜಾಗ ಕರಡಿಗಿ ಬಿಟ್ಟಂಗ.
ಶಿವಪೂಜಾಗ ಕರಡಿ ಬಿಟ್ಟಂಗ.

೬. ಅದೃಶ್ಯ: ಹೊಸಗಾದೆಗಳು ಹುಟ್ಟಿದಂತೆ ಸಮಾನವಾದ ಹಳೆಯ ಗಾದೆಗಳು ಅದೃಶ್ಯವಾಗುವದು ಸಹಜ. ಜೊತೆಗೆ ಅಲಕ್ಷ್ಯದಿಂದಾಗಿ ಎಷ್ಟೋ ಗಾದೆಗಳು ನಾಮಶೇಷವಾಗಿವೆ. ಪ್ರಾಚೀನ ಕೃತಿಗಳಲ್ಲಿಯ ಗಾದೆಗಳ ಅಭ್ಯಾಸದಿಂದ ಇದು ಸ್ಪಷ್ಟವಾಗುತ್ತದೆ.

ಗಾದೆಗಳಿಗೆ ವಸ್ತು, ಸಮಸ್ತ ಜೀವನಾನುಭವವಾದುದರಿಂದ ಲೋಕದ

ವಸ್ತುಗಳೆಲ್ಲ ಅದರ ಪರಿಕರಗಳಾಗುತ್ತವೆ. ಸಜೀವ ನಿರ್ಜೀವಗಳೆಲ್ಲವನ್ನು ಅದು ಬಳಸಿಕೊಳ್ಳುತ್ತದೆ.

ಗುಡ್ಡ ಸುತ್ತಿ ಮೈಲಾರಕ್ಕೆ ಹೋಗು (ಪ್ರದೇಶ)
ಕಡಕೋಳ ನಾಯಿ ಎಡತಾಕಿ ಸತ್ತಿತು (ಊರು)
ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ (ಪುರಾಣ)
ಶರಣರ ಗುಣ ಮರಣದಲ್ಲಿ ನೋಡು (ಅನುಭಾವಿ)
ಆನೆ ಹೋಗುವಾಗ ಶ್ವಾನ ಬೊಗಳಿತು. (ಪ್ರಾಣಿ)
ಕಾಗಿ ಕಾ ಎಂದರ ಲಾಳಿ ಎತ್ತ ಬೆದರಿತು (ಪಕ್ಷಿ)
ಹಾರುವನ ತೊತ್ತಾಗಬೇಡ, ಗಾಣಿಗನ ಎತ್ತಾಗಬೇಡ (ಜಾತಿ)
ಹತ್ತಿ ಹೊಲದಾಗ ಮುತ್ತಿನಗಿಡ ಇದ್ದರೂ ಕಿತ್ತಿ ಒಗೆ (ಒಕ್ಕಲತನ)
ಅಕ್ಕನ ಬಂಗಾರಾದರೂ ಅಕ್ಕಸಾಲೆ ಕದಿಯದೆ ಬಿಡ (ಕಸಬು)
ಅರಮನೆ ಮುನಿದರೆ ಇರಬಹುದು, ನೆರೆಮನೆ ಮುನಿದರೆ ಇರಬಾರದು(ಸಮಾಜ)
ಗಂಡಹೆಂಡಿರ ಜಗಳ ಉಂಡು ಮಲಗುವತನಕ (ದಾಂಪತ್ಯ)
ಅಡಿಕೆಗೆ ಹೋದ ಮಾನ ಆನೆಕೊಟ್ಟರೂ ಬಾರದು (ವಸ್ತು)
ಉಂಡು ಮಾವಿನ ಹಣ್ಣು ತಿನ್ನು, ಹಸಿದು ಹಲಸಿನ ಹಣ್ಣ ತಿನ್ನು (ಫಲ)
ಹಿತ್ತಲ ಗಿಡ ಮದ್ದಲ್ಲ (ವೃಕ್ಷ)
ಗುಳಕವ್ವ ದೇವರಲ್ಲ, ಉಡಕಿಯುವ ಗಂಡನಲ್ಲ (ದೇವರು)
ದಾಸರಾಟಲ್ಲ ದ್ವಾಸೆದೂಟಲ್ಲ (ಕಲೆ)

ಹೀಗೆ ಗಾದೆಗಳಿಗೆ ಸಾವಿರಸಾವಿರ ವಸ್ತುಗಳು ಬಳಕೆಗೊಂಡು, ಒಂದೊಂದು ತತ್ವವನ್ನು ಬಿತ್ತರಿಸುತ್ತವೆ.

ಗಾದೆ ಸಾಹಿತ್ಯಜಲದ ಆಣಿಕಲ್ಲು. ಬಳಸುವಷ್ಟರಲ್ಲಿ ಕರಗಿ ನಮ್ಮೆದೆಯನ್ನೂ ಕರಗಿಸುತ್ತದೆ. ಅನುಭವಗಳ ಘನೀಭೂತತನ, ಅನುಪ್ರಾಸ, ದೇಶೀಯ ಸೊಗಸುಗಳ ಮೂಲಕ ಅದು ಕೇಳುಗನನ್ನು ಪರವಶಗೊಳಿಸುತ್ತದೆ.

ಅಕ್ಕ ಸತ್ತರೆ **ಅ**ಮಾವಾಸ್ಯೆ ನಿಲ್ಲುವುದಿಲ್ಲ.
ಅಂಕೆಯಿಲ್ಲದ ಕಪಿ **ಲಂ**ಕೆ ಸುಟ್ಟಿತು.

ಎಂದು ವಡಿ ಪ್ರಾಸಯುಕ್ತವಾಗಿ,

ಕೊಡಲಿಯು **ಕಾವು** ಕುಲಕ್ಕೆ **ಸಾವು**.
ಬೆಕ್ಕಿಗೆ **ಆಟ** ಇಲಿಗೆ ಪ್ರಾಣ **ಸಂಕಟ**.

ಎಂದು ಅಂತ್ಯಪ್ರಾಸಯುಕ್ತವಾಗಿ,

ವಿಜಾಪೂರದೊಳಗ ಇಜಾರದವರು ಹಜಾರಮಂದಿ
ಬ್ರಾಹ್ಮಣ ಗಳಿಸಿದ್ದು ಪಿಂಡಕ್ಕ ಒಕ್ಕಲಿಗ ಗಳಿಸಿದ್ದು ದಂಡಕ್ಕ,
ಹೊಲೆಗಳಿಸಿದ್ದು ಹೆಂಡಕ್ಕ.

ಎಂದು ಎರಡೋ ಮೂರೋ ಅನುಪ್ರಾಸಗಳನ್ನು ಮೇಳವಿಸಿಕೊಂಡು ನಾದ ಮಾಧುರ್ಯವನ್ನುಂಟುಮಾಡುತ್ತದೆ; ಪರಿಣಾಮ ತೀವ್ರತೆಯನ್ನು ಹೆಚ್ಚಿಸುತ್ತದೆ.

ಕುಮುರೆಯ ಹಿಂದಿರಬೇಡ, ಅರಸನ ಮುಂದಿರಬೇಡ.
ಗಾಣಿಗನ ಎತ್ತಾಗಬೇಡ, ಹಾರುವನ ತೊತ್ತಾಗಬೇಡ.
ಕೋಡುಗನ ಬಿಟ್ಟುನೋಡು, ಜಾಡನ ಕಟ್ಟಿನೋಡು.

ಇಲ್ಲಿ ಮುಖ್ಯವಾದುವು ಉತ್ತರಾರ್ಧದ ಮಾತುಗಳು. ಇವು ಪೂರ್ವಾರ್ಧದ ಉಪಮೆಯಿಂದ ಸಮರ್ಥಿಸಲ್ಪಟ್ಟಿವೆ. ಹೀಗೆ ಸಮರ್ಥಿಸಿಕೊಳ್ಳುವಲ್ಲಿ ಉತ್ತ-ರಾರ್ಧಕ್ಕೆ ಪೂರ್ವಾರ್ಧ ಸಮತೂಕವಾಗಿ ಬಂದು, ಮನಸ್ಸಿಗೆ ಸಮಭಾವದ ನೆಮ್ಮದಿಯನ್ನುಂಟು ಮಾಡುತ್ತದೆ.

ಉಪಮೆ :

ಪಡೆನುಡಿ, ಗಾದೆಗಳಂತೆ ನಿತ್ಯ ಬಳಕೆಯಲ್ಲಿರುವ ಇನ್ನೊಂದು ಜಾನಪದ ಗದ್ಯರೂಪ ಉಪಮೆ. ಅಲಂಕಾರಲೋಕದ ಚಕ್ರವರ್ತಿನಿಯಾದ ಇದು ಮಾತಿಗೆ ಸ್ಪಷ್ಟತೆಯನ್ನೂ, ಅರ್ಥಸಾಕ್ಷಾತ್ಕಾರವನ್ನೂ "ಪಳಚ್ಚನೆ" ಕಾಣಿಸಿ ಕೊಡುತ್ತದೆ. ಹೀಗಾಗಿ ನೂರಾರು ಸಣ್ಣದೊಡ್ಡ ಉಪಮೆಗಳು ಮಾತು ಮಾತುಗಳಲ್ಲಿ ಒಟ್ಟೆ ನಿಂತಿವೆ. ಉದಾ: ಮುತ್ತಿನಂಥ ಜೋಳ, ಹವಳದಂಥ ಗೋದಿ, ಹುಲಿಯಂಥ ಹುಡುಗ, ಬಂಗಾರದಂಥ ಮನುಷ್ಯ ಇತ್ಯಾದಿ. ಇವಲ್ಲದೆ ಗಾದೆಗಳಂತೆ ಉಪಯೋಗಗೊಳ್ಳುತ್ತಿರುವ ಆದರೆ ಗಾದೆಗಳಲ್ಲದ ನೂರಾರು ಉಪಮಾರೂಪದ ವಾಕ್ಯಗಳು ಬಳಕೆಯಲ್ಲಿವೆ. ಉದಾ: ಹೊಲತಿಗಿ ಮುಲಿ ಬಂದ್ಹಂಗ (ದಿವಾಕ), ಹುಲ್ಲಾಗ ನಾಯಿ ಹೇಲ ತಿಂದ್ಹಂಗ (ಅವ್ಯವಸ್ಥೆ), ಮೂಗಿನ್ಯಾನ ಕೂದಲದ್ಹಂಗ (ನಿತ್ಯ ತೊಂದರೆ), ಹಾದರಗಿತ್ತಿ ತಲಿಬೋಳಿಸಿ-ದ್ಹಾಂಗ (ಅವಸರ ಕೆಲಸ), ನಿನ್ನ ಕಾಲಾಗ ಮುಳ್ಳನಟ್ಟರ ನನ್ನ ಕಣ್ಣಾಗ ನಟ್ಟಂಗ ಆಗತದ (ಸ್ನೇಹ)-ಇತ್ಯಾದಿ ಉಪಮೆಗಳು ಬಹು ಕಾಲದಿಂದಲೂ ಸಮಾಜದಲ್ಲಿ ಬಳಕೆಗೊಳ್ಳುತ್ತ ಬಂದಿವೆ. ಪ್ರಸಂಗೋಚಿತವಾಗಿ ತಟ್ಟನೇ ನಾಲಗೆ ಯಿಂದ ವ್ಯಕ್ತವಾಗುವ ಪೂರ್ವಸಿದ್ಧ ಮಾತುಗಳಿವು.

ಒಗಟು–ಒಡಪು–ಒಡಬು :

ಈ ಮೂರೂ ಪದಗಳನ್ನು ಈಗ ಕೈಗೆಬಂದಂತೆ ಬಳಸುವುದು ಸಾಮಾನ್ಯ ರೂಢಿ. ಇದಕ್ಕೆ ಕಾರಣ ಇವುಗಳ ಉಚ್ಚಾರ ಹೋಲಿಕೆ. ಹೀಗೆ ತೇಲುನೋಟಕ್ಕೆ

ಒಂದೇ ಪ್ರಕೃತಿಯಿಂದ ನಿಷ್ಪನ್ನಗೊಂಡಂತೆ ತೋರುತ್ತಿದ್ದರೂ ಈ ಮೂರೂ ಪದಗಳ ರೂಪಬೇರೆ ಬೇರೆಯಾಗಿವೆ.

ಒಗಟು :

ಇದರ ಮೂಲ ರೂಪ ಒಗಂಟು. ಇಂಗ್ಲೀಷಿನ Riddle, ಸಂಸ್ಕೃತದ ಪ್ರಹೇಲಿಕಾ ಇದರ ಪರ್ಯಾಯ ಪದಗಳು.

> ಕ್ರೀಡಾಗೋಷ್ಠಿ ವಿನೋದೇಷು ತಜ್ಜ್ಞೈರಾಕೀರ್ಣ ಮಂತ್ರಣೇ
> ಪರವ್ಯಾಮೋಹನೇ ಚಾಪಿ ಸೋಪಯೋಗಾಃ ಪ್ರಹೇಲಿಕಾಃ ।
> ಸುಕವಿಪ್ರಕರಕ್ಕೆ ವಿನೋದ ಕೇಳಿಗುಪಯೋಗ ಹೇತುಗಳ್ ಪ್ರಚ್ಛನ್ನ
> ಪ್ರಕಟಾರ್ಥಂಗಳನೇಕ । ಪ್ರಕಾರದಿಂದೊಂದಿ ವರ್ತಿಕುಂ
> ಪೇಳಿಕೆಗಳ್ ॥

ಎಂಬ ದಂಡಿ, ನಾಗವರ್ಮರ ಪ್ರಕಾರ ವಿದ್ವಾಂಸರಿಂದ ಕೂಡಿದ ವಿನೋದ ಗೋಷ್ಠಿಯಲ್ಲಿ ಎಡೆಪಡೆವ ಸಾಹಿತ್ಯ ಜಾತಿಯಿದು. ವಿನೋದಕ್ಕೆಂದು ಸಮಸ್ಯೆ ಒಡ್ಡುವುದು, ಒಡ್ಡಿದ ಸಮಸ್ಯೆಗಳನ್ನು ಬಿಡಿಸುವುದು– ಇಂಥ ವಾಕ್ ಚಾತುರ್ಯಗಳು ಪ್ರಹೇಳಿಕೆಯೆನಿಸುತ್ತವೆ.

"ಆಪ್ಟೆಯವರ ನಿಘಂಟುವಿನಲ್ಲಿ "ಹೇಲಾ" ಎನ್ನುವುದಕ್ಕೆ "Amorous sport or dalliance" (ಬೇಟದ ಆಟ, ಪ್ರಣಯ ವಿಲಾಸ, ಪ್ರೇಮಲೀಲೆ), Wanton Sport (ಕುಚೇಷ್ಟೆಯ ವಿನೋದ, ಚಲ್ಲಾಟ) ಎಂದೂ, "ಪ್ರಹೇಳಾ" ಎನ್ನುವುದಕ್ಕೆ Free or unrestrained behaviour, loose conduct, playful dalliance (ಸ್ವಚ್ಛಂದ ವರ್ತನೆ, ಸ್ವೈರವರ್ತನೆ, ಅಂಕೆಯಿಲ್ಲದ ನಡತೆ), "ಪ್ರಹೇಲಿಕಾ" ಎನ್ನುವುದಕ್ಕೆ "A riddle, an enigma, a conundrum" (ಒಗಟು, ಒಡಪು, ಸಮಸ್ಯೆ, ಗೂಢಪ್ರಶ್ನೆ) ಎಂದೂ ಅರ್ಥಕೊಟ್ಟಿದೆ. ಪ್ರಹೇಲಿಕೆಯಲ್ಲಿ "ಆರ್ಥಿ" ಮತ್ತು "ಶಾಬ್ದೀ" ಎಂದು ಎರಡು ವಿಧವೆಂದೂ ಹೇಳಿದೆ. ದಂಡಿಯಾದರೋ ೧೬ ಪ್ರಹೇಲಿಕಾ ಪ್ರಕಾರ ಹೇಳಿದ್ದಾನೆ.... ಅವು ಯಾವವು ಎಂದರೆ: ಸಮಾಗತಾ, ವಂಚಿತಾ, ವ್ಯುತ್ಕ್ರಾಂತಾ, ಪ್ರಮುಷಿತಾ, ಸಮಾನ ರೂಪಾ, ಪರುಷಾ, ಸಂಖ್ಯಾತಾ, ಪ್ರಕಲ್ಪಿತಾ, ನಾಮಾಂತರಿತಾ, ನಿಭೃತಾ, ಪರ್ಯಾಯಸಾಧಿತಾ, ಸಂಮೂಢಾ, ಯೋಗಮಾಲಾತ್ಮಿಕಾ (ಪರಿಹಾರಿಕಾ), ಏಕಚ್ಛನ್ನಾ, ಉಭಯಚ್ಛನ್ನಾ, ಸಂಕೀರ್ಣ"[೧] ಕನ್ನಡದಲ್ಲಿ ಮಾರ್ಗಕಾರ ಮತ್ತು ನಾಗವರ್ಮಾದಿಗಳು ಹೇಳಿದುದು ೬ ಪ್ರಕಾರಗಳನ್ನು. ವಿನೋದಕ್ಕಾಗಿ ಹುಟ್ಟಿದ ಈ ಪ್ರಹೇಳಿಕೆ ಇಲ್ಲವೆ ಒಗಟು, ಹಲವು ಶಾಖೆ ಪ್ರತಿಶಾಖೆಗಳನ್ನು

---

೧. ಕವಿರಾಜಮಾರ್ಗ (ಟಿಪ್ಪಣಿಗಳು ಪು. ೨೫೦) –ಎಂ. ವಿ. ಸೀತಾರಾಮಯ್ಯ

ಮೂಡಿಸಿಕೊಂಡು ಅನೇಕ ಅರ್ಥಛಾಯೆಗಳನ್ನು ಪಡೆದಿದೆ.

ಪ್ರಾಚೀನ ಕಾಲದಲ್ಲಿ 'ಪ್ರಹೇಳಿಕೆ' ಎಂಬ ಹೆಸರಿನಿಂದ ವಿದ್ವಾಂಸರ ಮಂಡಲಿಯಲ್ಲಿ ವ್ಯವಹರಿಸುವ ಈ ಪ್ರಕಾರ, ಸಾಮಾನ್ಯರ ಮಟ್ಟದಲ್ಲಿ 'ಒಗಟು' ಹೆಸರಿನಿಂದ ವ್ಯವಹರಿಸಿದೆ. ವಿದ್ವತ್‌ಮಂಡಲಿಯ ಪ್ರಹೇಳಿಕೆಗಳಿಗೆ "ಕಂತಿ ಹಂಪನ ಸಮಸ್ಯೆಗಳು", ಸರ್ವಜ್ಞನ ವಚನೋಕ್ತ ಒಗಟುಗಳು ಉದಾಹರಣೆಎನಿಸಿವೆ. ಸಾಮಾನ್ಯರಲ್ಲಿ ಒಗಟು ಹಾಕುವದು, ಬಿಡಿಸುವದು ಇನ್ನೂ ರೂಢಿಯಲ್ಲಿದೆ. ಇದಕ್ಕೆ ಒಡಗತೆ, ಒಡಸಾಕತೆ ಒಡಚುವಕಥೆ ಎಂದೂ ಕರೆಯುವದುಂಟು. ಕೆಲವೊಮ್ಮೆ ಒಡಪು ಎಂದೂ ಕರೆಯುತ್ತಾರೆ.

ಬೇಸರ ಪರಿಹಾರ ಇಲ್ಲವೆ ಬೆಳದಿಂಗಳ ಸುಖಾನುಭವ ಪ್ರಸಂಗಗಳಲ್ಲಿ ಇಂಥ ಒಗಟುಗಳನ್ನು ಹೇಳುವ, ಬಿಡಿಸುವ ಮೋಜು ನಡೆಯುತ್ತದೆ ಮಕ್ಕಳಿಗಂತೂ ಈ ಒಗಟು ಪಂಚಪ್ರಾಣ. ಇದರ ಸೂತ್ರಧಾರಳು ಅಜ್ಜಿ. ಮಕ್ಕಳ ಕುತೂಹಲವನ್ನು ಕೆರಳಿಸುವ, ಬುದ್ಧಿಶಕ್ತಿಯನ್ನು ಅರಳಿಸುವ ಇವು ಅವರ ವ್ಯಕ್ತಿತ್ವವನ್ನು ಹರಿತಗೊಳಿಸುತ್ತವೆ. ಕೆಲವು ಸಲ ಒಂದು ಪಂಗಡದವರು ಹಾಕಿದ ಒಗಟನ್ನು ಇನ್ನೊಂದು ಪಂಗಡದವರು ಬಿಡಿಸುವದು, ಇನ್ನೊಂದು ಪಂಗಡದವರು ಹಾಕಿದ ಒಗಟನ್ನು ಒಂದು ಪಂಗಡದವರು ಬಿಡಿಸುವದು–ಹೀಗೆ ಎರಡೂ ಪಂಗಡಗಳಲ್ಲಿ ಸ್ಪರ್ಧೆಯು ಹೆಜ್ಜೆ ಹಾಕುತ್ತ ಮುಂದುವರಿಯುತ್ತದೆ.

ಉದಾಹರಣೆಗೆ ಕೆಲವು ಒಗಟುಗಳನ್ನು ನೋಡಬಹುದು.

ಗುಡಿಯ ಹಿಂದ ಗುಂಡಗಲ್ಲ ಬಿದ್ದಾದ (ತುರುಬ)
ಕೆಂಪ ಕುದರಿ. ಕರಿ ಥಡಿ, ಒಬ್ಬ ಏರತಾನ, ಒಬ್ಬ ಇಳಿತಾನ
(ರೊಟ್ಟಿ ಮಾಡುವುದು)
ನೆತ್ಯಾಗ ಹಾಕಿದ್ರ ಸುತ್ತ ಸುರಿತಾದ (ಬೀಸುಕಲ್ಲು)
ಹಿಡಿದರ ಹಿಡಿತುಂಬ ಬಿಟ್ಟರ ಮನಿತುಂಬ (ದೀಪ)
ಇಟ್ಟರ ಒಂದು ಹೋಳ, ಎತ್ತಿದರ ಎರಡು ಹೋಳ (ಬೀಸುಕಲ್ಲು)
ಕರಿಸೀರಿ ಉಟ್ಟಾಳ, ಕಾಲುಂಗುರ ತೊಟ್ಟಾಳ, ಮ್ಯಾಗ ಹೋಗಿ
ಕೆಳಗೆ ಬರತಾಳ (ಒನಕೆ)
ಬರಬರ ಬಂದ, ಅಂಗಿ ಕಳದ, ಬಾಯ್ಯಾಗ ಇಳದ (ಬಾಳೆಯ ಹಣ್ಣು)
ಗಿಡ್ಡ ಗಿಡಕ ಗಿಣಿ ಮುಕರ್‍ಯಾವ (ಮೆಣಸಿನಕಾಯಿ)
ಅವ್ವ ಅಂದರ ತೆರಿತಾದ, ಅಪ್ಪ ಅಂದರ ಮುಚ್ಚತಾದ (ಬಾಯಿ)

ಈ ಒಂದೊಂದು ಒಗಟುಗಳಲ್ಲಿರುವ ಕಲಾಮಯತೆ, ನಿಗೂಢತೆಗಳನ್ನು ಅನು

ಭವಿಸಬೇಕು. ಇವು ಕೇವಲ ರಹಸ್ಯಪೂರ್ಣ ವಾಕ್ಯಗಳಾಗಿರದೆ ರಸಪೂರ್ಣ ವಾಕ್ಯಗಳೂ ಆಗಿವೆ. ಒಂದು ಉತ್ತರದ ಒಗಟುಗಳಲ್ಲದೆ ಎರಡು ಅಥವಾ ಹೆಚ್ಚು ಉತ್ತರದ ಒಗಟುಗಳೂ ಕೆಲವು ಇವೆ 'ಅವ್ವನ ಸೀರಿ ಆಳೆಯಲಾರೆ, ಅಪ್ಪನ ರೊಕ್ಕ ಎಣಸಲಾರೆ' (ಮುಗಿಲು, ಚಿಕ್ಕೆ); 'ಮನೆಯಲ್ಲಿದ್ದರೆ ಲಿಂಗಾಕಾರ, ದಾರಿ ಹಿಡಿದರೆ ಚಕ್ರಾಕಾರ, ಇಲ್ಲಿಯೂ ಬಂದೆಯಾ ಜಡೆಯ ಶಂಕರಾ' (ಮುದ್ದಿ, ರೊಟ್ಟಿ, ಸೇವಗೆ)

ಇಂಥವುಗಳನ್ನು 'ಒಗಟು'ಗಳೆಂದರೆ ಕಥೆಯ ರೂಪದಲ್ಲಿ ಬೆಳೆವ ಒಗಟುಗಳನ್ನು 'ಒಡಗತೆ'ಗಳೆನ್ನಬಹುದು. ಕಥೆಯ ಮೂಲಕ ರಹಸ್ಯವನ್ನು ಹೆಣೆದು ಕೇಳುಗನನ್ನು ಆಳಚಿಂತನೆಯಲ್ಲಿ ಮುಳುಗಿಸುವ ಈ ಒಡಗತೆಗೆ ಒಂದು ಉದಾಹರಣೆ— "ಒಂದು ಹುಲ್ಲು ಹೊರೆ, ಒಂದು ಆಕಳು, ಒಂದು ಹುಲಿ ಈ ಮೂರನ್ನೂ ಹೊಳೆಯ ಈ ದಂಡೆಯಿಂದ ಆ ದಂಡೆಗೆ ಒಯ್ಯಬೇಕು. ಆದರೆ ಹುಲ್ಲನ್ನು ಆಕಳಾಗಲೀ ಆಕಳನ್ನು ಹುಲಿಯಾಗಲೀ ಈ ದಂಡೆಯಲ್ಲಿ ಇಲ್ಲವೆ ಆ ದಂಡೆಯಲ್ಲಿ ತಿನ್ನಕೂಡದು."

ಉತ್ತರ: ಮೊದಲು ಆಕಳನ್ನು ಒಯ್ದು ಬಿಡಬೇಕು. ತರುವಾಯ ಹುಲ್ಲನ್ನು ಒಯ್ದು ಇಟ್ಟು ಆಕಳನ್ನು ತಿರುಗಿ ತರಬೇಕು. ಆ ಮೇಲೆ ಹುಲಿಯನ್ನು ಒಯ್ದು ಬಿಡಬೇಕು. ಕೊನೆಗೆ ಆಕಳನ್ನು ಒಯ್ಯಬೇಕು.

ಇಂತಹ ಇನ್ನೊಂದು ಉದಾಹರಣೆ:

ಇಬ್ಬರು ಸ್ವಾಮಿಗಳಿದ್ದರು. ಒಬ್ಬನಲ್ಲಿ ೩ ಸೇರು, ಇನ್ನೊಬ್ಬನಲ್ಲಿ ೫ ಸೇರು ಹಿಟ್ಟುಹಿಡಿಯುವ ಜೋಳಿಗೆಗಳು ಇದ್ದವು. ಪರವೂರಿಗೆ ಹಿಟ್ಟಿನ ಭಿಕ್ಷೆಗೆ ಹೊರಟ ಅವರು ಭಿಕ್ಷೆಯಾಗಿ ಪಡೆದ ಈ ಒಟ್ಟು ೮ ಸೇರು ಹಿಟ್ಟನ್ನು ಸಮನಾಗಿ ಹಂಚಿಕೊಳ್ಳೋಣವೆಂದು ಮಾತನಾಡಿಕೊಂಡರು. ಅದರಂತೆ ಭಿಕ್ಷೆಬೇಡಿ ಜೋಳಿಗೆ ತುಂಬ ಹಿಟ್ಟುತಂದರು. ಅದನ್ನು ಪಾಲು ಮಾಡಿಕೊಳ್ಳುವ ಉಪಾಯ ಯಾವುದು?

ಉತ್ತರ: ಇಬ್ಬರ ಹತ್ತಿರ ಇದ್ದ ಒಟ್ಟು ೮ ಸೇರು ಹಿಟ್ಟನ್ನು ಒಂದು ಬಂಡೆಗಲ್ಲಿನ ಮೇಲೆ ಸುರುವಿದರು. ಆ ಮೇಲೆ ಮೂರು ಸೇರಿನ ಜೋಳಿಗೆಯಿಂದ ೨ ಸಲ ತೆಗೆದುಕೊಂಡು ಅಂದರೆ ೬ ಸೇರು ಹಿಟ್ಟನ್ನು ಒಂದೆಡೆ ಹಾಕಿದರು. ಈಗ ೬ ಸೇರು ೨ ಸೇರು ಬೇರೆ ಬೇರೆಯಾಯಿತು. ತರುವಾಯ ೬ ಸೇರಿನ ಗುಂಪಿನಿಂದ ೫ ಸೇರಿನ ಜೋಳಿಗೆಯ ಮೂಲಕ ಹಿಟ್ಟು ತೆಗೆದು ಇನ್ನೊಂದು ಗುಂಪಿಗೆ ಹಾಕಿದರು. ಈಗ ೧ ಸೇರು ೭ ಸೇರು ಹೀಗೆ ಎರಡು ಗುಂಪುಗಳಾದವು. ಕೊನೆಗೆ ೭ ಸೇರು ಗುಂಪಿನಿಂದ ೩ ಸೇರಿನ ಜೋಳಿಗೆಯ ಮೂಲಕ ಹಿಟ್ಟು ತೆಗೆದು ಇನ್ನೊಂದಕ್ಕೆ ಹಾಕಿದರು. ಈಗ ಎರಡೂ ಗುಂಪುಗಳಲ್ಲಿ ೪ ಸೇರು ೪ ಸೇರು ಸಮಭಾಗವಾಯಿತು. ಹೀಗೆ ಹಿಟ್ಟು ಹಂಚಿಕೊಂಡರು.

ಈ ರೀತಿ ಕಥೆಯಲ್ಲಿ ಮುಂದುವರಿಯುವ ಒಗಟುಗಳನ್ನು ಮಾತ್ರ ಇನ್ನು ಮೇಲೆ 'ಒಡಗತೆ'ಗಳೆಂದು ಕರೆಯುವುದು ಸೂಕ್ತವೆನಿಸುತ್ತದೆ. ಇವು ಭಾಗ ವಹಿಸುವವರ ಬುದ್ಧಿಶಕ್ತಿಯನ್ನು ಹರಿತಗೊಳಿಸುತ್ತವೆ. ತರ್ಕವನ್ನು ತೀಕ್ಷ್ಣ ಗೊಳಿಸುತ್ತವೆ. ಮೇಲೆ ಹೇಳಿದ ಹಿಟ್ಟು ಹಂಚಿಕೊಂಡ ಗಣಿತರೂಪದ ಒಡಗತೆಗಳಂತೂ ಗಣಿತಜ್ಞಾನವನ್ನು ನಿಖರಗೊಳಿಸುತ್ತವೆ.

ಒಡಪು: 'ಒಗಟು' ವಿನೋದಪ್ರಸಂಗ,ಶ್ರಮಪರಿಹಾರ ಪ್ರಸಂಗದಲ್ಲಿ ಬಳಕೆ ಯಾದರೆ 'ಒಡಪು' ಮಂಗಲಪ್ರಸಂಗದಲ್ಲಿ ಬಳಕೆಯಾಗುತ್ತದೆ. ಹೆಂಡತಿ ಗಂಡನ ಹೆಸರನ್ನು, ಗಂಡ ಹೆಂಡತಿಯ ಹೆಸರನ್ನು ಹೇಳುವ ಸಂದರ್ಭಗಳಲ್ಲಿ ಹೆಸರಿನ ಹಿಂದೆ ಜೋಡಿಸುವ ಮಾತಿನಮಾಲೆ ಒಡಪು. ಪ್ರಾಚೀನ ಕಾವ್ಯಗಳಲ್ಲಿ ಮದುವೆ ಸೀಮಂತಕಾರ್ಯದ ಹಲವು ಪ್ರಸಂಗಗಳ ವರ್ಣನೆಗಳು ಬಂದರೂ ಅಲ್ಲಿ ಇವು ಗಳ ಪ್ರಸ್ತಾಪವಿಲ್ಲ. "ಮದುವೆಯ ಗಂಡು ಹೆಣ್ಣುಗಳು ಪರಸ್ಪರ ಹೆಸರನ್ನು ಹೇಳುವಾಗ ಈ ಒಗಟಿನ ಧಾಟಿಯನ್ನು ಅನುಸರಿಸುತ್ತಾರೆಂದೂ ಈಗಲೂ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದೆಯೆಂದೂ ಕೇಳಿದ್ದೇನೆ" ಎಂಬ ಮೈಸೂರ ಮಿತ್ರರೊಬ್ಬರ ಮಾತನ್ನು ಗಮನಿಸಿದಾಗ ಈ ಜಾತಿ ಆ ಕಡೆ ಪ್ರಚಾರದಲ್ಲಿಲ್ಲ ವೆಂದೂ ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವೆಂದೂ ಹೇಳಬೇಕಾಗುತ್ತದೆ.

"ಒಡಪು" ಪದವನ್ನು ಸಾಮಾನ್ಯರು, "ಒಗಟು" ಪದವನ್ನು ಸುಶಿಕ್ಷಿತರು ಪ್ರಯೋಗಿಸುತ್ತಾರೆ. "ಒಗಟಿನ ಮಾಲೆ" ಎಂಬ ಪುಸ್ತಕ ಪ್ರಕಾಶಗೊಂಡಿದೆ. ಆದರೆ ಇದರ ನಿಜ ಹೆಸರು ಒಡಪು. ಬಹುಶಃ ಇದರ ನಿಷ್ಪತ್ತಿಯನ್ನು ಒಡ= ಒಡೆ= union, being together, together with- ಎಂಬುದಕ್ಕೆ 'ಪು' ಪ್ರತ್ಯಯಹತ್ತಿ ಸಿದ್ಧವಾದನಾಮಪದ" ಎಂದು ವ್ಯಾಖ್ಯಾನಿಸಬಹುದು. ಹೆಸರಿನ ಜೊತೆ (ಒಡನೆ) ಇರುವದರಿಂದ "ಒಡಪು" ರೂಪ ಸಿದ್ಧವಾಗಿರಬೇಕು.[೧]

ಬಾಳಿನಲ್ಲಿ ಒಡಪು ಪ್ರಥಮಸಲ ಪ್ರಯೋಗವಾಗುವುದು ಮದುವೆಯ ನಿಶ್ಚಯ ಪ್ರಸಂಗದಲ್ಲಿ. ಆಮೇಲೆ ಮೈನೆರೆದ ಸಂದರ್ಭ, ವಿವಾಹ ಸಮಾರಂಭ, ಕುಪ್ಪಸಮಾಡುವ ಕಾರ್ಯ ಇತ್ಯಾದಿಗಳಲ್ಲಿ. ಕೆಲವೊಮ್ಮೆ ಗುಳ್ಳವ್ವನಹಬ್ಬ, ಪಂಚಮಿಹಬ್ಬಗಳಲ್ಲಿಯೂ ಇದು ಬಳಕೆಯಾಗುತ್ತದೆ.

ಮದುವೆ ಸ್ತ್ರೀ–ಪುರುಷರ ದಾಂಪತ್ಯದ ಪವಿತ್ರ ಪ್ರಸಂಗ. ಈ ಸಮಯದಲ್ಲಿ ಗಂಡನು ಹೆಂಡತಿಯ, ಹೆಂಡತಿಯು ಗಂಡನ ಹೆಸರು ಹೇಳುವ ಅವಕಾಶಗಳು ಅನೇಕ. ಅರಿಷಿಣ ಹಚ್ಚುವುದು, ಸುರಗಿ ಸುತ್ತುವುದು, ಅಕ್ಷತಾರೋಪಣ ಈ ಮೂರು ಪ್ರಸಂಗಗಳಲ್ಲಿ ಸತಿ ಪತಿಯ, ಪತಿ ಸತಿಯ ಹೆಸರು ಹೇಳಬೇಕು. ಆಗ ಆರತಿ ಬೆಳಗುವವರೂ ತಮ್ಮ ಪುರುಷರ ಹೆಸರು ಹೇಳಬೇಕು. ಇದಲ್ಲದೆ ಅಕ್ಕ ಸಾಲಿಗರ ಮನೆಯಿಂದ ಮಂಗಳಸೂತ್ರ, ಕುಂಬಾರಮನೆಯಿಂದ ಐರಾಣಿ, ಹೂಗಾರ ಮನೆಯಿಂದ ದಂಡೆ–ಬಾಸಿಂಗ ತರಲುಹೋದ ಸಮಯದಲ್ಲಿ, ಹೆಣ್ಣಿನವರು ಭೂಮ ನೀಡುವ ಪ್ರಸಂಗದಲ್ಲಿ ಉಭಯಪಂಗಡದವರು ಒಡಪನ್ನು ಬಳಸುತ್ತಾರೆ.

೧. ಹೆಸರ ಹೇಳ್ತೀನಿ ಒಡಪಕಟ್ಟಿ (ಜ್ಯೋತಿ ಹೊಸೂರ): ಪ್ರಸ್ತಾವನೆ ನೋಡಿರಿ.

ಋತುಮತಿ (ಮೈನೆರೆತ) ಸ್ತ್ರೀಯನ್ನು ಸಿಂಗರಿಸಿ ೫, ೭, ೧೧ ಇಲ್ಲವೆ ೨೧ ದಿನ ಮಂಟಪದಲ್ಲಿ ಕುಳ್ಳಿರಿಸಿ ಶೋಭನ ಹೇಳುವರು. ಪ್ರತಿದಿನ ಪ್ರತಿಯೊಬ್ಬರೂ ಆವಳಿಂದ ಹೆಸರು ಕೇಳುವವರೇ. ಕೊನೆಯದಿನ ಅಳಿಯನನ್ನು ಬರಮಾಡಿ-ಕೊಂಡು ಮಂಟಪದಲ್ಲಿ ಜೊತೆ ಕುಳ್ಳಿರಿಸಿ ಶೋಭನ ಹೇಳಿ ಇಬ್ಬರಿಂದಲೂ ಹೆಸರು ಕೇಳಿ ನಲಿಯುತ್ತಾರೆ.

ಸ್ತ್ರೀ ಗರ್ಭಿಣಿಯಾದ ೭ ನೆಯ ತಿಂಗಳು ಸೀಮಂತಕಾರ್ಯ (ಕುಪ್ಪಸ ಮಾಡುವದು). ಆಗಲೂ ಅಳಿಯನನ್ನು ಆಹ್ವಾನಿಸಿ ಜೊತೆಗೆ ಕುಳ್ಳಿರಿಸಿ ಕಾಣಿಕೆ ಸಲ್ಲಿಸುವುದರ ಜೊತೆಗೆ ಪರಸ್ಪರ ಹೆಸರು ಕೇಳುವರು. ಆಮೇಲೆ ಬಳಗದವರು ಪ್ರತಿದಿನ ಸೀಮಂತಕಾರ್ಯ ಮಾಡುವಾಗಲೆಲ್ಲ ಆಕೆಯಿಂದ ಗಂಡನ ಹೆಸರು ಕೇಳಿ ತೃಪ್ತಿಹೊಂದುತ್ತಾರೆ. ಸಾಮಾನ್ಯವಾಗಿ ಇಲ್ಲಿಗೆ ಲಜ್ಜೆಯು ತೆರೆಸರಿದು ಹೆಸರು ಹೇಳುವ ಕೇಳುವ ಪ್ರಸಂಗದ ಸ್ವಾರಸ್ಯ ಮುಗಿದಂತೆ. ಆಮೇಲೆ ಅನ್ಯರ ಇಂಥ ಪ್ರಸಂಗಗಳಲ್ಲಿ ಹೇಳುವ ಆವಶ್ಯಕತೆ ಒದಗುತ್ತದೆ.

ಈ ಎಲ್ಲ ಸಂದರ್ಭಗಳಲ್ಲಿ "ಒಡಪು" ಎಡೆ ಪಡೆಯುತ್ತದೆ. "ಎಳ್ಳ ಹೂವ್ವಿನ ಸೀರಿ, ಬೆಳ್ಳಿಕಾಲುಂಗುರ, ಒಳ್ಳ್ಯಾವರ ಮಗಳಂತ, ಹೊಳ್ಳೊಳ್ಳಿ ನೋಡತಾನ..." ಇತ್ಯಾದಿ ಒಡಪುಗಳನ್ನು ಹೆಣ್ಣುಮಕ್ಕಳೂ, "ಕಂಚಿನ ಕಣಕಲ, ಮುತ್ತಿನ ಅಡಕಲ, ಅತ್ತಿ ಹೊಟ್ಟಿಲೆ ಮುತ್ತೋದಿ ಹುಟ್ಯಾಳ.." ಇತ್ಯಾದಿ ಒಡಪುಗಳನ್ನು ಗಂಡುಮಕ್ಕಳೂ ಹೇಳುವಾಗ, ತೆರವಿದ್ದ ಭಾಗದಲ್ಲಿ ತಮ್ಮ ಸತಿಪತಿಯರ ಹೆಸರು ಸೇರಿಸುತ್ತಾರೆ. ಇಲ್ಲಿ ಹೆಸರಿನ ಹಿಂದೆ ಪೀಠಿಕೆಯಂತೆ ಒಡಪು ವಿರಾಜಿಸುತ್ತದೆ.

ನೇರವಾಗಿ ಹೇಳದೆ ಈ ಒಡಪು ಹಾಕಿ ಹೆಸರು ಹೇಳುತ್ತಾರಷ್ಟೇ. ಇದು ಹೆಸರು ಕೇಳಲು ಪೀಡಿಸುವವರ ಲಕ್ಷ್ಯವನ್ನು ಒಡಪಿನತ್ತ ಸೆಳೆದ ಭರದಲ್ಲಿಯೇ ಹೆಸರನ್ನು ದಾಟಿಸಿಬಿಡುವ ಒಂದು ಗತ್ತು ಇರಬಹುದು ಇಲ್ಲವೆ ಹೆಸರಿಗೆ ಬಿರುದು ರೂಪದ ಅಲಂಕಾರವಿರಲಿ ಎಂಬ ಮೋಹವಿರಬಹುದು, ಸಾಮಾನ್ಯವಾಗಿ ಒಡಪಿನೊಂದಿಗೆ ಹೆಸರು ಹೇಳಬೇಕೆಂದು ಎಲ್ಲರೂ ಒತ್ತಾಯಿಸುತ್ತಾರೆ. ಹೇಳುವ ಮನಸ್ಸಿದ್ದರೂ ಸ್ತ್ರೀಸಹಜ ಲಜ್ಜೆಯಿಂದಾಗಿ ಅವಳು ತಡೆದೂ ತಡೆದೂ ಒಡಪಿನೊಂದಿಗೆ ತಟ್ಟನೆ ಹೇಳಿ ಮುಗಿಸುತ್ತಾಳೆ. ಇದು ಅವಳಿಗೆ ಮೂಕ ಆನಂದ, ಕೇಳುವವರಿಗೆ ಸಂತೋಷದ ಮಹಾಪೂರ.

ಸಾಮಾನ್ಯವಾಗಿ ಗಂಡಸರು ಹೆಂಡತಿಯ ಹೆಸರನ್ನು ವಿರೂಪಗೊಳಿಸಿ ಹೇಳುವುದುಂಟು. ನೆರೆದವರೆಲ್ಲ ಇವರಿಂದಲೂ ಒಡಪು ಬಯಸುತ್ತಾರೆ. ಆದರೆ ಪುರುಷರು ಒಡಪಿಟ್ಟು ಹೇಳುವದು ತೀರಕ್ವಚಿತ. ಹೇಳಿದರೂ ಅವುಗಳ ಸೊಗಸು ಕಡಿಮೆ. ಇವು ಸ್ತ್ರೀಯರಂತೆ ತಾವೂ ಹೇಳಬೇಕೆಂದು ಉದ್ದೇಶಪೂರ್ವಕ ರಚಿಸಿದುವು ಎನಿಸುತ್ತದೆ. ಆದಕ್ಕಾಗಿ ಮೂಲತಃ ಒಡಪು ಸ್ತ್ರೀಯರಿಗೆ

ಮಾತ್ರ ಮೀಸಲಾಗಿರಬಹುದು.

ಜಾನಪದ ಗದ್ಯಸಾಹಿತ್ಯದ ಒಂದು ಪ್ರಕಾರವಾಗಿ ಬೆಳೆದು ಬಂದ ಈ ಜಾತಿ ಕಾಲಕಾಲಕ್ಕೆ ಹುಟ್ಟುತ್ತ ಬಂದುದೂ ಉಂಟು.

"ಕಾಲಾಗ ಬೂಟ, ಕೈಯ್ಯಾಗ ಶಂಬರ ನೋಟ
ಮೋಟರದಾಗ ಕುತ್ತು, ನಾಟಕಕ ಹೋಗತಾನ.........."

"ಕಾಜಿನಕಪ್ಪ, ಮೋಜಿನ ಬಸಿ
ಮೇಜಿನವ್ಯಾಲ ಕುತ್ತು ಚಾ ಕುಡಿತಾನ........."

ಮೊದಲಾದವು ನೂರು ವರ್ಷದ ಈಚಿನ ಒಡಪುಗಳು. ಜಾನಪದ ಸಾಹಿತ್ಯವನ್ನು ಆಧುನಿಕಗೊಳಿಸುವದು ಲೇಸು, ಆದರೆ ಇಂಥಲ್ಲಿ ಅದರ ಅರ್ಕ ಆರಿಹೋಗುತ್ತದೆ. ಇದಲ್ಲದೆ—

"ಹರಕ ಧೋತರ, ಹೊಲಸ ಅಂಗಿ
ಹರದಾರಿಗೊಂದ ಕಾಲಿಟಗೋತ
ಹರಗಾಕ ಹೋಕ್ಕಾನ.........."

ಇತ್ಯಾದಿ ಗರತಿಗೆ ಭೂಷಣವಲ್ಲದ ಒಡಪುಗಳು ಕೃತಕಗಳೆಂದೂ, ಚೇಷ್ಟೆಗಾಗಿ ಕಟ್ಟಿದುವೆಂದೂ ಭಾವಿಸಿ ಇವುಗಳನ್ನು ಕೈಬಿಡಬೇಕು. ಇಂಥ ಅಗೌರವಯುತ ಸ್ತ್ರೀಒಡಪುಗಳು ಕೆಲವೇ ಇದ್ದರೆ ಪುರುಷರಲ್ಲಿ ಅಂತಹವು ಹೆಚ್ಚು.

"ಒಂಟಿ ಎಲಪ, ಗಂಟಮೂಗ
ಪಂಟ ಬಡಕೋತ, ಎಂಟಮನಿ ತಿರಗತಾಳ........."

ಹರಕ ತೆಪಿ, ಮುರಕ ಕೊಣಮಗಿ
ರೊಟ್ಟಿ ಬರದಲ್ಲವಂತ ಹೊಟ್ಟಿಹೊಟ್ಟಿ ಬಡಕೋತಾಳ........."

ಇಂಥ ಕುಚೇಷ್ಟೆ ಮತ್ತು ಅಗೌರವಯುಕ್ತ ಒಡಪುಗಳನ್ನು ಬಿಟ್ಟರೆ ಬಹಳಷ್ಟು ಸ್ತ್ರೀ-ಪುರುಷರ ಮನಸ್ಸಿನ ಒಳಭಾವವನ್ನು ವ್ಯಕ್ತಪಡಿಸುವಂತಹವು. ಸ್ತ್ರೀಯರ ದೃಷ್ಟಿಯಲ್ಲಿ ಆದರ್ಶ ಪತಿಯೆಂಥವನೆಂದು ತಿಳಿಸುವಂತಹವು. ಈ ಭಾವನೆಗೆ ಬಣ್ಣ ಬರುವಂತೆ ಕೆಲವು ಒಡಪುಗಳು ಸಾಹಿತ್ಯಿಕ ಅಂಶಗಳನ್ನು ಮೇಳೈಸಿಕೊಂಡು ಸಣ್ಣ ಸಣ್ಣ ಮಾತುಗಳಲ್ಲಿ ಸರಸಸುಖವನ್ನು ತುಳುಕಿಸಿವೆ.

"ಬೆಳದಿಂಗಳ ಬೆಳಕ, ಕಲ್ಲಸಕ್ಕರಿ ಹಳಕ
ನಕ್ಷತ್ರ ಬೆಳಕಿನಾಗ ಅಕ್ಷರ ಬರೀತಾನ.........."

"ಹತ್ತ ಬಟ್ಟಿನಾಗ ಹತ್ತು ಉಂಗರ
ಹತ್ತು ಮಂದ್ಯಾಗ ಕೂತ ಹೌಂದ ಅನಸ್ಕೊಂತಾನ.........."

"ಅತ್ತಿ ಹೂವಿನ ಸೀರಿ, ಮುತ್ತಿನ ಉಡಕ್ಕಿ
ಮುತ್ತೋದಿ ಸನಹ್ಯಾಣತಿ ಮನ್ಯಾಗ ಅದಾಳ.... ......"

ಇಂಥ ಮನೋಜ್ಞ ಒಡಪುಗಳಲ್ಲದೆ—

ತನು ಅಂಬು ಕಣಮಾಡಿ | ಮನ ಅಂಬು ಮೇಟಿಮಾಡಿ
ಗುಣ ಅಂಬು ತೆನಿ ಸುರವಿ | ಸತ್ತೆ ಅಂಬು ಎತ್ತುಕಟ್ಟಿ
ಮಾಯಾ ಅಂಬು ಮದಮಾಡಿ | ವೈರಾಗ್ಯ ಅಂಬು ಮೆಟ್ಟಿ ಹಚ್ಚಿ
ಕೆಟ್ಟಗುಣದ ಹೊಟ್ಟುತೂರಿ | ಶಾಂತಿ ಎಂಬ ಸಳ್ಳ ಹೊಡೆದು
ಖಂಡಗ ರಾಶಿ ಕಣಕ ಎಳೆದು
ಬಂಡಿ ಎತ್ತಿಗಿ ಬಂಗಾರ ಬಾಸಿಂಗ ಕಟ್ಟಿ |
ಮುತ್ತಿನಂಥ ಮುಂಗಾರಿ ರಾಸಿತಂದು
ಮುಗುತಿ ಅಂಬು ಹಗೆ ಹಾಕತಾನ........."

ಎಂಬ ಒಡಪುಗಳಲ್ಲಿ ಆಧ್ಯಾತ್ಮಿಕ ಐಶ್ವರ್ಯ, ಸಂಸ್ಕೃತಿಯ ಸುವರ್ಣತೇಜಗಳನ್ನು ಕಾಣಬಹುದು. ಆದರೆ ಕೆಲವು ಸಲ ಪ್ರಾಸಕ್ಕಾಗಿ ಮಾತ್ರ ಇವು ಜನ್ಮ ತಾಳಿದುದುಂಟು.

ಉದಾ :

"ಸೀತೆಯನ್ನು ಶೋಧಮಾಡಿದವನು ಹನುಮಂತನೆಂಬ ಕೋತಿ |
ನಾನು......ರಲ್ಲಿ ಬೇಡುವೆನು ಯಾವಾಗಲೂ ಪ್ರೀತಿ |

ಇಲ್ಲಿ ಪ್ರಾಸದ ಹಂಗಿಗೆ ಬಿದ್ದು ಒಡಪಿನ ಸ್ವಾರಸ್ಯವೆಲ್ಲ ಹಾಳಾಗಿ ಹೋಗಿದೆ. ಇಂಥ ಕೃತಕಗಳನ್ನು ತೂರಿದಷ್ಟು ಕ್ಷೇಮ.

ಹುಟ್ಟಿದ ಮನೆಯಿಂದ ಕೊಟ್ಟ ಮನೆಗೆ ಹೋಗುವ ಹೆಣ್ಣು ನೂರಾರು ಮೈಲು ದೂರದಲ್ಲಿ ಜೀವನ ನಡೆಸಬೇಕಾಗುತ್ತದೆ. ಆಗ ಆಕೆಯ ಜೊತೆ ಒಡಪಿನ ಭಂಡಾರವೂ ಹೋಗುತ್ತವೆ. ಮಂಗಲ ಪ್ರಸಂಗದಲ್ಲಿ ದೂರ ದೂರದ ಬಂಧುಗಳೆಲ್ಲ ಒಂದೆಡೆ ಸೇರಿ ಒಡಪನ್ನು ಹೇಳುತ್ತಾರೆ. ಹೀಗಾಗಿ ಈ ಒಡಪುಗಳಿಗೆ ಸಾರ್ವತ್ರಿಕ ಸ್ವರೂಪ ಒದಗಿರುತ್ತದೆ; ಒಂದು ಮೂಲೆಯಲ್ಲಿಯ ಒಡಪು ಇನ್ನೊಂದು ಮೂಲೆಯಲ್ಲಿಯೂ ಪ್ರಚಾರಗೊಂಡಿರುತ್ತದೆ.

ಒಡಬು : ಒಗಟು ಮತ್ತು ಒಡಪುಗಳಿಂದ ಭಿನ್ನವಾದ ಜಾತಿ ಒಡಬು ಇವುಗಳನ್ನು ಉಗ್ಘಡಿಸುವವರು ವೀರಭದ್ರನ ವೇಷತೊಟ್ಟ ಪುರವಂತರು. ಸಾಮಾನ್ಯವಾಗಿ ಇವರು ವೀರಶೈವ ಇಲ್ಲವೆ ವಿಶ್ವಕರ್ಮ ಮತದವರು ವೀರಗಾಸಿ, ಖಡ್ಗ, ಶಸ್ತ್ರ, ಮುಡಿಗೆ ಇವರ ವೇಷಭೂಷಣಗಳು. ವೀರಶೈವ ಮತ್ತು ವಿಶ್ವಕರ್ಮ ದೇವರ ಜಾತ್ರೆ, ದಕ್ಷಬ್ರಹ್ಮನಯಜ್ಞ ವಿನಾಶಗೈದುದರ

ಸಂಕೇತವಾದ ಅಗ್ನಿ ತುಳಿಯುವಿಕೆ, ವೀರಶೈವರ ಮದುವೆಯ ಗುಗ್ಗಳ ಮೆರವಣಿಗೆ ಪ್ರಸಂಗಗಳಲ್ಲಿ ಇವರು ವೀರ ಹೆಜ್ಜೆಹಾಕಿ ರೌದ್ರಾವೇಶದಿಂದ ಕುಣಿದು ಶಸ್ತ್ರ ಚುಚ್ಚಿಕೊಳ್ಳುತ್ತಾರೆ. ಹೀಗೆ ಕುಣಿಯುವದಕ್ಕೆ ಮೊದಲು ವಾದ್ಯಮೇಳದ ಮಧ್ಯನಿಂತು ಇವರು ವೀರವತ್ತಾದ ಗದ್ಯಭಾಗಗಳನ್ನು ಉಗ್ಗಡಿಸುತ್ತಾರೆ ಇವು ಒಡಬುಗಳು. ಕೆಲವು ಸಲ ಇವುಗಳಿಗೆ ಬದಲು ಶರಣರ ವಚನಗಳನ್ನೂ ಬಳಸುವದುಂಟು. ಇವುಗಳಿಗೆ ಉದಾಹರಣೆ.

೧. "ವೀರಭದ್ರ ದೇವರು ಹುಟ್ಟಿದಾಗಲೇ ಹೂವಿನ ಕಾಶಿ, ವಿಷ್ಣು ಕಾಶಿ, ಬ್ರಹ್ಮಕಾಶಿ. ಮುಟ್ಟುವ ಹೊನ್ನಿನ ಆವುಗೆ, ಸಾವಿರ ಸಿರಸು, ಮೂರುಸಾವಿರ ಕಣ್ಣು, ಎರಡು ಸಾವಿರ ಭುಜ, ಶೇಖರಿಸಿದ ಮುಂಡಿಯ, ಜಂಜುಮೇಕ ಮುಂಗುಲಿ ಜಟೀ, ಉರುಲು ಶೆಡಕಿನ ಹಗ್ಗ, ಗಜದಾಂಡು-ಗಜಾಂಕುಶ, ಚಪ್ಪಗೊಡಲಿ. ಚನ್ನವೀರಭದ್ರ ಬತ್ತೀಸ ಆಯುಧ ಪಿಡಿದು, ಕರಗಸದ ಬಾಣ, ಕುಂಜರದ ಬಾಕು. ಜುಂಜು ಬಿರಿಗಣ್ಣು ಬಿಲ್ಲುದರಿನ ಹೆಗ್ಗಾಳಿ, ಪಿಡಿಯೋ ಗಂಡಗತ್ತರಿ, ಕೈಯುಂಬು ಕಠಾರಿ, ಈಟಿ ರಣಚೂರಿ, ರೌದ್ರಾಕಾರದಿಂದ ಹೂಂಕರಿಸುತ್ತ ಕೋಲಲಯೆಂದ ಹರಿದು ಹೋಮಕ್ಕೆ ಬಂದು, ವಿಷ್ಣುವೇ ಮೊದಲಾದ ದೇವತೆಗಳನ್ನು ಸೆರೆ ಹಿಡಿದು, ದಕ್ಷ ಬ್ರಹ್ಮನ ಶಿರಹರಿದು, ಚಂದ್ರನನ್ನು ಪಾದದಲ್ಲಿ ತಿಕ್ಕಿ, ಸೂರ್ಯನ ಹಲ್ಲು ಮುರಿದು, ಸರಸ್ವತಿಯ ಮೂಗನೇ ಕೊಯಿದು, ಅಗ್ನಿಯ ನಾಲಗೆಯನು ಹರಿದು, ಸಪ್ತಭಾಗ ಮಾಡಿ, ಅರವತ್ತಾರು ಕೋಟಿ ರಾಕ್ಷಸರನ್ನು ಕೆಂಗಣ್ಣಿನಿಂದ ಸುಟ್ಟು, ಕೆಂಡದ ಓಕಳಿಯನ್ನು ಹಾಕುತ್ತ ಬರಲು, ದಕ್ಷನ ಸತಿಯು ಬಂದು ಪಾದಕ್ಕೆ ಎರಗಲು, ಆವಳ ಪತಿಗೆ ಕುರಿಯ ತಲೆಯನ್ನಿಟ್ಟು ಬರುತ್ತಿರಲು ಶಿವನು ಕಂಡು ಭಪ್ಪರೆ ಭಲರೆ ಎಂದು ರತ್ನಕೆಚ್ಚಿದ ಸಿಂಹಾಸನದ ಮೇಲೆ ಕೂಡ್ರಿಸಿ, ಹೂವಿನ ಮಳೆಗರೆದನು. ಖಡೆಯೆಂದಾ."

೨. "ಶ್ರೀ ರಾಚೋಟ ವೀರಭದ್ರದೇವರ ಪ್ರತಾಪವೆಂತೆಂದೊಡೆ। ಪಾತಾಳದಿಂದ ಕೆಳಗೆ ಪಾದ, ಸುರಲೋಕದಿಂದ ಮೇಲೆ ಉತ್ತಮಾಂಗ, ಬ್ರಹ್ಮಾಂಡವೇ ಮುಕುಟ. ಗಗನವೇ ಮುಖ, ಚಂದ್ರಾರ್ಕಾಗ್ನಿಗಳೇ ನೇತ್ರ, ದಶದಿಕ್ಕುಗಳೇ ದಶಬಾಹುಗಳು, ಮಹದಾಕಾಶವೇ ಶರೀರ. ತರುಗಳೇ ರೋಮುಗಳು, ಶೂನ್ಯವೇ ಕರಸ್ಥಲ ಲಿಂಗ, ನಕ್ಷತ್ರವೇ ಪುಷ್ಪ. ನಿತ್ಯವೇ ಪೂಜೆ, ಮೋಡವೇ ಜಡೆ, ಬೆಳದಿಂಗಳೇ ವಿಭೂತಿ, ಪರ್ವತಗಳೇ ರುದ್ರಾಕ್ಷಿ, ಪಂಚಬ್ರಹ್ಮವೇ ಪಂಚಾಕ್ಷರ, ತತ್ವಂಗಳೇ ಜಪಮಾಲೆ, ಮೇರುವೇ ದಂಡ. ಸಮುದ್ರವೇ ಕಮಂಡಲುಗಳಾಗಿಹವು. ಆದಿಶೇಷನೇ ಕಟಿಸೂತ್ರ, ಜಗವೇ ಕಂಥೆ, ಅನಂತವೇ ಕೌಪೀನ, ತ್ರಿಗುಣವೊಂದಾದುದೇ ಕರ್ಪುರ, ಚತುರ್ಯುಗವೆ ಗಮನ, ಮಿಂಚೇ ಅಂಗರುಚಿ, ಸಿಡಿಲು ಧ್ವನಿ, ವೇದಾಗಮವೇ ವಾಕ್ಯ, ಜ್ಞಾನಮುದ್ರೆಯೇ ಉಪದೇಶ, ಪೃಥ್ವಿಯೇ ಸಿಂಹಾಸನ, ದಿನರಾತ್ರಿಯೇ ಅರಮನೆ, ಶಿವಜ್ಞಾನವೇ ಐಶ್ವರ್ಯ, ನಿರಾಳವೇ

ತೃಪ್ತಿ, ಇಂಥ ಚೈತನ್ಯ ಜಂಗಮಕ್ಕೆ ನಾನು ನಮೋ ನಮೋಯೆನುತಿರ್ದೆನಯ್ಯ ಸೌರಾಷ್ಟ್ರ ಸೋಮೇಶ್ವರಾ, ಖಡೆಯೆಂದಾ."

ಇಲ್ಲಿ ಮೊದಲಿನದು ಒಡಬು, ಎರಡನೆಯದು ಒಡಬಾಗಿ ಪರಿವರ್ತನೆಗೊಂಡ ವಚನ. ವೀರವತ್ತಾಗಿರುವ ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯನ ವಚನಗಳನ್ನು ಸಾಮಾನ್ಯವಾಗಿ ಇಲ್ಲಿ ಬಳಸುವದುಂಟು. ಇಲ್ಲಿಯ ಒಂದೊಂದು ಮಾತಿನಲ್ಲಿ ವೀರಭದ್ರನ ಸಿಡಿಲುವ್ಯಕ್ತಿತ್ವ ಎದ್ದು ಕಾಣಿಸುತ್ತದೆ. ಅಟ್ಟಹಾಸದಿಂದ ರುದ್ರ ಹೆಜ್ಜೆ ಹಾಕಿ, ಖಡ್ಗ ತಿರುವಿ, ಶಸ್ತ್ರ ಹಿರಿದು ಅಂಗಾಂಗಗಳಿಗೆ ಚುಚ್ಚಿಕೊಳ್ಳುವ ಪೂರ್ವದಲ್ಲಿ ಉಗ್ಘಡಿಸುವ ಈ ಒಡಬುಗಳು ಸನ್ನಿವೇಶಕ್ಕೆ ರುದ್ರಭಯಂಕರ ಹಿನ್ನೆಲೆಯನ್ನು ನಿರ್ಮಿಸುತ್ತವೆ; ಪುರವಂತನ ಮೈಯಲ್ಲಿ ಆವೇಶವನ್ನು ತುಂಬುತ್ತವೆ. ಈ ಒಡಬುಗಳನ್ನು ಹೇಳುವ ಮೊದಲು "ಆಹಾ ವೀರಾ" "ಆಹಾ ಶರಭಾ" ಎಂದು ಪುರವಂತರು ನುಡಿದರೆ ಎಡಬಲದವರು ಮಧ್ಯ ಮಧ್ಯ "ಖಡೆಯೆಂದಾ" "ಖಡೆಯೆಂದಾ" ಎಂದು ದನಿಗೂಡಿಸಿ ಒಟ್ಟು ವಾತಾವರಣವನ್ನೇ ರುದ್ರಭೀಕರಗೊಳಿಸುತ್ತಾರೆ. ಹಳ್ಳಿಹಳ್ಳಿಗಳಲ್ಲಿ ಸಿಗುವ ಇಂಥ ನೂರಾರು ಒಡಬುಗಳ ಸಂಗ್ರಹ ಈಗ ಅವಶ್ಯವಿದೆ.

ಈ ನಿಜ ಒಡಬುಗಳ ಮಾದರಿಯಲ್ಲಿ ಆಧುನಿಕರು ಹೊಸಹೊಸ ಒಡಬುಗಳನ್ನು ಕಟ್ಟಿದ್ದರೂ ಇವುಗಳಲ್ಲಿ ಮೂಲಗಳ ಸೊಬಗು ಮಾಯವಾಗಿದೆ.

ಪರಾಕು :

ದೇವರು, ಯತಿಗಳು, ಅರಸರು, ಮತ್ತು ಮಾನ್ಯರು—ಇವರನ್ನು ಕುರಿತು ಉದ್ಘೋಷಿಸುವ ಗದ್ಯಮಾಲೆಗಳು ಪರಾಕು. ಮಂದಿಮಾಗಧರು, ಚಾರಣರು, ಭಟ್ಟಂಗಿಗಳು ಘೋಷಿಸುವ ಈ ಗದ್ಯಪ್ರಕಾರ ಕಾವ್ಯ, ಶಾಸನ ಮೊದಲು ಮಾಡಿ ನಿತ್ಯ ಜೀವನದಲ್ಲಿಯೂ ರೂಢಿಯಲ್ಲಿವೆ.

"ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾ ಮಂಡಳೇಶ್ವರಂ | ದ್ವಾರಾವತೀಪುರವರಾಧೀಶ್ವರಂ | ಯಾದವಕುಲಾಂಬರದ್ಯುಮಣಿ | ಸಮ್ಯಕ್ತ್ವಚೂಡಾಮಣಿ | ಮಲಪರೊಳ್ಗಂಡ | ಚಲಕೆ ಬಲುಗಂಡ | ನಾಳಿಂ ಮನ್ನಿರಿಪಂ| ಶೌರ್ಯಮಂ ಮಜೀವ | ತಳಕಾಡುಗೊಂಡ | ಗಂಡಪ್ರಚಂಡ...... | "

ಹೀಗೆ ಎರಡು ಪುಟಗಳಷ್ಟು ಮುಂದುವರಿದ ಹೊಯ್ಸಳ ವಿಷ್ಣುವರ್ಧನನ ಬಿರುದು

"ಸ್ವಸ್ತ್ಯನವರತ ಪರಮ ಕಲಾಣ್ಯಾಭ್ಯುದಯ ಸಹಸ್ರಫಳಭೋಗಭಾಮಿನಿ ದ್ವಿತೀಯಲಕ್ಷ್ಮೀಸಮಾನೆಯುಂ | ಸಕಳ ಗುಣಗಣಾನೂನೆಯುಂ | ಅಭಿನವ ರುಕ್ಮಿಣೀದೇವಿಯುಂ | ಪತಿಹಿತಸತ್ಯಭಾಮೆಯುಂ | ವಿವೇಕ ಬ್ರಹಸ್ಪತಿಯುಂ | ಪ್ರತ್ಯುತ್ಪನ್ನ ವಾಚಸ್ಪತಿಯುಂ | ಮುನಿಜನ ವಿನೇಯಜನ ವಿನೀತೆಯುಂ | ಚತುಸ್ಸಮಯ ಸಮುದ್ಧರಣೆಯುಂ | ಬ್ರತಗುಣ ಶೀಳ ಚಾರಿತ್ರಾಂತಃಕರಣೆಯುಂ........| "

ಒಂದು ಮುಂತಾಗಿ ಎರಡು ಪುಟಗಳ ವರೆಗೆ ಬೆಳೆದ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲೆಯು ಬಿರುದು ಶಾಸನದಲ್ಲಿ ಬರುವ ಪರಾಕುಗಳು. ಇಂಥ ಪರಾಕುಗಳು ಅರಮನೆ ಗುರುಮನೆಗಳಲ್ಲಿ ಇನ್ನೂ ಪ್ರತಿಧ್ವನಿಸುತ್ತವೆ. ಇವು ಎಂದೋ ಒಮ್ಮೆ ಹುಟ್ಟಿ ಕಂಠಪಾಠವಾಗಿ ನಿಂತು ನಿತ್ಯ ಕೇಳಿಬರುತ್ತಿದ್ದರೆ, ದೇವರ ಉತ್ಸವ ಕಾಲದಲ್ಲಿ ಮಾತ್ರ ಇವುಗಳನ್ನು ಆಶುವಾಗಿ ಕಟ್ಟಿ ಉಗ್ಘಡಿಸುತ್ತಾರೆ.

ಹರಿಹರನ ಬಸವರಾಜ ದೇವರ ರಗಳೆಯುಲ್ಲಿ "ಕಹಳಾರವಂ ದೆಸೆದೆಸೆಗೆ ಪಸರಿಸೆ ಪುರಮುಂ ಪೊರಮಟ್ಟು ಪಿರಿಯ, ಮಾಹೇಶ್ವರರ ಕೇರಿಗಳ ಕೆಲದೊಳು ನಡೆತಪ್ಪಾಗಳು — ಪಿಪಿಲಯ್ಯಂಗೆ ಪಿತಾರ್ಘ। ಉಪ್ಪಟಯ್ಯಂಗೆ ಪಿತಾರ್ಘ। ಬಸವರಾಜಂಗೆ ಪಿತಾರ್ಘ......." ಎಂಬ ವಾಕ್ಯವೊಂದಿದೆ. ಈಗಲೂ "ಶಂಕರನ ಪರಾಕ, ಭೋ ಪರಾಕ" ಎಂಬ "ಹಾಲಗಿರಿ ಮೇಲಗಿರಿ ಮಂದಾರಗಿರಿ ಮಹಾಂತ ಮಲ್ಲಯ್ಯ ಘೇ" ಎಂಬ ದೇವತಾಪರಾಕುಗಳು ಬಳಕೆಯುಲ್ಲಿವೆ. ಇದಲ್ಲದೆ "ಆತ್ತ ಆಲದ ಮರ, ಸುತ್ತ ತೆಂಗಿನಮರ, ಉತ್ತತ್ತಿ ಬನದೊಳಗೆ ಇರುವಂಥ ಉಳವಿ ಚನ್ನಬಸವೇಶ್ವರ ಬಹುಪರಾಕ" "ಏಳು ಕೊಳ್ಳದ ಎಲ್ಲಮ್ಮ ನಿನ ಪಾದಕ ಉಧೋ ಉಧೋ" "ಏಳಕೋಟಿ ಏಳಕೋಟಿ ಉಘೇ" ಎಂಬ ಪರಾಕುಗಳೂ ನಿತ್ಯ ಕಿವಿಗೆ ಅಪ್ಪಳಿಸುತ್ತವೆ. ಈ ಪರಾಕುಗಳ ಹಿಂದೆ ದೈವಭಕ್ತಿ ಉಕ್ಕಿ ಹರಿದಿದೆ. ಕೆಲವು ಸಲ ಈ ಬಿರುದು ಮಾಲೆ ಇನ್ನೂ ದೀರ್ಘ ಬೆಳೆದು ನೆರೆದ ಜನಸ್ತೋಮವನ್ನೆಲ್ಲ ಜಯಜಯಕಾರದಲ್ಲಿ ತಲ್ಲೀನಗೊಳಿಸುತ್ತದೆ.

ಇವುಗಳ ಉದ್ದೇಶ, ದೇವರು ಇಲ್ಲವೆ ಮಹಾವ್ಯಕ್ತಿಯ ಗುಣಘೋಷಣೆ. ಸಂಸ್ಕೃತಭೂಯಿಷ್ಠವಾಗಿ ವಿಜೃಂಭಿಸುವ ಇವು ಆ ಆ ಅಂತಸ್ತನ್ನು ಚೆನ್ನಾಗಿ ಚಿತ್ರಿಸುತ್ತವೆ.

ಲಾಲಿ :

ಸಣ್ಣಮಕ್ಕಳನ್ನು ಮುದವಾಗಿರಿಸಲು ತಾಯಂದಿರು ಜೋಗುಳದಂತೆ ಲಾಲಿಯನ್ನು ಹೇಳುತ್ತಾರೆ. ಜೋಗುಳ ಪದ್ಯಜಾತಿ, ಲಾಲಿ ಗದ್ಯಜಾತಿ. ಬಾಯಿಯಿಂದ "ಲುಳು ಲುಳು" ಧ್ವನಿ ಹೊರಡಿಸಿದ ಮೇಲೆ ಹೇಳುವ ಲಾಲಿಯ ಮೋಹಕತೆಗೆ ಮನಸೋತು ಮಕ್ಕಳು ಹಟಮರೆತು ನಕ್ಕುನಲಿಯುತ್ತವೆ. ಕೆಲವು ಸಲ "ಹಾಲ ಬೇಡಿ ಹರಿದತ್ತ, ಕೆನಿ ಬೇಡಿ ಕುಣಿದತ್ತ, ಮೊಸರ ಬೇಡಿ ಕೆಸರ ತುಳಿದತ್ತ, ಮೊಸರ ಬೇಡಿ ಕೆಸರ ತುಳಿದತ್ತ ಕಂದಯ್ಯನ ಕುಸಲದ ಗೆಜ್ಜಿ ಕೆಸರಾಗ" ಎಂಬಂತಹ ತ್ರಿಪದಿಗಳನ್ನೇ ಗದ್ಯರೂಪದಲ್ಲಿ ಹೇಳಿ ಲಾಲಿಯನ್ನಾಗಿ ತಿರುಗಿಸಿಕೊಳ್ಳುತ್ತಾರೆ. ಇವಲ್ಲದೆ ಮಕ್ಕಳನ್ನು ಮುದಗೊಳಿಸಲು

ರೂಪಿಸಿದ ನೂರಾರು ಲಾಲಿಗಳನ್ನು ಕರ್ನಾಟಕದ ತಾಯಂದಿರು ದಿನನಿತ್ಯ ಮಗುವಿನ ಕಿವಿಗೆ ಊಡಿಸುತ್ತಾರೆ. ಇಲ್ಲಿ ಸುಪ್ರಸಿದ್ಧ ಎರಡು ಲಾಲಿಗಳನ್ನು ಗಮನಿಸಬಹುದು.

೧. ಕೂಸನ್ನು ಕಾಲಮೇಲೆ ಬೋರಲು ಮಲಗಿಸಿಕೊಂಡು, ಜಯ್ಯಾಲೆಯ ರೂಪದಲ್ಲಿ ಕಾಲನ್ನು ತೂಗಿಸುತ್ತ "ಆನಿಬಂತಾನಿ, ಯಾಪೂರಾನಿ, ವಿಜಾಪೂರಾನಿ, ಇಲ್ಲಿಗ್ಯಾಕಬಂತು, ಹಾದಿತಪ್ಪಿ ಬಂತು, ಹಾದಿಗೊಂದುಡ್ಡ, ಬೀದಿ–ಗೊಂದುಡ್ಡ, ಆವೇ ಎರಡು ದುಡ್ಡು ಕೊಟ್ಟು, ಸೇರ ಕೊಬ್ಬರಿ ತಂದು, ಲಟಲಟಮುರಿದು, ಚುಕ್ಕ್ಯೋಳ ಕೈಯಾಗ ಕೊಟ್ಟು, ದೇವರ ಕೈಯಾಗ ಸುಣ್ಣ ನಮ್ಮ [ಇಲ್ಲಿ ಕೂಸಿನ ಹೆಸರು ಸೇರಿಸುತ್ತಾರೆ] ಕೈಯಾಗ ಬಣ್ಣ" ಎಂಬ ಒಂದು ಪ್ರಸಿದ್ಧ ಲಾಲಿ ಪ್ರಚಾರದಲ್ಲಿದೆ. ಇದು ವಿಜಾಪೂರದವರು ವಿಜಯನಗರವನ್ನು ಗೆದ್ದ ಘಟನೆಯನ್ನು ಪ್ರತಿನಿಧಿಸುವ ಲಾಲಿಯೆಂದು ಡಾ|| ಬಿ. ಎಸ್. ಗದ್ದಿಗಿಮಠ ಹೇಳುತ್ತಾರೆ.

೨. "ಹೋಳಗಿ, ತುಪ್ಪ, ಅನ್ನ, ಸಾರ, ಉಪ್ಪಿನಕಾಯಿ" ಎಂದು ನುಡಿಯುತ್ತ ಕೂಸಿನ ಐದೂ ಬೆರಳನ್ನು ಒಂದೊಂದಾಗಿ ಮಡಿಸಿ, "ನೀವುಂಡು, ನಾವುಂಡು, ಅಪ್ಪವುಂಡು, ಅವ್ವವುಂಡು, ಅಣ್ಣವುಂಡು, ಎನ್ನುತ್ತ ಕ್ರಮವಾಗಿ ತುತ್ತಿನ ರೂಪದಲ್ಲಿ ಹಸ್ತವಿನ್ಯಾಸಮಾಡಿ ಆಮೇಲೆ "ಎಲ್ಲರೂ ಉಂಡಿದ್ದು. ಹೆಚ್ಚಾಗಿ ಕಟ್ಟಿ, ಕಟ್ಟಿ, ಕಟ್ಟಿ ಒಡೆದು" ಎನ್ನುತ್ತ ಕೂಸಿನ ಅಂಗೈಯಲ್ಲಿ ನಮ್ಮ ಬೆರಳನ್ನು ತಿರುತಿರುಗಿಸಿ ಆಮೇಲ "ಇಲ್ಲಿಗೆ ಬಂತು" "ಇಲ್ಲಿಗೆ ಬಂತು" ಎನ್ನುತ್ತ ಅಂಗೈಯಿಂದ ಮೊಳಕೈ, ಮೊಳಕೈಯಿಂದ ಬಗಲು, ಬಗಲಿನಿಂದ ಕೊರಳಿಗೆ ಕ್ರಮವಾಗಿ ಕಟ್ಟಾಡಿಸಬೇಕು ಇದರಿಂದ ಕೂಸು ನಕ್ಕು ಸಂತೋಷಪಟ್ಟು, ಮತ್ತೆ ಮತ್ತೆ ಈ ಲಾಲಿಯನ್ನು ಬಯಸುತ್ತದೆ. ಇಂಥ ಹಲವಾರು ಲಾಲಿಗಳು ನಾಡಿನ ಮನೆ ಮನೆಗಳಲ್ಲಿ ಜೀವಂತವಾಗಿವೆ

ಆಟಗಳು :

"ವಾಟರ್‌ಲೂ ಕದನವು ಈಟನ್ನಿನ ಆಟದ ಮೈದಾನಿಸಲ್ಲಿ ಗೆಲ್ಲಲ್ಪಟ್ಟಿತು"– ಎಂಬ ಡ್ಯೂಕ್ ಆಫ್ ವಿಲಿಂಗ್ಟನ್ನನ ಮಾತು ಆಟದ ಮಹತಿಯನ್ನು ಎತ್ತಿ ಹೇಳುತ್ತದೆ. ಹೀಗೆ ಭಾವೀಜೀವನಕ್ಕೆ ಸಂಸ್ಕಾರ ಒದಗಿಸುವ ಆಟಗಳು ಮಕ್ಕಳಿಗೆ ಪಂಚಪ್ರಾಣ. ಇದರಿಂದ ಅವರಿಗೆ ದೈಹಿಕ ಬಲದೊಂದಿಗೆ ಬದುಕಿನ ಶಿಸ್ತು ರೂಢವಾಗುತ್ತದೆ. ಈ ಆಟಗಳನ್ನು ಅಂತರ್ಗೃಹ ಬಹಿರ್ಗೃಹ ಎಂದೂ, ಇವುಗಳಲ್ಲಿಯೇ ಸಾಹಿತ್ಯಸಹಿತ, ಸಾಹಿತ್ಯರಹಿತ ಎಂದೂ ಸಾಹಿತ್ಯ ಸಹಿತದಲ್ಲಿ ಗದ್ಯ ಪದ್ಯವೆಂದೂ ವಿಭಾಗಗಳನ್ನು ಮಾಡಬೇಕಾಗುತ್ತದೆ. ಪಶ್ಚಿಮದ ಪ್ರಭಾವದಿಂದ ದಿನದಿಂದದಿನಕ್ಕೆ ಕಣ್ಮರೆಯಾಗುತ್ತಿರುವ ಈ ಆಟ

ಗಳನ್ನು ಆಟದ ಸಾಹಿತ್ಯವನ್ನು ಬರವಣಿಗೆಯಲ್ಲಿ ಹಿಡಿದಿಟ್ಟುಕೊಳ್ಳುವುದು ಈಗ ಅತ್ಯವಶ್ಯವಾಗಿದೆ.

ಈಗ ಪ್ರಚಲಿತವಿರುವ ದೇಶೀ ಆಟಗಳಲ್ಲಿ ಕೆಲವು ನಮ್ಮ ನಾಡಿನವು, ಕೆಲವು ನೆರೆಯ ನಾಡಿನವು. ಇವುಗಳ ಪ್ರಾಚೀನತೆಯನ್ನು ಅಭ್ಯಾಸಮಾಡುವವರು—

ಒಡನಾಡಿಯುಮೊಡನೋದಿಯು |
ಮೊಡವಳೆದುಂ ಗುಳ್ಳೆಗೊಟ್ಟಿ ಬಟ್ಟುಳಿಸೆಂದುಂ ||
ಪೊಡೆಸೆಂಡಿವನಾಡು !
ತ್ತೊಡವಳೆದರ್ತ್ತಂಮೊಳೆಳಸೆ ತಂತಂಗಡೆಗಳ್ ||

ವ|| ಅಂತಾ ಕೂಸುಗಳ್ಗೊಸಾಟವಾಡುತ್ತಿರ್ದೊಂದು ದಿವಸಂ ಮರಗೆರಸಿಯಾಡಲೆಂದು" ಎಂಬ "ಕುಪ್ಪಕುಟಿಯಾಡುವ ಮಕ್ಕಳಂತೆ" ಎಂಬ ಪಂಪಭಾರತ ಮತ್ತು ಧರ್ಮಾಮೃತಗಳ ಹೇಳಿಕೆಗಳನ್ನೂ ಶಾಸನಗಳಲ್ಲಿಯ 'ಕಂದುಕಕ್ರೀಡಾ ವಿನೋದನುಂ' ಎಂಬ ಬಿರುದುಗಳನ್ನೂ, ಮಾನಸೋಲ್ಲಾಸ ಮೊದಲಾದ ವಿಶ್ವಕೋಶಗಳಲ್ಲಿಯ "ಕ್ರೀಡಾ ವಿನೋದ" ಪ್ರಕರಣಗಳನ್ನೂ ಸಂಗ್ರಹಿಸಿ ಅಭ್ಯಸಿಸಬೇಕು. ಇದರಿಂದ ಈಗ ಪ್ರಚಲಿತವಿರುವ ಆಟಗಳಿಗೂ ಅವುಗಳಿಗೂ ಸಂಬಂಧ ಕಲ್ಪಿಸಲು ಸಾಧ್ಯವಾಗಬಹುದು. ಅಪ್ರಸ್ತುತವಾದ ಈ ವಿವೇಚನೆಯನ್ನು ಬದಿಗಿರಿಸಿ ಇಲ್ಲಿ ಆಟಗಳಲ್ಲಿಯ ಗದ್ಯಸಾಹಿತ್ಯವನ್ನು ಅವಲೋಕಿಸಬಹುದು.

ಯುವಕರ ಆಟಗಳಿಗಿಂತ ಬಾಲಕರ ಆಟಗಳಲ್ಲಿ ಸಾಹಿತ್ಯಪ್ರಮಾಣ, ಅದರಲ್ಲಿ ಗದ್ಯ, ಅದರಲ್ಲಿಯೂ ಪದ್ಯವೋ ಗದ್ಯವೋ ಎಂಬ ಸಂದೇಹ ಹುಟ್ಟಿಸುವ ಗದ್ಯಸಾಹಿತ್ಯದ ಪ್ರಮಾಣ ಹೆಚ್ಚು. ಬಹುಶಃ ಸಾಹಿತ್ಯದ ಈ ಅತಿಶಯತೆಗೆ ಮಕ್ಕಳ ನಾಲಗ ಆಟದ ಮೂಲಕ ಭಾಷಾತರಬೇತಿ ಪಡೆಯಲೆಂಬ ಕಾರಣ ಮೂಲವಾಗಿರಬಹುದು. ಗದ್ಯಸಾಹಿತ್ಯಾತ್ಮಕ ಈ ಆಟಗಳನ್ನು ಗಂಡುಮಕ್ಕಳ ಹೆಣ್ಣುಮಕ್ಕಳ ಮತ್ತು ಉಭಯರ ಆಟಗಳೆಂದು ವರ್ಗೀಕರಿಸಬೇಕಾಗುತ್ತದೆ.

ಚಿಣಿಫಣಿ ಆಡುವಾಗ (೧) ಏಕನಪಾವ, ಜೋಕನಜಿಟ್ಟಿ, ಮೂರಕನಮುಟ್ಟಿ, ಚರಕೆನಗೌಡ, ಪಚಕನಪುಚ್ಚಿ, ಸೇಮಂಡೋಳ, ಜುಲ್ಲ. (೨) ಪಾವ, ಜಿಟ್ಟಿ, ಮುಟ್ಟಿ, ಗೌಡ, ಪುಚ್ಚಿ, ಡೋಳ, ಜುಲ್ಲ, ಎಂಬ ಎರಡು ಬಗೆಯ ಪ್ರಯೋಗಗಳು ರೂಢಿಯಲ್ಲಿವೆ.

ಗೋಲಿ ಆಡುವಾಗ: (೧) ಏಕಲಕಾಜಾ, ಡಬ್ಬಿರಾಜಾ, ತಿರಣಂಭೋಜ, ಚಾರಕಚೆಂಡು, ಪೈಸಪಂಡು, ಸೈಮರದಂಡು, ಸೈತಗರಟ, ಏಟಗುಳ್ಳಿ, ನಮಕಾರೇಟ, ಗೋಲಿಕೋಟ, ಮ್ಯಾಲೊಂದೇಟ.

(೨) ನಾಕಲರಸಾಲ, ಐದು ಸರ್ಪಲಾ, ಚಿಟ್ಟೀ ತಬಲಾ, ವ್ಯಾಲಿಸಂಟಿ, ಹರಕೋ ......"[೧]

(೩) ಒಂದು ನಿಸ ಕೊಂದು ಹಾಕೇನು, ಎರಡು ನಿಸ....[೧]ಹಿಚಕೇನು, ಮೂರು ನಿಸ ಮೂಲ್ಯಾಗೊತ್ತೇನು, ನಾಲ್ಕು ನಿಸ ಪಾಕಮಾಡೇನು, ಐದು ದಿಸ ಕೊಯ್ದುಚಲ್ಲೇನು, ಆರು ನಿಸ ಪ್ಯಾಲ ಹಾರೇನು, ಏಳು ನಿಸ ಜೋಳ ಕೊಯ್ದೇನು, ಎಂಟು ನಿನ ಗಂಟಲ ಹಿಚಕೇನು, ಒಂಬತ್ತು ನಿಸ ಕಂಬಕ ಬಿಗಿದೇನು, ಹತ್ತು ನಿನ......ಬಿಟ್ಟೇನು"[೧] ಎಂದು ಮೂರು ಬಗೆಯ ಪ್ರಯೋಗಗಳನ್ನು ಬಳಸುತ್ತಾರೆ.

ಇವಲ್ಲದೆ "ಆಂಟೋಳ ವಾಂಟೋಳಕಾಯಿ, ನಿರೋಳ ಜಂಬೋಳಕಾಯಿ, ಹೂವ್ರೋ ಮಗ್ರೊ ಮಲಾಸಿಗೋ" "ಕಿಲ್‌ಕಿಲ್ ಕಿಲಾರಗೋ" "ಕಾನಕಾನ ಉತ್ತುತ್ತಿ, ಇಲ್ಲಿಗೆ ಬಂತೋ ಸಂಗಯ್ಯ" "ನೋಡ ನೋಡ ತಿಮ್ಮಯ್ಯ ಲಡ್ಡಾ ಬುತ್ತಿ ಎಲ್ಲಿಟ್ಟೆ" "ಡಬ್ಬಲ್ ಹ್ಯಾಂಡ ಸಿಂಗಲ್ ಹ್ಯಾಂಡ" ಎಂದು ಹೇಳುತ್ತ ಆಡುವ ಆಟಗಳೆಲ್ಲ ಗಂಡುಮಕ್ಕಳವು.

ಹುಡಿಗೆಯರಿಬ್ಬರು "ತುಪ್ಪದಾಗ ಕಡ್ಡಿ, ನಿಮ್ಮವ್ವ ಕುಡ್ಡಿ" "ಮಾಡದಾಗ ಮಿಳ್ಳಿ, ನಿಮ್ಮವ್ವ ಕಳ್ಳಿ" "ನಮ್ಮಣ್ಣ ಸರದಾರ, ನಿಮ್ಮಣ್ಣ ತಳವಾರ" ಮೊದಲಾದ ನಿಂದೆಗಳನ್ನಾಡುತ್ತ ಕಪ್ಪೆಯಂತೆ ಕುಪ್ಪಳಿಸಿ ಜಿಗಿಯುತ್ತ ಸರದಿಯ ಪ್ರಕಾರ ಪರಸ್ಪರ ಎದುರುಬದುರು ಬರುವ ಆಟ, ಆಸುನಿಂದೆಯ ಸರಮಾಲೆಯನ್ನೇ ಸೃಷ್ಟಿಸುತ್ತದೆ. "ಸಕ್ಕ ಸರಗಿ ಗೋದಿಮುರಗಿ" (ಗಿರಿಗಿರಿ ಗಿಂಡಿ ಈಬತ್ತಿ ಉಂಡಿ) ಎನ್ನುತ್ತ ಇಬ್ಬರೂ ಕೈಗಳನ್ನು ಕತ್ತರಿಯಾಗಿ ಹಿಡಿದು ಆಡುವ ಹೆಣ್ಣುಮಕ್ಕಳ ಆಟ, ಊರೂರಗಳಲ್ಲಿ ಸರ್ವಸಾಮಾನ್ಯ.

ಇವಲ್ಲದೆ "ಕುಂಬಳ ಗಿಡಕ ನಾ ನೀರ್ಹಾಕದೆ ನನಗೊಂದು ಹಣ್ಣು ಸಿಗಲಟಿಗೋ, "ದಡಂ ದುಡಿಕಿ ಪಂಚೇರ ಆಡಕಿ ನಮ್ಮತ್ತಿ ಕೊಟ್ಟ್ಯಾಳ ಮೂರಸೇರ ಆಡಕಿ" "ಹತ್ತಾಂಬಾಳ ಹಲಗಿಬಾಳ......" "ಗೋಲಗೇರಿ ತೇರ ಗೊಲ್ಲಾಳಪ್ಪನ ತೇರ" "ಕೈ ಕೈ ಎಲ್ಲಿಟ್ಟೆ" "ಹತ್ತಿ ಕಟಗಿ, ಬತ್ತಿ ಕಟಿಕಿ "ಬಿಟ್ಟೆ ಬಿಟ್ಟೆ, ಬೇಗಾಯಿತು ತಟ್ಟಿಮನಿ ಹಾಳಾಯಿತು" "ಕದಲ್ ಬದಲ್ ಕಂಚೀಬದಲ್ ಆವರ ಬಿಟ್ಟು ಇವರ್ಯಾರು" "ಆಂಬಿಲ ಗಡಿಗ್ಯಾಗ ತಂಬಿಗಿ ಬಿದ್ದಾದ" ಮೊದಲಾದವು ಹುಡುಗರು ಹುಡುಗಿಯರು ಕೂಡಿ ಆಡುವ ಆಟಗಳು. ಹೀಗೆ ಮಕ್ಕಳ ಆಟದಲ್ಲಿ ಸರಳವೂ ಸುಂದರವೂ ಆದ ಗದ್ಯ ಬಳಕೆಗೊಂಡಿದೆ. ಈ ಕ್ಷೇತ್ರದ ಸಮಗ್ರ ಅಭ್ಯಾಸ ಒಂದು ಸ್ವತಂತ್ರ ಪುಸ್ತಕದ ವಸ್ತು.

× × × × × ×

---

೧. ಸ್ಥಳಬಿಟ್ಟ ಭಾಗಗಳಲ್ಲಿ ತೀರ ಅಶ್ಲೀಲ ಶಬ್ದಗಳಿವೆ. ಹಳ್ಳಿಯಲ್ಲಿ ಹುಟ್ಟಿದವರಿಗೆ ಅವು ಪರಿಚಿತ.

ಸಾರ್ವತ್ರಿಕತೆ ಈ ಎಲ್ಲ ಪ್ರಕಾರಗಳ ಹುಟ್ಟುಗುಣವಾದರೂ ಅವುಗಳ ಮೇಲೆ ಪ್ರಾದೇಶಿಕ ಮುದ್ರೆ ಇದ್ದೇ ಇದೆ. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ತರತರದ ಜಾನಪದಗದ್ಯ ತೂರಿಬಂದು ಕಣ್ಣುಮುಂದೆ ನಿಲ್ಲುತ್ತದೆ. ಪಡೆನುಡಿ, ಗಾದೆಗಳಲ್ಲಿಯ ಪರಿಣಾಮಕಾರಿ ಗದ್ಯ, ಕಥೆಗೆ ಬಳಸುವ ಆಡುಮಾತಿನ ಸರಸಗದ್ಯ, ಬಯಲಾಟದಲ್ಲಿಯ ಮಾರ್ಗದೇಶಿಗಳ ಮೇಳಗದ್ಯ, ಸಣ್ಣ ಪ್ರಕಾರಗಳಲ್ಲಿ ಬಳಕೆಯಾಗುವ ಚಿಕ್ಕಚಿಕ್ಕ ವಾಕ್ಯಗಳ ಮುಕ್ತಕಗದ್ಯ ಮತ್ತು ಮುಕ್ತಕಗಳನ್ನೇ ಮುಂದುವರಿಸಿದ ಮಾಲಾಗದ್ಯಗಳಲ್ಲಿ ಹಲವು ವಿಧ ಹಲವು ಹದಗಳು ಬೆಳೆದುನಿಂತಿವೆ. ಮಕ್ಕಳಿಗೆ ಸಂಬಂಧಪಟ್ಟ ಲಾಲಿ ಆಟಗಳಲ್ಲಿ ಬಳಕೆಯಾಗುವುದು ಗದ್ಯವೋ ಪದ್ಯವೋ ಎಂಬ ಸಂದೇಹ ಬರುವಷ್ಟು ಅವುಗಳ ಮಧ್ಯಸೀಮೆ ತೆಳುವಾಗಿದೆ.

ಪದ್ಯಕ್ಕೆ ಬೇಕಾಗುವ ಶಾಸ್ತ್ರಗಳ ಸೂತಕವಾಗಲೀ, ಕಟ್ಟುನಿಟ್ಟುಗಳ ಉಪಾಧಿಯಾಗಲೀ ಗದ್ಯಕ್ಕೆ ಬೇಕಿಲ್ಲ. ಹೀಗಾಗಿ ಇದು ಭೂಮಿ–ಬೀಜವಿಲ್ಲದೆ ನೀರಮೇಲೆ ಬೆಳೆವ ಅಂತರಗಂಗೆ ಜಾತಿಯದು. ಒಂದು ಎಳೆ ಇದ್ದರೆ ಸಾಕು, ಗದ್ಯ ಕೃಷಿಕಾರನ ನಿರೂಪಣ ರೀತಿ, ಕಲ್ಪಕಶಕ್ತಿ ಮೊದಲಾದವುಗಳನ್ನವಲಂಬಿಸಿ ಇದು ಅಲ್ಪದಲ್ಲಿ ಮುಗಿಯಬಹುದು, ಇಲ್ಲವೆ ಕಲ್ಪವನ್ನೇ ವ್ಯಾಪಿಸಬಹುದು. ಪದ್ಯ ಕೆಲವು ಸಲ ಕಟ್ಟುಹಾಕಿದ ಕುಂಬಳಕಾಯಿಯಾಗಬಹುದು, ಗದ್ಯಮಾತ್ರ ಕಟ್ಟುನಿಟ್ಟುಗಳಿಲ್ಲದ ಸಹಜಫಲ. ಮೇಲಾಗಿ ಪದ್ಯಕ್ಕಿಂತ ಹೆಚ್ಚು "ಸಹಜ ಜಾತಿ"ಯಾದ ಇದು ನಿತ್ಯ ಬಳಕೆಯಿಂದ ನಿತ್ಯ ಶಕ್ತಿಸಂಪನ್ನವಾಗಿ, ನಿತ್ಯ ಸಮಕಾಲೀನವಾಗಿ ನಡೆದು ಬರುತ್ತದೆ. ಆದಕ್ಕಾಗಿ ಜನಪದ ಗದ್ಯ,ಪದ್ಯ, ದೃಶ್ಯಗಳಲ್ಲಿ ಗದ್ಯ ಹೆಚ್ಚು ನವನವೋನ್ಮೇಷಶೀಲ, ಹೆಚ್ಚು ಪರಿಷ್ಕರಣಶೀಲ.

ಆಧುನಿಕ ಗದ್ಯವನ್ನು ಪಶ್ಚಿಮದ ಪ್ರಭಾವದಲ್ಲಿ ಬೆಳೆಸುತ್ತಿರುವ ನಮ್ಮ ವಿದ್ವಾಂಸರು ಜನಪದ ಗದ್ಯದಿಂದ ಪಡೆಯಬೇಕಾದ ಲಾಭ ಬಹಳಷ್ಟಿದೆ. "ಆಡುಮಾತನ್ನು ಗ್ರಾಂಥಿಕ ಭಾಷೆಯಲ್ಲಿ ಅಳವಡಿಸಿಕೊಂಡಿದ್ದಾದರೆ ಭಾಷೆಗೆ ಬಿಗಿ, ಬನಿ, ಬಂಡು, ಬೆಡಗು, ಬಿನ್ನಾಣಗಳು ತಾನಾಗಿಯೇ ಒದಗಿ, ಅದು ಸದಾ ನಿತ್ಯನೂತನವಾಗಿರುತ್ತದೆ, ಜೀವಂತವಾಗಿರುತ್ತದೆ. ಆಡುಮಾತಿನ ಪೊಗರು, ಹೊಳಪು, ಕೂರ್ಪು, ಕೆಚ್ಚು, ಜೀವಂತಿಕೆಗಳು ಗ್ರಾಂಥಿಕ ಭಾಷೆಗಿರುವುದಿಲ್ಲ..... ಈ ಅಕ್ಷಯ ನಿಧಿ ಸಾಹಿತಿಗಳ ಕೈಗೆ ದೊರೆತಾಗ ಕನ್ನಡ ಗದ್ಯ ಕಲ್ಪನೆಗೆ ಮೀರಿ ಪರಿಪುಷ್ಟಗೊಳ್ಳುತ್ತದೆ" ಎಂಬ ಪ್ರೊ. ದೇಜಗೌ ಮಾತಿನ ಹಿನ್ನೆಲೆಯಲ್ಲಿ ನೋಡಿದರೆ ಈ ಕ್ಷೇತ್ರದಲ್ಲಿ ನಡೆದಷ್ಟೂ ದಾರಿಯಿದೆ, ಪಡೆದಷ್ಟೂ ಲಾಭವಿದೆ ಎನಿಸುತ್ತದೆ.

★ ಎಂ. ಎಂ. ಕಲಬುರ್ಗಿ

ಅರವಿಂದ ಆಶ್ರಮ

ಆಶ್ರಮ ಎಂದ ಕೂಡಲೆ, ಸುಶಿಕ್ಷಿತರು ಅಭ್ಯಸಿಸಿದ ಕಾವ್ಯಗಳಲ್ಲಿ ವರ್ಣಿಸಿದಂತೆ "ಘೋರ ಕಾನನದೆಡೆ, ಸಿಂಹಮುಖ್ಯ ಮೃಗದಿಕ್ಕೆ"ಎಂಬ ಕಲ್ಪನೆಯುಂಟಾಗುವುದು ಸಹಜ ವಾಗಿದೆ. ಬಹಳವಾದರೆ ಆಧುನಿಕ ಆಶ್ರಮಂಗಳೆನಿಸಿದ ಸಾಬರಮತಿ ಆಶ್ರಮ, ರಮಣ ಆಶ್ರಮ, ಶ್ರೀರಾಮಕೃಷ್ಣಮಠ, ಸರ್ವೋದಯ ನಿಲಯಗಳ ಹೊಳಹು ತಲೆಯಲ್ಲಿ ನುಸುಳಬಹುದಾಗಿದೆ. ಆದರೆ ಶ್ರೀ ಅರವಿಂದ ಆಶ್ರಮವನ್ನು ನೋಡಿದಾಗ ಇದು, ಇನ್ನಾವುದೋ ರಹಸ್ಯಲೋಕದ ಸಂಘಟನೆಯೆಂದು ಸ್ಪಷ್ಟವಾಗಿ ಬಿಡುವದು. ಅದು ಭವ್ಯವಾದಂತೆ ನವ್ಯವೂ ದಿವ್ಯವೂ ಸಹ ಆಗಿದೆ.

ಮದ್ರಾಸದ ದಕ್ಷಿಣಕ್ಕೆ ಸುಮಾರು ನೂರು ಮೈಲು ಅಂತರದಲ್ಲಿ, ಸಮುದ್ರ ತೀರದಲ್ಲಿ ಫ್ರೆಂಚ್ ವಸಾಹತು ಆಗಿದ್ದ ಪಾಂಡಿಚೆರಿಯ ಪೂರ್ವಸಿಟ್ಟಿನಲ್ಲಿ ಶ್ರೀ ಅರವಿಂದ ಆಶ್ರಮವು ನೆಲೆಸಿದೆ. ಆ ಸ್ಥಳವು ಅಗಸ್ತ್ಯಋಷಿಯ ಕಾಲಕ್ಕೆ ವೇದಪುರಿಯೆನಿಸಿತ್ತೆಂದೂ, ಈಗ ಆಶ್ರಮದ ಮುಖ್ಯ ಕಟ್ಟಡವಿರುವ ಸ್ಥಳದಲ್ಲಿಯೇ ಅದು ವೇದಾಭ್ಯಾಸದ ಪಾಠ ಶಾಲೆಯಾಗಿತ್ತೆಂದೂ ಹೇಳುತ್ತಾರೆ. ಪಾಂಡಿಚೇರಿಯ ಪ್ರಶಾಲೆಯಲ್ಲಿ ಫ್ರೆಂಚ ಪ್ರಾಧ್ಯಾ ಪಕರಾಗಿದ್ದ ಜ್ಯುವೋ ಡ್ಯುಬ್ರೆಯುಲ್ ಎಂಬವರು ಸಂಶೋಧನದಿಂದ ಕಂಡು ಹಿಡಿ ದಿದ್ದಾರೆ. ಆದರೆ ಶ್ರೀ ಅರವಿಂದರು ಅಲ್ಲಿಗೆ ಬಂದು ನೆಲೆಸುವ ಹೊತ್ತಿಗೆ ಅದು ಮೃತ ನಗರವೇ ಆಗಿತ್ತು. ಶ್ರೀ ಅರವಿಂದರು ತಮ್ಮ ಸಾಧನೆಗಾಗಿ ಸ್ಮಶಾನವನ್ನೇ ಆರಿಸಿ ಕೊಂಡರೆಂದು ಹೇಳುವಂತಿತ್ತು. ಆದರೆ ಆ ಸ್ಮಶಾನದಲ್ಲಿ ಪಿಶಾಚಿಗಳು ಮಾತ್ರ ಇರಲಿಲ್ಲ. ಪಿಶಾಚಿ ಜೀವನ ನಡೆಸುವ ಪುಂಡುಪೋಕರಿಗಳೇ ಬೀಡು ಬಿಟ್ಟಿದ್ದರು. ಯಾವ ಬಗೆ ಯಿಂದಲಾದರೂ ಹಣ ಸಂಪಾದನೆ ಮಾಡುವದನ್ನೇ ಜೀವನೋದ್ದೇಶವೆಂದು ಬಗೆದ ಕೆಲ ವೊಂದು ಶ್ರೀಮಂತರ ಅಧೀನದಲ್ಲಿದ್ದ ಪುಂಡಪೋಕರು "ಬಂಡಾ"ಗಳೆನಿಸಿದ್ದರು. ಅವ ರಿಗೆ ಹೆದರಿಕೊಂಡು ಸಾರ್ವಜನಿಕರು, ಸಾಯಂಕಾಲವಾದ ಬಳಿಕ, ಮನೆಬಿಟ್ಟು ಹೊರ ಬೀಳುತ್ತಲೇ ಇರಲಿಲ್ಲ.

ಭಯಾನಕವಾದ ಅಂಥ ಸ್ಥಳಕ್ಕೆ ಶ್ರೀ ಅರವಿಂದರು ಪರಮೇಶ್ವರನ ಆದೇಶಾನುಸಾರ ವಾಗಿ ಇಬ್ಬರು-ಮೂವರು ಸಂಗಡಿಗರೊಂದಿಗೆ ೧೯೧೦ನೇ ಎಪ್ರೇಲ ೪ಕ್ಕೆ ಬಂದಿಳಿದರು. ಅವರೆಲ್ಲರೂ ಒಂದಿಲ್ಲೊಂದು ಸುಳ್ಳು ಹೆಸರಿನಲ್ಲಿ ಪುರಪ್ರವೇಶ ಮಾಡಿದರೆಂದು ತಿಳಿ ಯುತ್ತದೆ. ಜತೀಂದ್ರನಾಥ ಎನ್ನುವದು ಶ್ರೀ ಅರವಿಂದರ ಗುಪ್ತನಾಮವಾದರೆ, ಮಣೀಂದ್ರರಾಯ್ ಎನ್ನುವದು ಶ್ರೀ ನಲಿನೀಕಾಂತ ಗುಪ್ತರ ಗುಪ್ತನಾಮವಾಗಿತ್ತು. ಅದರಂತೆ ಉಳಿದ ಜೊತೆಗಾರರ ಹೆಸರೂ ಬದಲಾಗಿತ್ತು.

ಪಾಂಡೀಚೇರಿಯ ನಿವಾಸಿಗಳಾದ ಕ್ರಿಶ್ಚಿಯನ್ ಸಮಾಜದವರು ಆವರಿಗೆ ಸಹಾಯ ಸಹಾನುಭೂತಿಗಳನ್ನು ಸಾಕಷ್ಟು ನೀಡಿದರು. ಅದರಂತೆ ಫ್ರೆಂಚ ಸರಕಾರದವರು ಸಹ

ಅವರನ್ನು ರಾಷ್ಟ್ರೀಯ ನಿರಾಶ್ರಿತರೆಂಬ ಭಾವನೆಯಿಂದ ಕಂಡರೆಂದು ಹೇಳಲಾಗುತ್ತದೆ.

ಬ್ರಿಟಿಶರ ಕಣ್ಣಿನಲ್ಲಿ ಶ್ರೀ ಅರವಿಂದರು "ಅತಿಭಯಾನಕ ವ್ಯಕ್ತಿ"ಯೆನಿಸಿದರು. ಭಾರತದ ಸರ್ವ ಆಂದೋಲನದ ಮುಖ್ಯ ಕೀಲಿಯೇ ಅವರಾಗಿದ್ದಾರೆಂದು ಬಗೆಯಲಾಗಿತ್ತು. ಅಂತೆಯೇ ಅವರನ್ನು ಅಲ್ಲಿಂದೋಡಿಸಲು ಬ್ರಿಟಿಶ ಸರಕಾರವು ಸಾಧ್ಯವಿದ್ದ ಉಪಾಯಗಳನ್ನೆಲ್ಲ ಮಾಡಿತು. ಅವರನ್ನು ಹೊರಗಟ್ಟಲು ಫ್ರೆಂಚ ಸರಕಾರವನ್ನು ಪ್ರಚೋದಿಸಿತು. ಅವೆಷ್ಟೋ ಆಶೆ-ಆಮಿಷಗಳನ್ನು ಮುಂದೊಡ್ಡಿತು. ಆದರೆ ಪರಮ ಸಂಕಲ್ಪವನ್ನೇ ಆಧರಿಸಿದ್ದ ಶ್ರೀ ಅರವಿಂದರು, ಇಲ್ಲಿಂದ ಕದಲಲಾರೆ ಎಂದು ದೃಢ ನಿರ್ಧಾರದಿಂದ ನುಡಿದರು. ಆ ಮಾತಿಗೆ ಫ್ರೆಂಚ್ ಸರಕಾರವೂ ತಣ್ಣಗಾಯಿತು.

೧೯೧೪ನೇ ಮಾರ್ಚ ತಿಂಗಳಲ್ಲಿ ಫ್ರಾನ್ಸದೇಶದಿಂದ ಮೀರಾ ರಿಚರ್ಡ ಎಂಬ ಮಹಿಳೆಯು. ಶ್ರೀ ಅರವಿಂದರನ್ನು ಕಂಡು. ತನ್ನ ಮಾರ್ಗದರ್ಶಕರು ಇವರೇ ಎಂದು ಗುರುತಿಸಿದರು. ಮೀರಾ ರಿಚರ್ಡರೆಂದರೆ ಮಹಾಯೋಗಿನಿ. ತಪಸ್ವಿನಿ, ಹಲವು ರಹಸ್ಯ ವಿದ್ಯಾನಿಪುಣೆ; ಶಾಸ್ತ್ರ ಪಾರಂಗತೆ. ಸಂಸ್ಕೃತದಲ್ಲಿದ್ದ ಯೋಗಸೂತ್ರ, ಬ್ರಹ್ಮಸೂತ್ರ, ನಾರದ ಭಕ್ತಿಸೂತ್ರಗಳನ್ನು ಫ್ರೆಂಚ್ ಭಾಷೆಗೆ ಅನುವಾದಿಸುವ ಪಂಡಿತೆ. ಅಂಥ ಮಹಾಮಹಿಮಳಾದ ಮಹಾನುಭಾವಿಯು, ಶ್ರೀಅರವಿಂದರನ್ನು ಸಂದರ್ಶಿಸಿದ ಕೂಡಲೇ ಅವರ ಶ್ರೀ ಚರಣಗಳಲ್ಲಿ ತನ್ನ ಸರ್ವಸ್ವವನ್ನೆಲ್ಲ ಅರ್ಪಿಸಿ, ತಾನು ಅದೇ ಹುಟ್ಟಿಬಂದ ಹಸುಳೆಯಂತೆ ಚೊಕ್ಕ ಆಗಿ ಬಿಟ್ಟಳು. ಶ್ರೀ ಅರವಿಂದರನ್ನು ಗುರುದೇವನೆಂದು ಬಗೆದು ಮೊಟ್ಟಮೊದಲು ಗೌರವಿಸಿದವಳು ಆಕೆಯೇ. ತಮ್ಮ ಜೀವದುಸಿರೇ ಆಗಿರುವ ಸಮರ್ಪಣದ ಆದರ್ಶವನ್ನು ಮೀರಾ ರಿಚರ್ಡರಲ್ಲಿ ಕಂಡು ಸ್ವಯಂ ಅರವಿಂದರೇ ಬೆರಗಾದರು; ಅವರನ್ನು ಮಾತೆಯೆಂದು ಬಗೆದರು; ಗುರುತಿಸಿದರು. ಹೀಗೆ ಆ ಉಭಯರು ಅನಲಾನಿಲದಂತೆ ಸಂಗಳಿಸಿದರು.

"ಆರ್ಯ" ಇಂಗ್ಲೀಷ ಮಾಸಿಕವು ಶ್ರೀ ಅರವಿಂದರಿಂದ ಆರಂಭಗೊಳ್ಳುವದಕ್ಕೆ ಶ್ರೀ ಮೀರಾ ರಿಚರ್ಡರೇ ಕಾರಣರು. ಶ್ರೀ ಅರವಿಂದರು ತಮ್ಮ ನಾಲ್ಕುವರ್ಷಗಳ ಏಕಾಂತದ ಫಲವಾಗಿ ಪಡೆದ **ಅಧಿಮಾನಸ** ಎಂಬ ತತ್ತ್ವದಿಂದ ಪೂರಿತವಾದ ಲೇಖನಗಳನ್ನು ಪ್ರತಿ ತಿಂಗಳು ೬೪ ಪುಟಗಳಂತೆ ಆರು ವರುಷ ಸತತವಾಗಿ, ನಿಯಮಿತವಾಗಿ ಬರೆದರು. ಶ್ರೀಮಾತೆಯವರು ಪತ್ರಿಕೆಯ ವ್ಯಾವಹಾರಿಕ ಪಾರುಪತ್ಯವನ್ನು ನಿರ್ವಹಿಸಿದರು. ಅವರ ಫಲವಾಗಿಯೇ ಶ್ರೀ ಅರವಿಂದರ ಮಹದ್ಗ್ರಂಥಗಳು ಇಂಗ್ಲೀಷ್ ಭಾಷೆಯಲ್ಲಿ ಮೇರುಕೃತಿಯಾಗಿ ಕಂಗೊಳಿಸಿದವು. ದಿವ್ಯಜೀವನ, ಗೀತಾಪ್ರಬಂಧ, ಯೋಗಸಮನ್ವಯ, ವೇದರಹಸ್ಯ ಮೊದಲಾದವು. "ಸಾವಿತ್ರಿ" ಕಾವ್ಯವನ್ನು ಶ್ರೀ ಅರವಿಂದರು ಬಡೋದೆಯಲ್ಲಿದ್ದಾಗಲೇ ಬರೆಯಲು ಆರಂಭಿಸಿದ್ದರೂ. ಅದು ವಿವಿಧ ಮಾರ್ಪಾಡುಗಳನ್ನು ಹೊಂದುತ್ತ, ಅವರು ದೇಹವಿಡುವವರೆಗೂ ಬರವಣಿಗೆಯಲ್ಲಿ ಸಾಗಿಬಂದ ದಿವ್ಯಕಾವ್ಯವೆಂದು ಹೇಳಲಾಗುತ್ತದೆ.

ಪ್ರಪಂಚದ ಮಹಾಯುದ್ಧವು ಆರಂಭವಾದ್ದರಿಂದ ಬ್ರಿಟಿಶ-ಫ್ರೆಂಚ್ ಸರಕಾರಗಳ

ಒಪ್ಪಂದದ ಪ್ರಕಾರ ಶ್ರೀಮಾತೆಯವರು, ನಾಲ್ಕು ವರುಷ ಭಾರತವನ್ನು ಬಿಟ್ಟು ತೆರಳ ಬೇಕಾಯಿತು. ೧೯೨೦ ರಲ್ಲಿ ಮರಳಿ ಬಂದು ನೆಲೆಸಿದರು. ಈ ಅರ್ಧಶತಮಾನವನ್ನು ಮಿಕ್ಕಿದ ಈ ಅವಧಿಯಲ್ಲಿ ಅವರು ಪಾಂಡಿಚೇರಿಯನ್ನು ಬಿಟ್ಟು ಅಲ್ಲ, ಆಶ್ರಮವನ್ನು ಸಹ ಬಿಟ್ಟು ಕದಲದೆ ದೃಢವಾಗಿ ನೆಲೆಸಿದ್ದಾರೆ. ಮೂವರೋ ನಾಲ್ವರೋ ಇದ್ದ ಅರವಿಂದರ ಗುಂಪು, ಶ್ರೀಮಾತೆಯವರು ಮರಳಿ ಬರುವ ಹೊತ್ತಿಗೆ ೨೪ ಜನರಿಂದ ಕೂಡಿತ್ತು. ಅವರೆಲ್ಲರ ಊಟ, ವಸತಿ, ಸಾಧನಾನುಕೂಲತೆ, ಉದ್ದೇಶಸಾಫಲ್ಯಗಳ ಸಲುವಾಗಿ ಶ್ರೀಮಾತೆಯವರು ಮೇಲ್ವಿಚಾರಣೆ ವಹಿಸಿದರು. ಮೊದಮೊದಲು ಶ್ರೀ ನಲಿನೀಕಾಂತ ಗುಪ್ತರು ಬಾಣಸಿಗ ಕಾಯಕವನ್ನು ನಿರ್ವಹಿಸತೊಡಗಿದರು. ನಿತ್ಯದಡಿಗೆ ಅನ್ನವಾದರೆ, ವಾರದಲ್ಲಿ ಮೂರು ಸಾರೆ ಹುಗ್ಗಿ ಮಾಡುತ್ತಿದ್ದರಂತೆ. ಅಕ್ಕಿ, ಜೀರಮರಿ, ಗೆಣಸು ಇವೇ ಆ ಹುಗ್ಗಿಯ ಸಾಮಗ್ರಿ. ಬಾಂಬು ಮಾಡಿದ ಕೈಯಿಂದ ಅಡಿಗೆ ಮಾಡ ಬೇಕಾಗಿ ಬಂದುದು ಕಾಲಮಹಿಮೆಯೆನ್ನುತ್ತಾರೆ ಅವರು. ಬಿಜಯನಿ ತೊಪ್ಪಲುಪಲ್ಲೆ ಮಾಡುವುದರಲ್ಲಿ ನಿಪುಣನಂತೆ.

ಪಾಂಡಿಚೇರಿಗೆ ಬಂದ ಹೊಸದರಲ್ಲಿ ಶ್ರೀ ಅರವಿಂದರು ಸಾಕಷ್ಟು ಆರ್ಥಿಕ ತೊಂದರೆಯಲ್ಲಿ ದಿನಗಳನ್ನು ಕಳೆದರು. ಒಮ್ಮೊಮ್ಮೆ ಅವರಲ್ಲಿ ಎಂಟು ಆಣೆ ಸಹ ಶಿಲಕು ಇರುತ್ತಿರಲಿಲ್ಲವಂತೆ. ಚಂದ್ರನಗರದ ಶ್ರೀಮಂತರೊಬ್ಬರು ಕೊಡಮಾಡುವ ನಿಯಮಿತ ಸಹಾಯಧನ ಮಾತ್ರ ಮತಿಲಾಲರಾಯರಿಂದ ಬರುತ್ತಿತ್ತು. "ಮಾನವತ್ವದ ಮೇಲೆ ದೃಷ್ಟಿಯಿರಿಸಿ ೫೦ ರೂ.ಗಳನ್ನಾದರೂ ಕಳಿಸಬೇಕೆಂದು" ಬಬ್ಬ ಸ್ನೇಹಿತರಿಗೆ ಅರವಿಂದರು ಬರೆಯುವ ಪ್ರಸಂಗ ಒಮ್ಮೆ ಬಾರದೆ ಇರಲಿಲ್ಲ. ಸಿ. ಆರ್. ದಾಸರ "ಸಾಗರ ಸಂಗೀತ"ವನ್ನು ಭಾಷಾಂತರಿಸಿದ್ದಕ್ಕಾಗಿ ಅವರು ಒಂದು ಸಾವಿರ ರೂ.ಗಳನ್ನು ಕಳಿಸಿಕೊಟ್ಟಿದ್ದು ಉಂಟು.

ಆ ಮೂವರು–ನಾಲ್ವರು ಜೊತೆಗಾರರ ನಡುವೆ ಒಂದೇ ಕುರ್ಚಿ, ಒಂದೇ ಟೇಬಲ್, ಮೈಯೊರೆಸಿಕೊಳ್ಳುವ ಪಾವುಡ ಒಂದೇ. ಎಲ್ಲರಿಗಿಂತ ಹಿಂದುಗಡೆ ಸ್ನಾನ ಮಾಡುವ ಅರವಿಂದರು, ಎಲ್ಲರೂ ಒರೆಸಿಕೊಂಡಿಟ್ಟ ಪಾವುಡದಿಂದ ಮೈಯೊರಿಸಿ ಕೊಳ್ಳುತ್ತಿದ್ದರು. ಜೊತೆಗಾರರು ಆಗಿನ್ನು ಗುರುಶಿಷ್ಯರೆಂಬ ಭೇದವನ್ನು ಅರಿತಿರಲಿಲ್ಲ ವಂತೆ. ಎಲ್ಲರೂ ಸಮಾನಸ್ಕಂದ ಮಿತ್ರರೆಂದೇ ಬಗೆದಿದ್ದರು. ಶ್ರೀ ಕೃಷ್ಣನೊಡನೆ ಪಾಂಡವರ ಬಳಕೆಯಿದ್ದಂತೆ ಅವರೆಲ್ಲರೂ ನಾಲ್ಕಾರು ರೂ. ತಿಂಗಳ ಬಾಡಿಗೆಯ ಮನೆಯಲ್ಲಿ ಇರುತ್ತಿದ್ದರು.

೧೯೧೨ ರಲ್ಲಿಯೇ ಶ್ರೀ ಅರವಿಂದರ ಹುಟ್ಟುಹಬ್ಬ ಆಚರಿಸುವದಕ್ಕೆ ಆರಂಭ ವಾಯಿತು. ೧೯೨೦ ರಲ್ಲಿ ಸಾಮೂಹಿಕ ಧ್ಯಾನ ಮೊದಲಾದದ್ದು. ಶ್ರೀಮಾತೆಯವರು ಪ್ರತಿ ರವಿವಾರ ಮಂಡಳಿಯನ್ನು ತಮ್ಮಲ್ಲಿಗೆ ಆಮಂತ್ರಿಸುತ್ತಿದ್ದರು. ರಾತ್ರಿ ೯–೧೧ ಗಂಟೆಯವರೆಗೆ ಚರ್ಚೆ ನಡೆಯುತ್ತಿತ್ತು. ಪ್ರತಿ ದಿನ ೧೪ ಹೊತ್ತಿಗೆ ಶ್ರೀ ತಾಯಿಯವರು ಕೊಬ್ಬರಿಯಲ್ಲಿ ಮಾಡಿದ ತಿನಿಸು ತೆಗೆದುಕೊಂಡು, ಶ್ರೀ ಅರವಿಂದರಿಗೆ ಎಡೆ ಬಡಿಸು

ತ್ತಿದ್ದರು. ಕಾಫಿಯನ್ನೋ ಕೋಕೋವನ್ನೋ ಅವರಲ್ಲಿಯೇ ಮಾಡಿಕೊಡುತ್ತಿದ್ದರು.

ಶ್ರೀ ಅರವಿಂದರು ತಮ್ಮ ಜೊತೆಗಾರರಿಗೆ ವೇದಾಭ್ಯಾಸ ಮಾಡಿಸಿದರು. ಮೊದಲಿಗೆ ಮೂಲ ಮಂತ್ರವನ್ನು ಓದಿ ಬಿಟ್ಟು, ಬಳಿಕ ಬಿಡಿಶಬ್ದಗಳ ಅರ್ಥ ವಿವರಿಸಿ, ಆ ಹೊತ್ತಿಗೆ ಹೊಳೆದ ಸಾರಾಂಶವನ್ನು ಹೇಳಿ ಬರೆಯಿಸುತ್ತ—ಸದ್ಯಕ್ಕೆ ಇದೇ ಅರ್ಥವನ್ನು ಗ್ರಹಿಸಿಕೊಳ್ಳೋಣ ಎಂದು ಹೇಳುತ್ತಿದ್ದರು. ಗ್ರೀಕ್, ಲ್ಯಾಟಿನ್, ಫ್ರೆಂಚ್ ಮೊದಲಾದ ಭಾಷೆಗಳನ್ನೂ ಕಲಿಸಿದರಂತೆ. ಅವರ ಅಭ್ಯಾಸ ಪದ್ಧತಿಯು ಬಾಲಬೋಧಿನಿಯಿಂದ ಆರಂಭವಾಗದೆ. ಆ ಆ ಭಾಷೆಯಲ್ಲಿ ಶ್ರೇಷ್ಠವೆನಿಸಿದ ಗ್ರಂಥವನ್ನೇ ಓದುವುದರಿಂದ ಮೊದಲಾಗುತ್ತಿದ್ದಿತಂತೆ. ಇದೊಂದು ಪ್ರೌಢಶಿಕ್ಷಣಕ್ಕೆ ಮಾದರಿ. ಶ್ರೀತಾಯಿಯವರು ೨ ನೇ ಸಾರೆ ಪಾಂಡಿಚೇರಿಗೆ ಬರುವವರೆಗೆ ಶ್ರೀ ಅರವಿಂದರ ಈ ಶಿಕ್ಷಣ ಕಾರ್ಯವು ಸಾಗಿಯೇ ಇತ್ತು. ಮುಂದೆ ಶ್ರೀ ಅರವಿಂದರನ್ನು ಗುರುಪೀಠದಲ್ಲಿ ಕುಳ್ಳಿರಿಸಿ, ಗೌರವಿಸುವ ಆದರ್ಶವನ್ನು ಶ್ರೀಮಾತೆ ನಡೆದುಕಲಿಸಿದರು.

ಶ್ರೀ ಅರವಿಂದರ ನಿತ್ಯೋಪಯೋಗದ ಪುಸ್ತಕಗಳನ್ನು ಬಿಟ್ಟರೆ. ಇನ್ನಾವ ಪುಸ್ತಕವೂ ಅವರಲ್ಲಿ ಇರಲಿಲ್ಲ. ಬಹಳವಾದರೆ ತಿಂಗಳಿಗೆ ೧೦ ರೂ. ಮಾತ್ರ ಪುಸ್ತಕಗಳಿಗಾಗಿ ಖರ್ಚುಮಾಡಲು ಸಾಧ್ಯವಿತ್ತು. ಎರಡಾಣೆಗಿಂತ ಕಡಿಮೆ ಬೆಲೆಯ ಪುಸ್ತಕಗಳನ್ನು ಮಾಲಗುಜರಿಯಲ್ಲಿ ಕೊಂಡುತರುತ್ತಿದ್ದರು. ಅಂಥ ಪುಸ್ತಕಗಳು ನೂರು ಆದವು. ಬೇರೆಯವರಿಂದ ಕಾಣಿಕೆಯಾಗಿ ಕೆಲವು ಪುಸ್ತಕಗಳು ಬಂದವು. ಅವುಗಳನ್ನೆಲ್ಲ ಇಡಲು ಕಪಾಟೆಲ್ಲಿ? ಗಳುಗಳನ್ನು ನಿಲ್ಲಿಸಿ ಮಂಡನ ಮಾಡಿದ್ದರಿಂದ ನೆಲದ ಮೇಲೆಯೇ ಒರಗಿಕೊಂಡಿದ್ದ ಸಾಹಿತ್ಯಸರಸ್ವತಿಗೆ ಎಂಥದೋ ಒಂದು ಗದ್ದುಗೆ ಆಯಿತು.

ಶ್ರೀಮಾತೆಯವರು ಬಂದು ಆರು ವರ್ಷ ಕಳೆಯುವ ಹೊತ್ತಿಗೆ ಶ್ರೀಅರವಿಂದರು ಸಂಪೂರ್ಣ ಸಾಕ್ಷಾತ್ಕಾರವನ್ನು ಗಳಿಸಿದರು. ಅಂದರೆ ಅವರಿಗೆ ಅಧಿಮಾನಸ ಸಿದ್ಧಿಯಾಯಿತು. ಅಧಿಮಾನಸ ಸಿದ್ಧಿಯೆಂದರೆ ಶ್ರೀಕೃಷ್ಣಾವತರಣ. ಅಂದಿನಿಂದಲೆ (೧೯೨೬) ಅರವಿಂದರು ಶ್ರೀ ಅರವಿಂದರಾದರು. ಅದು ಸಂಪೂರ್ಣ ಸಾಕ್ಷಾತ್ಕಾರವೆನಿಸಿದರೂ, ಅವರು ಉದ್ದೇಶಿಸಿದ ಅತಿಮಾನಸ ಸಾಧನಕ್ಕೆ ಆರಂಭ ಬಿಂದುವಾಯಿತಂತೆ. ೧೯೨೬ ನೇ ನವಂಬರ ೨೪ ರಂದು ಶಿಷ್ಯ ಸಾಧಕರನ್ನೆಲ್ಲ ಶ್ರೀಮಾತೆಯವರಿಗೊಪ್ಪಿಸಿ. ತಾವು ಹೆಚ್ಚಿನ ಸಾಧನಕ್ಕಾಗಿ ಕಟ್ಟೇಕಾಂತಕ್ಕೆ ತೆರಳಿದರು.

ಶಿಷ್ಯ–ಸಾಧಕರ ಸಂಖ್ಯೆ ಬೆಳೆಯುತ್ತಬಂದಿತು. ಅವರೆಲ್ಲ ಒಂದೆಡೆ ಸೇರಿ ಊಟ ಮಾಡಲು ಭೋಜನಶಾಲೆ, ಅದಕ್ಕೆ ಅನಿವಾರ್ಯವಾದ ಪಾಕಶಾಲೆ ಮಾಡಿಕೊಳ್ಳಬೇಕಾಯಿತು. ಬೀಸಿದ ಹಿಟ್ಟು, ಹಿಟ್ಟಿನಿಂದ ಬ್ರೆಡ್ಡು, ಬ್ರೆಡ್ಡಿನೊಡನೆ ಕಾಯಿಪಲ್ಲೆ–ಹೈನು ಇವುಗಳನ್ನು ಸಂಗಳಿಸುವ ಹಾಗೂ ಸ್ವಚ್ಛವಾದ ನೀರು ಒದಗಿಸುವ ಏರ್ಪಾಡುಗಳು ಕಾಣಿಸಿಕೊಂಡವು. ಊಟದ ತರ್ವಾಯ ಬಟ್ಟೆ, ಹಾಸಿಗೆ, ಹೊದಿಕೆ. ಬಟ್ಟೆಗಳನ್ನು ಹೊಲಿಯುವುದಕ್ಕೆ ಸಿಂಪಿಗ, ಅವುಗಳನ್ನು ಒಗೆಯುವುದಕ್ಕೆ ಅಗಸ ಬೇಕಾಯಿತು. ಅದಕ್ಕಾಗಿ ಬಹಳ ಹಣ ವೆಚ್ಚಮಾಡುವ ಪ್ರಸಂಗ ತಪ್ಪಿಸುವುದು ಅನಿವಾರ್ಯ

ವಾಯಿತು. ಬಟ್ಟೆ ಹೊಲಿಯುವುದು-ತೊಳೆಯುವುದು, ಸಹಕಾರ ಮಾಡುವುದು ಮೊದಲಾದ ಸೇವಾ ವಿಭಾಗಗಳಂತೆ. ಕಾಲ್ಮರೆ ಹೊಲಿಯುವ ಸೇವಾವಿಭಾಗವೂ ರೂಪುಗೊಂಡಿತು.

ಚಿಕ್ಕ ಮನೆತನದ ರೂಪದಲ್ಲಿದ್ದ ಆಶ್ರಮವು ವಿಸ್ತಾರಗೊಂಡು ಮಹಾಮನೆತನದ ಸ್ವರೂಪವನ್ನು ತಳೆಯುತ್ತ ಬಂದ ಹಾಗೆ, ಹೊಸಮನೆಯನ್ನು ಕಟ್ಟುವ ಹಾಗೂ ಹಳೆಯದನ್ನು ದುರಸ್ತಿಮಾಡುವ ಕಾಯಕಗಳೂ, ಮನೆಕಟ್ಟುವದಕ್ಕೆ ಬೇಕಾದ ಇಟ್ಟಂಗಿ-ಸಿಮೆಂಟ ಮಾಡುವ ಕಾಯಕಗಳೂ. ಮನೆಗೆ ಸ್ವಚ್ಛತೆ ಬೆಳಕುಗಳಂತೆ ಆಧ್ಯಾತ್ಮಿಕ ಪರಿಸರವನ್ನು ಒದಗಿಸುವವರೂ ಮುಂದೆ ಬಂದರು. ಹೂ ಮತ್ತು ಸುಗಂಧದ್ರವ್ಯ ಮೊದಲಾದವುಗಳನ್ನು ಹೆರರಿಂದ ಪಡೆಯುವ ಖರ್ಚಿನಲ್ಲಿ ಅವುಗಳನ್ನು ನಿರ್ಮಿಸಬಲ್ಲ ಡಿಪಾರ್ಟಡಿನಲ್ಲಿ ಆ ಆ ಉದ್ಯೋಗಿಗಳೇ ನಿರ್ಮಾಣಗೊಂಡರು.

ಶ್ರೀಮಾತೆಯವರು ಬಂದಕೂಡಲೇ, ಅರವಿಂದರ ಮಂಡಲಿಗೆ ಶಿಸ್ತು, ಸ್ವಚ್ಛತೆ, ಅಚ್ಚುಕಟ್ಟಾಗಿ ಸಾಮಾನುಗಳನ್ನು ಕಾಪಾಡುವ ಬಳಸುವ ರೀತಿಗಳನ್ನೇ ಕಲಿಸಿದರೆನ್ನಬೇಕು. ಅದಿಂದು ಪರಿಪಾಕಗೊಂಡು ಎಲ್ಲೆಲ್ಲಿಯೂ ಸ್ವಚ್ಛತೆ, ನಿಸ್ತಬ್ಧವಾದ ಶಿಸ್ತು ಕಂಡುಬರುತ್ತಿದೆ. ಶ್ರೀತಾಯಿಯವರೇ ಒಪ್ಪಿಸಿಕೊಟ್ಟಿರಲಿ ಅಥವಾ ತಾವೇ ಆಯ್ದುಕೊಂಡಿರಲಿ ಅಥವಾ ಕೆಲಸವಿದ್ದರೂ, ವಹಿಸಿಕೊಂಡವರು ಅದನ್ನು ಪೂಜೆಯಂತೆ ನಿರ್ವಹಿಸುತ್ತಾರೆ. ಶ್ರೀಮಾತೆಯವರ ಕೆಲಸವೆಂದರೆ ಶರೀರದಿಂದ ಮಾಡಿದ ಪ್ರಾರ್ಥನೆಯೆಂದು ತಿಳಿಯಲಾಗುತ್ತದೆ. "ಯಾವಾಗಲೂ ನಿಮ್ಮನ್ನು ಶ್ರೀಮಾತೆ ನೋಡುತ್ತಿದ್ದಾರೆಂದು ಬಗೆದು ವರ್ತಿಸಿರಿ. ಯಾಕಂದರೆ, ನಿಜವಾಗಿಯೂ ಆಕೆ ನಿಮ್ಮನ್ನು ನೋಡುತ್ತಿರುತ್ತಾಳೆ" ಎಂಬ ವಾಕ್ಯದ ಕೆಳಗೆ **ಶ್ರೀ ಅರವಿಂದರು** ಎಂಬ ಹೆಸರನ್ನು ಓದಿದಕೂಡಲೇ ಎಂಥವನಾದರೂ ಅಂತರ್ಮುಖನಾಗುತ್ತಾನೆ.

ಮೊದಲಯುದ್ಧ ಆರಂಭವಾಗುವ ಹೊತ್ತಿಗೆ, ಸಂಪಾದನೆಗಾಗಿ ವ್ಯಾಪಾರವನ್ನು ಶ್ರೀಮಾತೆ ಕಲ್ಪಿಸಿಕೊಟ್ಟಿದ್ದರು. ಯುದ್ಧ ಮುಗಿಯುವವರೆಗೆ ಜಪಾನಿನಲ್ಲಿಯೇ ನಿಂತುಕೊಂಡ ಶ್ರೀಮಾತೆ ಆ ವ್ಯವಹಾರಕ್ಕೆ ಸಂಬಂಧಿಸಿದ ಪತ್ರವ್ಯವಹಾರವನ್ನು ಸಾಗಿಸಿಯೇ ಇದ್ದರು.

ಅಗತ್ಯವಿರುವ ಸಾಮಾನುಗಳನ್ನು ಕೊಳ್ಳುವವರೇ ಬೇರೆ; ಅವುಗಳನ್ನು ಸಂಗ್ರಹಿಸುವವರೇ ಬೇರೆ. ಅದರಂತೆ ಮಾರಾಟ ಮಾಡುವವರೂ ಬೇರೆ ಇದ್ದಾರೆ. ಕಿರಾಣಿ, ಸ್ಟೇಶನರಿ, ಪುಸ್ತಕ. ಕಾಗದ ಇತ್ಯಾದಿ. ವಿದ್ಯಾರ್ಥಿಗಳಿಗಾಗಿ ವಸತಿ ಗೃಹಗಳಿದ್ದರೆ. ಸಂದರ್ಶಕರಿಗಾಗಿ ಆಶ್ರಮದಲ್ಲಿ ಉಪಹಾರಗೃಹಗಳೂ ಇವೆ. ಅತಿಥಿಗಳನ್ನು ಸ್ವಾಗತಿಸಿ, ಅತಿಥಿಗೃಹಕ್ಕೆ ಕಳಿಸುವ ಡಿಪಾರ್ಟಡಿನಲ್ಲಿ ವಾಹನ ವಿಭಾಗವೂ ಬರುತ್ತದೆ. ಆಶ್ರಮದ್ದೇ ಆದ ಅಂಚೆಕಟ್ಟೆಯಿದೆ ; ಬ್ಯಾಂಕು ಇದೆ; ವರ್ಕಶಾಪ್ ಇದೆ.

ನಾಟ್ಯ, ಸಂಗೀತ. ನೃತ್ಯ. ಚಿತ್ರಕಲೆಗಳಂತೆ ಹೆಣಿಕೆ ಕಸೂತಿಗಳ ಕಾಯಕವು ಅಗಾಧವಾದ ರೀತಿಯಲ್ಲಿ ಪರಿಣತಿ ಹೊಂದಿದೆ. ಒಟ್ಟಿನಲ್ಲಿ ಶ್ರೀ ಅರವಿಂದ ಆಶ್ರಮವು ಜಗತ್ತಿನ

ಎಲ್ಲ ವಿಕಾಸಶೀಲ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆಯಬಲ್ಲುದಾಗಿದೆ.

ಧ್ಯಾನ – ಪ್ರಾರ್ಥನೆ ಎಲ್ಲಿ ನಡೆಯುವವೋ ತಿಳಿಯದು. ಆದರೆ ಸಾಧಕರು ತಂತಮ್ಮ ಉದ್ಯೋಗಗಳಲ್ಲಿ ತನ್ಮಯರಾಗಿದ್ದನ್ನು ಮಾತ್ರ ಎಲ್ಲೆಲ್ಲಿಯೂ ಕಾಣುವೆವು. ಕಾರ್ಯಕ್ಕೆ ಪ್ರೇರಣೆ ಮಾತ್ರ ಕೊಡುವ ಮಾತು ಎಲ್ಲಿಯೂ ಕೇಳಿಬರುವದಿಲ್ಲ ; ಕಾರ್ಯದಲ್ಲಿ ನಿರತಗೊಳಿಸಿದ ಮೌನ ಮಾತ್ರ ಎಲ್ಲೆಲ್ಲಿಯೂ ಕಂಡು ಬರುವದು.

ಕಾಯಕವು ಕಾಯದಿಂದ ಮಾಡಿದ ಪ್ರಾರ್ಥನೆ ಎನಿಸಿದಂತೆ, ತರಬೇತಿ ಹೊಂದಿದ ಕಾಯುವು ದೇವಮಂದಿರವನ್ನಾಗಿ ಅಳವಡಿಸಿಕೊಳ್ಳುವ ಎತ್ತುಗಡೆಯ ಪರಿಣಾಮವೆನಿಸುತ್ತದೆ.

ಪೌರ್ವಾತ್ಯ – ಪಾಶ್ಚಾತ್ಯರೆನ್ನದೆ, ಬಾಲಕರು – ವೃದ್ಧರು ಎನ್ನದೆ, ಸ್ತ್ರೀಯರು – ಪುರುಷರು ಎನ್ನದೆ, ಸುಶಿಕ್ಷಿತರು–ಅಶಿಕ್ಷಿತರು ಎಂಬ ಭೇದಭಾವವನ್ನು ಮರೆಯುವದಕ್ಕೆ ಯಾವ ಪರಿಸರವು ಬೇಕಾಗುವುದೋ ಆ ಪರಿಸರವು ಆಧ್ಯಾತ್ಮಿಕ ಪರಂಪರೆಯಿಂದಲ್ಲದೆ ಇನ್ನಿತರಿಂದಲೂ ಪ್ರಾಪ್ತವಾಗಲಾರದೆಂದು ಕಂಡುಬರುವದು. ಜಾತ್ಯತೀತತೆ ಬೇಕೆ, ಬನ್ನಿ ಶ್ರೀ ಅರವಿಂದ ಆಶ್ರಮಕ್ಕೆ. ಅನೇಕರಲ್ಲಿ ಏಕತೆಯನ್ನು ಸಾಧಿಸಿದ ಭಾವೈಕ್ಯ ಬೇಕೆ. ಉದಾಹರಣೆಯನ್ನು ಶ್ರೀ ಅರವಿಂದ ಆಶ್ರಮದಲ್ಲಿ ಮಾತ್ರ ಧಾರಾಳವಾಗಿ ಕಾಣಸಿಗುವದು.

೧೯೨೬ ರಿಂದ ಅತಿಮಾನಸಕ್ಕಾಗಿ ಸಾಧನೆ ಆರಂಭಿಸಿದ ಶ್ರೀ ಅರವಿಂದರು ಅದನ್ನು ಪಡೆಯುವದಕ್ಕೆ ಹನ್ನೆರಡು ವರ್ಷ ಬೇಕಾದವೆಂದೂ. ಆ ಬಳಿಕ ಪಡೆದುದನ್ನು ಮೈಗೂಡಿಸಿಕೊಳ್ಳುವದಕ್ಕೆ ಮುಂದಿನ ಹನ್ನೆರಡು ವರುಷ ಕಳೆಯಬೇಕಾಯಿತೆಂದೂ ಹೇಳಲಾಗುತ್ತದೆ. ಆ ಅವಧಿಯಲ್ಲಿ ಆಶ್ರಮದ ಸಾಧಕರಿಗೂ, ಹೊರಗಿನ ಭಕ್ತರಿಗೂ ವರ್ಷದಲ್ಲಿ ನಾಲ್ಕುಸಾರೆ ಮಾತ್ರ ದರ್ಶನ ಕೊಡುವ ಏರ್ಪಾಡು ಮಾಡಿದರು. ಶ್ರೀ ಅರವಿಂದರ ಹುಟ್ಟುಹಬ್ಬ (ಆಗಸ್ಟ ೧೫). ಶ್ರೀ ಮಾತೆಯವರ ಹುಟ್ಟುಹಬ್ಬ (ಫೆಬ್ರುವರಿ ೨೧). ಶ್ರೀ ಅರವಿಂದರ ಸಿದ್ಧಿಯ ದಿನ (ನವಂಬರ ೨೪). ಶ್ರೀಮಾತೆಯವರು ಆಶ್ರಮದಲ್ಲಿ ಕಾಯಂ ನೆಲೆಸಿದ ದಿನ (ಏಪ್ರೀಲ ೨೪).

೧೯೨೬ ರಲ್ಲಿ ಆಶ್ರಮವನ್ನು ಶ್ರೀ ತಾಯಿಯವರಿಗೆ ಒಪ್ಪಿಸಿ, ತಾವು ಕಟ್ಟೇಕಾಂತಕ್ಕೆ ತೆರಳಿದಂತೆ, ೧೯೫೦ ರಲ್ಲಿ ಇನ್ನೂ ಹೆಚ್ಚಿನ ಹೊಣೆಗಾರಿಕೆಯನ್ನು ಶ್ರೀಮಾತೆಯವರಿಗೆ ಬಿಟ್ಟುಕೊಟ್ಟು ಶ್ರೀ ಅರವಿಂದರು ವಿದೇಹಿಯಾಗಿ ನಿಂತು ಅವರನ್ನು ಬೆಂಬಲಿಸುತ್ತಿದ್ದಾರೆ; ಹಿಂಬಾಲಿಸುತ್ತಿದ್ದಾರೆ. ಮುಂದೆ ಆರೇ ವರ್ಷಗಳಲ್ಲಿ ಅತಿಮಾನಸದ ಅವತರಣವು ಸಾಧ್ಯವಾಗುವದಕ್ಕೆ ಶ್ರೀ ಅರವಿಂದರಂತೆ ಶ್ರೀ ಮಾತೆಯವರೂ ಕಾರಣರಾಗಿದ್ದಾರೆ. (೧೯೫೬ ನೇ ಫೆಬ್ರುವರಿ ೨೯). ಅಂದು ಘಟಿಸಿದ್ದು ಕನಸೂ ಅಲ್ಲ. ಕನಸೂ ಅಲ್ಲ ; ಘಟನೆ. ಒದಗಿಬಂದ ಘಟನೆ ಅಲ್ಲ, ಕಣ್ಣಿಗೆ ಕಟ್ಟಿದ ಪರಿಣಾಮ. ಶಿಷ್ಯ ಸಮೂಹದೊಂದಿಗೆ ಧ್ಯಾನಸ್ಥರಾದಾಗ (ಸಾಯಂಕಾಲಕ್ಕೆ) ತಾಯಿಯವರಿಗೆ ಒಂದು ಬಂಗಾರದ ಹೆಬ್ಬಾಗಿಲು ಕಾಣಿಸಿತು. ಸನಿಹಕ್ಕೆ ಹೋಗಿ ನೋಡಿದರೆ ಬಂಗಾರದ

ಕದಗಳನ್ನು ಭದ್ರವಾಗಿ ಹಾಕಲಾಗಿತ್ತು. ಅದು ದಿವ್ಯಪ್ರವಾಹವೊಂದನ್ನು ತಡೆದು ನಿಲ್ಲಿಸಿತ್ತು. "ಸಮಯ ಪ್ರಾಪ್ತವಾಗಿದೆ" ಎಂಬ ಶ್ರೀ ಅರವಿಂದ ವಾಣಿ ಕೇಳಿಸಲು, ಅಲ್ಲಿಯೇ ಬಿದ್ದ ಸಮಟಿಗೆಯನ್ನೆತ್ತಿ ಶ್ರೀ ತಾಯಿಯವರು ಕದಗಳ ಮೇಲೆ ಬಲವಾದ ಏಟುಕೊಟ್ಟರು. ಅದೊಂದೇ ಏಟಿಗೆ ಕದಗಳೊಡೆದು ಬಿದ್ದವು. ತಡೆದು ನಿಂತ ಸ್ವರ್ಣಮಯ ಪ್ರವಾಹವು ಕೂಡಲೇ ಘೋರ್ಗರೆಯುತ್ತ ಹರಿಬಿದ್ದಿತು. ನಿಮಿಷದಲ್ಲಿಯೇ ಆ ಪ್ರವಾಹವು ಎಲ್ಲೆಲ್ಲಿಯೋ ಪ್ರವಹಿಸಿ ತಾನೇತಾನಾಗಿ ನಿಂತಿತು. ಅದೇ ಅತಿಮಾನಸ ಶಕ್ತಿಯ ಅವತರಣವೆಂದೂ, ಅದರ ಪರಿಣಾಮವು ಭೂಮಿಯ ಮೇಲಿನ ನಾಲ್ಕಾರು ಜನರಿಗೆ ಮಾತ್ರ ಗೋಚರಿಸಿತೆಂದೂ ಅತಿಮಾನಸ ಶಕ್ತಿಯ ಕಾರ್ಯವು ಜಗತ್ತಿನಲ್ಲಿ ಅಂದೇ ಆರಂಭವಾಗಿ ಬಿಟ್ಟಿತೆಂದೂ ಹೇಳಲಾಗುತ್ತದೆ.

ಅದು ಈ ವರೆಗೆ ಭೂಮಿಯ ಮೇಲಿನ ಅನೇಕ ಮಾರ್ಪಾಡುಗಳಿಗೆ ಕಾರಣವಾಗಿದೆ. ಭಾವೈಕ್ಯ-ಜಾತ್ಯತೀತತೆಗಳನ್ನು ಸಾಧಿಸಿ ತೋರಿಸಿದ ಶ್ರೀ ಅರವಿಂದರ ಆಶ್ರಮದಂತೆ, ಅರೋವಿಲೆ ಪಟ್ಟಣವು ಸಂಪೂರ್ಣ ನಿರ್ಮಾಣವಾಗಿ ಮಾನವೈಕ್ಯವನ್ನು ಸಾಧಿಸಿ ತೋರಿಸುವ ಉದಾಹರಣವಾಗುವದರಲ್ಲಿ ಸಂಶಯವೇನು ?

ಯಾರ ಸಾಧನದಿಂದ ದೊರೆತ ಫಲವಾದರೂ ಅದು ಇಡಿಯ ಪೃಥ್ವಿಯ ವಿಕಾಸಕ್ಕೆ ಕಾರಣವಾಗುವ ಪೂರ್ಣಯೋಗವನ್ನು ಆವಿಷ್ಕಾರಗೊಳಿಸಿದ ಶ್ರೀ ಅರವಿಂದರ ಆಶ್ರಮವನ್ನು ಕಣ್ಣಾರೆ ಕಾಣದಿದ್ದರೆ— "ನಿನ್ನ ನೋಡದ ಈ ಜನ್ಮ ವ್ಯರ್ಥ" ಅನ್ನಬೇಕಾಗುವದು.

★ ಸಿಂಪಿ ಲಿಂಗಣ್ಣ

ಕೆಳದಿ ನೃಪವಿಜಯ

(ಒಂದು ವಿಶ್ಲೇಷಣೆ)

ಮೈಸೂರು ವಿಶ್ವವಿದ್ಯಾನಿಲಯದವರು ಕನ್ನಡ ಅಧ್ಯಯನ ಸಂಸ್ಥೆಯಿಂದ ಲಿಂಗಣ್ಣ ಕವಿ ವಿರಚಿತ "ಕೆಳದಿ ನೃಪವಿಜಯ"ದ ಪುನರ್ಮುದ್ರಣ ಕಾರ್ಯವನ್ನೂ, ಬೆಂಗಳೂರು ವಿಶ್ವವಿದ್ಯಾಲಯದವರು ಈ ಕೃತಿಯ ಪರಿಷ್ಕರಣೆಯನ್ನೂ ಕೈಗೊಳ್ಳಲಿರುವುದಾಗಿ ತಿಳಿದುಬಂದಿರುವುದರಿಂದ[೧] ಹಲವು ಗಮನಾರ್ಹ ಅಂಶಗಳನ್ನು ಸೂಕ್ಷ್ಮವರಿತ ಈ ನಿಟ್ಟಿನಲ್ಲಿ ಈ ಗ್ರಂಥವನ್ನು ಕುರಿತು ನನ್ನ ಅಲ್ಪಮತಿಗೆ ತೋರಿದ ಸಂಗತಿಯನ್ನು ಕ್ರೋಢೀಕರಿಸುವ ಮೂಲಕ ವಿಶ್ಲೇಷಿಸಿದಲ್ಲಿ ಅಪ್ರಕೃತವಾಗಲಾರದೆಂದು ಭಾವಿಸಿ ಮಾನ್ಯ ವಿದ್ವಾಂಸರ ಕ್ಷಮೆ ಬೇಡಿ ಈ ಲೇಖನವನ್ನು ಪ್ರಾರಂಭಿಸಿದ್ದೇನೆ.

"ಕೆಳದಿ ನೃಪವಿಜಯ"ವು ಕೆಳದಿ ಅರಸರ ಕಾಲದಲ್ಲಿನ ಐತಿಹಾಸಿಕ ಘಟನೆಗಳನ್ನು ಯಥಾವತ್ತಾಗಿ ನಿರೂಪಿಸುವ ಮಹತ್ವಪೂರ್ಣ ಗ್ರಂಥಗಳಲ್ಲೊಂದು. ಇದು ಕಾವ್ಯಾಂಶ ದಿಂದ ಕೂಡಿದ್ದರೂ ಐತಿಹಾಸಿಕ ಸತ್ಯಾಂಶಗಳನ್ನು ತಳ್ಳಿಹಾಕದಷ್ಟು ಮಾಹಿತಿಗಳನ್ನು ಆಧರಿಸಿಕೊಂಡಿರುತ್ತದೆ. ಕ್ರಿ. ಶ. ೧೭೬೩ ರಿಂದ ೧೮೦೪ ರ ಮಧ್ಯಭಾಗದಲ್ಲಿ ರಚಿಸಲ್ಪಟ್ಟಿರಬಹುದೆಂದು ತೋರುವ ಈ ಕೃತಿಯಿಂದ, ಐತಿಹಾಸಿಕ ಘಟನೆಗಳನ್ನು ಇಷ್ಟು ಯಥಾರ್ಥವಾಗಿ ವಿವರಿಸುವ ಸಾಹಿತ್ಯ ಕೃತಿಯು ಕನ್ನಡ ಭಾಷೆಯಲ್ಲಿಯೇ ಅಪರೂಪ ವೆಂದು ವಿದ್ವಾಂಸರ ಅಭಿಮತವಾಗಿದೆ.[೨] ಈ ಗ್ರಂಥವು ಕೇವಲ ಕೆಳದಿ ಅರಸರ ಚರಿತ್ರೆಗೇ ಸೀಮಿತಗೊಳ್ಳದೇ ಆ ಕಾಲದ ಭಾರತದ ಇತರ ರಾಜರ ಇತಿಹಾಸವನ್ನೂ ಸಮ್ಮಿಳಿತ ಗೊಂಡಿರುವುದು ವೈಶಿಷ್ಟ್ಯಗಳಲ್ಲೊಂದಾಗಿದೆ. ಪ್ರಾಸಂಗಿಕವಾಗಿ ಬರುವ ವಿಜಯ ನಗರದ ಅರಸರ, ಬಹಮನಿ ಸುಲ್ತಾನರ, ಅಹಮ್ಮದ್ ನಗರದ ದೊರೆಗಳ, ದಿಲ್ಲಿ ಸಾಮ್ರಾಟರ, ಮರಾಠಾ ದೊರೆಗಳ ಮತ್ತು ಚಿತ್ರದುರ್ಗದ ನಾಯಕರೇ ಆದಿಯಾಗಿ ಇತರೆ ರಾಜರುಗಳ ಚರಿತ್ರೆಯೂ ಹಾಸು ಹೊಕ್ಕಾಗಿದೆ. ಕ್ರಿ. ಶ ೧೫ ನೆಯ ಶತಮಾನ ದಿಂದ ೧೮ ನೆಯ ಶತಮಾನದವರೆಗೆ ಲಿಂಗಣ್ಣ ಕವಿಯು ಅಚ್ಚುಕಟ್ಟಾಗಿ ಈ ಕೃತಿಯನ್ನು

---

೧. ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿದ್ದಾಗ ಡಾ॥ ಹಾ. ಮಾ. ನಾಯಕರು ನನಗೆ ಇದನ್ನು ತಿಳಿಸಿದ್ದುದರಿಂದಲೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಉಪ ನಿರ್ದೇಶಕರಾದ ಶ್ರೀ ಎಸ್. ಬಸವಾರಾಧ್ಯರು ನಂ. ED 4046 72-73/ದಿ. 8-8-1972 ಮೇರೆಗೆ ನನ್ನನ್ನು ಈ ಬಗ್ಗೆ ಹಲವು ಮಾಹಿತಿಗಳನ್ನು ಕೇಳಿದ್ದು, ಇದಕ್ಕೆ ಒಂದು ಲೇಖನವನ್ನು ಪ್ರಬುದ್ಧ ಕರ್ನಾಟಕಕ್ಕೆ ಕಳಿಸುವುದಾಗಿ ಅವರಿಗೆ ತಿಳಿಸಿದ್ದುದರಿಂದಲೂ ಮತ್ತು ಬೆಂಗಳೂರಿನ ವಿಶ್ವವಿದ್ಯಾಲಯದ ಡಾ. ಚಿದಾನಂದಮೂರ್ತಿಗಳೂ ನನಗೆ ಬರೆದು ಹೇಳಿದ್ದ ರಿಂದಲೂ ಈ ಲೇಖನವನ್ನು ಬರೆಯಲು ಕಾರಣವಾಯಿತು.

೨. ಕೆಳದಿ ನಾಯಕರು. ಡಾ. ದೀಕ್ಷಿತ್. ಪುಟ ೬.

ಹೆಣೆದಿದ್ದಾನೆನ್ನಬಹುದಾಗಿದೆ. ಇಲ್ಲಿ ಹೇಳಿದ ಕಾಲ-ಕಾರ್ಯಾದಿಗಳು ಶಾಸನಗಳ ರೀತ್ಯಾ ಅಸತ್ಯವೆಂದು ಹೇಳುವುದಕ್ಕಾಗುವುದಿಲ್ಲವೆಂದು ಡಾ. ಎ. ಆರ್. ಕೃ, ರೈಸ್[೩] ಮುಂತಾದ ವಿದ್ವಾಂಸರು ಮತ್ತು ಶ್ರೀ ಎಸ್. ಲಕ್ಷ್ಮೀನಾರಾಯಣರಾಯರು[೪] ಸಹ ಅಭಿಪ್ರಾಯಪಟ್ಟಿದ್ದಾರೆ. ಡಾ. ಚಿದಾನಂದ ಮೂರ್ತಿಗಳು ತಮ್ಮ ಸಂಶೋಧನ ತರಂಗದಲ್ಲಿ[೫] ವ್ಯಕ್ತಪಡಿಸಿರುವಂತೆ-ನೃಪತುಂಗನ ಕವಿರಾಜಮಾರ್ಗವೇ ಆದಿಯಾಗಿ ರಾಜರ ಚರಿತ್ರೆಯ ರೀತಿಯಲ್ಲಿ ಇದು ಚಂಪೂ ಕಾವ್ಯವಾದರೂ ಐತಿಹಾಸಿಕವಾಗಿ ಕೆಳದಿ ಅರಸರ ನೃಪವಿಜಯವೇ ಸರಿ ಎನಿಸುತ್ತದೆ.

> ಭೀಮಂ ಸಂಗರದೊಳ್ ಸು
> ತ್ರಾಮಂ ಭೋಗದೊಳೆ ಶಾಂತಿಗುಣದೊಳ್ ಸೋಮಂ
> ರಾಮಂ ನನ್ನಿಯೊಳ್ ಎಂದೀ
> ಭೂಮಿಜನಂ ಪೊಗಳೆ ಬಾಳ್ದನಾ ನರನಾಥಂ KNV-P. 42.

ಇದು ಕವಿಯ ಅಲಂಕಾರದ ಮಾತಾದರೂ ಅವನ ತಾತ್ಪರ್ಯ ವಸ್ತುಸ್ಥಿತಿಗೆ ಹೊಂದಿಕೊಂಡಿದ್ದು ಇದು ವೆಂಕಟಪ್ಪನಾಯಕ, ದೊಡ್ಡ ಸಂಕಣ್ಣನಾಯಕ, ಶಿವಪ್ಪನಾಯಕ, ಸೋಮಶೇಖರನಾಯಕ ಮತ್ತು ಚೆನ್ನಮ್ಮಾಜಿಗೂ ಅನ್ವಯಿಸಬಹುದಾಗಿದೆ.[೬]

ಗ್ರಂಥಕಾರನಾದ ಕೆಳದಿ ಕವಿ ಲಿಂಗಣ್ಣನು[೭] ಈ ಕೃತಿಯನ್ನು ಕ್ರಿ. ಶ. ೧೮ ನೇ ಶತಮಾನದಲ್ಲಿ ಕೆಳದಿ ಆಸ್ಥಾನದಲ್ಲಿದ್ದಂತೆಯೇ ರಚಿಸಿರುವದರಿಂದ ಇದರ ಮಹತ್ವ ಹೆಚ್ಚಾಗಿದೆ. ರಾಜನನ್ನು ಮೆಚ್ಚಿಸಲು ಈ ಕೃತಿಯು ರಚನೆಯಾಗಿರಬಹುದಾದರೂ ಹಲವಾರು ವಿಷಯ ವೈವಿಧ್ಯಗಳು ಅಸ್ಪಷ್ಟವಾಗಿದ್ದು ಅವುಗಳನ್ನು ಇಲ್ಲಿ ತರ್ಕಿಸುವುದು ಅನುಚಿತ. ಎ. ಆರ್. ಕೃ. ರವರು ಈ ಗ್ರಂಥಕ್ಕೆ ಪೀಠಿಕೆಯಿಲ್ಲದಿರುವದರಿಂದ ಇದನ್ನು ಬರೆದ ಕವಿಯ ಹೆಸರು ಮುಂತಾದವುಗಳ ವಿಚಾರವಾಗಿ ಈ ಕಾವ್ಯದಿಂದ ಏನೂ ಗೊತ್ತಾಗುವದಿಲ್ಲವೆಂದಿದ್ದಾರೆ.[೮] ನಾನು ಬೆಂಗಳೂರಿನ ವಿಶ್ವೇಶ್ವರಪುರದಲ್ಲಿ ನಮ್ಮ

---

೩. ಕೆಳದಿ ನಾಯಕರು : ಡಾ. ದೀಕ್ಷಿತ್. ಪುಟ ೬.

೪. Vij. Sex Sent. Com. Vol, PP. 255-269.

ಅಂತೆಯೇ ಕೆಳದಿ ನೃಪವಿಜಯದಲ್ಲಿ ಹೇಳಿರುವ ಕಾಲಮಾನಾದಿಗಳು ಸುಮಾರಾಗಿ ಹೆಚ್ಚು ಕಡಿಮೆ. ಡಾ. ಕಣ್ಣು ಪಿಳ್ಳೆಯವರ ಕಾಲಮಾನಕ್ಕೂ ಮತ್ತು ಶಾಸನದಲ್ಲಿ ವ್ಯಕ್ತಪಡುವ ಕೆಳದಿ ಅರಸರ ಕಾಲ-ಕಾರ್ಯಾದಿಗಳಿಗೂ ಹೊಂದಿಕೆಯಾಗಿರುವುದೂ ಗಮನಾರ್ಹ ಅಂಶಗಳಲ್ಲಿ ಒಂದಾಗಿರುತ್ತದೆ.

೫. ಸಂಶೋಧನ ತರಂಗ: ಭಾಗ ೨.

೬. ರಾಣಿ ವೀರಮ್ಮಾಜಿ. ಜಿ. ಪಿ. ರಾಜರತ್ನಂ. ಪುಟ ೧೬.

೭. ಲಿಂಗಣ್ಣ ಕವಿ ಮತ್ತು ಈತನ ವಂಶೀಕರ ಬಗ್ಗೆ-ಸಾ. ಶಿ. ಮರುಳಯ್ಯನವರಿಗೆ ಸಹಾಯವಾಗಲು "ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ" ಎಂಬ ಕರ್ನಾಟಕ ವಿಶ್ವವಿದ್ಯಾಲಯದ ಪ್ರಬಂಧಕ್ಕೆ ಸಾಹಿತ್ಯದ ಪೂರ್ತಿ ನೆರವನ್ನು ನಾನೇ ನೀಡಿದ್ದೇನೆ.

೮. ಕೆ. ನೃ. ವಿ. ಪುಟ iii ಉಪೋದ್ಘಾತವನ್ನು ನೋಡಿರಿ.

ತಾತ ಕವಿ ಲಿಂಗಣ್ಣಯ್ಯನವರ ಮನೆಯಲ್ಲಿದ್ದಾಗ ಲಿಂಗಣ್ಣ ಕವಿಯ ಪಲವಾರು ಕೃತಿಯುನ್ನೊಳಗೊಂಡ ತಾಡಯೋಲೆಪ್ರತಿಗಳು ಗೋಚರಿಸಿದುವು. ನಾನು ಆಗ ಕೇವಲ ಚಿಕ್ಕ ವಯಸ್ಸಿನ ವಿದ್ಯಾರ್ಥಿಯಾಗಿದ್ದರಿಂದ ಹೆಚ್ಚಿನ ಆಸಕ್ತಿ ಈ ದಿಸೆಯಲ್ಲಿ ಮೂಡಿರಲಿಲ್ಲ; ಕಾಲಕ್ರಮೇಣ, ನನಗೆ ಕೆಳದಿ ಇತಿಹಾಸದಲ್ಲಿ ಅಭಿರುಚಿ ಹೆಚ್ಚಾದಂತೆ ಇದರ ಮಹತ್ವದ ಅರಿವುಂಟಾಯಿತು. ಆ ತಾಡೆಯೋಲೆಯ ಕಟ್ಟಿನಲ್ಲಿ ದೊರೆತ ಗರಿಯೊಂದು "ಕೆಳದಿ ನೃಪವಿಜಯ"ದ ಬಗ್ಗೆ ಕುತೂಹಲವನ್ನು ಕೆರಳಿಸುವಂತಿದೆ.

ಕೆಳದಿ ಇತಿಹಾಸವನ್ನು ಕುರಿತು ಈಗಾಗಲೇ ಹಲವಾರು ಅಧ್ಯಯನ ಮತ್ತು ಸಂಶೋಧನೆಯನ್ನು ಕೈಗೊಂಡ ನಾನು ಕೆಳದಿ ವೆಂಕಣ್ಣ ಕವಿಯ "ಪಾರ್ವತೀ ವಲ್ಲಭ ಶತಕ"ವೆಂಬ ತಾಡೆಯೋಲೆ ಕೃತಿಯನ್ನು ಸಂಪಾದಿಸಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದೆನು.[೯] ಇದರ ಪೀಠಿಕೆಯಲ್ಲಿ ಲಿಂಗಣ್ಣ ಕವಿಯನ್ನು ಕುರಿತು ಹಲವಾರು ದಾಖಲೆಗಳನ್ನು ಕ್ರೋಢೀಕರಿಸಲು ಪ್ರಯತ್ನಿಸಿ, ಈ ದಿಸೆಯಲ್ಲಿ ವಿದ್ವಾಂಸರ ಪ್ರತಿಕ್ರಿಯೆಗಳನ್ನೂ ಅವಲೋಕನ ಮಾಡಿದ್ದೇನೆ.

ಮೇಲೆಯೇ ಹೇಳಿದಂತೆ ತಾಡೆಯೋಲೆಯ ಗರಿಗಳನ್ನು ಕೆದರಿ ಅವಲೋಕಿಸಿದಾಗ ನನಗೆ ಉಪಲಬ್ಧವಾದ ಗರಿಯೊಂದು ಈ ಕೆಳಕಂಡ ಉಲ್ಲೇಖಗಳನ್ನು ಹೊಂದಿದ್ದು, ಇದು "ಕೆಳದಿ ನೃಪವಿಜಯ"ಕ್ಕೆ ಪೀಠಿಕೆಯಿರಬಹುದೆಂದು ತೋರುತ್ತದೆ. ಅದರ ಯಥಾ ಪ್ರತಿಯನ್ನು ಇಲ್ಲಿ ಕೊಡಲಾಗಿದೆ.

ಗರಿಯ ಮುಂಭಾಗ-[ಪುಟ ೨ ಎಂದಿದೆ.]

...............ನ್ಯೆದ ವಿವರಣಂಗಳಂ ಬಿತ್ತರಿಸೆ ಪೇಳ್ವೆನಂತುಮಲ್ಲ-
ದೆಯುಂ ॥ ೧೭ ॥

ಕಂದ ॥ ಅವರ್ಗಳ್ ಬಿಸಗೈದವನೀ
ವಿವರಣಮಂ ಯುದ್ಧರಂಗದೊಳ್ ರಿಪುಜಯಮಂ
ತವೆಗೆಲ್ದ ಪರಿಚಯಮನಂತದೊ
ಳ ವಿರಳ ದುರ್ಗಗಳನೈದೆ ಸಾಧಿಸಿದಿರವಂ ॥ ೧೮ ॥

ಇನಿತೆಲ್ಲಮುಮಂ ಕ್ರಮದಿಂ
ವಿನಿಯೋಗಿಸಿ ಸೂಕ್ಷ್ಮ ಪಥದೊಳೀ ಕೃತಿಯೊಳ್ತಂ
ದನುಭವಿಸಿ ಪುಸ್ತಕ ಭಣಿತೆಯೊ
ಳನಿದಪ್ಪಂತುಸುರ್ವೆನಾಲಿಪುದು ಸುಜನರ್ಕಳ್ ॥ ೧೯ ॥

---

೯. ಪ್ರ. ಕ. ಸಂ ೫೨; ಸಂ. 31 1970.

ಕ್ಷುಲ್ಲಕ ನೃಪಾಲಕರ ಕಥೆ
ಯುಲ್ಲಿದು ಶಿವಶರಣ ಜನಶಿರೋಮಣಿಗಳೆನಿ
ಪ್ಪುಲ್ಲಸಿತ ಕೆಳದಿ ಧರಣೀ
ವಲ್ಲಭರ ಚರಿತ್ರೆಮಿಳೆಗೆ ಪರಮಪವಿತ್ರಂ ॥ ೧೬ ॥

ಇಂತೆಂಬುನರಿದಾಂ ಸಮ
ನಂತರಮೀಕಾವ್ಯಮಂ ಸುಸೇವ್ಯವನಖಿಲ
ಮುಂತರಿವಂತುಸುರ್ದೆಂ ಮಿಗೆ
ಸಂತಸದಿಂ ಕೇಳ್ವುದಘಹರಸೂಕರಿಜನರ್ ॥ ೧೭ ॥

ತಿಳಿಯಲ್ಕೀ ಕೃತಿನಾಮಂ
ಕೆಳದೀನೃಪವಿಜಯಮೆಂದಿದಕ್ಕಧಿನಾಥಂ
ಕೆಳದಿಪ ರಾಮೇಶ್ವರನಿದ
ನೊಲಿದುಸುರ್ದಂ ವೆಂಕಪಾತ್ರಜಂ ಲಿಂಗಬುಧಂ ॥ ೧೮ ॥

ಪ್ರಾಕೃತ ಸಂಸ್ಕೃತ ಮೃದು ಭಾ
ಷಾಕವಸದಿನಧಿಕರಮ್ಯಮಾಗಿರ್ಪುದರಿಂ
ಶ್ರೀಕೆಳದಿ ನೃಪವಿಜಯಮೆನಿ
ಪೀಕಾವ್ಯಂ ಸೇವ್ಯಮೆನಿಸಿ ಶೋಭಿಸುತಿರ್ಕುಂ ॥ ೧೯ ॥

ನಸುತೊದಳೊಂದಿದ ಬಾಲನ
ಪೊಸ ನುಡಿಯಂ ಕೇಳ್ದು ಲಾಲಿಸರೆ ಪಿರಿಯರ್ ಶೋ
ಭಿಸುವೀ ಕೃತಿಯೊಳ್ಕೊಂ ಕುಂ
ಕೊಸರುಗಳಿರೆ ತಿದ್ದಿಯೊಪ್ಪುಗೊಳುದು ಸುಜನರ್ ॥ ೨೦ ॥

ವೃತ್ತ : ಸ್ಫುಟಿತರವಾದ ಕಬ್ಬದೊಳಗಿಲ್ಲದ ದೋಷವನೊಂದಿಸುತ್ತಮು
ತ್ಕಟತರ (**ಹರಿದಿದೆ**) ....
.........ಸೂಯೆಯೊಳೆಸೋಹೆಲಿಭೆಕ ಕಿಶೋರಕಂಗಳೊ
ಳತವಟಗುಟ್ಟಿ ಕೇಳ್ವರಿಗೆ ಬೇಸರನಾಗಿಪ ದುರ್ವಿದಗ್ಧರಂ
ವಿಟಪೆನೆ ಬೇಡಿಕೊಂಬೆಪಿವರೊಳ್ಕುಟಗ (**ಹರಿದಿದೆ**) ಡದಂವದಿಂ ॥ ೨೧ ॥

ಕಂದ : ಮೆರೆವಮೃತದ ಸವಿಯಂ ಸುರ
ರರಿವಂತರಿದ ಪರೆಮಧುಪತಿಳಿಯೊಳಭಿಜ್ಞ
ರ್ಪರಿಕಿ ಪೊಡರಿವಂತೆವೊಲೇಗಂ
ನರಿರವ (**ಹರಿದಿದೆ**) ಳಿಸೆವ ಸತ್ಕೃತಿರಸಮಂ ॥ ೨೨ ॥

---

೧೦. ಇಲ್ಲಿಂದ ಹಿಂಭಾಗ ಪ್ರಾರಂಭವಾಗುತ್ತದೆ.

ಪೊಸಪೊಂಗಳ್ಬಗ್ಗಿಲಿಗಂ
ಮಸಿಯುಂತಿರೆ ತೋರೆನಿಧಿಗದೇನೂಣೆಯುಮಂ
ತ್ರೈಸೆವೀಕ್ಷಿತಿ ಖಳರ್ಗಂ ಸೊಗ
ಯಿಸದೊಡಮು **(ಹರಿದಿದೆ)**ಪ್ಪಲಂತ್ತದೆ ಸಾಲ್ಗಂ || ೨೩ ||

ವೃತ್ತ|| ಮೊರೆಪೆತ್ತುಜ್ವಲ ವೀರಶೈವ ಕೇಳದೀ ಭೂಪಾಲ ಚಾರಿತ್ರ್ಯದಿಂ
ಚರೆದತ್ಯಂತ ಮನೋಜ್ಞವಾಗಿಹುದರಿಂ ಸನ್ನೀತಿಮಾರ್ಗಂಗಳಂಬಿ
ತ್ತರವಾಗಿ ಪೇಳ್ಪುದರಿಗೀಕಾವ್ಯಂ ಮಸೇವ್ಯಮಂ
ಮರುವಿಖ್ಯಾತಿಯುನಾಂತು ರಾಜಿಪುದಣಂ (ಕೋಂ ?) ವಿಶ್ವಂಭರಾ
ಚಕ್ರದೊಳ್ || ೨೪ ||

ಕಂದ: ಇವನೊಲವಿಂ ಕೇಳ್ವ **(ಹರಿದಿದೆ)** ಸ
ಗೋಪವಿಸಿ ವಾಂಛಿತವನಿತ್ತು ಕೆಳದಿ ಪುರೇಶಂ
ಸದಯಂ ಶ್ರೀರಾಮೇಶಂ
ಮುದದಿಂಪೆಡೆವಿಡದೆ ಪೊರೆವನಾಚಂದ್ರಾರ್ಕಂ (ಗದ್ಯ) || ೨೫ ||

ಎಂದಿದ್ದು ಮುಂದೆ ಖಾಲೀ ಇರುತ್ತದೆ.

ಇದು ಒಂದೇ ಗರಿಯಲ್ಲಿ ಉಪಲಬ್ಧವಾಗಿರುವ ರಚನೆ. 27.8 Cm x 6 Cm ಪ್ರಮಾಣವಿರುವ ಈ ತಾಡೆಯೋಲೆಯಲ್ಲಿನ ಗರಿಯ ಮುಂಭಾಗದಲ್ಲಿ ಹನ್ನೊಂದು ಸಾಲುಗಳೂ, ಹಿಂಭಾಗದಲ್ಲಿ ನಾಲ್ಕು ಸಾಲುಗಳೂ ಇರುತ್ತವೆ. ಮುಂಭಾಗದ ಅಗ್ರ ಪಂಕ್ತಿಯ ತುದಿಯಲ್ಲಿ ೨ ಎಂದು ಉಲ್ಲೇಖಿವಿದೆ. ಇದು ಗರಿಯ ಸಂಖ್ಯೆಯಾಗಿರುತ್ತದೆ, ಗರಿಯ ಕೊನೆಯ ಸ್ವಲ್ಪ ತುದಿಯ ಭಾಗವು ಇಲಿಯ ಆಹಾರಕ್ಕಾಗಿಯೋ (ಇನ್ನಾವ ಕಾರಣವೋ ?) ಹರಿದಿರುತ್ತದೆ. ೨೫ ನೆಯ ಪದ್ಯದ ಅಂತ್ಯದಲ್ಲಿ ಗದ್ಯ ಎಂದಿರುವುದು ಅಪೂರ್ಣತೆಯನ್ನು ಸೂಚಿಸುವುದಲ್ಲದೆ, ಚಂಪೂಕಾವ್ಯವೆಂಬುದನ್ನು ಸ್ಪಷ್ಟಪಡಿಸುತ್ತದೆ. ಭಾಷಾ ಸಾಹಿತ್ಯಕ ದೃಷ್ಟಿಯಿಂದಲೂ ಮತ್ತು ಅಕ್ಷರ ಸ್ವಾರಿತ್ರದಿಂದಲೂ ಇದು ಕ್ರಿ. ಶ. ಹದಿನೆಂಟನೇ ಶತಮಾನಕ್ಕೆ ಹೋಲುವುದು ಕಂಡುಬರುತ್ತದೆ.

ಹಲವು ಕಡತಗಳ ಸಮೂಹಗಳಲ್ಲಿ ಉಪಲಬ್ಧವಾದ ಈ ಒಂದು ಅಸಮಗ್ರ ಗರಿಯು ನಮ್ಮ ತಾತ ಕವಿ ಲಿಂಗಣ್ಣಯ್ಯನವರ ಮನೆಯಲ್ಲಿ ದೊರೆತ ಮೇಲೆ – ಇದಕ್ಕೆ ಸಂಬಂಧಪಟ್ಟಂತೆ ಸಮಗ್ರ ಕೃತಿಯೊಂದು ಅಲ್ಲಿದ್ದಿತೇ ಎಂಬುದನ್ನು ಊಹಿಸಲು ಅನುವುಮಾಡಿಕೊಡುತ್ತದೆ.[೧೧] ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಮದ-ರಾಸಿನಲ್ಲಿ ಮತ್ತು ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿ[೧೨]ಯಲ್ಲಿ ಒಂದೊಂದರಂತೆ

---

೧೧. ಹಲವಾರು ವಿದ್ವಾಂಸರಲ್ಲಿ ನಾನು ಈ ಕುರಿತು ಚರ್ಚೆ ಮಾಡಿದ್ದೇನೆ. ಲಂಡನ್‌ನಲ್ಲಿರುವ ಕೃತಿಯು ಇಲ್ಲಿಂದ ಹೋಗಿರಬಹುದೇ ಎಂಬುದಾಗಿಯೂ ನನಗೆ ಸಂದೇಹವಿದೆ!

೧೨. Nayakas of Ikkeri P. 7.

ಹೀಗೆ ಈ ಕೃತಿಯು ತಾಡೆಯೋಲೆ (ಕಡತದ) ಪ್ರತಿಗಳಿರುವುದು ಕಂಡುಬರುತ್ತವೆ. ದಿವಂಗತ ಎ. ಆರ್. ಕೃ. ರವರು ತಾವು ನೋಡಿದ ನಾಲ್ಕು ಪ್ರತಿಗಳಲ್ಲಿ ಒಂದರಲ್ಲಿಯೂ ಇದರ ಪೀಠಿಕಾ ಪ್ರಕರಣವು ಗೋಚರಿಸುವುದಿಲ್ಲವೆಂದು ಹೇಳಿದ್ದಾರೆ.[೧೩] ಆ ನಾಲ್ಕು ಪ್ರತಿಗಳು ಯಾವ್ಯಾವುವು ? ಎಲ್ಲಿ ಉಪಲಬ್ಧವಿರುತ್ತದೆ ಎಂಬುದನ್ನು ಈ ವರೆಗೂ ಹೇಳಿರುವುದಿಲ್ಲ. ಇವರಲ್ಲಿ ಮೂಲಕೃತಿ ಯಾವುದು; ಪ್ರತಿಕೃತಿ ಯಾವುದು ಮುಂತಾದವುಗಳನ್ನು ಪರಿಶೋಧಿಸಿ, ಪರಿಷ್ಕರಿಸಿದಲ್ಲಿ ಕೆಳದಿ ನೃಪವಿಜಯವು ಹೆಚ್ಚಿನ ಬೆಳಕನ್ನು ಚೆಲ್ಲಲು ಸಹಾಯಕಾರಿಯಾಗುತ್ತದೆ.

ಕವಿ ಮತ್ತು ಕೃತಿಯ ವಿಭಿನ್ನರೂಪಗಳು :

ಮೆರೆವೀ ಸತ್ಕೃತಿಯಂ ತಾ
ವಿರಚಿಸಿದಂ ಸಕಲ ನೃಪಶಿರೋಮಣಿ ಕೆಳದೀ
ಪರ ಬಸವೇಂದ್ರಾಶ್ರಿತ ಭೂ
ಸುರ ಕುಲಮಣಿ ವೆಂಕಪಾತ್ಮಜಂ ಲಿಂಗಬುಧಂ ||

ತಿಳಿಯಲ್ಕೀ ಕೃತಿನಾಮಂ
ಕೆಳದೀ ನೃಪವಿಜಯ ಮೆಂದಿದಕ್ಕಧಿನಾಥಂ
ಕೆಳದಿಪ ರಾಮೇಶ್ವರಶಿವ
ನೊಲಿದುಸುರ್ದಂ ವೆಂಕಪಾತ್ಮಜಂ ಲಿಂಗಬುಧಂ ||

ಇಲ್ಲಿ ಕಾಣುವ ಮೊದಲನೇ ಪದ್ಯವು ಮದರಾಸಿನ ಓರಿಯಂಟಲ್ ಲೈಬ್ರರಿಯಲ್ಲಿರುವ ಕೆಳದಿ ನೃಪವಿಜಯದ ಚಂಪೂಗ್ರಂಥದ ಒಂದು ಕಡತದ ಪ್ರತಿಯ ಕೊನೆಯ ಭಾಗದಲ್ಲಿರುತ್ತದೆ. ಎರಡನೇ ಪದ್ಯವು **K G L** ಪ್ರತಿ. ಎರಡೂ ಭಿನ್ನರೂಪದಲ್ಲಿರುವುದರಿಂದ ಪ್ರತಿಗಳೂ ಸ್ವಲ್ಪ ಹೆಚ್ಚು ಕಡಿಮೆ ವಿಭಿನ್ನವಾಗಿರಬಹುದೇ ?

ತೊದಳೊಂದಿದ ಬಾಲಕರೊ
ಳ್ಮೃದುವಾತಂ ಕೇಳ್ದಂ ಸಂತಸಂದಿಳೆಯರದಿ
ವಿಸ್ತರಂ ತಾಂ ನಿಮ್ಮಯ ಪಸು
ಳೆಗಳೆಂದಾಲಿಪುದು ಸುಜನರೆಸೆವೀ ಕೃತಿಯಂ || **KNV-P V**

ನಸು ತೊದಳೊಂದಿದ ಬಾಲನ
ಪೊಸನುಡಿಯಂ ಕೇಳ್ದು ಲಾಲಿಸದೆ ಪಿರಿಯರ್ಗೇ
ಭಿಸುಪೀಕೃತಿಯೊಳ್ಮೊಂಕಂ
ಕೊಸರುಗಳಿರೆ ತಿದ್ದಿಯಪ್ಪುಗೊಳ್ಳುದು ಸುಜನರ್ || **K G L**[೧೪]

೧೩. ಕೆ. ನೃ. ವಿ. **P. XV.**

೧೪. ನನ್ನ ಪ್ರತಿಗೆ KGL ಎಂದು ಸಂಕೇತಿಸಲಾಗಿದೆ.

ಅಲ್ಪ ಸ್ವಲ್ಪ ಹೋಲಿಕೆಯನ್ನಿಯುವ ಮೇಲ್ಕಂಡ ಪದ್ಯಗಳ ಸಾಲುಗಳೂ ಪರಿಶೀಲನಾರ್ಹವಾಗಿವೆ.

ಈಕೃತಿಗಾದಿಯಾಪುದೆಸಲುಜ್ಜ್ವಲತುಂಗತರಂಗಸಂಚರ
ದ್ವೀಕರ ಮೀನಕರ್ಕಟಕ ಕೂರ್ಮ ಕನತ್ಸಲೀಲೇಭನಕ್ರವ
ರ್ಗೀಕರ ಶಿಂಶುಮಾರ ಮುಖವಾರ್ಚರ ಸಂಚಯಜಾಲಸೋಜ್ವಲ
ತ್ಕೈಕರ ಫೇನಕಂಬು ಕುಲರತ್ನಗಳಿಂದೆಸೆದಿತ್ತು ಸಾಗರಂ ॥ ೧ ॥

ಹರನ ನಿಷಂಗವಚ್ಯುತನ ಪಾಸು ಜಲೇಶನ ರಾಜಮಂದಿರಂ
ನಿರುಪಮಪ್ಪ ಲಕ್ಷ್ಮಿಯ ತವರ್ಮನೆ ಚಂದ್ರನ ಜನ್ಮಭೂಮಿ ಭೂ
ಧರವರಪುತ್ರನುದ್ಘ ಕವಚಂ ಬಡಬಾನಲಪಾನಪಾತ್ರ ಮ
ತ್ಯುರುತಮಪ್ಪ ಸನ್ಮಣಿಗಣಾಗರಮೊಪ್ಪಿದುದೈದೆ ಸಾಗರಂ ॥ ೨ ॥

ವಳಿತೋಳ್ ಸುಳಿಚಕ್ರಂ ನೊರೆ
ಯೆಳನಗೆ ಬೊಬ್ಬುಳಿಗಳುವರದೊಳಗಣಜಾಂಡಾ
ವಳಿ ನೀರ್ತನುರುಚಿ ಬಡಬಾ
ನಲನಂಬರವಾಗಲಬುಧಿ ಹರಿಯ ಪೋಲಿಸೆಗುಂ ॥ ೩ ॥

ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿನ ಪ್ರತಿಯು ಪ್ರಥಮಾಶ್ವಾಸದ ಮೊದಲನೇ ಪದ್ಯಗಳು ಹೀಗೆ ಹೇಳುತ್ತವೆ.

ನನಗೆ ಸಿಕ್ಕಿದ ಗರಿಗಳಲ್ಲಿ ಪೀಠಿಕೆಯ ಕೆಲವು ಭಾಗಗಳು ಲುಪ್ತವಾಗಿದ್ದು ೧೬ನೆಯ ಕಂದಪದ್ಯದಿಂದ ಪ್ರಾರಂಭವಾಗುತ್ತವೆ. ಪೀಠಿಕೆಯ ಸ್ವರೂಪವೂ ಭಿನ್ನವಾಗಿರುವಂತೆ ಕೃತಿಯ ಸಮಗ್ರರೂಪವೂ ಹೀಗಿರಬಹುದೇ ?

ಇದೇ ರೀತಿ ಕಂದಪದ್ಯಗಳ ಸಮೂಹದಲ್ಲಿ ಅನಂತರ ಕೆಳದಿಯ ಅರಸರ ವಂಶಾವಳಿಯನ್ನು ತಿಳಿಸುವ "ವರ ಕೆಳದಿಯ ಚೌಡ ಮಹೀಶ್ವರ" ಮುಂತಾದ ಹದಿಮೂರು ಕಂದಗಳೂ ಕಂಡು ಬರುತ್ತವೆ. ಈ ಕಡತದ ಪ್ರತಿಯು ಬಹಳ ಹಳೆಯದೆಂದು ತೋರಿಬರುವುದರಿಂದ ಅದನ್ನು ಪ್ರಮಾಣವಾಗಿಟ್ಟುಕೊಂಡು ಗ್ರಂಥಕರ್ತನು 'ಲಿಂಗಬುಧ' ಅಥವಾ 'ಲಿಂಗಣ್ಣ' ಎಂದು ನಿಶ್ಚಯಿಸಿದ್ದೇವೆ ಎಂಬುದಾಗಿ ಎ. ಆರ್. ಕೃ. ರವರು ವಿಮರ್ಶಿಸಿ, ಹಾಗೆಯೇ ಕೆ. ನೃ. ವಿ. ದ ಪುಟ ೯೧ನೇ ಪುಟದಡಿಯ ಟಿಪ್ಪಣಿಯಲ್ಲಿ ಈ ವಂಶಾವಳಿಯನ್ನು ತಿಳಿಸತಕ್ಕ ಹದಿಮೂರು ಕಂದಪದ್ಯಗಳು ಓಲೆಯ ಪುಸ್ತಕದಲ್ಲಿಲ್ಲ ಎಂಬುದಾಗಿ ಹೇಳಿದ್ದಾರೆ. ಈ ಕಡತದ ಪ್ರತಿಯೂ ಯಾವುದು ಎಂಬುದು ತಿಳಿಯಬೇಕಾಗಿದೆ.

ಎ. ಆರ್. ಕೃ. ರವರು ಬರೆದ ಉಪೋದ್ಘಾತವು (ಆರ್. ಶಾಮಾಶಾಸ್ತ್ರಿಗಳು ಸಂಪಾದಿಸಿದ ಕೆಳದಿ ನೃಪವಿಜಯದಲ್ಲಿನ) 'ಓ' ಮತ್ತು 'ಕ' ಎಂಬ ಕೇವಲ ಎರಡು

ಕೃತಿಗಳನ್ನು ಮಾತ್ರ ಆಧಾರ ಮಾಡಿಕೊಂಡು ವಿಮರ್ಶಿಸಿರುವುದು ಕಂಡುಬರುತ್ತದೆ.

ಹೀಗೆ ' ಕೆಳದಿ ನೃಪವಿಜಯ ' ದಲ್ಲಿ ಹಲವಾರು ಅಸ್ಪಷ್ಟ ಸಂಗತಿಗಳು ಒಳಗೊಂಡಿರುವುದರಿಂದ ಇದರ ಪರಿಷ್ಕರಣ ಕಾರ್ಯವು ಶುದ್ಧವಾಗಿಯೂ ಮತ್ತು ಸಶಾಸ್ತ್ರೀಯ ರೀತಿಯಿಂದಲೂ ಆಗಬೇಕಾಗಿರುವುದು ಸೂಕ್ತವಲ್ಲವೇ ಎಂಬುದಾಗಿ ಮಾನ್ಯ ವಿದ್ವಾಂಸರ ಅವಗಾಹನೆಗೆ ಬಿಡಲಾಗಿದೆ.

★ **ಕೆಳದಿ ಗುಂಡಾಜೋಯಿಸ್**

ಕನ್ನಡ ವಾಕ್ಯ

ಕನ್ನಡ ವಾಕ್ಯವನ್ನು ಕುರಿತು ವಿವೇಚಿಸುವಲ್ಲಿ 'ವಾಕ್ಯವೆಂದರೇನು?' ಎಂಬುದೊಂದು ಮೂಲ ಪ್ರಶ್ನೆ. ಸಾಂಪ್ರದಾಯಿಕ ವ್ಯಾಕರಣಗಾರರು ಅದನ್ನು ಉತ್ತರಿಸಿ "ಪೂರ್ಣವಾದ ಆಲೋಚನೆಯನ್ನು ತಿಳಿಸುವಂತೆ ಸಾಲ್ಗೊಳಿಸಿದ ಪದಗಳ ಸಮೂಹವು ವಾಕ್ಯವೆನಿಸುತ್ತದೆ."–ಎಂದು ವಾಕ್ಯದ ವ್ಯಾಖ್ಯೆಯನ್ನಿತ್ತಿದ್ದಾರೆ.[೧]

ಈ ಸರಳ ವ್ಯಾಖ್ಯೆಯು ಭಾಷಾವಿಜ್ಞಾನಿಗೆ ಬಹುಕ್ಲಿಷ್ಟ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಪೂರ್ಣವಾದ ಆಲೋಚನೆ ಯಾವುದು? ಅದನ್ನು ತಿಳಿಯುವ ಬಗೆ ಹೇಗೆ? 'ಬದನೆಕಾಯಿ' ಅಥವಾ 'ಹೋಳಿಗೆ' ಇವು ಪೂರ್ಣ ಆಲೋಚನೆಗಳು ಅಲ್ಲವೊ? 'ಮಳೆ ಬಂದರೆ ಊಟಕ್ಕೆ ಬರುವುದಿಲ್ಲ' ಎಂಬಲ್ಲಿ ಪೂರ್ಣವಾದ ಒಂದೇ ಒಂದು ಆಲೋಚನೆ ವ್ಯಕ್ತವಾಗಿದೆಯೋ ಅಥವಾ ಅದೊಂದು ಪೂರ್ಣ ವಾಕ್ಯಗಳ ಸಂಯೋಜನೆಯೋ ?

"ಆಖ್ಯೇಯ ಆಖ್ಯಾತಗಳನ್ನು ಒಳಗೊಂಡುದುದೇ ವಾಕ್ಯ"[೨] ಎಂಬುದು ವ್ಯಾಕರಣಗಾರರು ಸೂಚಿಸಿದ ವಾಕ್ಯದ ಇನ್ನೊಂದು ವ್ಯಾಖ್ಯೆ. ಯಾವುದರ ಬಗ್ಗೆ ಹೇಳಲಾಗುತ್ತದೆಯೋ ಅದೇ ಆಖ್ಯೇಯ: ಆಖ್ಯೇಯದ ಕ್ರಿಯೆಯೇ ಆಖ್ಯಾತವೆಂದು ಅವರು ಕೊಡುವ ವಿವರಣೆ. 'ಇಂದಿರಾ ಗಾಂಧಿ ಧಾರವಾಡಕ್ಕೆ ಬರುತ್ತಾಳೆ'—ಎಂಬ ವಾಕ್ಯದಲ್ಲಿ ಇಂದಿರಾ ಗಾಂಧಿಯ ಬಗ್ಗೆ ಹೇಳಲಾಗಿದೆ. ಕಾರಣ, 'ಇಂದಿರಾಗಾಂಧಿ' ಆಖ್ಯೇಯ (Subject). 'ಧಾರವಾಡಕ್ಕೆ ಬರುತ್ತಾಳೆ' ಎಂಬುದು ಆಖ್ಯೇಯದ ಕ್ರಿಯೆ; ಕಾರಣ, ಅದು ಆಖ್ಯಾತ (Predicate).[೨]

ಈಗ ಇನ್ನೊಂದು ವಾಕ್ಯವನ್ನು ವಿಶ್ಲೇಷಿಸೋಣ. 'ಪಾಕಿಸ್ತಾನಿ ಸೈನಿಕರು ಬಾಂಗ್ಲಾದೇಶದ ಸಾವಿರಾರು ಮಹಿಳೆಯರ ಮಾನಭಂಗ ಮಾಡಿದರು.' ಪ್ರಸ್ತುತ ವಾಕ್ಯದಲ್ಲಿ ಬಾಂಗ್ಲಾದೇಶದ ಮಹಿಳೆಯರ ಮಾನಭಂಗವಾದುದು ಹೇಳಬೇಕಾದ ಹಾಗೂ ಹೇಳಿದ ವಿಷಯ; ಕಾರಣ, ಅದು ಆಖ್ಯೇಯವೆಂದು ಪರಿಗಣಿಸಿದರೆ ಆಖ್ಯಾತವೆಲ್ಲಿದೆ? 'ಪಾಕಿಸ್ತಾನಿ ಸೈನಿಕರು' ಎಂಬುದೊ! ಈ ವ್ಯಾಖ್ಯೆಗಿಂತ ವಾಕ್ಯದ ರಚನೆ ಮತ್ತು ರಚನಾಂಗಗಳ ಕ್ರಿಯೆಯನ್ನು ಸೂಚಿಸಿದ್ದರೆ ಈ ಅಸ್ಪಷ್ಟತೆಗೆ ಅವಕಾಶವಿರುತ್ತಿದ್ದಿಲ್ಲ.

ಬ್ಲೂಮ್‌ಫೀಲ್ಡ್ ಮೊದಲಾದ ಭಾಷಾ ವಿಜ್ಞಾನಿಗಳು ವಾಕ್ಯವನ್ನು 'ಭಾಷೆಯಲ್ಲಿರುವ ಸ್ವತಂತ್ರ ರಚನೆ' ಎಂದು ವರ್ಣಿಸಿದ್ದಾರೆ. ಯಾವ ರಚನೆ ಮೂಲತಃ ಇನ್ನೊಂದು ರಚನೆಯ ಅಂಗವಾಗಿ ಬರುವುದಿಲ್ಲವೊ ಅದೇ ಸ್ವತಂತ್ರ ರಚನೆ. 'ಇದು ಏನು?' 'ಇದು ನನ್ನ ಪುಸ್ತಕ' '(ಇದು) ಹಾಲು' — ಈ ಮೂರೂ ರಚನೆಗಳೂ

---

೧. ಮುಳಬಾಗಲ, ಥೋಂಡೋ ನರಸಿಂಹ. ನುಡಿಗಟ್ಟು (೧೯೬೪), ಪು. ೧೧೮.

೨. ಅದೇ.

ಮೂಲತಃ, ರಚನಾ ದೃಷ್ಟಿಯಿಂದ, ರಚನಾಂಗಗಳಲ್ಲಿ; ಆದ್ದರಿಂದ, ಅವು ಮೂರೂ ವಾಕ್ಯಗಳೇ.

ವಾಕ್ಯದ ವಿವೇಚನೆ ಮಾಡುವಲ್ಲಿ ವಾಕ್ಯದ ವ್ಯಾಖ್ಯೆಯನ್ನು ಕೊಡುವುದಕ್ಕಿಂತ ಆಯಾಯ ಭಾಷೆಯಲ್ಲಿ ವಾಕ್ಯದ ರಚನೆಯನ್ನೂ ಆದರ ವಿನ್ಯಾಸ ವೈವಿಧ್ಯತೆಯನ್ನು ತೋರಿಸಿಕೊಡುವುದೇ ಅನುಕೂಲ ಹಾಗೂ ಲೇಸು ಎಂದು ರೂಪಾಂತರಗಾರರು (Transformationalists) ಅಭಿಪ್ರಾಯಪಡುತ್ತಾರೆ. ಅವರು ವಾಕ್ಯರಚನೆಯನ್ನು ಪದಪುಂಜ ರಚನಾ ನಿಯಮಗಳ (Phrase Structure Rules) ಮೂಲಕವೂ ವಿನ್ಯಾಸ ವೈವಿಧ್ಯತೆಯನ್ನು ರೂಪಾಂತರ ನಿಯಮಗಳ (Trans formation Rules) ಮೂಲಕವೂ ಸುಸ್ಪಷ್ಟವಾಗಿ ತಿಳಿಸುತ್ತಾರೆ.

ಪದಪುಂಜ ರಚನಾ ನಿಯಮಗಳು : (P—Rules)

ಪದಪುಂಜ ರಚನಾ ನಿಯಮಗಳು ವಾಕ್ಯದ ನಿಕಟತಮ ಪದಪುಂಜಗಳ ವರ್ಗಗಳನ್ನೂ, ಅವುಗಳ ವ್ಯಾಕರಣ ಸಂಬಂಧಗಳನ್ನೂ, ಬಳಸಿದ ರೂಪಗಳ ಅರ್ಥಗಳನ್ನೂ ಸೂಚಿಸುತ್ತವೆ. ಅವು ಒಂದು ಸಂಕೇತವನ್ನು ಇನ್ನೊಂದಾಗಿ ಬರೆ ಎಂದು ನಿರ್ದೇಶಿಸುವಂಥವುಗಳಾಗಿವೆ. ಉದಾ : ವಾಕ್ಯ → ಆಖ್ಯೇಯ + ಆಖ್ಯಾತ. ಈ ನಿಯಮಗಳು ವಾಕ್ಯ ಎಂಬ ಸಂಕೇತದಿಂದ ಆರಂಭಗೊಂಡು ನಿಯಮಗಳಿಗನುಗುಣವಾಗಿ ಬೆಳೆದುಕೊಂಡು ಬಂದು ಕಟ್ಟಕಡೆಗೆ ಆಕೃತಿಮಾಗಳನ್ನು ಸೂಚಿಸುತ್ತವೆ. ಈ ಆಕೃತಿಮಾಗಳನ್ನು ಪದಪುಂಜ ವಿನ್ಯಾಸಕಗಳನ್ನು (Phrase Markers) ಕೊಡಲು ಅನುಕೂಲವಾಗುವಂತೆ ಬರೆಯಬೇಕು.

ಪದಪುಂಜ ವಿನ್ಯಾಸಕಗಳು (P–Markers) :

ಪದಪುಂಜ ನಿಯಮಗಳು ನಿರ್ದೇಶಿಸುವ ವಿನ್ಯಾಸಕಗಳೇ ಪದಪುಂಜ ವಿನ್ಯಾಸಕಗಳು. ಅವು ಸ್ವಯಂಚಲಿಗಳು (Automatic). ಈ ಸ್ವಯಂಚಲಿತ್ವಕ್ಕೆ ಸಹಾಯಕವಾಗಿ ಪದಪುಂಜ ನಿಯಮಗಳ ಮೇಲೆ ಕೆಲವು ನಿರ್ಬಂಧನೆಗಳಿವೆ.

ಪದಪುಂಜ ನಿಯಮಗಳ ನಿರ್ಬಂಧನೆಗಳು (Restrictions of P–Rules):

೧. ಒಂದು ನಿಯಮವು ಒಂದೇ ಸಂಕೇತವನ್ನು ಬದಲಾಯಿಸತಕ್ಕದ್ದು :

ವಾಕ್ಯ → ನಾಮಪುಂಜ + ಕ್ರಿಯಾಪುಂಜ
ನಾಮಪುಂಜ → ವಿಶೇಷಣ + ನಾಮರೂಪ

೨. ಬದಲಾಯಿಸಿದ ಸಂಕೇತವು (ಮೊದಲನೆಯದನ್ನು ಹೊರತು) ಹಿಂದಿನ ಸರಣಿಯ (String) ಘಟಕವಾಗಿರಬೇಕು.

೩. ಒಂದು ಸಂಕೇತದ ಸ್ಥಾನದಲ್ಲಿ ಇನ್ನೊಂದು ಸಂಕೇತ ಬರಲೇಬೇಕು. ಅರ್ಥಾತ್, ಇಲ್ಲಿ ಲೋಪಕ್ಕೆ ಸ್ಥಾನವಿಲ್ಲ.

೪. ಹೊಸತಾಗಿ ಬರುವ ಸರಣಿಯು ಹಿಂದಿನ ಸರಣಿಗಿಂತ ಭಿನ್ನವಾಗಿರಬೇಕು.


೫. ಸ್ಥಾನಪಲ್ಲಟಕ್ಕೆ (Permutation) ಇಲ್ಲಿ ಅವಕಾಶ ಇಲ್ಲ.

ಪದಪುಂಜ ನಿಯಮಗಳಿಗೆ ಉದಾಹರಣೆ :

ವಾಕ್ಯ : ಉತ್ತಮ ವಿದ್ಯಾರ್ಥಿಗಳು ಓದುತ್ತಾರೆ.

೧.	ವಾಕ್ಯ	——>	ನಾಮಪುಂಜ + ಕ್ರಿಯಾಪುಂಜ
೨.	ನಾಮ ಪುಂಜ	——>	ವಿಶೇಷಣ + ನಾಮರೂಪ
೩.	ನಾಮ ರೂಪ	——>	ನಾಮಪ್ರಕೃತಿ + ವಚನ
೪.	ಕ್ರಿಯಾ ಪುಂಜ	——>	ಕ್ರಿಯಾಪ್ರಕೃತಿ + ಕಾಲ—ರೂಪ
೫.	ಕಾಲ–ರೂಪ	——>	ಕಾಲ ಪ್ರತ್ಯಯ + ರೂಪ ಪ್ರತ್ಯಯ
೬.	ವಿಶೇಷಣ	——>	‘ ಉತ್ತಮ ’
೭.	ನಾಮ ಪ್ರಕೃತಿ	——>	‘ ವಿದ್ಯಾರ್ಥಿ ’
೮.	ವಚನ	——>	‘ – ಗಳು ’
೯.	ಕ್ರಿಯಾ ಪ್ರಕೃತಿ	——>	‘ ಓದು ’
೧೦.	ಕಾಲ ಪ್ರತ್ಯಯ	——>	‘ – ಉತ್ತ ’
೧೧.	ರೂಪ ಪ್ರತ್ಯಯ	——>	‘ ಆರೆ ’

ಪದಪುಂಜ ವಿನ್ಯಾಸಕಗಳು :



ರೂಪಾಂತರ ನಿಯಮಗಳು (T–Rules) :

ವಾಕ್ಯ ರಚನಾ ವಿನ್ಯಾಸದಲ್ಲಿ ವೈವಿಧ್ಯತೆಯನ್ನು ತರಲು ಪದಪುಂಜ ವಿನ್ಯಾಸಕಗಳಲ್ಲಿ ಬದಲಾವಣೆಯನ್ನುಂಟು ಮಾಡುವ ನಿಯಮಗಳೇ ರೂಪಾಂತರ ನಿಯಮಗಳು. ಇವುಗಳಲ್ಲಿ ಐಚ್ಛಿಕ (optional) ಮತ್ತು ಕಡ್ಡಾಯ (obligatory)ಗಳೆಂದು ಎರಡು ವಿಧ.

ಐಚ್ಛಿಕ ರೂಪಾಂತರ ನಿಯಮಗಳು (Top):

ನಾನಾ ವಿಧದ ವಾಕ್ಯಗಳನ್ನು ಉತ್ಪಾದಿಸಿದರೆ **ಕಡ್ಡಾಯ ರೂಪಾಂತರ ನಿಯಮಗಳು** (Tobl.) ಸಂಧಿ ಬದಲಾವಣೆ (morpho-phonemic changes) ಹಾಗೂ ಉಪಾಕೃತಿಮಾ ವ್ಯತ್ಯಾಸಗಳ (allomorphic variations) ಬಗ್ಗೆ ಲಕ್ಷ್ಯವಹಿಸುತ್ತವೆ.

ಐಚ್ಛಿಕ ರೂಪಾಂತರ ನಿಯಮಗಳು ಉತ್ಪಾದಿಸದ ವಾಕ್ಯಗಳನ್ನು **ಮೂಲವಾಕ್ಯ** (Base/kernel sentence) ಗಳೆಂದೂ ಐಚ್ಛಿಕ ರೂಪಾಂತರ ನಿಯಮಗಳು ಉತ್ಪಾದಿಸುವ ವಾಕ್ಯಗಳನ್ನು **ಸಾಧಿತವಾಕ್ಯ** (Derived/Non-Kernel sentence)ಗಳೆಂದೂ ಕರೆಯುವರು.


ಉದಾಹರಣೆ :

ಮೂಲ ವಾಕ್ಯಕ್ಕೆ : ರಾಮು ರೊಟ್ಟಿಯನ್ನು ತಿಂದನು.

ಪದಪುಂಜ ನಿಯಮ :

ವಾಕ್ಯ	—>	ನಾಮಪುಂಜ	+	ಕ್ರಿಯಾಪುಂಜ
ಕ್ರಿಯಾಪುಂಜ	—>	ನಾಮರೂಪ	+	ಕ್ರಿಯಾರೂಪ
ನಾಮರೂಪ	—>	ನಾಮಪ್ರಕೃತಿ	+	ವಿಭಕ್ತಿ ಪ್ರತ್ಯಯ
ಕ್ರಿಯಾರೂಪ	—>	ಕ್ರಿಯಾಪ್ರಕೃತಿ	+	ಕಾಲ-ರೂಪ
ನಾಮಪುಂಜ	—>	'ರಾಮು'		
ನಾಮ ಪ್ರಕೃತಿ	—>	'ರೊಟ್ಟಿ'		
ವಿಭಕ್ತಿಪ್ರತ್ಯಯ	—>	'ಅನ್ನು'		
ಕ್ರಿಯಾ ಪ್ರಕೃತಿ	—>	'ತಿನ್'		
ಕಾಲ-ರೂಪ	—>	-ದನು.		


ಪದಪುಂಜವಿನ್ಯಾಸಕ :




ಕಡ್ಡಾಯ ರೂಪಾಂತರ ನಿಯಮ ೧: ರೊಟ್ಟಿ ಅನ್ನು + = > ರೊಟ್ಟಿಯನ್ನು
೨: ತಿನ್ + ದನು = = > ತಿಂದನು

ಸಾಧಿಕ ವಾಕ್ಯಕ್ಕೆ : ರಾಮ ರೊಟ್ಟಿಯನ್ನು ತಿಂದನೋ?
ಐಚ್ಛಿಕರೂಪಾಂತರ ನಿಯಮ : ರಾಮ + ರೊಟ್ಟಿ + ಅನ್ನು + ತಿನ್ + ದನು = = > ರಾಮ + ರೊಟ್ಟಿ + ಅನ್ನು + ತಿನ್ + ದನು + ಓ

ಮೂಲಪದಪುಂಜ ವಿನ್ಯಾಸಕ **ಸಾಧಿಕ ಪದಪುಂಜ ವಿನ್ಯಾಸಕ**





ಐಚ್ಛಿಕ ರೂಪಾಂತರ ನಿಯಮಗಳಿಗೆ ಒಳಗಾಗುವ ವಾಕ್ಯಗಳ ಸಂಖ್ಯೆಯನ್ನು ಹೊಂದಿಕೊಂಡು ರೂಪಾಂತರದಲ್ಲಿ ಎರಡು ರೀತಿ :

ಏಕವಾಕ್ಯ ರೂಪಾಂತರ (Single Based Transformation)
ಅನೇಕ ವಾಕ್ಯ ರೂಪಾಂತರ (Double Based Transformation)

ಏಕ ವಾಕ್ಯ ರೂಪಾಂತರ :

ಒಂದೇ ಒಂದು ವಾಕ್ಯವು ಐಚ್ಛಿಕ ರೂಪಾಂತರ ನಿಯಮಕ್ಕೆ ಒಳಗಾಗಿ ರೂಪಾಂತರಗೊಂಡರೆ ಅದು ಏಕವಾಕ್ಯ ರೂಪಾಂತರ: ಪ್ರಶ್ನೆ, ನಿಷೇಧ, ಕರ್ಮಣಿ ಇತ್ಯಾದಿ ರೂಪಾಂತರಗಳು.


ಪ್ರಶ್ನೆ-ರೂಪಾಂತರ (T-Interrogative)

ಪ್ರಶ್ನೆ—ರೂಪಾಂತರವು ನಿಜಾರ್ಥಕ ವಾಕ್ಯಗಳನ್ನು (Statements) ಪ್ರಶ್ನೆಗಳನ್ನಾಗಿ **ರೂಪಾಂತರಗೊಳಿಸುತ್ತದೆ :**

ಪ್ರ–ರೂಪಾಂತರ ನಿಯಮ :

ನಾಮಪುಂಜ+ಕ್ರಿಯಾಪುಂಜ= >ನಾಮಪುಂಜ+ಕ್ರಿಯಾಪುಂಜ+ಓ

ಈ ಪ್ರಶ್ನೆ–ರೂಪಾಂತರ ನಿಯಮದಿಂದಾಗಿ ಮೂಲವಾಕ್ಯದ ರಚನೆಯಲ್ಲಿ ಬದಲಾವಣೆಯುಂಟಾಗುತ್ತದೆ:




ವಿದ್ಯಾರ್ಥಿನಿಯರು ಸಂಗೀತ ಕಲಿಯಬೇಕು = > ವಿದ್ಯಾರ್ಥಿನಿಯರು ಸಂಗೀತ ಕಲಿಯಬೇಕೋ


ನಿಷೇಧ–ರೂಪಾಂತರ (T-Negative):

ನಿಷೇಧ ರೂಪಾಂತರವು ಮೂಲವಾಕ್ಯದಲ್ಲಿ– ಇಲ್ಲ, – ಅರ, ಬೇಡ, – ಅದ ಮೊದಲಾದ ರೂಪಗಳನ್ನು ಸೇರಿಸುತ್ತವೆ. ಈ ರೂಪಗಳು ಸೇರುವಾಗ ಕ್ರಿಯಾ ಪ್ರಕೃತಿಗೆ – ಅ ಅಥವಾ – ಅಲ್ ರೂಪಗಳು ಸೇರುತ್ತವೆ.

ನಿ–ರೂಪಾಂತರ ನಿಯಮ :

× + ಕ್ರಿಯಾ ಪ್ರಕೃತಿ+ಕಾಲ ಪ್ರತ್ಯಯ= = > × +ಕ್ರಿಯಾಪ್ರಕೃತಿ+





$$+ \left[\begin{array}{c} \left\{ \begin{array}{c} \text{ಇಲ್ಲ} \\ \text{ಆರ} \end{array} \right\} \\ \left\{ \begin{array}{c} \text{ಬೇಡ} \\ \text{ಅದ} \end{array} \right\} \end{array} \right]$$

$$\left[\begin{array}{c} \{ \text{ಇಲ್ಲ} \} \\ \{ \text{ಆರ} \} \\ \{ \text{ಬೇಡ} \} \\ \{ \text{-ಅದ} \} \end{array} \right]$$

ಪ್ರತಾಪ ಹಣ್ಣು ತಿಂದ= = = > ಪ್ರತಾಪ ಹಣ್ಣು $\left\{ \begin{array}{l} \text{ತಿನ್ನಲಿಲ್ಲ} \\ \text{ತಿನ್ನಲಾರ} \\ \text{ತಿನ್ನಬೇಡ} \\ \text{ತಿನ್ನದ...} \end{array} \right\}$

ಕರ್ಮಣಿ ರೂಪಾಂತರ (T–Passive) :

ಸಕರ್ಮಕ ಕ್ರಿಯಾಪ್ರಕೃತಿಯನ್ನು ಒಳಗೊಂಡ ಯಾವುದೇ ಮೂಲವಾಕ್ಯವು ಕರ್ಮಣಿಯಾಗಿ ರೂಪಾಂತರಗೊಳ್ಳಬಹುದು.

ಕ–ರೂಪಾಂತರ ನಿಯಮ :

ನಾಮರೂಪ- ೧ + ನಾಮರೂಪ–೨ + ಕ್ರಿಯಾಪ್ರಕೃತಿ + ಕಾಲ ಪ್ರತ್ಯಯ + ರೂಪ ಪ್ರತ್ಯಯ = = = >

ನಾಮರೂಪ–೨ + ನಾಮರೂಪ೧– + –ಇಂದ + ಕ್ರಿಯಾಪ್ರಕೃತಿ + ×

ನಾ.ರೂ.–೧	+	–ನಾ.ರೂ.೨	+	ಕ್ರಿ.ಪ್ರ.	+	ಕಾ.ಪ್ರ.	+	ರೂ.ಪ್ರ.
ರೂಪವತಿ		ಭತ್ತ		ಕುಟ್ಟ್		–ಉತ್ತ್		–ಆಳೆ

= = = >

ನಾಮರೂಪ-೨	+	ನಾಮರೂಪ-೧	+	–ಇಂದ	+	ಕ್ರಿ.ಪ್ರ	+	×
ಭತ್ತ		ರೂಪವತಿ		–ಇಂದ		ಕುಟ್ಟ್		ಅಲ್–ಪಟ್ಟಿತು

ಅನೇಕ ವಾಕ್ಯ ರೂಪಾಂತರ:

ಒಂದಕ್ಕಿಂತ ಅಧಿಕ ವಾಕ್ಯಗಳು ಐಚ್ಛಿಕ ರೂಪಾಂತರ ನಿಯಮಕ್ಕೆ ಒಳಗಾಗಿ ರೂಪಾಂತರಗೊಂಡರೆ ಅದು ಅನೇಕ ವಾಕ್ಯ ರೂಪಾಂತರ : ಸಂಯೋಜಕ, ತರ, ತಮ ಇತ್ಯಾದಿ ರೂಪಾಂತರಗಳು.

ಸಂಯೋಜಕ ರೂಪಾಂತರಗಳು (T Compound) **:**

ಎರಡು ಸಮಾನ ವಾಕ್ಯಗಳನ್ನು ಸಂಯೋಜಿಸಿ ಹೊಸ ವಾಕ್ಯವೊಂದನ್ನು ಉತ್ಪಾದಿಸುವುದೇ ಸಂಯೋಜಕ ರೂಪಾಂತರ.

ಮೂಲ ವಾಕ್ಯ: ಉತ್ತರ ಕನ್ನಡದವರು ಶ್ರಮಜೀವಿಗಳು
ಸೇರುವ ವಾಕ್ಯ: ದಕ್ಷಿಣ ಕನ್ನಡದವರು ಶ್ರಮಜೀವಿಗಳು } = >

ಉತ್ಪಾದಿತ ವಾಕ್ಯ: ಉತ್ತರ ಮತ್ತು ದಕ್ಷಿಣ ಕನ್ನಡದವರು ಶ್ರಮಜೀವಿಗಳು.

ಇಲ್ಲಿಯ ರೂಪಾಂತರ ಗತಿಯನ್ನು ಈ ಕೆಳಗಿನಂತೆ ತೋರಿಸಬಹುದು.

ಮೂಲವಾಕ್ಯ:	ಉತ್ತರ			ಕನ್ನಡದವರು	ಶ್ರಮಜೀವಿಗಳು
	↓			↓	↓
ಉತ್ಪಾದಿತ ವಾಕ್ಯ;	ಉತ್ತರ	ಮತ್ತು	ದಕ್ಷಿಣ	ಕನ್ನಡದವರು	ಶ್ರಮಜೀವಿಗಳು
			↑		
ಸೇರಿಸಿದ ವಾಕ್ಯ:			ದಕ್ಷಿಣ	ಕನ್ನಡದವರು *	ಶ್ರಮಜೀವಿಗಳು *

* ಲೋಪವಾಗುವ ಅಂಶ

ರೂಪಾಂತರದಲ್ಲಿ, ಸೇರಿದ ವಾಕ್ಯದ 'ಕನ್ನಡದವರು' ಮತ್ತು 'ಶ್ರಮಜೀವಿಗಳು' ಎಂಬ ಘಟಕಗಳು ಲೋಪವಾಗುತ್ತವೆ. ಸಂಯೋಜಕವು : 'ಮತ್ತು' ಮೂಲವಾಕ್ಯದಿಂದಲ್ಲ ಅಲ್ಲಿ ಸೇರಿದ ವಾಕ್ಯ (Insert) ದಿಂದಲೂ ಅಲ್ಲ; ಅದು ಆಗಮ,


ತರ ರೂಪಾಂತರ (T Compartive) :

ತರ ರೂಪಾಂತರದಲ್ಲಿ ಮೂಲ ಮತ್ತು ಸೇರುವ ವಾಕ್ಯಗಳೆರಡರಲ್ಲಿಯೂ ನಾಮರೂಪ+ನಾಮ ವಿಶೇಷಣ ರೂಪ + ಕ್ರಿಯಾರೂಪ ಎಂಬ ರಚನೆ ಇದೆಯಲ್ಲದೆ ಅವೆರಡುಗಳಲ್ಲಿಯೂ ಇರುವ ನಾಮ ವಿಶೇಷಣವು ಒಂದೇ. ಆದರೆ, ಉತ್ಪಾದಿತ ವಾಕ್ಯವನ್ನು ಓದಿದಾಗ ಮೂಲ ವಾಕ್ಯದಲ್ಲಿರುವ ನಾಮ ರೂಪದ ಗುಣವು ಸೇರಿದ ವಾಕ್ಯದ ನಾಮರೂಪದ ಗುಣಕ್ಕಿಂತ ಅಧಿಕವೆಂದು ತಿಳಿಯುತ್ತದೆ.

ಮೂಲವಾಕ್ಯ : ಕಾಫಿ ತಣ್ಣಗೆ ಇದೆ.
ಸೇರುವ ವಾಕ್ಯ : ನೀರು ತಣ್ಣಗೆ ಇದೆ. } = = >

ಉತ್ಪಾದಿತ ವಾಕ್ಯ : ನೀರಿಗಿಂತ ಕಾಫಿ ತಣ್ಣಗೆ ಇದೆ.

ಆದ ರೂಪಾಂತರವನ್ನು ಈ ಕೆಳಗಿನಂತೆ ಚಿತ್ರಿಸಬಹುದು :



ತಮ ರೂಪಾಂತರ (T superlative) :

ತಮ ರೂಪಾಂತರದಲ್ಲಿ ಮೂಲ ಮತ್ತು ಸೇರುವ ವಾಕ್ಯಗಳೆರಡರಲ್ಲಿಯೂ ನಾಮರೂಪ+ಕ್ರಿಯಾ ವಿಶೇಷಣ+ಕ್ರಿಯಾ ರೂಪ ರಚನೆ ಇರುತ್ತದೆ. ಆದರೆ. ಅವೆರಡುಗಳಲ್ಲಿಯೂ ಐಚ್ಛಿಕ ಲೋಪಗಳು (optional delitions) ಅಧಿಕವಾಗಿರುತ್ತವೆ. ಸಾಧಿತ ವಾಕ್ಯದಲ್ಲಿ {ಎಲ್ಲ} ಎಂಬುದರ, ಪರಿಸರಕ್ಕನುಗುಣವಾದ ರೂಪ ಆಗಮವಾಗುತ್ತದೆ; {ಹೆಚ್ಚು} ಅಥವಾ ಅದಕ್ಕೆ ಪರ್ಯಾಯವಾಗಿರುವ ರೂಪಗಳೂ ಐಚ್ಛಿಕವಾಗಿ ಬರುತ್ತವೆ :

ಮೂಲ ವಾಕ್ಯ : ನೀಲಗಿರಿ ಮರಗಳು ಉದ್ದವಾಗಿ ಬೆಳೆಯುತ್ತವೆ.
ಸೇರುವ ವಾಕ್ಯ : ಮರಗಳು ಉದ್ದವಾಗಿ ಬೆಳೆಯುತ್ತವೆ. } = >

* ಲೋಪವಾಗುವ ಅಂಶ.

ಸಾಧಿತ ವಾಕ್ಯ : ನೀಲಗಿರಿ ಮರಗಳು ಎಲ್ಲ ಮರಗಳಿಗಿಂತ ಹೆಚ್ಚು ಉದ್ದವಾಗಿ ಬೆಳೆಯುತ್ತವೆ.

ಮೂಲವಾಕ್ಯ : | ನೀಲಗಿರಿ ಮರಗಳು | | ಉದ್ದವಾಗಿ ಬೆಳೆಯುತ್ತವೆ |

↓

ಉತ್ಪಾದಿತವಾಕ್ಯ: | ನೀಲಗಿರಿ ಮರಗಳು | ಎಲ್ಲ | ಮರಗಳಿ | ಗಿಂತ | (ಹೆಚ್ಚು) |

↑ ↓

| ಮರಗಳು | | ಉದ್ದವಾಗಿ ಬೆಳೆಯುತ್ತವೆ* |

ಸೇರಿದ ವಾಕ್ಯ :

ಇಲ್ಲಿಯ ವರೆಗೆ ಕನ್ನಡ ಸಾಧಿತ ವಾಕ್ಯಗಳ ವಿವೇಚನೆಯನ್ನು ಕೆಲಮಟ್ಟಿಗೆ ಮಾಡಿದೆವು. ಈಗ ಕನ್ನಡ ಮೂಲವಾಕ್ಯಗಳ ಬಗ್ಗೆ ಪರಿಶೀಲಿಸೋಣ.

ಕನ್ನಡ ಮೂಲ ವಾಕ್ಯಗಳು ಮೂರು ರೀತಿಯವು;

ವಾಕ್ಯ —> { ಉದ್ಗಾರ
ತುಣುಕು
ನಾಮಪುಂಜ + ಕ್ರಿಯಾಪುಂಜ

ಈ ವಾಕ್ಯಗಳ ವೃಕ್ಷಚಿತ್ರ (Tree diagram) ಕೊಟ್ಟರೆ ಅವುಗಳ ರೂಪ ಸ್ಪಷ್ಟವಾಗುತ್ತದೆ.

ಉದ್ಗಾರ ವಾಕ್ಯ (Interjection)

ವಾಕ್ಯ
|
ಉದ್ಗಾರ
|
ಅಯ್ಯೋ


ತುಣುಕು ವಾಕ್ಯ: (Fragment)

೧. ವಾಕ್ಯ
|
ತುಣುಕು
|
ಶಾಲೆ

---

* ಲೋಪವಾಗುವ ಅಂಶ.

೨.



ಉದ್ಗಾರ ಹಾಗೂ ತುಣುಕು ವಾಕ್ಯಗಳು ಭಾಷೆಗೆ ಸಯು. ಗತಿ, ಕಾಂತಿ ಕೊಟ್ಟು ಭಾಷಾ ಶೈಲಿಗೆ ಪೋಷಕಗಳಾಗಿವೆ; ಆದರೆ ವ್ಯಾಕರಣ ವಿಶ್ಲೇಷಣೆಯಲ್ಲಿ ಅವುಗಳ ಪಾತ್ರ ಅಷ್ಟೊಂದು ಮುಖ್ಯವಲ್ಲ, ಕಾರಣ ವಾಕ್ಯವೆಂದರೆ ನಾಮಪುಂಜ+ ಕ್ರಿಯಾಪುಂಜ ಎಂದೇ ಇಟ್ಟುಕೊಳ್ಳಬಹುದು.

ಸೂತ್ರ: ನಾಮಪುಂಜ —> (ವಿಶೇಷಣ) + { ನಾಮರೂಪ / ಸರ್ವನಾಮರೂಪ }

ನಾಮಪುಂಜ ಭಾಗದಲ್ಲಿ ವಿಶೇಷಣ ಐಚ್ಛಿಕವಾಗಿರಬಹುದು.

ವಾಕ್ಯ : { (ಉತ್ತಮ) ವಿದ್ಯಾರ್ಥಿಗಳು / ಅವರು } ಓದುತ್ತಾರೆ.

ಸೂತ್ರ : ಕ್ರಿಯಾಪುಂಜ —> ಕ್ರಿಯಾವಾಚಕ + ಸಹಾಯಕ


ಕ್ರಿಯಾವಾಚಕ —> ಕ್ರಿಯಾವಿಶೇಷಣ+ ಕ್ರಿಯಾ ಪ್ರಕೃತಿ

ಸಹಾಯಕ —> ಕಾಲ+ರೂಪ (Mood)

ಕ್ರಿಯಾ ಪುಂಜ ಭಾಗದಲ್ಲಿ ಕ್ರಿಯಾವಾಚಕ ಮತ್ತು ಸಹಾಯಕಗಳು ಕ್ರಿಯಾ ವಾಚಕದಲ್ಲಿ ಕ್ರಿಯಾ ವಿಶೇಷಣ ಮತ್ತು ಕ್ರಿಯಾ ಪ್ರಕೃತಿಯೂ; ಸಹಾಯಕದಲ್ಲಿ ಕಾಲ ಮತ್ತು ರೂಪವೂ ಇವೆ:

ವಾಕ್ಯ: ಕಾಡು ಮರಗಳು ಉದ್ದವಾಗಿ ಬೆಳೆಯುತ್ತವೆ.

ಪದಪುಂಜ ವಿನ್ಯಾಸಕ :



ಒಟ್ಟಿನಲ್ಲಿ ಕನ್ನಡ ವಾಕ್ಯಗಳಲ್ಲಿ ಮೂಲ ಮತ್ತು ಸಾಧಿತಗಳೆಂದು ಎರಡು ವಿಧ. ಐಚ್ಛಿಕ ರೂಪಾಂತರ ನಿಯಮಗಳು ಮೂಲ ವಾಕ್ಯಗಳಿಂದ ನಾನಾ ಸಾಧಿತ ವಾಕ್ಯಗಳನ್ನು ಉತ್ಪಾದಿಸುತ್ತವೆ. ಮೂಲ ವಾಕ್ಯಗಳ ರಚನೆಯನ್ನು ಹೊಂದಿಕೊಂಡು ಅವುಗಳಲ್ಲಿ ಉದ್ಗಾರ, ತುಣುಕು ಮತ್ತು ನಾಮಪುಂಜ+ಕ್ರಿಯಾಪುಂಜ—ಎಂಬುದಾಗಿ ಮೂರು ರೀತಿಗಳನ್ನು ಕಾಣಬಹುದಾದರೂ ವ್ಯಾಕರಣ ದೃಷ್ಟಿಯಿಂದ ನಾಮಪುಂಜ+ಕ್ರಿಯಾ ಪುಂಜ ವಾಕ್ಯವೇ ಗಮನಾರ್ಹವಾದುದು; ಯಾಕೆಂದರೆ ರೂಪಗಳ ಸಂಯೋಜನೆ ಅಲ್ಲಿ ಮಾತ್ರ ಕಂಡುಬರುವುದು.

★ **ವಿಲ್ಯಮ್ ಮಾಡ್ತಾ.**

ಗುತ್ತ ವಿಕ್ರಮಾದಿತ್ಯನ ಕನವಳ್ಳಿ ಶಾಸನ

ಕನವಳ್ಳಿ ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಒಂದು ಸಣ್ಣ ಗ್ರಾಮ. ಹಾವೇರಿಯಿಂದ ಸುಮಾರು ಹತ್ತು ಮೈಲು ಪೂರ್ವಕ್ಕೆ ಮತ್ತು ಗುತ್ತಲದಿಂದ ಸುಮಾರು ಒಂಬತ್ತು ಮೈಲು ಪಶ್ಚಿಮಕ್ಕೆ ಇರುತ್ತದೆ. ಪ್ರಸ್ತುತ ಶಿಲಾಶಾಸನ ಈ ಗ್ರಾಮದ ಕಲಮೇಶ್ವರ ದೇವಾಲಯದಲ್ಲಿ ಇದೆ. ಈ ಶಾಸನ ದಲ್ಲಿ ಹೇಳಿದ ಶ್ರೀ ಕಲ್ಲಿನಾಥದೇವರ ಗುಡಿ ಇದೇ. ಶಾಸನವು ಬಹುಮಟ್ಟಿಗೆ ಸುರಕ್ಷಿತವಾಗಿದೆ. ಆದರೆ ಕೊನೆಯ ಏಳು ಸಾಲುಗಳ ನಡುವಿನ ಭಾಗದ ಮೇಲಣ ಪದರು ಹೋಗಿರುತ್ತದೆ. ಅಕ್ಷರಗಳು ಸುಮಾರು ೫/೮ ಅಂಗುಲ ಎತ್ತರ-ವಾಗಿದ್ದು ದುಂಡಾಗಿ ಮತ್ತು ಆಳವಾಗಿ ಕೆತ್ತಲ್ಪಟ್ಟಿವೆ.

ಶಾಸನದ ಲಿಪಿ ಮತ್ತು ಭಾಷೆ ಕನ್ನಡ. ಆದರೆ ಮೊದಲಿನ ಮೂರು ಪದ್ಯಗಳು ಮತ್ತು ಕಡೆಯ ಒಂದು ಪದ್ಯ ಸಂಸ್ಕೃತದಲ್ಲಿವೆ.

ಅಕ್ಷರರೀತಿ ಮತ್ತು **ಅಕ್ಷರವಿನ್ಯಾಸ** (Palaeography and Orthography) (೧): ಪ್ರಸ್ತುತ ಶಾಸನ ಕಾಲದಲ್ಲಿ ಉಕಾರ ಮತ್ತು ವ್ಯಂಜನದರ್ಶಕ ಚಿಹ್ನಗಳು ಅದಲುಬದಲಾಗುತ್ತಿದ್ದವು ಎಂದು ನಾನು ಕಂಡು ಹಿಡಿದ ನಿಯಮದ ಉದಾಹರಣೆಗಳು ಈ ಶಾಸನದಲ್ಲಿಯೂ ಕಂಡು ಬರುತ್ತವೆ. ಉದಾ: ತತ್ಪುರದೊಳ್ (ಸಾಲು ೨೮); °ಗೊಳ್ಪಿನ–(ಸಾ.೩೨) ; ಕನ್ನವಳ್ಳಿ–ಯೊಳ್ (ಸಾ. ೪೪); ಮಹೀತಳಾಗ್ರದೊಳ್ (ಸಾ. ೫೩–೫೪); ಮುಂತಾದವು. ಈ ಶಬ್ದಗಳಲ್ಲಿ ಉಕಾರದ ಚಿಹ್ನವು ವ್ಯಂಜನದರ್ಶಕವಾಗಿ ಉಪಯೋಗಿಸ-ಲಾಗಿದೆ. ಬಲುಹಪ್ಪುದು (ಸಾ. ೨೦) ; ಚೆಲುವಸಾದ (ಸಾ. ೪೦) ; ಬಂಧು-ಗಳಿಗಾಯಪ್ತು (ಸಾ. ೪೫); °ಮಕುಟಮಣಿಮಯ (ಸಾ. ೫೮) ; ಈ ಶಬ್ದ ಗಳಲ್ಲಿ ವ್ಯಂಜನ ಚಿಹ್ನವು ಉಕಾರದರ್ಶಕವಾಗಿ ಉಪಯೋಗಿಸಲಾಗಿದೆ.

(೨) 'ವ', 'ಮ' ಮತ್ತು 'ಯ' ಗಳ ರೂಪು ರೂಢಿಯ (usual) ಮತ್ತು ಓಟದ (cursive) ಹೀಗೆ ಎರಡು ಪ್ರಕಾರಗಳಲ್ಲಿ ಕಂಡು ಬರುತ್ತವೆ. ಉದಾ: 'ವ' ಕ್ಕೆ °ವಸ್ತುಬ್ರಜದಿಂ (ಸಾ. ೧೫); °ಗಾವುಂಡನ (ಸಾ. ೬೦) ; °ದೇವನುಂ (ಸಾ. ೬೮) ; ಇತ್ಯಾದಿಗಳು. 'ಮ' ಕ್ಕೆ : ಮಹಾಮಂಡಳೇಶ್ವರಂ (ಸಾ. ೨೨) ; ಮೆಚ್ಚಿ (ಸಾ. ೨೯) ; °ಮನುಮಾರ್ಗ್ಗರ್– (ಸಾ. ೫೦); ಇತ್ಯಾದಿಗಳು. 'ಯ' ಕ್ಕೆ °ಮಹಿಮೆಯನ್– (ಸಾ. ೧೩) ; ವುಜ್ಜೆಯನೀ– (ಸಾ. ೩೧) ; ಬಂಧುಗಳಿಗಾಯಪ್ತು (ಸಾ. ೪೫) ; ಚಾಮಿಯಕ್ಕನ (ಸಾ. ೪೯) ; ಇತ್ಯಾದಿಗಳು.

(೩) 'ಸ,' 'ಶ,' 'ಷ' ಗಳು ಸರಿಯಾಗಿ ಬಳಸಲಾಗಿವೆ. ಅಪವಾದಕ್ಕೆ 'ರಸಪ್ರಶಕ್ತಿ' (ಸಾ.೩೯); 'ಶೇವಾ' (ಸಾ.೬೫); 'ಶ್ವೀಕಾರ' (ಸಾ. ೪೧); ಮತ್ತು 'ವಾರಣಾಶಿ' (ಸಾ.೭೪–೭೫) ಈ ಶಬ್ದಗಳಲ್ಲಿ 'ಸ'ದ ಸ್ಥಳಗಳಲ್ಲಿ 'ಶ' ಉಪಯೋಗಿಸಲ್ಪಟ್ಟಿದೆ.

(೪) ಸಂಕ್ಷಿಪ್ತ ರೂಪಗಳು: ಪ್ರಶ (=ಪ್ರಶಸ್ತಿ), (ಸಾ. ೨೧); ವ (=ವಚನ), (ಸಾ.೩೯); ವ್ರಿ (=ವ್ರಿತ್ತ), (ಸಾ. ೩೭); ಕ (=ಕಂದ), (ಸಾ. ೪೯).

(೫) ಓಟದ ರೂಪಗಳು: ಅವತರ್ಸಿ (ಸಾ.೪); ಎನ್ನಿರ್ವ್ವ (ಸಾ.೪೫): ಕುಸ್ರ (ಸಾ. ೧೫); ಪ್ರತಿಪಾಳ್ಳಿದಾತನು (ಸಾ. ೭೪); ಇತ್ಯಾದಿಗಳು.

(೬) ಸಮಂಸ್ತೆಸೆವ (ಸಾ.೬–೭) ಈ ಶಬ್ದ ಸಮುಚ್ಚಯುದಲ್ಲಿ ಬಿಂದು ಮತ್ತು ಅನುನಾಸಿಕ ಎರಡೂ ಉಪಯೋಗಿಸಲಾಗಿವೆ.

(೭) ಒತ್ತಕ್ಷರ ಪ್ರಸಂಗದಲ್ಲಿ ಕೆಲವಡೆ ಅನುನಾಸಿಕದ ಹಿಂದೆ ಬಿಂದುವನ್ನು ಬಳಸಲಾಗಿದೆ: ಉದಾ: –ಅಂನಮನ್– (ಸಾ.೨೮): ಅಂನರಾಗರೆ (ಸಾ.೩೩); ಆದಿಂನೇವಣ್ಣಿಪೋಂ (ಸಾ. ೪೨): ಸಂನುತ (ಸಾ. ೫೩).

(೮) ಕೆಲವಡೆ ಬಿಂದುವನ್ನು ಅನವಶ್ಯಕವಾಗಿ ಕೊಟ್ಟಿದೆ: ಉದಾ: °ಉಂನ್ನತಿಯು– (ಸಾ.೧೦); ಚಂದ್ರಗುಪ್ತಾಂಸ್ವಯು– (ಸಾ. ೨೩): ಮಿಕ್ಕಾಂ-ನ್ಯರ್ (ಸಾ. ೫೫).

(೯) ಸಾಮಾನ್ಯವಾಗಿ ರೇಫೆಯ ಜೊತೆಗೆ ದ್ವಿತ್ವ ಬಂದಿದೆ: ಅಪವಾದಕ್ಕೆ '°ವಾಕ್ಯಾತರ್ಕ– (ಸಾ.೫) ಈ ಪದಸಮುಚ್ಚಯದಲ್ಲಿ ದ್ವಿತ್ವ ಉಪಯೋಗಿಸಿರುವದಿಲ್ಲ.

(೧೦) 'ರ್ಣ' ಅಕ್ಷರ ಸಾಮಾನ್ಯವಾಗಿ 'ರ್ನ' ಎಂದು ಬರೆಯಲಾಗಿದೆ. ಉದಾ: ಪೂರ್ನ (ಸಾ.೧೯, ೨೪, ೩೩, ೭೫); ಸಂಪೂರ್ನ (ಸಾ.೫೯, ೬೫): ವರ್ನ (ಸಾ.೬೭); ಸುವರ್ನ (ಸಾ.೭೫); ಅಪವಾದಕ್ಕೆ 'ಕರ್ಣಕುಂಡಳನುಮಪ್ಪ' ಈ ಸ್ಥಳದಲ್ಲಿ 'ರ್ಣ' ಬಳಸಲಾಗಿದೆ.

(೧೧) ವರ್ಗಚತುರ್ಥದ ಸ್ಥಳದಲ್ಲಿ ವರ್ಗತೃತೀಯವನ್ನು ಈ ಮುಂದಿನ ಶಬ್ದಗಳಲ್ಲಿ ಉಪಯೋಗಿಸಲಾಗಿದೆ: ಬಹುವಿದಂ (ಸಾ.೨೦): ಸಾದಿಸಿ (ಸಾ. ೩೭); °ದ್ದರ್ನ್ಯರೆ (ಸಾ.೪೯); ಆದರೆ, 'ಶುಧ್ಧ' (ಸಾ.೪೯) ಈ ಶಬ್ದದಲ್ಲಿ ದ್ವಿತ್ವದ ಎರಡೂ ಅಕ್ಷರಗಳು ವರ್ಗಚತುರ್ಥವಾಗಿವೆ.

(೧೨) ಸೊಗಯಿಪುತೇ (ಸಾ ೧೭), ಬೇಡಿತ (ಸಾ. ೫೧) ಈ ರೂಪಗಳು ಗಮನಾರ್ಹವಾಗಿವೆ.

ಶಾಸನದ ಸಾರಾಂಶ: ಪ್ರಾರಂಭದಲ್ಲಿ ಶಂಭು ಮತ್ತು ಕಲ್ಲಿನಾಥದೇವರ ಸ್ತುತಿ [ಪದ್ಯ ೧–೩]. ತರುವಾಯ ಶ್ರೀ ಕಲ್ಲಿನಾಥಪ್ರಭು ಸಕಳ ಭೂಮಂ–ಡಳವನ್ನು ರಕ್ಷಿಸುತ್ತಾನೆ ಎಂದು ಪ್ರಸ್ತಾಪಿಸಿ, ಆತನು ಕುಂತಳ ದೇಶವನ್ನು ನೋಡುವ ಕುರಿತು ಕನಕಾದ್ರಿಯನ್ನು ಏರಿದನೆಂದು ಹೇಳಿರುತ್ತದೆ, [ಪ. ೪]. ಈ ಪ್ರಕಾರ ಭೂಲೋಕಕ್ಕವತರಿಸಿ ನೋಡುವಲ್ಲಿ ಆತನ ನೋಟಿಗೆ ಮತ್ಸ್ಯ-ಕೂರ್ಮ, ನೀರಾನೆಯಾದಿ ಚಿತ್ರವಿಚಿತ್ರ ಪ್ರಾಣಿಗಳಿಂದ ಸಮಾವೇಶಗೊಂಡರತ್ನಾಕರವು ಕಾಣುತ್ತದೆ [ಸಾ.೮–೯, ಪ. ೫]. ಆ ಮಹಾಸಾಗರದಿಂದ ವೇಷ್ಟಿತವಾದ ಕನಕಾಚಳ, ಆ ಕನಕಾಚಳದ ಸರ್ವಸ್ವಮಿಪ್ಪಂತಿರ್ದ್ದ ಜಂಬೂದ್ವೀಪ ಕಾಣುತ್ತವೆ (ಪ. ೬೭) ಅನೇಕಾನೇಕ ವಸ್ತು ವಿಸ್ತಾರದಿಂದ ಶೋಭಿಸುತ್ತಿರುವ ಕುಂತಳ ದೇಶವು ಜಂಬೂದ್ವೀಪದ ಒಂದು ಪ್ರದೇಶ [ಪ. ೮]. ಅದರಲ್ಲಿ ಬನವಸೆನಾಡು ಒಂದು ವಿಭಾಗ (ಪ. ೯). ಈ ಬನವಸೆ ನಾಡಿನಲ್ಲಿ ಬೆಳುಹಿಗೆನಾಡು ಗಿರಿ, ಅರಣ್ಯ, ಧೇನುಗಳಿಂದ ಸಮೃದ್ಧವಾಗಿರುತ್ತದೆ (ಪ. ೧೦). ಇಂತಹ ಬೆಳುಹಿಗೆ ನಾಡಿ–ನಲ್ಲಿ ಕೋಟೆ, ಕಂದಕ, ಕೊತ್ತಳಿಗಳಿಂದ ಭದ್ರವಾಗಿದ್ದ, ಉತ್ಕೃಷ್ಟಮಪ್ಪ ಉಪ್ಪ-ರಿಗೆ ಮನೆಗಳಿಂದ, ಎತ್ತರವಾದ ಪತಾಕೆಗಳಿಂದ ಕಂಗೊಳಿಸುತ್ತಿದ್ದ ಗುತ್ತಲ ದುರ್ಗ ಮಧುರೆದುರ್ಗವನ್ನು ಹೋಲುತ್ತದೆ (ಪ.೧೧). ಆ ದುರ್ಗಕ್ಕೆ (ಇಮ್ಮಡಿ) ವಿಕ್ರಮಾದಿತ್ಯನು ದೊರೆಯಾಗಿದ್ದನು (ಪ. ೧೨).

ತರುವಾಯ (ಇಮ್ಮಡಿ) ವಿಕ್ರಮಾದಿತ್ಯನ ಪ್ರಶಸ್ತಿ ಬರುತ್ತದೆ. ಚಂದ್ರ ಗುಪ್ತಾನ್ವಯಕ್ಕೆ ಪೂರ್ಣಚಂದ್ರನಂತೆಯಿದ್ದ ಈ ಅರಸನು ಬನವಸೆ ನಾಡನ್ನು ಆಳುತ್ತಿದ್ದ (ಸಾ ೨೨-೨೬). ಮುಂದಿನ ಪದ್ಯ ಉಜ್ಜಯನಿಯ ವಿಕ್ರಮಾದಿತ್ಯ ಅರಸನಿಗೆ ಸಂಬಂಧಿಸಿದೆ (ಪ, ೧೩). ಹದಿನಾಲ್ಕನೆಯ ಪದ್ಯ* (ಇಮ್ಮಡಿ) ವಿಕ್ರಮಾದಿತ್ಯನನ್ನು ವರ್ಣಿಸುತ್ತದೆ. ತರುವಾಯ ಮೂರು ತಲೆಮಾರಿನ ವರೆಗೆ ಆತನ ವಂಶಾವಳಿ ಕೊಡಲ್ಪಟ್ಟಿದೆ. ಹದಿನೈದರಿಂದ ಹದಿನೇಳನೆಯ ಪದ್ಯ-ಗಳಲ್ಲಿ ಆತನ ತಾತನಾದ ಹಿರಿಯ ವಿಕ್ರಮಾದಿತ್ಯನ ವರ್ಣನೆ ಬರುತ್ತದೆ. ಹಿರಿಯ ವಿಕ್ರಮಾದಿತ್ಯನಿಗೆ ಇಬ್ಬರು ಮಕ್ಕಳು: ಜೋಯಿದೇವ ಮತ್ತು ಗುತ್ತ. ಇವರ ವರ್ಣನೆ ೧೮ ಮತ್ತು ೧೯ ನೆಯ ಪದ್ಯಗಳಲ್ಲಿ ಬರುತ್ತದೆ. ಈ ಮೂರು ಅರಸರು, ಮೊದಲನೆ ವಿಕ್ರಮಾದಿತ್ಯ, ಇಮ್ಮಡಿ ಜೋಯಿದೇವ ಮತ್ತು ಇಮ್ಮಡಿ ಗುತ್ತರಸನೆಂದು ಗುತ್ತೊಳಲದ ಗುತ್ತ ವಂಶದಲ್ಲಿ ಪ್ರಸಿದ್ಧರಿರುತ್ತಾರೆ. ಆ ಮೇಲೆ ೨೦–೨೧ ಪದ್ಯಗಳಲ್ಲಿ ಪುನಃ ಇಮ್ಮಡಿ ವಿಕ್ರಮಾದಿತ್ಯನ ವರ್ಣನೆ ಬರುತ್ತದೆ.

(ಕರ್ನಾಟಕದ) ಗುಪ್ತಾನ್ವಯಕ್ಕೆ ಜನ್ಮಭೂಮಿಯಾದ ಬೆಳುಹಿಗೆ ನಾಡೊಳಗೆ, ಕೋಟೆಗಳಿಂದ ಶೋಭಿಸುತ್ತಿರುವ ಕನವಳ್ಳಿ ಗ್ರಾಮದ ವರ್ಣನೆ

* ಈ ಪದ್ಯ ಹಿರಿಯ ವಿಕ್ರಮಾದಿತ್ಯನಿಗೆ ಸಹ ಅನ್ವಯಿಸಲಿಕ್ಕೆ ಸಾಧ್ಯವಿದೆ.

೨೨-೨೩ ಪದ್ಯಗಳಲ್ಲಿ ಬರುತ್ತವೆ. ಆ ಗ್ರಾಮದಲ್ಲಿ ಅನೇಕ ದೇವಾಲಯಗಳು. ಬ್ರಾಹ್ಮಣರ ಮನೆಗಳು ಮತ್ತು ಮುನಿಜನರ ಆಶ್ರಮಗಳು ಇದ್ದವು. ಅಲ್ಲಿ ತೆಂಗು, ಅಡಿಕೆ, ತಾಡಲ, ಹಲಸು, ಮಾವು, ನೇರಿಲ, ಬಾಳೆ, ನಾರಂಗ, ಅಶೋಕ ಮುಂತಾದ ಫಲಪುಷ್ಪಾದಿ ಗಿಡಗಳು; ಲವಂಗ, ನಾಗಲತೆ, ಕೇದಿಗೆ, ಮಲ್ಲಿಗೆ, ಜಾಜಿ, ಕಮಳ, ಮುಂತಾದ ಬನ, ಬಳ್ಳಿಗಳು ಕಣ್ಗೆಸೆದು ತೋರುತಿದ್ದವು, ಆ ಗ್ರಾಮದ ಪ್ರಭು ಜೆನ್ನಗಾಂಡ (ಪ ೨೪). ಮುಂದಿನ ಪದ್ಯದಲ್ಲಿ ಆತನ ಗುಣ ವರ್ಣನೆ ಬರುತ್ತದೆ. ಆತನ ಹೆಂಡತಿ ಚಾಮಿಯಕ್ಕ. ಇವರಿರ್ವರಿಗೆ ಬೀರ ಮತ್ತು ಮಾರನೆಂಬ ಇಬ್ಬರು ಪುತ್ರರು (ಪ. ೨೬). ಮುಂದಿನ ಎರಡು ಪದ್ಯಗಳು ಬೀರನ ವರ್ಣನೆ ಕೊಡುತ್ತವೆ. ೨೯ ಮತ್ತು ೩೦ ನೆಯ ಪದ್ಯಗಳು ಮಾರನನ್ನು ವರ್ಣಿಸುತ್ತವೆ. ಬೀರನ ಪುತ್ರ ಜೆನ್ನ (ಪ. ೩೧). ಮಾರನ ಪುತ್ರ ದೇವಣ್ಣ (ಪ. ೩೨). ದೇವಣ್ಣನ ಹೆಚ್ಚಿನ ವರ್ಣನೆ (ಸಾಲು ೬೩–೬೬) ರಲ್ಲಿ ಮತ್ತು ಪದ್ಯ ೩೩ ದಲ್ಲಿ ಬರುತ್ತದೆ.

ತರುವಾಯ ದತ್ತಿಯ ವಿವರಗಳು ಬರುತ್ತವೆ. ಶಕ ೧೧೫೫ ನೆಯ ವಿಜಯ ಸಂವತ್ಸರದಲ್ಲಿ ನಿರ್ದಿಷ್ಟವಾದ ದಿವಸ ಮಹಾಮಂಡಳೇಶ್ವರ ವೀರ ವಿಕ್ರಮಾದಿತ್ಯದೇವನು. ಕನ್ನವಳ್ಳಿಯ ಜೆನ್ನಗಾವುಂಡನು, ಅದೇ ಗ್ರಾಮದ ಶ್ರೀ ಕಲ್ಲಿನಾಥದೇವರ ಸೇವೆಗೆ ಗದ್ದೆ, ಎರೆಭೂಮಿ, ಕೆಂಗಾಡು, ಹೂದೋಟ ಮುಂತಾದವುಗಳನ್ನು ದಾನ ಮಾಡಿ ಕೊಟ್ಟರು. ಈ ಭೂಮಿಗಳ ತೆರೆ, ಒಕ್ಕಲುದೆರೆ, ಹೆಜ್ಜುಂಕ ಇತ್ಯಾದಿಗಳನ್ನು ಪರಿಹಾರಮಾಡಿಕೊಟ್ಟರು. ದೇವರ ದೀವಿಗೆಗೆ ಎಣ್ಣೆ ಮತ್ತು ಗಾಣ ಬಿಟ್ಟುಕೊಟ್ಟರು (ಸಾ. ೬೭–೭೪).

ಮುಂದೆ, ಈ ದಾನವನ್ನು ಯಾರೂ ಕೆಡಸಬಾರದೆಂದು ಎಲ್ಲರು ಕಾಪಾಡಬೇಕೆಂದು ಶಾಪಾಶೀರ್ವಾದವಚನಗಳು ಬರುತ್ತವೆ (ಸಾ. ೭೪–೭೭).

ಕೊನೆಯಲ್ಲಿ ಶಾಸನವನ್ನು ರಚಿಸಿದ ಕವಿಯ ಹೆಸರು ಬಂದಿರುತ್ತದೆ. ಆದರೆ, ಈ ಭಾಗ ಒಡೆದು ಹೋದ ಮೂಲಕ ಆತನ ಹೆಸರು ನಮಗೆ ಎರವಾಗಿದೆ. ಸರಸ್ವತಿ ಮತ್ತು ವಿನಾಯಕ ದೇವತೆಗಳಿಗೆ ನಮಸ್ಕರಿಸಿ ಶಾಸನವು ಕೊನೆಗೊಂಡಿದೆ.

ಹದಿಮೂರುನೂರಕ್ಕೆ ಮಿಕ್ಕ ಶಬ್ದಗಳುಳ್ಳ ಈ ಬೃಹತ್ ಶಾಸನದಲ್ಲಿ **ಲೇಖನದೋಷಗಳು** ಅತಿ ಕಡಿಮೆಯಾಗಿ ಕಂಡುಬರುತ್ತವೆ. ಅವು: ರಿಷ್ಯಾಶ್ರಿಮ (ರಿಷ್ಯಾಶ್ರಮ) (ಸಾ. ೪೧-೪೨); ಕಯ್ಬಿಡಿದ (ಕೆಯ್ಬಿಡಿದಾ) (ಸಾ. ೪೬); ಸದೀಕ್ಷೆ (ಸದ್ವೀಕ್ಷೆ) (ಸಾ. ೪೬); ಶಣ್ಬುಗೆ (ಶರಣ್ಬುಗೆ) (ಸಾ. ೫೧); ಶತಮುಖ (ಶತಮುಖ) (ಸಾ. ೫೪); ಮಹಿಯೆಂತೆನೆ (ಮಹಿಮೆಯೆಂತೆನೆ) (ಸಾ. ೬೬); ವ್ಯತೀಪಾತದದು (ವ್ಯತೀಪಾತದಂದು) (ಸಾ. ೬೮); ಕೆಗಾಡು (ಕೆಂಗಾಡು) (ಸಾ. ೭೧) ಮತ್ತು ಇ ಧರ್ಮ್ಮ (ಈ ಧರ್ಮ್ಮ) (ಸಾ. ೭೧).

ಶಾಸನದ ರಾಜಕೀಯ ಚರ್ಚೆ : ಶಾಸನದಲ್ಲಿ ಯಾವ ಸಾರ್ವಭೌಮನ ಆಧಿಪತ್ಯವನ್ನೂ ನಿರ್ದಿಷ್ಟ ಮಾಡಿರುವದಿಲ್ಲ. ವೀರ ವಿಕ್ರಮಾದಿತ್ಯನು ತನಗೆ ಮಹಾಮಂಡಳೇಶ್ವರನೆಂದು ಹೇಳಿಕೊಂಡಿದ್ದಾನೆ. ಆದರೂ, ಆತನು ಸ್ವತಂತ್ರ ಅರಸನಿದ್ದಂತೆ ಕಾಣುತ್ತದೆ. ಆ ಕಾಲಕ್ಕೆ ಗುತ್ತರಾಜ್ಯದ ಸುತ್ತಲು ಸೇವುಣ ಸಿಂಹಣದೇವನ ಸಾರ್ವಭೌಮ ಆಧಿಪತ್ಯ ನಡೆಯುತ್ತಿತ್ತು. ಆದರೆ ವೀರ ವಿಕ್ರಮಾದಿತ್ಯನು ಸೇವುಣರ ಮೇಲಾಳಿಕೆಯನ್ನು ಒಪ್ಪಿರುವಂತೆ ಕಾಣುವುದಿಲ್ಲ. ಕ್ರಿ. ಶ. ೧೧೮೩ ನೆಯ ಹೂಲಿಹಳ್ಳಿ[೧] ಶಾಸನದಲ್ಲಿ ಮತ್ತು ಅದೇ ವರ್ಷದ ಮೈದೂರ[೨] ಶಾಸನದಲ್ಲಿ ವೀರ ವಿಕ್ರಮಾದಿತ್ಯನು ತನಗೆ ಕಲಚುರಿ ಆಹವಮಲ್ಲನು ಸಾರ್ವಭೌಮನೆಂದು ಹೇಳಿಕೊಂಡಿದ್ದಾನೆ. ಈತನ ದೊಡ್ಡಪ್ಪನಾದ ಇಮ್ಮಡಿಜೋಯಿದೇವನಾದರೂ[೩] ಕಲಚುರಿ ಸಾರ್ವಭೌಮತ್ವವನ್ನು ಒಪ್ಪಿದ್ದನು. ಕಲಚುರಿ ಸಾಮ್ರಾಜ್ಯ ನಾಶವಾದ ತರುವಾಯ ಕೆಲಕಾಲ (ಕ್ರಿ.ಶ. ೧೧೮೩-೮೭) ಚಾಳುಕ್ಯ ನಾಲ್ವಡಿ ಸೋಮೇಶ್ವರನ ಆಳಿಕೆ ನಡೆಯಿತು. ಈ ಕಾಲದಲ್ಲಿ ಚಾಳುಕ್ಯ ಸೋಮೇಶ್ವರನ ಸಾಮ್ರಾಜ್ಯವನ್ನು ಎತ್ತಿಹಿಡಿದ ಮಂಡಳೇಶ್ವರರಲ್ಲಿ ವೀರ ವಿಕ್ರಮಾದಿತ್ಯನೂ ಇದ್ದಂತೆ ಕಾಣುತ್ತದೆ. ಈ ಮಾತಿನ ಪ್ರತಿಧ್ವನಿ ಪ್ರಸ್ತುತ ಶಾಸನದಲ್ಲಿ ವಿಕ್ರಮಾದಿತ್ಯನು ಶಾಸನದ ತೇದಿ ಹೇಳುವಾಗ ಸೋಮೇಶ್ವರನ ಹೆಸರನ್ನು ನಿರ್ದೇಶಮಾಡುವದರಲ್ಲಿ ಅಡಕವಾಗಿದೆ. ಕ್ರಿ.ಶ. ೧೧೮೮ ನೆಯ ವೀರ ವಿಕ್ರಮಾದಿತ್ಯನ ಹಾವನೂರ[೪] ಶಾಸನದಲ್ಲಿ ಚಾಳುಕ್ಯ ಜಗದೇಕಮಲ್ಲನ ಆಳಿಕೆ ಹೇಳಲಾಗಿದೆ. ಈ ಜಗದೇಕಮಲ್ಲನನ್ನು ನಾಲ್ವಡಿ ಸೋಮೇಶ್ವರನ ತಮ್ಮನೆಂದು ಭಾವಿಸಲಾಗಿರುತ್ತದೆ.[೫] ಚಾಲುಕ್ಯರ ತರುವಾಯ ಸೇವುಣ, ಹೊಯ್ಸಳರ ಘರ್ಷಣಕಾಲದಲ್ಲಿ ವಿಕ್ರಮಾದಿತ್ಯನು ಸ್ವತಂತ್ರವಾಗಿ ರಾಜ್ಯವಾಳಿದನೆಂದು ತೋರುತ್ತದೆ. ಕ್ರಿ.ಶ ೧೧೮೮ ನೆಯ ಆತನ ಹರಳಹಳ್ಳಿ[೬] ಶಾಸನದಲ್ಲಿ ಯಾವ ಚಕ್ರವರ್ತಿಯ ಆಳಿಕೆ ಹೇಳಿಲ್ಲ. ಅದೇ ಪ್ರಕಾರ ಕ್ರಿ.ಶ.೧೧೯೧ನೆಯ ಚೌಡದಾನಪುರ[೭] ಶಾಸನದಲ್ಲಿಯೂ ಮತ್ತು ಕ್ರಿ.ಶ. ೧೨೧೩ ನೆಯ ಹರಳಹಳ್ಳಿಯ[೮] ಮತ್ತೊಂದು ಶಾಸನದಲ್ಲಿಯೂ ಯಾವ ಚಕ್ರವರ್ತಿಯ ಆಳಿಕೆ

---

೧. Bombay Government Gazetteer, vol. I, P-II, P. 582; ಅಡಿಟಿಪ್ಪಣೆ ೧.

೨. ನನ್ನ ಸಂಗ್ರಹದಲ್ಲಿದ್ದ ಶಾಸನಗಳ ಅಚ್ಚುಗಳಿಂದ.

೩. Bombay Government Gazetteer, vol. I. P. II, 581 ಹರಳಹಳ್ಳಿ ಶಾಸನ, ತೇದಿ: ೧೧೮೧; ಅಡಿಟಿಪ್ಪಣೆ ೪.

೪. ನನ್ನ ಸಂಗ್ರಹದಲ್ಲಿದ್ದ ಶಾಸನದ ಅಚ್ಚುಗಳಿಂದ.

೫. Kannada Sahitya Patrike, 1952; vol. 37; Nos. 1-2: pp. 119-20. Dr. P. B. Desai on Jagadekamalla.

೬. Bombay Government Gazetteer, vol. I, P. I, p-482. ಅಡಿಟಿಪ್ಪಣೆ ೩.

೭. ಅದೇ; ಮತ್ತು ಶಿವದೇವವಿಜಯಂ, ೭ನೆ ಶಾಸನ, ಪು. ೨೬-೩೨.

೮. Bombay Government Gazetteer, vol. I, P II, p. 583, ಅಡಿಟಿಪ್ಪಣೆ ೧.

ಹೇಳಿರುವದಿಲ್ಲ. ಕ್ರಿ. ಶ. ೧೨೧೩ ತರುವಾಯು ಪ್ರಸ್ತುತ ಕನವಳ್ಳಿ ಶಾಸನದ ವರೆಗೆ ವೀರ ವಿಕ್ರಮಾದಿತ್ಯನ ಶಾಸನಗಳು ದೊರೆತಿಲ್ಲ. ಕಾರಣ ಕ್ರಿ.ಶ. ೧೨೧೩ ರಿಂದ ಕ್ರಿ.ಶ. ೧೨೩೩ ವರೆಗಿನ ಅವಧಿಯಲ್ಲಿಯ ಪರಿಸ್ಥಿತಿ ಗೊತ್ತಾಗುವಂತೆ ಇಲ್ಲ. ಮುಂದೆ ವೀರ ವಿಕ್ರಮಾದಿತ್ಯನ ಮಗನಾದ ಮುಮ್ಮಡಿ ಜೋಯಿದೇವನು ಸೇವುಣರ ಆಧಿಪತ್ಯ ಒಪ್ಪಿದ್ದು ಸಿಂಹಣದೇವನ ಹರಳಹಳ್ಳಿ ತಾಮ್ರಪಟದಿಂದ[೯] (ಕ್ರಿ.ಶ. ೧೨೩೮) ಗೊತ್ತಾಗುತ್ತದೆ.

ಮೇಲೆ ಹೇಳಿದ ಹರಳಹಳ್ಳಿ ಮತ್ತು ಚೌಡದಾನಪುರ ಶಾಸನಗಳಿಂದ ವೀರ ವಿಕ್ರಮಾದಿತ್ಯನಿಗೆ 'ಆಹವಾದಿತ್ಯ ವೀರವಿಕ್ರಮಾದಿತ್ಯ'ವೆಂದೂ ಹೆಸರುವಿದ್ದಂತೆ ತಿಳಿಯುತ್ತದೆ. ಮೇಲಿನ ಶಾಸನಗಳಿಂದ ಈತನು ಗುತ್ತವಂಶದಲ್ಲಿ ಬಲಾಢ್ಯ ಮತ್ತು ಪರಾಕ್ರಮಿ ಅರಸನಾಗಿದ್ದು ವಂಶಪರಂಪರಾಗತ ಗುತ್ತವೊಳಲದ ರಾಜ್ಯ-ವನ್ನು ವಿಸ್ತರಿಸಿ ಸಮಗ್ರ ಬನವಸೆನಾಡವನ್ನು ಬಹು ಕಾಲ ಆಳಿದನೆಂದು ತಿಳಿದು ಬರುತ್ತದೆ. ಈತನ ಮೊದಲನೆ ಶಾಸನ ಕ್ರಿ.ಶ. ೧೧೮೨ ನೆಯ ಇಸ್ವಿಯದಿದ್ದು ಕಡೆಯ ಶಾಸನ ಪ್ರಸ್ತುತ ಕನವಳ್ಳಿ ಶಾಸನವಿರುತ್ತದೆ (ಕ್ರಿ.ಶ. ೧೨೩೩). ಕಾರಣ ಈತನು ಐವತ್ತು ವರ್ಷಗಳಿಗೆ ಹೆಚ್ಚಾಗಿ ರಾಜ್ಯವಾಳಿದನು.

ಶಾಸನದ ತೇದಿ 'ಚಾಳುಕ್ಯ ಚಕ್ರವರ್ತ್ತಿ ಸೋಮಿದೇವ ವರಿಷದ ೧೧೫೫ ದನೆಯ ವಿಜೆಯ ಸಂವತ್ಸರದ ಚೈತ್ರ ಶುದ್ಧ ಅಷ್ಟಮಿ ಸೋಮವಾರ ಬ್ಯತೀಪಾತದಂದು' ಎಂದು ಸಾಲು ೬೭–೬೮ ನೆಗಳಲ್ಲಿ ಬರುತ್ತದೆ. ಶಕ. ೧೧೫೫ ನೇಕ್ಕೆ ವಿಜಯ ಸಂವತ್ಸರವು ಗತಸಂವತ್ಸರವಾಗಿದ್ದು ಅದಕ್ಕೆ ಸರಿಯಾಗಿ ಕ್ರಿ. ಶ. ೧೨೩೩ ಆಗುತ್ತದೆ. ನಿರ್ದಿಷ್ಟವಾದ ಚೈತ್ರ ಶುದ್ಧ ಅಷ್ಟಮಿ ತಿಥಿ ಮಾರ್ಚ ತಿಂಗಳ ೨೦ ನೇ ತಾರೀಖಿಗೆ ಆದಿತ್ಯವಾರ ಬರುತ್ತದೆ. ಆ ಕಾಲದ ಆ ಸ್ಥಳದ ಪಂಚಾಂಗದಲ್ಲಿ ಅಷ್ಟಮಿಯು ಶಾಸನದಲ್ಲಿ ಉಕ್ತವಾದ ಪ್ರಕಾರ ಸೋಮವಾರವಿದ್ದಂತೆ ಕಾಣುತ್ತದೆ. ಆದುದರಿಂದ ಶಾಸನದಲ್ಲಿ ಹೇಳಿದ ವಾರ ಗ್ರಾಹ್ಯ ಮಾಡಿಕೊಂಡು ಶಾಸನದ ತೇದಿ **ಸೋಮವಾರ ಮಾರ್ಚ ೨೧ ಕ್ರಿ. ಶ. ೧೨೩೩** ವೆಂದು ನಾವು ನಿಶ್ಚಯಿಸಬಹುದು.

ಚಾಳುಕ್ಯ ಚಕ್ರವರ್ತಿ ಸೋಯಿದೇವನು ನಾಲ್ವಡಿ ಸೋಮೇಶ್ವರ ನಾಗಿರುತ್ತಾನೆ. ಕ್ರಿ. ಶ. ೧೨೩೩ ರಲ್ಲಿ ಆತನು ಜೀವಂತವಿದ್ದನೊ ಇಲ್ಲವೊ ತಿಳಿಯದು. ಆತನು ಪ್ರತ್ಯಕ್ಷ ರಾಜ್ಯವಾಳಿದ ಕಾಲ ಕ್ರಿ. ಶ. ೧೧೮೩ ರಿಂದ ೧೧೮೭ ರ ವರೆಗೆ ಇರುತ್ತದೆ. ತರುವಾಯು ಆತನ ಹೆಸರು ಕೆಲವು ಶಾಸನ ಗಳಲ್ಲಿ ಬರುತ್ತದೆ. ಉದಾಹರಣವಾಗಿ ಹುಬ್ಬಳ್ಳಿ[೧೦] ಶಾಸನ (ಕ್ರಿ. ಶ. ೧೧೯೮),

೯. ಅದೇ; ಅಡಿಟಿಪ್ಪಣಿ ೪.
೧೦. The Kadamba Kula; Dr. G.M. Moraes, No. 23, pp. 467-74.

ಮಾನಗುಂಡಿ[11] ಶಾಸನ (ಕ್ರಿ. ಶ. ೧೨೦೩–೧೫–೧೬). ಆತನ ಹೆಸರು ಅತಿ ಮೊದಲಿಗೆ ಕಂಡು ಬಂದದ್ದು ಕ್ರಿ.ಶ. ೧೧೭೪ ನೆಯ ಡಿಂಬವಲಿ[12] ಶಾಸನದಲ್ಲಿ. ಪ್ರಸ್ತುತ ಕನ್ನವಳ್ಳಿಯ ಶಾಸನದ ತೇದಿಗೆ ಆತನು ಜೀವಂತವಿರಲು ಅಸಂಭವ-ನೀಯವೇನಲ್ಲ.

ಶಾಸನದಲ್ಲಿ ನಿರ್ದಿಷ್ಟವಾದ ಸ್ಥಳಗಳು : (೧) ಜಂಬೂದ್ವೀಪ (ಸಾ. ೧೪); (೨) ಕುಂತಳದೇಶ (ಸಾ. ೭,೧೫); (೩) ಬನವಸೆ ನಾಡು (ಸಾ. ೧೬); (೪) ಬೆಳುಹಿಗೆ ನಾಡು (ಸಾ. ೧೮); (೫) ಗುತ್ತೊಳಲ್ (ಸಾ. ೨೦); (೬) ಮಧುರೆ (ಸಾ. ೩೦); (೭) ಉಜ್ಜೇನೀ (ಸಾ. ೨೨); (೮) ಕನ್ನವಳ್ಳಿ (ಸಾ. ೪೦); (೯) ರಿತ್ತಿ (ಸಾ. ೭೧). (೧) ಜಂಬೂದ್ವೀಪವು ಸ್ಥೂಲವಾಗಿ ಏಶಿಯಾ ಖಂಡ. (೨) ಕುಂತಳವು ಸಾಮಾನ್ಯವಾಗಿ ಕರ್ನಾಟಕ. (೩) ಬನವಸೆ ನಾಡು ತುಂಗಭದ್ರಾ ಮತ್ತು ವರದಾ ನದಿಗಳ ನಡುವಿನ ಪ್ರದೇಶ (೪) ಬೆಳುಹಿಗೆ ನಾಡು ಗುತ್ತರ ನೆಲೆನಾಡು. ಶಾಸನದಲ್ಲಿ ಈ ನಾಡಿಗೆ ಚಂದ್ರಗುಪ್ತಾನ್ವಯದ ಜನ್ಮಭೂಮಿಯೆನ್ನ-ಲಾಗಿದೆ. ಮೊದಲನೆಯ ಜೋಯಿದೇವನ ಹೊನ್ನತ್ತಿ[13] ಶಾಸನದಲ್ಲಿ (ಕ್ರಿ.ಶ. ೧೧೨೪), ಈ ನಾಡಿಗೆ 'ಬೆಳುಹಿಗೆ ಎಪ್ಪತ್ತು' ಎಂದು ಕರೆಯಲಾಗಿದೆ. ಈ ನಾಡಿನ ಮುಖ್ಯಗ್ರಾಮ ಬೆಳವಗಿ. ಅದು ಈಗ ಹಾವೇರಿ ತಾಲೂಕಿನ ಪೂರ್ವ ಭಾಗದಲ್ಲಿ ವರದಾ ನದಿಯ ದಕ್ಷಿಣತೀರದಲ್ಲಿ ಒಂದು ಮಧ್ಯಮ ತರಗತಿಯ ಗ್ರಾಮವಾಗಿದೆ. ಬೆಳುಹಿಗೆ ನಾಡು ಹಾವೇರಿ ತಾಲೂಕಿನ ಪೂರ್ವಭಾಗ ವ್ಯಾಪಿ-ಸಿದ್ದು, ಗಳಗನಾಥ, ಹಾವ್ರನೂರ, ಗುತ್ತಲ, ಹೊಸರಿತ್ತಿ, ಹಳೆರಿತ್ತಿ, ಕನವಳ್ಳಿ, ಮುಂತಾದ ಗ್ರಾಮಗಳು ಆದರಲ್ಲಿ ಒಳಪಟ್ಟಿದ್ದವು. (೫) ಗುತ್ತೊಳಲ್ ಗುತ್ತರ ರಾಜಧಾನಿ, ಈಗಿನ ಗುತ್ತಲ. ಹಾವೇರಿ ತಾಲೂಕಿನಲ್ಲಿ ಹಾವೇರಿಯಿಂದ ಪೂರ್ವಕ್ಕೆ ಸುಮಾರು ೧೯ ಮೈಲು ಅಂತರ. (೬) ಮಧುರೆ ಉತ್ತರ ಪ್ರದೇಶದ ಮಥುರಾ ಇಲ್ಲವೆ ತಮಿಳನಾಡಿನ ಮದುರೆ. (೭) ಉಜ್ಜೇನೀ ಮಾಳವಾ ದೇಶದ ಉಜ್ಜಯಿನಿ. (೮) ಕನ್ನವಳ್ಳಿ ಮೇಲೆ ಬಂದಿದೆ. (೯) ರಿತ್ತಿ. ಹಾವೇರಿ ತಾಲೂಕಿನ ಪೂರ್ವಭಾಗದಲ್ಲಿ, ಕನವಳ್ಳಿಯ ಉತ್ತರಕ್ಕೆ ಸುಮಾರು ಐದು ಮೈಲು ಅಂತರ-ದಲ್ಲಿದ್ದ ಹಳೆರಿತ್ತಿ ಆಗಬಹುದು. ಹಳೆರಿತ್ತಿಯಿಂದ ಮೂರು ಮೈಲುಗಳ ಮೇಲೆ ವರದಾ ನದಿಯ ದಂಡೆಯಲ್ಲಿ ಹೊಸರಿತ್ತಿ ಇರುತ್ತದೆ.

ಅಷ್ಟಮಹಾಸಿದ್ಧಿ: ತಪಶ್ಚರ್ಯೆಯಿಂದಲೋ ಮಂತ್ರತಂತ್ರಗಳ ಅನು-

---

೧೧. Ibid. No. 5 pp. 304–17.

೧೨. Ph. D. Thesis by Dr. R. N. Gurav; The Kadambas of Goa and Their Inscriptions : No. 54, pp. 683-85.

೧೩. The Journal of The Karnatak University, Social Sciences, vol. VI, 1970, pp. 151-58.

ಸಂಧಾನದಿಂದಲೋ, ದೈವೀ ಅನುಗ್ರಹದಿಂದಲೋ, ವ್ಯಕ್ತಿ ಪಡೆಯುವ ವಿಶೇಷ ಸಾಮರ್ಥ್ಯ. ಈ ಸಾಮರ್ಥ್ಯವು ಅಷ್ಟವಿಧವಾಗಿರುತ್ತದೆ: (೧) ಅಣಿಮಾ= ಅತಿ ಸಣ್ಣ ಆಕಾರವನ್ನು ಪಡೆಯುವದು. (೨)ಮಹಿಮಾ= ಅತಿದೊಡ್ಡ ಆಕಾರವನ್ನು ಪಡೆಯುವದು. (೩) ಗರಿಮಾ= ತುಂಬ ಭಾರವಾಗುವದು. (೪) ಲಘಿಮಾ= ತುಂಬ ಹಗುರಾಗಿ ಗಾಳಿಯಲ್ಲಿ ಹಾರಾಡುವದು. (೫) ಪ್ರಾಪ್ತಿ= ಸಾಮಾನ್ಯವಾಗಿ ಪಡೆಯಲಾರದುದನ್ನು ಪಡೆಯುವದು. (೬) ಪ್ರಾಧಾನ್ಯ= ಸ್ವಲ್ಪವಾಗಿರುವ ಪದಾರ್ಥವನ್ನು ಹೆಚ್ಚಿಸುವ ಶಕ್ತಿ. (೭) ಈಶಿತ್ವ= ಎಲ್ಲ ಸಂದರ್ಭಗಳಲ್ಲಿಯೂ ಒಡೆತನವನ್ನು ಹೊಂದಿ ತನ್ನ ಪ್ರಭಾವವನ್ನು ಬೀರುವದು. (೮) ವಶಿತ್ವ= ಇಂದ್ರಿಯಗಳನ್ನು ನಿಯಮನ ಮಾಡಿಕೊಳ್ಳುವದು.

ಶಾಸನ ಪಾಠ[೧೪]

§(1) ನಮಃ[೧೫]ಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ [।*]
ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ[೧೬] ॥ [೧*]
(2) ದೇವದೇವಂ[೧೭] ನಮಸ್ತುಭ್ಯಂ ಸರ್ವಜ್ಞಸ್ಸರ್ವತೋಮುಖಃ [।*]
ಶ್ರೀಮಲ್ಲಿನಾಥಭೂತೇಶಃ ತ್ರೈಲೋಕ್ಯವರದಾಯಕಃ[೧೮] ॥ [೨*]
(3) ಶಿವಾಯ ಶಾಂತರೂಪಾಯಸಂತರೂಪಾಯ ಧೀಮತೇ [।*]
ಸರ್ವಗೀರ್ವಾಣನಾಥಾಯ ಕಲ್ಲಿನಾಥ ನಮೋಸ್ತು ತೇ ॥ [೩*]

(4) ಸ್ವಸ್ತಿ [।*] ಸಮಸ್ತಭುವನಜನವಿನಮಿತಾನೂನಮಣಿಮಕುಟಮಂಡನೋಪಶೋಭಾಕರಗೂಢಾರೂಢಪಾದಕಮಳನುಂ। ಭಕ್ತಜನಪ್ರಿಯ(5)ಕಮಳಮಾರ್ತಂಡನುಂ। ಸಕಳವೇದವೇದಾಂಗಮಂತ್ರತಂತ್ರಾರ್ತ್ಥಜಪತಪೋಪನಿಷದ್ವ್ಯಾಖ್ಯಾತರ್ಕ್ಕಭಾವನುಂ । ದೇವಾಧಿದೇವನೆಪ್ಪ ಶ್ರೀ ಕಲ್ಲಿನಾಥದೇವನು ಸ(6)ಕಳಭುವನಮಂ ಸಕಾರುಣ್ಯದಿಂ ರಕ್ಷಿಸುತ್ತಮಿರ್ದ್ದ ॥

[೧೯]ಶ್ರೀಕಲಿದೇವನೀ ಭುವನವಸ್ತುವಿಶೇಷಮನೀ ವಿಶಾಲರ-
ತ್ನಾಕರಮಂ ಸಮಂ(7)ನ್ತೆಸೆವ ಕುನ್ತಳದೇಶಮನಿಂತೆ ನೋಳ್ಪೆನೆಂ-

---

೧೪. ಕ್ರಿ.ಶ. ೧೯೬೨ರಲ್ಲಿ ನಾನು ಹಾವೇರಿಯಲ್ಲಿ ಅಸಿಸ್ಟಂಟ ಕಮಿಶನರನಾಗಿದ್ದ ಸಮಯದಲ್ಲಿ ಮಾಡಿಕೊಂಡ ಶಾಸನದ ಅಚ್ಚುಗಳಿಂದ.

§ ಈ ದುಂಡು ಕಂಸಿನಲ್ಲಿಯ ಇಂಗ್ರೇಜಿ ಅಂಕಿಗಳು ಶಾಸನದ ಸಾಲುಗಳನ್ನು ಸೂಚಿಸುತ್ತವೆ.

೧೫. ಸಂಧಿಯಾಗಿದ್ದ ಮೂಲಕ ವಿಸರ್ಗ ಬೇಕಾಗಿಲ್ಲ.

೧೬. ಈ ಪದ್ಯವು ಬಾಣಕವಿಯ ಹರ್ಷಚರಿತದ ಮಂಗಳಶ್ಲೋಕವಾಗಿರುತ್ತದೆ.

೧೭. ವೃತ್ತ: ೧, ೨, ೩ ಪದ್ಯಗಳು: ಅನುಷ್ಟುಭ್.

೧೮. ವ್ಯಾಕರಣ ದೃಷ್ಟಿಯಿಂದ ೨ ಮತ್ತು ೩ನೆ ಪದ್ಯಗಳು ಸದೋಷವಾಗಿವೆ.

೧೯. ವೃತ್ತ: ಉತ್ಪಲಮಾಲೆ.

ಮಾ ಕನಕಾದ್ರಿಯುಂ ಮುದದಿನೇಱಿದನೆಂದಡದೇಕೆ ಬಣ್ಣಿಪ್ಪೆ
ನಾಕನಿವಾಸಮುಂ ಸಕಳಪುಣ್ಯ(8)ಫಳಾಶ್ರಿತಮಿಪ್ಪ ದೇಶಮುಂ || [೪*]

ಅನ್ತಾ ದೇಶಂ ದೇವಲೋಕದಿಂ ಭಕ್ತಜನಸುಲಭನಪ್ಪುದಱಿಂ ಭೂಲೋಕಚಕ್ರವರ್ತ್ತಿಯನೇಕಾತಿಶಯಮುಮಂ ನೋಡುವಲ್ಲಿ ಭೂಕಾಂ(9)ತೆಯುಟ್ಟ ಪಟ್ಟಾವಳಿಯನ್ತೆ ಮತ್ಸ್ಯಕೂರ್ಮ್ಮಗಜನರಾವಳಿಯಿಂ ಶೋಭಾಕರಮಾಗಿ ಗಂಭೀರ ನಿರಾಕರಮಿರ್ಪ್ಪುದೆಂತೆನೆ ||

[೧೦]ವಸುಧಾಕಾನ್ತೆಯ ಲೋಚನದ್ವಯ(10)ದವೋಲ್ಮತ್ಸ್ಯಾಂಕಿತಂತನ್ನಪೊಂ-
ಪೆಸಕಂಬೆತ್ತ ಪದಾಬ್ಜಮುನ್ನತಿಯವೋಲ್ಕೂರ್ಮ್ಮಾಂಕಿತಂತದ್ವಧೂ-
[೧೧]ವಸನಪ್ರೋದ್ಗತಪನ್ತಿಯನ್ತೆ ಘನವೇದಂಡಾಂಕಿತಂ(11)ವಕ್ತ್ರದಂ-
ತೆ ಸರೋಜಾಂಕಿತಮಾಯ್ತು ನೋರ್ಪ್ಪಡೆನಸುಂ ರತ್ನಾಗರಂ ಸಾಗರ || [೫*]

[೧೨]ಆ ಜಳಧಿ ಬಳೆದು ಬಳಸಿದ
ಭೂಜಗಮಧ್ಯ ಪ್ರದೇಶದೊಳು ಕನಕನಗಂ
ರಾಜೀವ(12)ರಾಗಭೋಗ-
ಭ್ರಾಜಿತಮಣಿಮುಕುಳದಂತೆ ಕಣ್ಗೆಸೆದಿರ್ಕ್ಕುಂ || [೬*]

ಅನ್ತಾ ಶೈಳದ ಶೀಲಮುಮಾ ಗಿರಿಯ ಗುರುತ್ವ[ಮು"]ಮಾ ಗೋತ್ರದ ಗೋತ್ರತ್ವಮುಮಾ ಪರ್ವ್ವತ(13)ದ ಸರ್ವ್ವಸ್ವಮುಮಿಪ್ಪಂತಿರ್ಪ್ಪುದಾ ದ್ವೀಪಮೆಂತೆನೆ ||

ರಜತಾದ್ರಿಯಿಂದೆ ತೆಂಕಲು
ಕುಜಮಿರ್ಕ್ಕುಂ ಜಂಬುವೆಂಬುದಾ ಪೆಸರೆಂದಾ-
ದಜನಿಡಲಾ (14)ನಿಜನಾಮಮುಂ
ತ್ರಿಜಗಕ್ಕಂ ನೆಗಳೆ ನೆಗಳ್ದ ಜಂಬೂದ್ವೀಪಂ || [೭*]

ಆ ಜಂಬೂದ್ವೀಪದೊಳನೇಕ ವಸ್ತುವಿಸ್ತಾರದಿಂ ಸೊಗಯಿಸುವ ದೇಶದಾವುದೆನೆ ||

(15)ಕಸ್ತುಹರನೆಸ್ಸಿದ ಭವನ
ಕಾಂತೆಯ ಕುಂತಳದ ಕುಸ್ಮಕುಳಮಣಿಮುಕ್ತಾ-
ಸಂತತಿಯನ್ತೆಸೆದಿರ್ಕ್ಕುಂ
ಕುಂತಳದೇಶಂ ವಿಶೇಷವಸ್ತುಬ್ರಜದಿಂ || [೮*]

---

೧೦. ವೃತ್ತ : ಮತ್ತೇಭವಿಕ್ರೀಡಿತಂ.
೧೧. 'ವದನ'ವೆಂದು ಮೂಲತಃ ಕಂಡರಿಸಿದ್ದು ನಂತರ 'ವಸನ'ವೆಂದು ತಿದ್ದಿರುತ್ತದೆ.
೧೨. ವೃತ್ತ : ೬, ೭, ೮, ೯, ೧೦ ಪದ್ಯಗಳು : ಕಂದ.

(16)ಆ ದೇಶದೊಳ್ಸೊಗಯಿಸುವ ಬನವಸೆನಾಡತಿಶಯಮೆಂತೆನೆ ||
ಕೂಡೆ ಸುರಭಿವನಪ್ರಪಧಿಯಿಂ-
ನೋಡಿಸುವ ತಟಾಕವಮರವನಮಹಿಮೆಯಿಂ-
ಕ್ರೀಡಿಸು(17)ವ ಜನಂ ಬನವಸೆ-
ನಾಡಲ್ಲದೆ ನಾಡು ನಾಡೆಯುಂ ಸೊಗಯಿಪುದೇ || [೯*]

ಆ ನಾಡೊಳಂಬಳಿಪದೆಸೆಯುದೆ
ಧೇನು[ಗಳ್] ಕಾಮಧೇನು ಗಿರಿ ಸುರಗಿರಿಯಾ
(18)ಕಾನನವೆ ಕಲ್ಪಭೂರುಹ-
ದೇನಂ ಪೊಗಳ್ವುದಾ ನೆಗಳ್ದ ಬೆಳುವಲನಾಡಂ[೨೩] || [೧೦]

ಆ ನಾಡೊಳ್ಬಲಪ್ಪಂ ತೆಱಿವಿನೆಸೆವ ಪಟ್ಟಣಪ್ರಾಕಾರಮೆಂತೆನೆ || ಪ್ರ |
[೨೪]ಸುತ್ತಿ (19)ಸಮುದ್ರಮಂತೆಸೆವ ಪೂರ್ಣ್ನತಟಾಕವಗಸ್ತ್ಯಯಾದಮಂದೊ-
ತ್ತೊತ್ತಿಯ ಕೊತ್ತಳಂ ತುಱುಗಿದಟ್ಟಳೆಯುಟ್ಟಳೆವಾಗೆ ಕಟ್ಟಿದಂ-
ದ್ದ್ವಿತ್ರಪತಾಕೆಯಿಂ ಬಡು (20)ವಿದಂ ಬಲುವಪ್ಪುದು ದುರ್ಗ್ಗವಿತ್ತಲೀ
ನಾತ್ತಿಸ್ತ್ರಕಲತ್ರಲಾ ಮಧುರೆಯುಲ್ಲದೆ ಪೋಲಿಸಲುಂಟೆ ಧಾತ್ರಿಯೊಳ್ | [೧೧*]

||ಕಂ||
[೨೫]ಆ ದುರ್ಗ್ಗಾ(21)ಧಿಪನೆನ್ನಿಪ-
ನಾದಿಯು ನಳನಹುಷನಿಸಜನಾ ಧರ್ಮ್ಮಜನ-
ಬ್ಜೋದರಸುತನೆನೆ ನೆಗೞ್ದಂ
ಸಾಧಿತವಿಕ್ರಮವಿಕ್ರಮಾಂಕಂ ಧರೆಯೊಳ್ ||[೧೨*]

ಪ್ರ || (22) ಸ್ವಸ್ತಿ [|*] ಸಮಧಿಗತಪಂಚಮಹಾಶಬ್ದ ಮಹಾಮಂಡಳೇಶ್ವರಂ ಉಜ್ಜೇನೀಪುರವರಾಧೀಶ್ವರಂ ವಟವೃಕ್ಷಲಾಂಛಿತವಿಜಯಧ್ವಜಂ ಭು (23) ವನರಕ್ಷಾ-ದ್ಯೈಕಪ್ರದಕ್ಷದಕ್ಷಿಣಭುಜಾದಂಡ ಮಂಡಳಿಕಘೋರಮ| ಅನವರತಯುವತಿನಯನ-ಕೈರವ ಚಂದ್ರಗುಪ್ತಾನ್ವ(24)ಯಪೂರ್ಣ್ಣಚಂದ್ರ ವಿಭವಾಮರೇಂದ್ರ ನಂ ದರ-ಚರಣನಟಕಿರೀಟಸಾಂದ್ರಚಂದ್ರಿಕಾಚಕೋರ ಗುರುಪಾದಪಯೋಧರಾ (25) ನನ್ದ-ತಮಯೂರಂ ಮಾನಿನೀಮಾನಸಪ್ಪರ್ಣ್ನಸೂಚಿಕಾಱಂ | ರಣದೊಳು ನಿಱಿಂಪನೆ ಮೆಟ್ಟಿಗಂಡಂ ಸಮರಶೌಂಡಂ ವಿಷಮತುರಂಗಮಾ(26)ರೋಹಣಾದಿತ್ಯ ವೀರವಿಕ್ರಮಾದಿತ್ಯದೇವಂ ಬನವಾಸೆನಾಡಂ ದುಷ್ಟನಿಗ್ರಹಶಿಷ್ಟಪ್ರತಿಪಾಳನೆಯಿಂ ರಾಜ್ಯಂಗೆಯ್ಯುತ್ತಮಿರೆ || ಪ್ರ ||

---

೨೩. ನಾಲ್ಕನೆ ಪಾದ ವೃತ್ತಕ್ಕೆ ಸರಿಯಾಗಿಲ್ಲ.
೨೪. ವೃತ್ತ: ಉತ್ಪಲಮಾಲೆ.
೨೫. ವೃತ್ತ: ಕಂದ.

[೨೬]ಮಾವುಗೆ ಕಂ(27)ಥೆ ಬಿತ್ತ ಪಟ ಬಿರ್ದ್ದರಮಾ ಘಟಕಾರಸಂ ಪೊಗ-
ತ್ತೀರ್ವಿಮುಮೊಂದು ಕೂರಸಿ ಮನಂಬುಗೆವಲ್ಲಿಗೆ ಪೋಪ ಬೀಳ್ವ ರ-
ತ್ನಾವಳಿಯುಂ ಸಜೀತನ(28)ಮುದ್ರಿಕೆಯುಮನಂನಮನಾತ್ಮರಕ್ಕೆಯುಂ
ಭಾವಿಸೆ ಧರ್ತ್ರವಾತ್ರಿರ್ಣಿಶಿಪವೇಂ ಸಲೆ ಸಾಧ್ಯಮೊ ವಿಕ್ರಮಾಂಕನಿಂ[೨೭] [೧೩*]

[೨೮]ಅಮರ್ಪ್ರಂ ತತ್ಪುರದೊಳ್ ನಿ ಪೋತ್ರಮೆನಿಪ್ಪಾ(29)ವಿಕ್ರಮಾದಿತ್ಯನ-
ಪ್ಪಮಹಾಸಿದ್ಧಿಯುಸಿದ್ಧಿಸಾಧಿಸಿ ಜಗಕ್ಕಾನಂದಮಪ್ಪಾಗಿತ್ತನಿ-
ಷ್ಟಮನಿಂಬಿಂ ಸಕಲಾಗಿ ಮೂಜಗಮುಮಂ ಸಲ್ಲೀಲೆಯುಂ ಮೆಚ್ಚೆ(30)ಭೂ-
ರಮೆಗಿಂ ತನ್ನಯ ತೋಳಬಾಳ ಮಹಿಮಾಳಿಲ್ಬಂಬಿನವ್ವಾಳ್ದಿದಂ ‖ [೧೪*]

[೨೯]ಎನುತುಮಪ್ಪಳಿಪ್ಪ ಮನುಜರ
ಮನಸ್ತುಮಂ ಪಿಂಗೆ ನಲಿಯು ಕವಿಚಕ್ರಂ (31)ಮೇ-
ದಿನಿ ಕಲ್ಪತರುವೋಲಾಗಿರೆ
ಜನಿಯಿಸಿದಂ ವೀರ ವಿಕ್ರಮಾದಿತ್ಯನೃಪಂ ‖ [೧೫*]

ಸಮನಾ ವೃಷ್ಟಿಯನೀವರಂತೆ ಸಕಲಾಮಾ ವಿಕ್ರಮಾದಿತ್ಯಭೂ-
ರಮಣಂಗಾಶ್ರಿತ(32) ಧೀರವಂಗಪದಬಂ ಶಾಸನದಂಗೊಳ್ಪಿನ-
ಪ್ಪಮಹಾಸಿದ್ಧಿಯುಸಿದ್ಧಿ ಸಾಧಿಸಿಮದಾತ್ತಂಗತ್ತಿರ್ಗಂಗಾ ರಸೋ-
ತ್ತಮಕಂಭಂಗಳನಿತ್ತ(33)ವಂಗೆ ದಿಟದಿಂದಂ ಭೂಮಿಭೂಭಾಗದೊಳ್ ‖[೧೬*]

ಎನೆ ನೆಗೆಳ್ದ ವಿಕ್ರಮಾದಿ-
ತ್ಯನ ಪಂಚಜಾತನಂನರಾಗದೆ ಕಲ್ಪಾ-
ವನಿಜದ ಬೀಜದೆ[೩೦] ಕಲ್ಪಾ-
ವನಿಜಂ ಪು(34)ಟ್ಟುಮದೆ ಬಿಪ್ಪವರ ಕೆಯ್ಗೆಯೊಳ್ ‖ [೧೭*]

[೩೧]ಅರಸರ್ಗ್ಗೆಲ್ಲ ರಸಪ್ರಕಿತ್ತಿ ರಸಿಕತ್ವಂ ಕೂಡೆ ಕೊಟ್ಟಿರ್ದ್ದ ಕೂ-
ಟ್ಟಿರೆ ವಿದ್ಯಾವಳಿಯುಳ್ಳ ವಿದ್ಯೆಯುಡೆ ಸೇಟ್ಟಿರ್ಪ್ಪಾಗೆ ಸೇಟ್ಟಿರ್ದ್ದ ಸ-
ತ್ಪರಿತ[ಂ] (35)ಸತ್ಪುರಿತಂ ಪೊಡಟ್ಟಿರೆ ವಿಕಾಸಪ್ರೀತಿಯುಸ್ತ್ರೀ ಗುಣೋ-
ತ್ತರಮೆಲ್ಲಂ ನೆರದಿರ್ಪ್ಪವೇಸಧಿಕನೋ ಶ್ರೀಯೋಯುಮಪ್ಪೋಪ್ಪಿರ್ದಂ ‖ [೧೮*]

---

೨೬. ವೃತ್ತ: ಉತ್ಪಲಮಾಲೆ.
೨೭. ಈ ಪದ್ಯದ ಅರ್ಥ ಸರಿಯಾಗಿ ತಿಳಿಯುವುದಿಲ್ಲ.
೨೮. ವೃತ್ತ: ೧೪, ೧೬, ಪದ್ಯಗಳು : ಮತ್ತೇಭವಿಕ್ರೀಡಿತಂ.
೨೯. ವೃತ್ತ: ೧೫, ೧೭ ಪದ್ಯಗಳು : ಕಂದ.
೩೦. ಮೂಲತಃ 'ಮಾ' ಎಂದು ಕಂಡರಿಸಿದ್ದು ನಂತರ 'ಮೆ' ಎಂದು ಸರಿಪಡಿಸಲಾಗಿದೆ.
೩೧. ವೃತ್ತ: ೧೮, ೨೧, ೨೨ ಪದ್ಯಗಳು : ಮತ್ತೇಭವಿಕ್ರೀಡಿತಂ.

[೩೨]ಆ ಪೋಲಿಯಿಂದೇವನಂ(36)ನತ
ತ್ರೇಜಮ ಸಚ್ಚರಿತ್ರಮುಜ್ಜ್ವಲಮಾ ಸಾಜಮ ಪೇ-
ಕ್ಷಾಜನಸುರಭೂಜಮ ಪೋ-
ಗೀ ಜಗದೊಳು ಗುತ್ತನೃಪನ ಸರಿ ಪೆಱನಾವಂ||[೧೯*]

ಎನ್ನಿರ್ದ ಗುತ್ತಭೂ(37)ಪಾ-
ಳನ ತನುಗಗನದೊಳ್ ರಾಜಕುಳಕರಕುಮುದಂ
ವಿನಯದಿನೇಂ ಮುಕುಳಿತಪಾ-
ಗೆ ನೆಗಳ್ದನೊ ಧರೆಗೆ ವಿಕ್ರಮಾದಿತ್ಯನೃಪಂ॥ [೨೦*]

ವೃ|| (38)ವಿನಯಂ ವಿಕ್ರಮಶಕ್ತಿ ಪುಣ್ಯಮೆನಿಪೀ ಮೂಱುಂ ಗುಣಂ ರಾಜ್ಯಮಂ-
ಡನದೇಹಾಂಶುಗಳಿಂ ನೆಗಳ್ತೆವಡೆದಿಕ್ಕುಂ ಚೇತನಂ ಬಲ್ಪುಮೆ–
ವ್ವಿನ(39)ಯುಂ ಭೂಷಣಮೆಂದು ಶಸ್ತ್ರರುಚಿಶಾಸ್ತ್ರಾಭ್ಯಾಸಸದ್ಧರ್ಮವ-
ರ್ತನಮೆನ್ನಿಂತಿಪ್ಪ ವೀರ ವಿಕ್ರಮನೃಪಂಗಿಂತೊಪ್ಪುಗುಂ ಸಂತತಂ|| [೨೧*]

ವ|| ಅನ್ತು (40)ಚಂದ್ರಗುಪ್ತಾನ್ವಯಕ್ಕೆ ಜನ್ಮಭೂಮಿಯಾದ ಬೆಳುಂಬಿಗೆ
ನಾಡೊಳನೇಕ ಪ್ರಾಕಾರದಿಂ ಚೆಲುವನಾದ ಗ್ರಾಮಟಾಮಣಿ ಕನ್ನವಳ್ಳಿ-
ಯುಂ(41)ತೆಸೆ || ವೃ ||

ಇವೆ ಕೈಲಾಸವೆನಲ್ಕೆ ಕಣ್ಗೆಸೆವ ತೋರ್ಪಾ ದೇವಗೇಹಂಗಳಿಂ-
ದಿವೆ ಪಮ್ಮೋಪ್ಪವನಿಪ್ಪ ಕಾಣಪೆನ್ನಿ[೩೩]ಪ್ಪಾರ್ ಬ್ರಹ್ಮವಾಸಂಗಳಿಂ–
ದಿವೆ ರಿಷಾಶ್ರ(ಶ್ರ)(42)ಮಮೆಂಬವೋಲ್ ಮುನಿಜನಾಗಾರಂಗಳಿಂ ಸರ್ವಸಂ–
ಪದದಿಂದೊಪ್ಪುವ ಕನ್ನವಳ್ಳಿಯುನದಿಂನೇ ವರ್ಣಿಪೋಂ ಬಣ್ಣಿಪಂ ॥ [೨೨*]

[೩೪]ತೆಂಗು [೩೫]ಕೌಪುಂಗು (43)ತಾಳ್ವಲಸು ಮಾಮರ ನೇಱಿಲಕೋಕೆ ಬಾಳೆ ನಾ-
ರಂಗ ಲವಂಗ ನಾಗಲತೆ ಕೇತಕಿ ಮಾಗಧಿ ಜಾದಿ ಪದ್ಮಷಂ–
ಡಂ ಗಗನೋಪಮಂಬಡೆದ ಪೂರ್ನ್ನ(44)ತಟಾಕದಿನೆತ್ತ ನೋರ್ಪ್ಪಡಂ
ಕಣ್ಗೆಸೆದಿಪ್ಪುದಂಗಜನಿವಾಸದವೋಲ್ಸಲೆ ಕನ್ನವಳ್ಳಿಯೊಳ್ [೨೩*]

---

೩೨. ವೃತ್ತ: ೧೯, ೨೦ ಪದ್ಯಗಳು : ಕಂದ.
೩೩. ವೃತ್ತದ ಸಲುವಾಗಿ 'ವೆನಿಸಿ' ಎಂದು ಓದಿರಿ.
೩೪. ವೃತ್ತ : ಉತ್ಪಲಮಾಲೆ.
೩೫. ವೃತ್ತದ ಸಲುವಾಗಿ 'ಕಪುಂಗು' ಎಂದು ಓದಿರಿ.

[೩೬]ಆ ಕನ್ನವಳ್ಳಿಯಾಳ್ವಂ
ಪ್ರಾಕಟಪಟು ವಿಶದಕೀರ್ತ್ತಿ ಮ(45)ನ್ಮಥಮೂರ್ತ್ತಿ-
ಸ್ವೀಕಾರನೆನ್ಸಿ ನೆಗಳ್ದಂ
ಲೋಕಜನಸ್ತುತ್ಯನಪ್ಪ ನಾಳ್ಪ್ರಭು ಚೆಂನಂ || [೧೪*]

ವೃ || [೩೭]ಪಡೆದರ್ತ್ಥಂ ಬಡವರ್ಗ್ಗೆ ಬಂಧುಗಳಿಗಾಯ್ತಾ(46)ಜೌವ್ವನಂ ತನ್ನ ಕ-
ಯ್ಪಿಡಿದ(ದಾ) ಸತ್ಸತಿಗಾಯ್ತು ತನ್ಮನಮನೂನಾಪೇಕ್ಷೆ ಸದೀ(ದ್ದೀ)ಕ್ಷೆಯಿಂ
ಮೃಡಪಾದಾಂಬುಜಸೇವೆಗಾಯ್ತು(47,ಪೆಸರಾ ದಿಗ್ದಂತಿಗಾಯ್ತೆತು ನೋ-
ಪ್ಪೊಡದೇಂ ಧಾತ್ರಿಗೆ ಚೆನ್ನಗೌಂಡನೆ ವಲಂ ಧನ್ಯಂ ಪೆಱರ್ದ್ದನ್ಯರೇ||[೧೫*]

ಅನ್ತಾ ಚೆನ್ನಗೌಂಡನ ಸಕಳ ಭಾ(48)ಗ್ಯಮೆ ರೂಪುಗೊಂಡಂತೆ ಗುಣದಿಂ ಧರ್ಮ್ಮದಿಂ ರೂಪಿನಿಂ ವಿದ್ಯೆಯಿಂ ತೇಜದಿಂ ಖ್ಯಾತಿಯಿಂದುದಾರದಿಂ ಸುಪುತ್ರಃ ಕುಲದೀಪ(49)ಕಯೆಂಬ ವಾಕ್ಯಮಂ ನನ್ನಿಮಾಡಿ || ಕ ||

ವಿನಯುನಿಧಿ ಚಾಮಿಯಕ್ಕನ
ತನುಜಳಧಿಯೊಳಾತ್ಮಶಾನ್ತಿನಕ್ಷತ್ರಕಣಂ
ಜನಿಯಿಸೆ ಚೆನ್ನನಿನಿರ್ವ-
ರ್ಮ್ಮಸುಮಾರ್ಗ್ಗಪ್ರ್ವರುಪರತ್ನರೊಗೆದರ್ಪ್ಪುತ್ರರ್‌|| [೧೬*]

ಉ||[೩೮]ಸೊಗಸುವ ರೂಪು ಸೋಲಿಸುವ ಜಾಣ್ಕೆ ಮನಂಗೊಳಿಪೋಜೆ ತಾಗಿ ತ-
ಳ್ತಗಿಯು(51)ದೆ ನಿಂದ ವೈರಿಬಲವಂ ತಱಿದಿಕ್ಕುವ ತಕ್ಕವರ್ಶ[ರ*]-
ಣ್ಬುಗೆ ಮಿಗೆ ರಕ್ಷಿಪಾರ್ಪ್ಪೆರದೊಡಾಗಳೆ ಬೇಡಿತನೀವುದಾರವೀ
ಜಗದೊಳಗಾರ್ಸ್ಸವಂ ಪ್ರಭು(52)ಕುಲೋತ್ತಮನೀ ವಿಭು
ಬೀರಗೌಂಡನೊಳ್‌|| [೧೭*]

[೩೯]ಬೀರನುದಾರಚಾರುಗುಣದೊಂದು ಮಹೋನ್ನತೆ ಬೀರನೊಪ್ಪುವಾ-
ಚಾರಚರತ್ರ ಬೀರನಗಂಭೀ(53)ರತೆ[೪೦]ಬೀರನ ಪೆಂಪು ಬೀರನೊ-
ಪ್ಪಾರ ಪೊಗಳ್ತೆಗಾವಱಿಪು ಬೀರನ ಸಂಸುತ ನನ್ನಿ ಬೀರನಾ-
ಕಾರವಪಾರ ಮೆಚ್ಚಿಸದು ಬೀರನ ಕೀರ್ತ್ತಿಮಹಿತಳಾಗ್ರ(54)ದೊಳ್‌|| [೧೮*]

೩೬. ವೃತ್ತ: ೧೪, ೧೬ ಪದ್ಯಗಳು : ಕಂದ.
೩೭. ವೃತ್ತ: ಮತ್ತೇಭವಿಕ್ರೀಡಿತಂ
೩೮. ವೃತ್ತ: ೧೭, ೩೦ ಪದ್ಯಗಳು : ಚಂಪಕಮಾಲೆ
೩೯. ವೃತ್ತ : ಉತ್ಪಲಮಾಲೆ
೪೦. ವೃತ್ತದ ಸಲುವಾಗಿ 'ಗಭೀರತೆ' ಎಂದು ಓದಿರಿ.

[೪೧]ಮಾರಂ ಬೀರಾನುಜಾತಂ ಸುಕವಿನಿಕರಸಂಪಾದನಂ ಕಲ್ಪಶಿಕ್ಷೋ-
ಪಾರಂ ಬಂದಂಜಿಕಂಡಂಗೆರಪ ಬುಧರ್ಗೆ ಮೇಱಮ್ರಿನಿಂದಂಗೆ(55)ವಜ್ರಾ-
ಗಾರಂ ವಿದ್ಯಾಧರೇಂದ್ರಂ ಸುರಪತಿಸುತನೆಂದೆಂದು ಮಿಕ್ಕಂನ್ಯರಿಂತೀ
ಧೀರೋದಾತ್ತಂಗಜೇಯಂಗೆಣೆಯೆನಲೊಳರೇ ನೋರ್ಪ್ಪಡಾವನ್ದ(56)ದಿಂದ||
[೨೯*]

ವ್ರಿ|| ಒದವಿದ ಜೌವ್ವನಕ್ಕೆ ಸುಬಗಂ ಸಿರಿಗೊಪ್ಪುಪ್ರದಾರಮಂ ರುಚೋ-
ಪದನನಿರೀಕ್ಷಣಕೆ(ಕ್ಕೆ) ಮಣಿದರ್ಪ್ಪಣಮಂ ಜೆಲುವಿಂ(57)ಗೆ ನೋಟಕ-
ರ್ಪ್ಪಡೆದು ಮನಂಬುಗಲ್ಕೆ ಸವಮಳ್ಕಿಯೊಳಿಪ್ಪ ಸಮುಪ್ರದೇಶಮಂ
ಮುದದೊಳೆ ಮಾಡಿ ಮಾರದೆಸರಿಟ್ಟ ವಿರಿಂಚಿಯೆ. ಜಾಣನಲ್ಲನೇ || [೩೦*]

(58)ಸ್ವಸ್ತಿ[1*] ಯನವರತಶತಮು(ಮು)ಖಪ್ರಮುಖಗೀರ್ವ್ವಾಣಮಕುಟ-
ಮಣಿಮಯಮರೀಚಿಮಂಜರೀಜಾಳರಂಜಿತ ಶ್ರೀಕಲ್ಲಿನಾಥದೇವರ ಪಾದಾರಾ (59)ಧ-
ಕನುಂ | ಪರಮಾರ್ತ್ಥತತ್ವಭೇದಕನುಂ | ಅಗಣ್ಯಪುಣ್ಯಕೀರ್ತ್ತಿಕಾನ್ತಾವಿಳಾಸನುಂ |
ಭಾಸ್ವತ್ಸರಸ್ವತೀಸುವರ್ನ್ನ[೪೨] ಕರ್ಣ್ಣಕುಂಡಳನುಮಪ್ಪ(60)ಶ್ರೀಮನ್ನಾಳಪ್ರಭು
ಬೀರಗಾವುಂಡ ಮಾರಗಾವುಂಡನ ಪುತ್ರನ ಮಹಿಮೆಯೆಂತೆನೆ ||

[೪೩]ಧಾರಿಣಿಗೆ ಧರ್ಮ್ಮವಾ ಕುಲ-
ನಾರಿಗೆ ಸೌಭಾ(61)ಗ್ಯ ವಿಪ್ಪಜನದಿಷ್ಟಫಳಂ
ಭಾರತಿಯ ತೊಡವು ನೆಗಳ್ದಂ
ಬೀರಣನುದರುವಧಿಯೊಳಗೆ ರನ್ನಂ ಜೆನ್ನಂ || [೩೧*]

ಅನ್ತಾ ಕುಲಕ್ಕೆ ಕುಲದೇಯ್ವಮೆ (62)ಪುಟ್ಟಿ ಸಮಸ್ತ ಧರ್ಮ್ಮಮಂ
ನಿರ್ಮ್ಮಿಸುತ್ತಮಿಪ್ಪನ್ತಾ ಮಹಾನುಭಾವನ ಮಹಿ[ಮೆ*]ಯೆಂತೆನೆ ||

ಆವ ಗುಣದೊಳ್ಮಹತ್ವದೊ-
ಳಾವರ್ಸ್ಸಿದ ಭಕ್ತಿಭರದೊ(63)ಳುಪಶಾನ್ತತೆಯೊಳ್
ಜೀವದಯೆಯೊಳ್ಬಭಾವಿಸೆ
ದೇವಂ ದೇವಣ್ಣನೆಂಬ ಭೇದಂ ಕಿಡುಗುಂ || [೩೨*]

ಸ್ವಸ್ತಿ [1*] ಯನವರತಪರಮಪದಭಕ್ತಿಭರನಿರೂಪಿ(64)ತಾನೂನಕೇವಲ-
ಜ್ಞಾನೋಪಯುಕ್ತಿಸೂಕ್ತಿಶಕ್ತರುಂ | ವಿಷಯವಿರಕ್ತರುಂ | ಶಿವಪಾದಪಂಕಜಪೂಜ-
ಪುರಂದರೋಪಮಾನಾನನ್ದದಿಬ್ಬದೇಹರುಂ | (65)ಮನೋವಾಕ್ಕಾಯಕರ್ಮ್ಮದಿ-

೪೧. ವೃತ್ತ: ಸ್ರಗ್ಧರೆ
೪೨. 'ನ' ಅಕ್ಷರವು ಸಣ್ಣದಾಗಿ ಸಾಲಿನ ಮೇಲ್ಭಾಗದಲ್ಲಿ ಕೆತ್ತಿರುತ್ತದೆ.
೪೩. ವೃತ್ತ: ೩೧, ೩೨, ೩೩ ಪದ್ಯಗಳು: ಕಂದ.

ಗಳಿತಮೋಹರುಂ ಶ್ರೀ ಕಲ್ಲಿನಾಥದೇವಶೇವಾಸುಖಾವಿಶ್ರಾಂಭೋಪೂರ್ನರುಂ ಯನೇಕಂಗುಣಸಂಪೂರ್ನ್ನ(66)ರುಮಪ್ಪ ದೇವಣ್ಣಂಗಳ ಮಹಿಮೆಯೆಂತೆನೆ || ೯ ||

ಪುಸಿನೆಡೆಗುಡದ ವಿವೇಕ–
ಪ್ರಸಂಗದೊಳು ಸಲ್ಲದಫುಪಥ[೪೪] ಕಾಗದ ಮಾ–
ನಸವೇಷದ(67)ಹರನಿರ್ದ್ದ–
ನೆ(ನ್ನೆ)ಸೆವನೊ ಮುನಿಮುಖ್ಯವರ್ನ್ನನೀ ದೇವಣ್ಣಂ || [೩೩*]

ಸ್ವಸ್ತಿ [I*] ಶ್ರೀಮತು ಚಾಳುಕ್ಯ ಚಕ್ರವರ್ತ್ತಿ ಸೋಯಿದೇವ ವರಿಷದ ೧೧೫೫ ನೆಯ ವಿಜಯ ಸಂ(68)ವತ್ಸರದ ಚೈತ್ರ ಸುಧ್ಧ ಅಷ್ಟಮಿ ಸೋಮವಾರ ಬ್ಯತೀಪಾತದ [ಂ*]ದು ಶ್ರೀಮನ್ಮಹಾಮಂಡಳೇಶ್ವರಂ ವೀರ ವಿಕ್ರಮಾದಿತ್ಯದೇವನುಂ ಕನ್ನವಳ್ಳಿಯ ಚೆನ್ನ(69)ಗಾವುಂಡನುಂ ವಿದ್ದ್ವ ಮೂಲಸ್ಥಾನದ ಶ್ರೀಕಲ್ಲಿನಾಥ ದೇವರ ಶ್ರೀಕಾರ್ಯ್ಯಕ್ಕೆ ಬಿಟ್ಟ ಧರ್ಮ್ಮದ ಕ್ರಮವೆಂತೆಂದಡೆ [II*] (70) ದಿಂಡೇಶ್ವರದೇವರ ಗದ್ದೆಯಿಂ ಬಡಗಲ್ ಗೌಡರ ಮಾನ್ಯಗದ್ದೆಯಿಂ ಮೂಡಲು ಗದ್ದೆ ಕಂಬ ೨೫ [I*]ಎರೆ ಹಿರಿಯ (71)ಕೆಱೆಯ ಕೋಡಿಯಿಂ ಬಡಗಲ್ ರಿತ್ತಿಯ ದಾರಿಯಿಂ ಪಡುವಲ್ ಮತ್ತರು ೪[I*]ಅಲ್ಲಿಂತೆಂಕ ಮಕ್ಕಿ ಮತ್ತರು ೨ ಕೆ[ಂ*]ಗಾಡು ಮತ್ತರು ೨ [I*]ದೇ(72)ವಾಲ್ಯದಿಂ ತೆಂಕ ಹೂದೋಟ ೧ ತುಡುಕೆ ೧ ಕಱೆವೊಳಗೆ ಗೌಂಡರ ಕೆಂಗಾಡಿಂ ಬಡಗ ಹೂದೋಟ ೧ ಮನೆ [೧*] ನೀರನುಗುತೆಯಿಂ ತೆಂಕ ಪ(73)ಣಾರ ೧ ಗಾಣ ೧ ನ ....ವೆತು ೧೦ ಕ್ಕೆ .... ಯ ಹೆಜ್ಜುಂಕ ವೊ[ಕ್ಕಲುವೆಱೆ] ....ದೆಱೆ ಸರ್ವ್ವಬಾಧೆ ಪರಿಹಾರ [I*] ಧಾನ್ಯಗೊ(74)ಳಗ ಸೋಟಿಗೆಣ್ಣೆ ತೋಟದಲು.... ....[ಧರ್ಮ್ಮ]ಮಂ ಪ್ರತಿಪಾಳ್ಸಿದಾತನು ವಾರಣಾ(75)ಶಿಯ ತಡಿಯಲು ಮಂ....ಸುವರ್ನ್ನದಲಿ ಕಟ್ಟಿ ಕೊಟ್ಟ ಫಲಮಕು [II*](76)ಇ (ಈ) ಧರ್ಮ್ಮ ಮನಳಿದ. . . . . ಲಳ್ದಿ ಪಾಪವಕು ||

ಸ್ವದತಂ ಪರ(77)ದತಂ ವಾಯೋಹ . . . . [I*]
. . . . [34*]
ಓಂ ನಮ [ಃ*] ಶಿವಾಯ || ಕಲ್ಲಿನಾಥಾಯ | (78)ಶಾಸನಮಂ

ಪೇಳ್ದ . . . . [ಶ]ಿಧನರಸಪ್ಪ ಕಲ್ಲಿನಾಥ ವರದಂ || ಸರಸ್ವ(79)[ತ್ಯೈ]ಯ ನಮಃ[೪೫] . . . . . . , ...
... .ನಮಃ | ವಿನಾಯಕಾಯ ನಮಃ ||

★ ಆರ್. ಎನ್. ಗುರವ

೪೪. ವೃತ್ತದ ಸಲುವಾಗಿ 'ಪಥಕ್ಕಾಗದ' ಎಂದು ಓದಿರಿ.
೪೫. 'ಸರಸ್ವತ್ಯೈ ನಮಃ' ಎಂದು ಓದಿರಿ

ಪೂರ್ವ ಜರ್ಮನಿಯ ಆರ್ಥಿಕಾಭಿವೃದ್ಧಿ

ಪೀಠಿಕೆ :

ಎರಡನೆ ಮಹಾಯುದ್ಧಕ್ಕೆ ಮುನ್ನ ಪೂರ್ವ ಜರ್ಮನಿ ಎಂಬ ರಾಷ್ಟ್ರವೇ ಇರಲಿಲ್ಲ. ಯುದ್ಧದ ಪರಿಣಾಮವಾಗಿ ಜರ್ಮನಿಯು ವಿಭಜಿಸಲ್ಪಟ್ಟು ಪಶ್ಚಿಮ ಜರ್ಮನಿ ಮತ್ತು ಪೂರ್ವ ಜರ್ಮನಿ ಎಂಬ ಎರಡು ರಾಷ್ಟ್ರಗಳು ಎರಡನೆ ಮಹಾಯುದ್ಧವಾದ ಮೇಲೆ ಅಸ್ತಿತ್ವಕ್ಕೆ ಬಂದವು. ೧೯೭೦ರ ತನಕ ಪಶ್ಚಿಮ ಜರ್ಮನಿಯ ಪ್ರಜೆಗಳು ಪೂರ್ವ ಜರ್ಮನಿ ಎಂಬ ಹೆಸರನ್ನು ಕೂಡ ಒಪ್ಪಿಕೊಳ್ಳಲು ಸಿದ್ಧವಾಗಿರಲಿಲ್ಲ. ಏಕೆಂದರೆ ತಮ್ಮ ದೇಶ ವಿಭಜನೆಯಾಗಿ ಎರಡು ಪ್ರತ್ಯೇಕ ಆಡಳಿತಕ್ಕೆ ಒಳಗಾಗುವಂತೆ ಆಯಿತಲ್ಲಾ ಎಂಬ ದುಃಖ ಅವರಲ್ಲಿ ಅಪಾರವಾಗಿತ್ತು. ಜೊತೆಗೆ ಕಮ್ಯುನಿಸ್ಟ್ ರಾಷ್ಟ್ರಗಳಾದ ಪೋಲೆಂಡ್ ಮತ್ತು ರಷ್ಯಾ ದೇಶಗಳ ಸ್ವಾಧೀನದಲ್ಲಿ ಪೂರ್ವ ಜರ್ಮನಿ ಇದ್ದುದರಿಂದ ಜರ್ಮನರ ಅಸಹನೆ ಮತ್ತಷ್ಟು ಅಧಿಕಗೊಂಡಿತು. ಯುದ್ಧಕ್ಕೆ ಮುನ್ನ ಪೂರ್ವ ಜರ್ಮನಿ ಭಾಗದಲ್ಲಿ ಜರ್ಮನರು ಸಾಧಿಸಿದ್ದ ಆರ್ಥಿಕಾಭಿವೃದ್ಧಿ ಮತ್ತು ಆರ್ಥಿಕ ವ್ಯವಸ್ಥೆಯನ್ನು ಕಮ್ಯುನಿಸ್ಟರು ನಾಶಗೊಳಿಸಿದರೆಂಬ ಅಸಮಾಧಾನ ಜರ್ಮನರಲ್ಲಿತ್ತು. ಆದರೆ ೨೫ ವರ್ಷಗಳ ನಂತರ (೧೯೪೫–೧೯೭೦) ಪೂರ್ವ ಜರ್ಮನಿ ಆರ್ಥಿಕವಾಗಿ ಚೇತರಿಸಿಕೊಳ್ಳಲಾರಂಭಿಸಿದ್ದರಿಂದ ಜರ್ಮನರು ಪೂರ್ವ ಜರ್ಮನಿಯ ಅಸ್ತಿತ್ವವನ್ನು ೧೯೭೧ ರಲ್ಲಿ ಒಪ್ಪಿಕೊಂಡರು. ಆದುದರಿಂದ ಪೂರ್ವ ಜರ್ಮನಿಯ ಆರ್ಥಿಕ ಸಾಧನೆಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಎರಡನೆ ಮಹಾಯುದ್ಧದ ನಂತರ ರಷ್ಯಾದ ಆಕ್ರಮಣ ಕಾಲದಲ್ಲಿ ಪೂರ್ವ ಜರ್ಮನಿ ಎದುರಿಸಿದ ಸಮಸ್ಯೆಗಳು

ಎರಡನೆ ಮಹಾಯುದ್ಧದ ಪರಿಣಾಮವಾಗಿ ಜರ್ಮನಿಯ ಪೂರ್ವ ಭಾಗ ವಿಪರೀತ ನಷ್ಟಕ್ಕೆ ಒಳಗಾಗಿತ್ತು. ಲಕ್ಷಾಂತರ ಜರ್ಮನರು ನಿರಾಶ್ರಿತರಾಗಿ ಪೂರ್ವ ಜರ್ಮನಿಯಲ್ಲಿ ಉಳಿದರು. ದೇಶ ವಿಭಜನೆಯ ಪರಿಣಾಮವಾಗಿ ಎರಡು ಜರ್ಮನಿಗಳ ನಡುವೆ ಆರ್ಥಿಕ ಸಂಪರ್ಕ ಕಡಿದು ಹೋಯಿತು. ದೇಶ ವಿಭಜನೆಗೆ ಮೊದಲು ಪೂರ್ವ ಜರ್ಮನಿಯಲ್ಲಿದ್ದ ಹಲವಾರು ಕೈಗಾರಿಕೆಗಳು ತಮಗೆ ಬೇಕಾದ ಕಚ್ಚಾ ವಸ್ತುಗಳಿಗೆ ಮತ್ತು ಮಾರುಕಟ್ಟೆಗಳಿಗೆ ಪಶ್ಚಿಮ ಜರ್ಮನಿಯನ್ನು ಅವಲಂಬಿಸಿದ್ದವು ಇದೇ ರೀತಿ ಪಶ್ಚಿಮ ಜರ್ಮನಿಯ ಅನೇಕ ಕೈಗಾರಿಕೆಗಳು ಪೂರ್ವ ಜರ್ಮನಿಯನ್ನು ಅವಲಂಬಿಸಿದ್ದವು. ಆದರೆ ರಷ್ಯಾ

ಕಮ್ಯುನಿಸ್ಟರ ನೀತಿಯ ಪರಿಣಾಮವಾಗಿ ಪೂರ್ವ ಜರ್ಮನಿ, ಪಶ್ಚಿಮ ಜರ್ಮನಿಯೊಡನೆ ಯಾವ ರೀತಿಯ ಸಂಪರ್ಕವನ್ನು ಇಟ್ಟುಕೊಳ್ಳಲಾಗಲಿಲ್ಲ. ಇದರಿಂದ ಪೂರ್ವ ಜರ್ಮನಿಯ ಆರ್ಥಿಕ ದುಸ್ಥಿತಿ ಅಧಿಕಗೊಂಡಿತು

ಪೂರ್ವ ಜರ್ಮನಿಯನ್ನು ಆಕ್ರಮಿಸಿಕೊಂಡಿದ್ದ ರಷ್ಯಾ ದೇಶ ಆರ್ಥಿಕವಾಗಿ ಜರ್ಮನಿಗಿಂತ ಹಿಂದುಳಿದಿತ್ತು. ಪೂರ್ವ ಜರ್ಮನಿಯ ಆರ್ಥಿಕ ಪುನಶ್ಚೇತನಕ್ಕೆ ಸಹಾಯ ಮಾಡುವುದರ ಬದಲು ಜರ್ಮನಿಯಲ್ಲಿ ದೊರೆಯುತ್ತಿದ್ದ ಸಂಪತ್ತನ್ನು, ರಷ್ಯಾ ತನ್ನ ದೇಶಕ್ಕೆ ಸಾಗಿಸಿಕೊಂಡು ತನ್ನ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವ ಹಂಬಲವಿಟ್ಟುಕೊಂಡಿತ್ತು. ಪಶ್ಚಿಮ ಜರ್ಮನಿಯ ಪುನಶ್ಚೇತನಕ್ಕೆ ಸಹಕಾರಿಯಾದಂತಹ ಮಾರ್ಷಲ್ ಯೋಜನೆ ಅಥವಾ ಇನ್ನಾವ ಯೋಜನೆಯೂ ರಷ್ಯಾದಿಂದ ದೊರೆಯುವಂತಿರಲಿಲ್ಲ. ರಷ್ಯನ್ನರಿಗೆ ಅಂತಹ ಯೋಜನೆಯನ್ನು ನಿರೂಪಿಸಲು ಸಾಕಷ್ಟು ಆರ್ಥಿಕ ಶಕ್ತಿ ಇರಲಿಲ್ಲ. ಜೊತೆಗೆ ಅವರಿಗೆ ಅಂತಹ ಮನಸ್ಸೂ ಇರಲಿಲ್ಲ.

ರಷ್ಯನರು ಅದಷ್ಟು ಸಂಪತ್ತನ್ನು ಜರ್ಮನಿಯಿಂದ ಸಾಗಿಸುವ ಕ್ರಮ ಕೈಗೊಂಡರು. ಯುದ್ಧದಲ್ಲಿ ಜರ್ಮನಿ ಸೋತ ರಾಷ್ಟ್ರವಾದುದರಿಂದ ಗೆದ್ದ ರಾಷ್ಟ್ರಕ್ಕೆ ಕಾಣಿಕೆಯನ್ನು ಸಲ್ಲಿಸಬೇಕೆಂಬ ವಾದವನ್ನು ರಷ್ಯನರು ಎತ್ತಿ ಹಿಡಿದರು. ಪೂರ್ವ ಜರ್ಮನಿಯಲ್ಲಿದ್ದ ಎಲ್ಲಾ ಕೈಗಾರಿಕಾ ಸಂಸ್ಥೆಗಳ ಯಂತ್ರೋಪಕರಣಗಳನ್ನು ವಶಪಡಿಸಿಕೊಂಡರು. ಅವು ರಷ್ಯಾಕ್ಕೆ ಯಾವ ರೀತಿಯಲ್ಲಾದರೂ ಸ್ವಲ್ಪ ಉಪಯೋಗ ಉಂಟು ಮಾಡುತ್ತವೆ ಎಂದು ತಿಳಿದರೆ ಸಾಕು ಅವೆಲ್ಲವನ್ನೂ ರಷ್ಯಾಕ್ಕೆ ಸಾಗಿಸಬೇಕೆಂದು ಆಜ್ಞಾಪಿಸಲಾಯಿತು. ರೈಲ್ವೆ ಯಂತ್ರೋಪಕರಣಗಳೆಲ್ಲವನ್ನೂ ಜರ್ಮನಿಯಿಂದ ಕಿತ್ತುಹಾಕಿ ರಷ್ಯಾಕ್ಕೆ ಸಾಗಿಸಲಾಯಿತು. ಅಮೇರಿಕಾದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಎಚ್. ಕೋಲರ್ ಎಂಬುವರು ರಷ್ಯಾದ ನೀತಿಯನ್ನು ಹೀಗೆ ವಿವರಿಸಿದ್ದಾರೆ. ಪೂರ್ವಜರ್ಮನಿಯಲ್ಲಿದ್ದ ಕೈಗಾರಿಕಾ ಯಂತ್ರೋಪಕರಣಗಳ ಸಾಗಾಣಿಕೆಯನ್ನು ಕೆಲವು ಹಂತಗಳಲ್ಲಿ ರಷ್ಯನರು ಕೈಗೊಂಡರೆಂದು ಅವರು ಅಭಿಪ್ರಾಯಪಡುತ್ತಾರೆ. ಮೊದಲನೆ ಹಂತದಲ್ಲಿ ಬರ್ಲಿನ್ ನಗರದಲ್ಲಿದ್ದ ೪೬೦ ದೊಡ್ಡ ಕಾರ್ಖಾನೆಗಳನ್ನು ಮುಚ್ಚಿ ಅವುಗಳಲ್ಲಿದ್ದ ಯಂತ್ರೋಪಕರಣಗಳನ್ನು ರಷ್ಯಾಕ್ಕೆ ಸಾಗಿಸಲಾಯಿತು. ಎರಡನೆ ಹಂತದಲ್ಲಿ ಕೆಲವು ಕಾರ್ಖಾನೆಗಳ ಯಂತ್ರಗಳನ್ನು ಕಿತ್ತುಹಾಕಲಾಯ್ತು ಆದರೆ ಆ ಸಾಮಗ್ರಿಗಳನ್ನು ರಷ್ಯಾದಲ್ಲಿ ಪುನಃ ಜೋಡಿಸಿ ಉತ್ಪಾದನೆಗೆ ಅನುವಾಗುವಂತೆ ಮಾಡಲಾಗುವದಿಲ್ಲ ಎಂದು ಕಂಡುಬಂದಾಗ ಅವುಗಳನ್ನು ಪೋಲೆಂಡಿಗೆ ಕೊಡಲಾಯಿತು. ಅದಕ್ಕೆ ಬದಲು ರಷ್ಯನರು ಪೋಲೆಂಡಿನಿಂದ ಕಲ್ಲಿದ್ದಲನ್ನು ಪಡೆದುಕೊಂಡರು. ರಷ್ಯನರ ಆಕ್ರೋಶಕ್ಕೆ ಒಳಗಾದ ಮುಖ್ಯ ಕೈಗಾರಿಕೆಗಳೆಂದರೆ ಕಲ್ಲಿದ್ದಲಿನ ಗಣಿಗಳು, ರೈಲ್ವೆ ಯಂತ್ರೋಪಕರಣಗಳನ್ನು

ಉತ್ಪಾದಿಸುತ್ತಿದ್ದ ಕಾರ್ಖಾನೆಗಳು ಮತ್ತು ವಿದ್ಯುಚ್ಛಕ್ತಿ ಉಪಕರಣಗಳನ್ನು ತಯಾರಿಸುತ್ತಿದ್ದ ಕಾರ್ಖಾನೆಗಳು.

ಕೆಲವು ವರ್ಷಗಳ ಕಾಲ ಮೇಲ್ಕಂಡ ನೀತಿಯನ್ನು ರಷ್ಯನರು ಅನುಸರಿಸಿದ ಮೇಲೆ ಜರ್ಮನಿಯ ಆರ್ಥಿಕ ಚಟುವಟಿಕೆಯನ್ನು ತಮ್ಮ ಕಮ್ಯುನಿಷ್ಟ್ ನೀತಿಯ ಆಧಾರದ ಮೇಲೆ ರೂಪಿಸಲಾರಂಭಿಸಿದರು. ಸ್ಟಾಲಿನರ ನೀತಿಗನುಸಾರವಾಗಿ ಏನೇ ಕಷ್ಟ ಬಂದರೂ ಉಕ್ಕು ಉತ್ಪಾದನೆಯನ್ನು ಪೂರ್ವ ಜರ್ಮನಿಯಲ್ಲಿ ಬಲಪಡಿಸಬೇಕೆಂಬ ನಿರ್ಧಾರ ಕೈಗೊಳ್ಳಲಾಯಿತು. ಈ ನೀತಿಯನ್ನು "ಆಟಾರ್ಕಿ" (Autarky) ಎಂದು ಜರ್ಮನರು ಕರೆಯುತ್ತಾರೆ. ಎರಡನೆಯ ಮಹಾಯುದ್ಧಕ್ಕೆ ಮುನ್ನ ಉಕ್ಕು ಉತ್ಪಾದನೆಯಲ್ಲಿ ಪೂರ್ವ ಜರ್ಮನಿಯ ಪಾತ್ರ ಬಹಳ ಅಲ್ಪವಾಗಿತ್ತು. ಜರ್ಮನಿಯ ಒಟ್ಟು ಉಕ್ಕು ಉತ್ಪಾದನೆಯ ಪೈಕಿ ಶೇಕಡಾ ೧.೭ ರಷ್ಟು ಮಾತ್ರ ಪೂರ್ವ ಜರ್ಮನಿಯಿಂದ ದೊರೆಯುತ್ತಿತ್ತು. ಪೂರ್ವ ಜರ್ಮನಿಯಲ್ಲಿ ಒಂದು ಕಬ್ಬಿಣದ ಅದುರಿನ ಗಣಿ ಮತ್ತು ಉಕ್ಕನ್ನು ತಯಾರಿಸುವ ಒಂದು ಕಾರಖಾನೆ ಮಾತ್ರ ಇದ್ದಿತು. ಉಕ್ಕನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಲು ಪೂರ್ವ ಜರ್ಮನಿಯಲ್ಲಿ ಅನುಕೂಲವಿಲ್ಲ ಎಂದು ಕಂಡು ಬಂದರೂ ರಷ್ಯಾದ ಆಡಳಿತಗಾರರು ಉಕ್ಕನ್ನು ತಯಾರಿಸುವ ನಿರ್ಧಾರ ಕೈಗೊಂಡರು. ಒಂದು ಸಾವಿರ ಮೈಲು ದೂರದಲ್ಲಿದ್ದ ಯುಕ್ರೇನ್ ರಾಜ್ಯದಿಂದ (ರಷ್ಯಾದ ಒಂದು ರಾಜ್ಯ) ಕಬ್ಬಿಣದ ಅದಿರನ್ನು ಪೂರ್ವ ಜರ್ಮನಿಯ ಕಾಲ್ಬೆ ಎಂಬ ಪ್ರದೇಶಕ್ಕೆ ಸಾಗಿಸುವ ಏರ್ಪಾಡು ಮಾಡಲಾಯಿತು. ಸುಣ್ಣವನ್ನೂ ಕೂಡ ದೂರ ಪ್ರದೇಶಗಳಿಂದ ತರಿಸಿಕೊಳ್ಳುವ ಏರ್ಪಾಡು ಮಾಡಲಾಯಿತು. ಕಲ್ಲಿದ್ದಲು ಮಾತ್ರ ಕಾಲ್ಬೆ ಪ್ರದೇಶದ ಹತ್ತಿರವೇ ದೊರೆಯುತ್ತಿತ್ತು. ಹೀಗೆ ಅತಿಶ್ರಮದಿಂದ ಉಕ್ಕಿನ ಉತ್ಪಾದನೆ ಹೆಚ್ಚಿಸುವ ಕ್ರಮ ಕೈಗೊಳ್ಳಲಾಯಿತು. ಇಷ್ಟೆಲ್ಲ ಶ್ರಮದ ಫಲವಾಗಿ ೧೯೬೯ ರ ಕೊನೆ ವೇಳೆಗೆ ಪೂರ್ವ ಜರ್ಮನಿಯಲ್ಲಿ ೪.೮ ದಶಲಕ್ಷ ಟನ್‌ಗಳಷ್ಟು ಉಕ್ಕು ಉತ್ಪಾದನೆಯಾಗುತ್ತಿತ್ತು. ಆದರೆ ಇದೇ ಅವಧಿಯಲ್ಲಿ ಪಶ್ಚಿಮ ಜರ್ಮನಿಯಲ್ಲಿ ಉಕ್ಕು ಉತ್ಪಾದನೆ ೪೫ ದಶಲಕ್ಷಟನ್‌ಗಳನ್ನು ಮುಟ್ಟಿತು.[೧]

ಉಳಿದ ಕೈಗಾರಿಕೆಗಳ ಅಭಿವೃದ್ಧಿಗೆ ಎರಡು ತೊಡಕುಗಳಿದ್ದವು: (೧) ವಿದ್ಯುಚ್ಛಕ್ತಿಯ ಅಭಾವ; (೨ ಕೂಲಿಗಾರರ ಅಭಾವ. ಈ ತೊಡಕುಗಳನ್ನು ಹೋಗಲಾಡಿಸಲು ರಷ್ಯನರು ಕೆಲವು ಕ್ರಮಗಳನ್ನು ಕೈಗೊಂಡರು. ಲಿಗ್ನೈಟ್ (ಕೆಳದರ್ಜೆ ಕಲ್ಲಿದ್ದಲು)ನ್ನು ಉಪಯೋಗಿಸಿಕೊಂಡು ವಿದ್ಯುಚ್ಛಕ್ತಿ ಉತ್ಪಾದಿಸುವ ಕಾರ್ಯವನ್ನು ಆರಂಭಿಸಲಾಯಿತು

---

೧. World Survey; Dec 1971; P.5

ಪೂರ್ವ ಜರ್ಮನಿಯಿಂದ ಪಶ್ಚಿಮ ಜರ್ಮನಿಗೆ ಅನೇಕ ಜರ್ಮನರು ಪ್ರತಿ ನಿತ್ಯ ತಪ್ಪಿಸಿಕೊಂಡು ಓಡಿ ಹೋಗುತ್ತಿದ್ದರು. ಇದರಿಂದ ಕೂಲಿಗಾರರ ಅಭಾವ ಅಧಿಕಗೊಂಡಿತು. ಅದರಲ್ಲಿಯೂ ನುರಿತ ಕೆಲಸಗಾರರು ಕಮ್ಯುನಿಷ್ಟ್ ಹಿಡಿತದಿಂದ ತಪ್ಪಿಸಿಕೊಂಡು ಜರ್ಮನಿಗೆ ಹೋಗಿ ನೆಲೆಸಲು ಸದಾ ಯತ್ನಿಸುತ್ತಿದ್ದರು. ಇದನ್ನು ತಪ್ಪಿಸಲು ೧೯೬೧ರಲ್ಲಿ ಬರ್ಲಿನ್ ಗೋಡೆಯನ್ನು ರಚಿಸಲಾಯಿತು. ಪೂರ್ವ ಜರ್ಮನಿಯಿಂದ ಪಶ್ಚಿಮ ಜರ್ಮನಿಗೆ ಜನರು ಓಡಿ ಹೋಗುತ್ತಿದ್ದುದರ ಪರಿಣಾಮವಾಗಿ ಪೂರ್ವ ಜರ್ಮನಿಯ ಜನಸಂಖ್ಯೆ ೧೯೪೮ರಲ್ಲಿ ೧೯ದಶಲಕ್ಷಗಳಿದ್ದುದು ೧೯೬೮ರ ವೇಳೆಗೆ ೧೭ ದಶಲಕ್ಷಗಳಿಗೆ ಇಳಿಯಿತು. ಕೂಲಿಗಾರರ ಅಭಾವ ಹೋಗಲಾಡಿಸಲು ರಷ್ಯನರು ಹಂಗೇರಿಯಿಂದ ಮತ್ತು ಜರ್ಮನಿಯ ಅಕ್ಕಪಕ್ಕದಲ್ಲಿರುವ ಇತರ ಸಣ್ಣ ರಾಷ್ಟ್ರಗಳಿಂದ ಕೂಲಿಗಾರರನ್ನು ಕರೆಯಿಸಿಕೊಂಡರು.

ಪೂರ್ವ ಜರ್ಮನಿ ತನ್ನ ವ್ಯಾಪಾರಕ್ಕೆ ಬಹುಮಟ್ಟಿಗೆ ರಷ್ಯಾವನ್ನು ಆಶ್ರಯಿಸಿತು. ತನ್ನ ಒಟ್ಟು ಆಮದಿನ ಪೈಕಿ ಶೇಕಡಾ ೪೩ರಷ್ಟನ್ನು ರಷ್ಯಾದಿಂದ ಕರೆಸಿಕೊಂಡು, ತನ್ನ ಒಟ್ಟು ರಫ್ತು ಪೈಕಿ ಶೇಕಡಾ ೪೦ರಷ್ಟನ್ನು ರಷ್ಯಾಕ್ಕೆ ಕಳುಹಿಸುತ್ತಿತ್ತು. ಇದಲ್ಲದೆ ರಷ್ಯಾದ ಅಧೀನದಲ್ಲಿದ್ದ ಇತರ ಕಮ್ಯುನಿಷ್ಟ್ ರಾಷ್ಟ್ರಗಳೊಂದಿಗೆ ಜರ್ಮನಿ ವ್ಯಾಪಾರ ಮಾಡಬೇಕಾಗಿತ್ತು. ತನಗಿಷ್ಟ ಬಂದ ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ವ್ಯಾಪಾರ ಮಾಡುವ ಸ್ವಾತಂತ್ರ್ಯವನ್ನು ಪೂರ್ವ ಜರ್ಮನಿ ಹೊಂದಿರಲಿಲ್ಲ.

ವ್ಯವಸಾಯ ಕ್ಷೇತ್ರದಲ್ಲಿಯೂ ಸಾಮೂಹಿಕ ವ್ಯವಸಾಯ ಪದ್ಧತಿಯನ್ನು (Collective farming) ಜಾರಿಗೆ ತರಲಾಯಿತು. ಅನೇಕ ವ್ಯವಸಾಯಗಾರರು ಇದನ್ನು ಪ್ರತಿಭಟಿಸಿದರು. ೧೯೫೩ರ ತನಕ ಪೂರ್ವ ಜರ್ಮನರು ಕಮ್ಯುನಿಷ್ಟರ ಧೋರಣೆಯ ವಿರುದ್ಧ ಪ್ರತಿಭಟಿಸುವ ಶಕ್ತಿ ಹೊಂದಿರಲಿಲ್ಲ. ಆದುದರಿಂದ ಗುಪ್ತವಾಗಿ ತಮಗೆ ಒದಗಿದ್ದ ದುರವಸ್ಥೆಯನ್ನು ಸಹಿಸಿಕೊಂಡಿದ್ದರು. "ಪಶ್ಚಿಮ ಜರ್ಮನಿಯನ್ನು ಹಿಮ್ಮೆಟ್ಟಿಸಿ ಪೂರ್ವ ಜರ್ಮನಿ ಮುನ್ನಡೆಯುತ್ತಿದೆ" ಎಂಬ ರಷ್ಯನರ ಟೊಳ್ಳು ಘೋಷಣೆಗಳನ್ನು ಪೂರ್ವ ಜರ್ಮನರು ತಿರಸ್ಕರಿಸಿದರು. ೧೯೫೩ ರಲ್ಲಿ ಪೂರ್ವ ಜರ್ಮನರು ರಷ್ಯಾ ಆಡಳಿತಗಾರರ ಆರ್ಥಿಕ ನೀತಿಯ ವಿರುದ್ಧ ದಂಗೆ ಎದ್ದರು. ಅದನ್ನು ಅಡಗಿಸಲು ರಷ್ಯಾದ ಟ್ಯಾಂಕುಗಳು ಪೂರ್ವ ಜರ್ಮನಿಯ ವಿವಿಧ ಭಾಗಗಳಲ್ಲಿ ಕಾರ್ಯಾಚರಣೆ ಕೈಕೊಳ್ಳಬೇಕಾಯಿತು.

೧೯೫೩ ರಲ್ಲಿ ಉಂಟಾದ ದಂಗೆಯನ್ನು ಅಡಗಿಸಿದರೂ, ತಮ್ಮ ಆರ್ಥಿಕ ನೀತಿಯಲ್ಲಿ ಬದಲಾವಣೆಗಳನ್ನು ತರಬೇಕೆಂಬ ಮಹತ್ವವನ್ನು ರಷ್ಯನ್ನರು ಅರಿತುಕೊಂಡರು. ಜರ್ಮನ್ನರನ್ನು ಸಂತುಷ್ಟಗೊಳಿಸಬೇಕಾದರೆ ಇದೊಂದೆ ಮಾರ್ಗವೆಂಬುದನ್ನು ತಿಳಿದುಕೊಂಡರು. ಆದರೆ ಸ್ಟಾಲಿನ್ನರ ನಿಧನದಿಂದ ರಷ್ಯಾದ ರಾಜ

ಕೀಯ ಪರಿಸ್ಥಿತಿಯಲ್ಲಿ ಬದಲಾವಣೆಗಳಾದುದರಿಂದ ಕೂಡಲೇ ಪೂರ್ವ ಜರ್ಮನಿಯ ಆರ್ಥಿಕ ನೀತಿಯನ್ನು ಬದಲಾಯಿಸಲು ಹೋಗಲಿಲ್ಲ. ೧೯೬೩ ರ ವೇಳೆಗೆ ಪೂರ್ವ ಜರ್ಮನಿಯ ಆರ್ಥಿಕ ನೀತಿಯಲ್ಲಿ ಹೊಸ ಧೋರಣೆಯನ್ನು ಅನುಸರಿಸುವುದಾಗಿ ರಷ್ಯನ್ನರು ಘೋಷಿಸಿದರು. ೧೯೬೩ ರಲ್ಲಿ ಪೂರ್ವ ಜರ್ಮನಿಯಲ್ಲಿ ಜಾರಿಗೆ ಬಂದ ಆರ್ಥಿಕ ನೀತಿಯನ್ನು "ಹೊಸ ಆರ್ಥಿಕ ವ್ಯವಸ್ಥೆ" (New Economic System) ಎಂಬ ಹೆಸರಿನಿಂದ ಕರೆಯಲಾಗಿದೆ.

ಹೊಸ ಆರ್ಥಿಕ ವ್ಯವಸ್ಥೆ ಜಾರಿಗೆ ಬಂದ ನಂತರ ಪೂರ್ವ ಜರ್ಮನಿಯಲ್ಲಿ ಉಂಟಾದ ಆರ್ಥಿಕಾಭಿವೃದ್ಧಿ

ಪೂರ್ವ ಜರ್ಮನಿಯ ಹೊಸ ಆರ್ಥಿಕ ವ್ಯವಸ್ಥೆಯು ಸಂಪೂರ್ಣವಾಗಿ ರಷ್ಯಾದ ಅರ್ಥ ಶಾಸ್ತ್ರಜ್ಞ ಲೈಬರ್‌ಮನ್‌ನ (Liberman) ಸಿದ್ಧಾಂತಗಳ ಮೇಲೆ ರೂಪಿತವಾದದ್ದು ಎನ್ನಬಹುದು. ಸೈದ್ಧಾಂತಿಕ ವಿಚಾರಗಳಿಗೆ ಮಹತ್ವ ಕೊಟ್ಟು ಅವುಗಳ ಆಧಾರದ ಮೇಲೆ ಆರ್ಥಿಕ ನೀತಿಯನ್ನು ರೂಪಿಸುವುದರ ಬದಲು, ಒಂದು ದೇಶದ ವಾಸ್ತವಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅವುಗಳ ಆಧಾರದ ಮೇಲೆ ಆರ್ಥಿಕ ನೀತಿಯನ್ನು ರೂಪಿಸಬೇಕೆಂಬ ತತ್ವವನ್ನು ಆತನು ಎತ್ತಿ ಹಿಡಿದನು. ಇದರ ಪ್ರಕಾರ ಆರ್ಥಿಕ ಯೋಜನೆಯನ್ನು ರೂಪಿಸುವುದರಲ್ಲಿ ಮತ್ತು ಜಾರಿಗೆ ತರುವುದರಲ್ಲಿ ವಿಕೇಂದ್ರೀಕರಣ ಪದ್ಧತಿಯನ್ನು ಅನುಸರಿಸುವಂತಾಯಿತು. ವಿವಿಧ ಉತ್ಪಾದನಾ ಸಂಸ್ಥೆಗಳ ಅಧ್ಯಕ್ಷರುಗಳಿಗೆ ಸಮಯೋಜಿತ ನಿರ್ಧಾರಗಳನ್ನು ಕೈಕೊಳ್ಳುವ ಅಧಿಕಾರ ಕೊಡಲಾಯಿತು. ಮೊದಲು ಇದ್ದಂತೆ ಪ್ರತಿಯೊಂದಕ್ಕೂ ಕೇಂದ್ರ ಯೋಜನಾ ಸಮಿತಿಯ ಆಜ್ಞೆ ಪಡೆಯುವುದು ತಪ್ಪಿತು. ಕೇಂದ್ರ ಯೋಜನಾ ಸಮಿತಿ ಕೆಲವು ಮುಖ್ಯ ನಿರ್ಧಾರಗಳನ್ನು ಮಾತ್ರ ಕೈಗೊಂಡು, ಸ್ಥಳೀಯ ಘಟಕಗಳು ದಕ್ಷತೆಯಿಂದ ಕೆಲಸ ಮಾಡಲು ಸಂದರ್ಭಕ್ಕನುಸಾರವಾಗಿ ನೀತಿಯನ್ನು ರೂಪಿಸಿಕೊಳ್ಳುವ ಅಧಿಕಾರವನ್ನು ಕಾರ್ಖಾನೆಗಳ ಆಡಳಿತಗಾರರಿಗೆ ವಹಿಸಲಾಯಿತು. ೧೯೫೯ ರಲ್ಲಿ ರೂಪಿಸಲಾಗಿದ್ದ ಸಪ್ತವಾರ್ಷಿಕ ಯೋಜನೆಯನ್ನು ತಳ್ಳಿ ಹಾಕಿ, ಹೊಸ ಯೋಜನೆಯನ್ನು ರೂಪಿಸಲಾಯಿತು.

ಹೊಸ ಆರ್ಥಿಕ ವ್ಯವಸ್ಥೆಯಿಂದ ಕೂಡಲೇ ಮಹತ್ತರ ಬದಲಾವಣೆಗಳು ಆಗದಿದ್ದರೂ, ಪೂರ್ವ ಜರ್ಮನಿಯ ಆರ್ಥಿಕಾಭಿವೃದ್ಧಿಗೆ ಅವಕಾಶ ಒದಗಿಸಲಾಯಿತು ಎನ್ನಬಹುದು. ಪಶ್ಚಿಮಜರ್ಮನಿಯ ಆರ್ಥಿಕ ಪ್ರಗತಿಯೊಡನೆ ಪೂರ್ವ ಜರ್ಮನಿಯ ಆರ್ಥಿಕ ಪ್ರಗತಿಯನ್ನು ಹೋಲಿಸಿದರೆ ಪೂರ್ವ ಜರ್ಮನಿ ಹಿಂದುಳಿದಿದೆ ಎನ್ನಬಹುದು. ಆದರೆ ಕಮ್ಯುನಿಷ್ಟರ ಹತೋಟಿಯಲ್ಲಿರುವ ಅನೇಕ ಪೂರ್ವ ಯೂರೋಪಿನ ರಾಷ್ಟ್ರಗಳೊಡನೆ ಹೋಲಿಸಿದಾಗ ಪೂರ್ವ ಜರ್ಮನಿಯ ಆರ್ಥಿಕಾಭಿವೃದ್ಧಿ ಉಳಿದವುಗಳಿಗಿಂತ ಉತ್ತಮ ಎನ್ನಬಹುದು.

ಕೃಷಿ ಉತ್ಪಾದನೆಯಲ್ಲಿ ಪೂರ್ವ ಜರ್ಮನಿ, ಪಶ್ಚಿಮ ಜರ್ಮನಿಗಿಂತ ಮುಂದಿದೆ. ಪೂರ್ವ ಜರ್ಮನಿಯು ತನಗೆ ಅವಶ್ಯಕವಾದ ಒಟ್ಟು ಆಹಾರಧಾನ್ಯಗಳ ಪೈಕಿ ಶೇಕಡಾ ೮೫ ರಷ್ಟನ್ನು ಉತ್ಪಾದಿಸುವ ಶಕ್ತಿಯನ್ನು ೧೯೭೦ ರ ಕೊನೆ ವೇಳೆಗೆ ಪಡೆದಿದೆ. ಆದರೆ ಪಶ್ಚಿಮ ಜರ್ಮನಿ ತನಗ ಅವಶ್ಯವಾದ ಆಹಾರ ಧಾನ್ಯಗಳ ಪೈಕಿ ಶೇಕಡಾ ೭೭ ರಷ್ಟನ್ನು ಮಾತ್ರ ಉತ್ಪಾದಿಸುತ್ತಿದೆ. ಇಷ್ಟಾದರೂ ಪೂರ್ವ ಜರ್ಮನಿಯಲ್ಲಿ ಕೆಲವು ವಸ್ತುಗಳ ಅಭಾವವಿದೆ. ತನ್ನ ಜನಗಳಿಗೆ ಮಾಂಸ, ಬೆಣ್ಣೆ ಮತ್ತು ಇತರ ಕೆಲವು ಮುಖ್ಯ ಆಹಾರ ವಸ್ತುಗಳನ್ನು ಪೂರ್ವ ಜರ್ಮನಿ ರೇಶನಿಂಗ್ ಮೂಲಕ ಒದಗಿಸುತ್ತಿದೆ. ಪಶ್ಚಿಮ ಜರ್ಮನಿ ಆಹಾರ ವಸ್ತುಗಳ ಆಮದಿಗೆ ಕೊಟ್ಟಿರುವಷ್ಟು ಅವಕಾಶವನ್ನು ಪೂರ್ವ ಜರ್ಮನಿ ಕೊಟ್ಟಿಲ್ಲದಿರುವುದೇ ಇಂತಹ ಪರಿಸ್ಥಿತಿಗೆ ಕಾರಣವಾಗಿದೆ.

ಸಾಮೂಹಿಕ ವ್ಯವಸಾಯ ಪದ್ಧತಿಗೆ ದೇಶದ ಶೇಕಡಾ ೯೫ ಭಾಗ ಜಮೀನುಗಳು ಒಳಗಾಗಿವೆ. ಮೂರು ರೀತಿಯ ಸಾಮೂಹಿಕ ವ್ಯವಸಾಯ ಪದ್ಧತಿಯನ್ನು ಕಾಣುತ್ತೇವೆ: ಮೊದಲನೆ ವರ್ಗದಲ್ಲಿ ರೈತರು ತಮ್ಮ ಜಮೀನುಗಳನ್ನು ಮಾತ್ರ ಒಟ್ಟುಗೂಡಿಸಿದ್ದಾರೆ. ಎರಡನೇ ವರ್ಗದಲ್ಲಿ ವ್ಯವಸಾಯದ ಯಂತ್ರೋಪಕರಣಗಳನ್ನು ಮತ್ತು ಜಮೀನುಗಳನ್ನು ರೈತರು ಒಟ್ಟುಗೂಡಿಸಿದ್ದಾರೆ. ಮೂರನೇ ವರ್ಗದಲ್ಲಿ ಎಲ್ಲಾ ವಿಧವಾದ ಆಸ್ತಿಯನ್ನು ಅಂದರೆ ಜಮೀನುಗಳು, ಕಟ್ಟಡಗಳು, ಪ್ರಾಣಿಗಳು ಮತ್ತು ಯಂತ್ರೋಪಕರಣಗಳನ್ನು ಒಟ್ಟುಗೂಡಿಸಲಾಗಿದೆ.

೧೯೬೩–೧೯೭೧ ರ ನಡುವೆ ಪೂರ್ವಜರ್ಮನಿಯಲ್ಲಿ ಉಂಟಾಗಿರುವ ಆರ್ಥಿಕಾಭಿವೃದ್ಧಿಯ ಪರಿಣಾಮವಾಗಿ, ಪೂರ್ವ ಜರ್ಮನಿ ಈಗ ಪ್ರಪಂಚದ ಕೈಗಾರಿಕಾ ರಾಷ್ಟ್ರಗಳ ಪೈಕಿ ೧೦ ನೇ ಸ್ಥಾನವನ್ನು ಪಡೆದಿದೆ. ೧೯೬೦ ರಲ್ಲಿ ಎರಡು ಜರ್ಮನಿಗಳಲ್ಲಿದ್ದ ಪ್ರಜೆಗಳ ಪ್ರತಿ ತಿಂಗಳ ಸರಾಸರಿ ವರಮಾನ ೪೮೦ ಮಾರ್ಕ್‌ಗಳಾಗಿದ್ದವು. ಆದರೆ ೧೯೭೧ ರಲ್ಲಿ ಪೂರ್ವಜರ್ಮನಿಯಲ್ಲಿ ಸರಾಸರಿ ವರಮಾನ ೬೧೦ ಮಾರ್ಕ್‌ಗಳಷ್ಟು ಮತ್ತು ಪಶ್ಚಿಮ ಜರ್ಮನಿಯಲ್ಲಿ ೯೦೦ ಮಾರ್ಕ್‌ಗಳಷ್ಟು ಆಯಿತು.

ಜನಸಂಖ್ಯೆಯ ಆಧಾರದ ಮೇಲೆ ತಲಾ ಉತ್ಪಾದನೆಯನ್ನು (per capita production) ತೆಗೆದುಕೊಂಡರೆ, ಇಟಲಿಗಿಂತ ಹೆಚ್ಚು ಉಕ್ಕನ್ನು, ಪಶ್ಚಿಮ ಜರ್ಮನಿಗಿಂತ ಅಧಿಕ ವಿದ್ಯುಚ್ಛಕ್ತಿಯನ್ನು, ಬ್ರಿಟನ್ನಿಗಿಂತ ಅಧಿಕ ಸಿಮೆಂಟ್, ಟೆಲಿವಿಷನ್ ಸೆಟ್ಟುಗಳು ಮತ್ತು ರೆಫ್ರಿಜರೇಟರ್‌ಗಳನ್ನು ಪೂರ್ವ ಜರ್ಮನಿ ಈಗ ಉತ್ಪಾದಿಸುತ್ತಿದೆ ಎನ್ನಬಹುದು.

ಒಟ್ಟಿನಲ್ಲಿ ಪೂರ್ವ ಜರ್ಮನಿಯಲ್ಲಿ ಉತ್ಪಾದನೆ ಶೇಕಡಾ ೨೯ ರಷ್ಟು ಹೆಚ್ಚಿದೆ ಎನ್ನಬಹುದು. ಇದರಿಂದ ಪೂರ್ವ ಜರ್ಮನರ ಜೀವನದಲ್ಲಿ ಪ್ರಗತಿ

ಕಂಡು ಬಂದಿದೆ. ೧೯೬೦ರಲ್ಲಿ ಪ್ರತಿ ನೂರು ಮನೆಗೆ ೩.೨ ಕಾರುಗಳು ಮಾತ್ರ ಇದ್ದವು ಈಗ ೧೪ ಕಾರುಗಳಿವೆ. ಪ್ರತಿ ನೂರು ಮನೆಗೆ ೧೯೬೦ರಲ್ಲಿ ೧೭ ಟೆಲಿವಿಷನ್ ಸೆಟ್ಟುಗಳಿದ್ದವು. ಈಗ ೬೭ ಟೆಲಿವಿಷನ್ ಸೆಟ್ಟುಗಳಿವೆ. ಹಾಗೆಯೆ ರೆಫ್ರಿಜರೇಟರ್‌ಗಳ ಸಂಖ್ಯೆ ಪ್ರತಿ ನೂರು ಮನೆಗೆ ೬ ರಿಂದ ೪೮ಕ್ಕೆ ಹೆಚ್ಚಿದೆ. ೧೯೫೨ರಲ್ಲಿ ಪೂರ್ವ ಜರ್ಮನಿ ಒಂದು ವಾಣಿಜ್ಯ ನೌಕೆಯನ್ನು ಮಾತ್ರ ಪಡೆದಿತ್ತು. ಆದರೆ ೧೯೬೯ರ ಕೊನೆಯಲ್ಲಿ ೧೬೯ ವಾಣಿಜ್ಯ ನೌಕೆಗಳನ್ನು ಪಡೆದಿತ್ತು.

ಇಷ್ಟಾದರೂ ಪೂರ್ವ ಜರ್ಮನಿಯಲ್ಲಿ ಅನೇಕ ವಸ್ತುಗಳ ಅಭಾವ ಮುಂದುವರಿಯುತ್ತಿದೆ. ಮತ್ತು ಅನೇಕ ವಸ್ತುಗಳ ಬೆಲೆ ಅಧಿಕ ಮಟ್ಟದಲ್ಲಿದೆ. ಉದಾಹರಣೆಗೆ, ಟ್ರಬಾಂಟ್ ಮೋಟಾರು ಕಾರುಗಳನ್ನು (ಫಿಯಟ್ ಕಾರಿನ ಮಾದರಿ) ನಿಗದಿಯಾದ ಬೆಲೆಗೆ ಪಡೆಯಬೇಕಾದರೆ ಪೂರ್ವ ಜರ್ಮನಿಯಲ್ಲಿ 5 ವರ್ಷ ಕಾಲ ಕಾಯಬೇಕು. ಕಾಫಿ ಮತ್ತು ಮಾದಕ ದ್ರವ್ಯಗಳ ಬೆಲೆ ಪೂರ್ವ ಜರ್ಮನಿಯಲ್ಲಿ, ಪಶ್ಚಿಮ ಜರ್ಮನಿಗಿಂತ, ನಾಲ್ಕರಷ್ಟು ಅಧಿಕವಾಗಿದೆ.

ಪೂರ್ವ ಜರ್ಮನಿಯ ಆರ್ಥಿಕಾಭಿವೃದ್ಧಿಯನ್ನು ಪರಿಶೀಲಿಸಿದಾಗ ಕಮ್ಯುನಿಸ್ಟ ರಾಷ್ಟ್ರಗಳ ಪೈಕಿ, ಪೂರ್ವ ಜರ್ಮನಿ ಉತ್ತಮ ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಬಹುದು. ಅವಿಭಾಜ್ಯ ಜರ್ಮನಿಯ ಪ್ರಗತಿಯೊಡನೆ ಹೋಲಿಸಿದಾಗ ಪೂರ್ವ ಜರ್ಮನಿ ಸಾಧಿಸಬೇಕಾದದ್ದು ಇನ್ನೂ ಬಹಳ ಪ್ರಮಾಣದಲ್ಲಿದೆ ಎನ್ನಬಹುದು. ಈಗಿನ ರೀತಿಯ ಆಡಳಿತ ವ್ಯವಸ್ಥೆ ಮತ್ತು ಸೈದ್ಧಾಂತಿಕ ವಿಚಾರಧಾರೆ ಮುಂದುವರಿದರೆ ಇನ್ನು ಕೆಲವು ವರ್ಷಗಳಲ್ಲಿ ಪೂರ್ವ ಜರ್ಮನಿ ಪಶ್ಚಿಮ ಜರ್ಮನಿಯ ಮಟ್ಟ ತಲುಪಬಹುದೆಂದು ಹೇಳಬಹುದು. ಪೂರ್ವ ಜರ್ಮನಿಯು ಪ್ರಕಟಿಸಿರುವ ೧೯೭೧–೭೫ರ ಅವಧಿಯ ಪಂಚವಾರ್ಷಿಕ ಯೋಜನೆಯ ಮುಖ್ಯಾಂಶಗಳನ್ನು ಪರಿಶೀಲಿಸಿದರೆ, ಪೂರ್ವ ಜರ್ಮನಿ ಆರ್ಥಿಕ ಕ್ಷೇತ್ರದಲ್ಲಿ ಯುರೋಪಿನ ಜಪಾನ್ ಎಂಬ ಹೆಸರು ಪಡೆಯುವ ಹಂಬಲ ಹೊಂದಿದೆ ಎನ್ನಬಹುದು.

★ ಎನ್. ಪ್ರಭುಸ್ವಾಮಿ

ರಾಜಾ ವೆಂಕಟಪ್ಪನಾಯಕನ ದುಂದುಮೆ

ಹೇ ದುಂದುಮ್ಮಿ ಎಂದೆಂದು ಪಾಡಿರಿ ಜಾಣಽರೆ
ದುಂದುಮ್ಮಿಽ ಬಸವಂತನ ಹಬ್ಬ ‖ ಪಲ್ಲ ‖

ಕೇಮಲ ಸಾಹೇಬ ಸುರಪುರಕ ಬಂದು
ಭಾವನ ಬಾವಿಯ ಸ್ಥಳದಲ್ಲಿ ಇಳಿದು
ಬುದ್ಧಿವಂತರನೆಲ್ಲ ಬಳಿಯಲ್ಲಿ ಕರೆದು
ನಾನಾ ತರದ ವಿದ್ಯಾ ಮಾಡಿದರು "ಪಂದು"
‖ ದುಂದುಮ್ಮಿಽ ಬಸವಂತನ ಹಬ್ಬ ‖ ೧

ಕೇಮಲ ಸಾಹೇಬ ಬಂದಾಽನೆಂದು
ಭಾವನ್ನ ತೋಟಕ್ಕೆ ಡೇರ್‍ಯಾವ ತಂದು ।
ಒಡಿಯಾರ ಪರಹಸ್ತ ಹೊಡಿಯ್ಯಽರಿ ಮುಂದು
ತಡವು ಮಾಡಬೇಡ ಜಲ್ದಿ ಹೋಗೆಂದು
‖ ದುಂದುಮ್ಮಿಽ ಬಸವಂತನ ಹಬ್ಬ ‖ ೨

ಮುತ್ತಿನ ಪಲ್ಲಕ್ಕಿ ನೌಬತ್ತು ಬಾಜಿ
ಕೊತ್ತಲ ಹಿಡಿದಾದ ಉತ್ತಮ ತೇಜಿ ।
ನಿತ್ಯ ಮಾಡುವೆವು ಗುರುವಿನ ಪೂಜಿ
ಸಗರ ಸಾವಿರ ಹಳ್ಳಿ ರೈತರು ರಾಜಿ
‖ ದುಂದುಮ್ಮಿಽ ಬಸವಂತನ ಹಬ್ಬ ‖ ೩

ಸಾಹೇಬನ ಬೆಪ್ಪಽಗಿ ಹೋಗೋ ವಿಸ್ತಾರ
ಎದ್ದು ಬಡಿತಾದ ಆನೆ ಜೋಲ್ತಾರ ।
ಕಬ್ಬಿಣ ಹೊತ್ತಾರ ಹಳೆ ಮಂದಿ ಪೂರಾ
ಹಾರ್‍ಯಾರಿ ಬಿಳುತಾದ ಆರ‍್ಯ ಸುರಪುರ
‖ ದುಂದುಮ್ಮಿಽ ಬಸವಂತನ ಹಬ್ಬ ‖ ೪

ನವಾಬ ಸುಲೆಮಾನಷಾ ಇಬ್ಬರೂ ಕೂಡಿ
ಕೂತ ಜಾಗದಲ್ಲಿ ಏಕಾಂತ ಮಾಡಿ ।
ಲಚಮನ ಸಿಂಗಽನು ಬರುವುದು ನೋಡಿ
ದೊರೆಗ್ಹೋಗಿ ಹೇಳ್ತಾರ ಧೈರ್ಯವ ಮಾಡಿ
‖ ದುಂದುಮ್ಮಿಽ ಬಸವಂತನ ಹಬ್ಬ ‖ ೫

ಬಡೇಸಾಹೇಬನ ಹುಕುಮು ತಂದು
ದೊರೆಯು ಕೈಯೊಳಗ ಕೊಟ್ಟಾರು ಮುಂದು |
ಇವರ ಉತ್ತರ ನೀವು ಜಲ್ದಿ ಹೇಳೆಂದು
ಹೇಳಿದ್ಹಾಂಗ ಬರೆದು ಹಾಕುತೇವೆಂದು
|| ದುಂದುಮ್ಮಿಽ ಬಸವಂತನ ಹಬ್ಬ || ೬

ಪೋಲಿಸು ಕೆಲಸವು ನಮಗೆ ಇರಲೆಂದು
ಇದ್ದ ಹತಿಯಾರ ಸಾಮಾನು ತಂದಿಡರಿ ಮುಂದು |
ಮುಲಕಿಯ ರೊಕ್ಕಽ ಎತ್ತುತ್ತೇವೆಂದು
ಹುಕುಮ ನಡಸ್ತೇವಿ ಕೇಳ ನಮದೊಂದು
|| ದುಂದುಮ್ಮಿಽ ಬಸವಂತನ ಹಬ್ಬ || ೭

ಪೋಲಿಸು ಕೆಲಸವು ನಾವು ಬಿಡಬೆಲ್ಲ
ಹತಿಯಾರ ಸಾಮಾನು ನಿಮಗೆ ಕೊಡಬೆಲ್ಲ |
ಆದರ ಕಾನೂನನ್ನು ಕಾರ್ಬಾರಿ ಬಲ್ಲ
ಹೀಗಂತ ಸಾಹೇಬರಿಗೆ ಆಡಿದರು ಎಲ್ಲ
|| ದುಂದುಮ್ಮಿಽ ಬಸವಂತನ ಹಬ್ಬ || ೮

ಕಾಟಕ ಮಂದೀನ ಅಗಸಿಽಗೆ ಹಾಕಿ
ಅಗಸಿಽಬಾರೆದಲ್ಲಿ ಇರಬೇಕು ಜ್ವಾಕಿ |
ಮೊಸರಿಽನ ಗಡಿಗ್ಯಾಗ ರುಕ್ಕ ಬರೆದ್ಹಾಕಿ
ರುಕ್ಕ ಹೊಯ್ಯಾರಂಡಿ ಆಗ್ಯಾಳ ಪುಕ್ಕಿ
|| ದುಂದುಮ್ಮಿಽ ಬಸವಂತನ ಹಬ್ಬ || ೯

ಬೇಡರಿಗೆ ಹಾಕ್ಯಾರ ನೀಬರು ಬಂಡ್ಯಗಸಿ
ಡೇರ್‍ಯಾ ಬಿಟ್ಟು ದೂರ ಗುಂಡ ಹಾರಿಽಸಿ
ಡೇರ್‍ಯಾದ ಹಗ್ಗಗಳು ಆಗ್ಯಾವ ಫಾಸಿ |
ಬೇಡರು ಮಾಡಿದರು ತಿಳಿಲಿಲ್ಲಾ ಫಾಸಿ
|| ದುಂದುಮ್ಮಿಽ ಬಸವಂತನ ಹಬ್ಬ || ೧೦

ಆದಿತ್ವಾರುದಯಕ್ಕೆ ಹಾರೀಽತು ಗುಂಡು
ಕೇಳಿದಾರೋ ಇಲ್ಲೋ ಸಾಹೇಬರ ಬಂಡು
ಹಿಂಪಕ್ಕೆ ನಡೆದಾರು ಡೇರೆ ಸುಟ್ಟುಕೊಂಡು |
ಕೈಸೆರೇ ಆಗ್ಯಾವು ಚಕಡಿ ಮದ್ದುಗುಂಡು
|| ದುಂದುಮ್ಮಿಽ ಬಸವಂತನ ಹಬ್ಬ || ೧೧

ಕಂಪನಿಽ ಲಷ್ಕರು ದಿಲ್ಗೀರಾಯ್ತು
ಹೋಗೋದಕ್ಕೆ ಹೊತ್ತು ರಾತ್ರಿ ಬಹಳಾಯ್ತು |
ಕೇವಲ ಸಾಹೇಬಗ ಕೋಪ ಬಂದಿತ್ತು
ದಂಡ್ಹೋಗಿ ನಿಂಗದ್ಹಳ್ಳಿ ಹತ್ತಿರಿಳಿದಿತ್ತು
|| ದುಂದುಮ್ಮಿಽ ಬಸವಂತನ ಹಬ್ಬ || ೧೨

ಯಾಕೆ ಬಂದೆವು ನಾವು ಬೇಡರ ತಳ್ಳ
ದಂಡ್ಹೋಗಿ ಇಳಿದಿತ್ತು ಅದು ನಿಂಗದ್ಹಳ್ಳಿ |
ಸುತ್ತ ಮುತ್ತಾ ಹಾಳು ಮಾಡಿದರ ಹಳ್ಳಿ
ತೋಪನ್ನು ಹಚ್ಚಿದರು ವೆಂಕಟಾಪುರ ಕಳ್ಳಿ
|| ದುಂದುಮ್ಮಿಽ ಬಸವಂತನ ಹಬ್ಬ || ೧೩

ನಿನ್ನ ಪಾದಕ ಬಂದೆ ಕೊಟ್ಟೂರು ಬಸವ
ಊರ ಸ್ವಾಧೀನ ಮಾಡೋ ನಾ ನಿನ್ನ ಶಿಶುವಽ |
ಇಂಥ ಅರಸರಿಗೆಲ್ಲಾ ಬಳಸುವನು ಕಸವ
ನಿತ್ಯ ಪೂಜೆಗೆಽ ಮಲ್ಲಽಗಿ ತುಸುವಽ
|| ದುಂದುಮ್ಮಿಽ ಬಸವಂತನ ಹಬ್ಬ || ೧೪

ಕೊಟ್ಟೂರು ಬಸವಽಗೆ ತಾ ಬೇಡಿಕೊಂಡಽ
ಸುರಪುರ ಸ್ವಾಧೀನ ನನಗೆ ಮಾಡೆಂದ |
ಮಿತಿಯು ಇಲ್ಲದ "ಕಾಯಿ" ಹೊಡೆಸುವನೆಂದ
ಕೇವಲ ಸಾಹೇಬ ಮನಸಿನೊಳಗಂದ
|| ದುಂದುಮ್ಮಿಽ ಬಸವಂತನ ಹಬ್ಬ || ೧೫

ಸಿಟ್ಟಿಗೇರಿ ಸಾಹೇಬ ಬಟ್ಟ ಕಚಿಕೊಂಡು
ಹಚ್ಚಿದಾನೊ ತೋಪ "ಬುರ್ಜ" ನೋಡಿಕೊಂಡು |
ಕದನ ಹತ್ತಿತು ಬೇಗ ಇದು ಏನು ಬಂಡು
ಹೊರಬಿದ್ದು ಹೋಗುತದ ಸುರಪೂರ ದಂಡು
|| ದುಂದುಮ್ಮಿಽ ಬಸವಂತನ ಹಬ್ಬ || ೧೬

ಎದುರು ದಂಡಿಗೆ ತಾವು ತೋಪುಗಳ ಹಚ್ಚಿ
ಬಹಾದ್ದೂರ ಮೆಟ್ಟಿದ್ದ ಬಂಗಾರದ ಮೊಚ್ಚಿ |
ರಣಶೂರರಾಯರು ತೇಜಿಗಳುಚ್ಚಿ
ಕಡವವರಿಗೆ ಕೊಡುವೆನು ಕಂಠಿಸರ ಉಚ್ಚಿ
|| ದುಂದುಮ್ಮಿಽ ಬಸವಂತನ ಹಬ್ಬ || ೧೭

ಜೋಕಿನ ಸಾಹೇಬ ತಾ ನಡೆದು ಬಂದಽ
ಡಂಕಾ ನಿಶಾನಿ ತನ್ನ ಕುದುರಿಗೆ ಹಿಡಿದಾ।
ಬೇಗ ಬಂದು ದಂಡು ಕಾವೇರಿ ಕಡಿದಾಽ
ರೂಹಿಲಾನ ಏಟಿಗೆ ತಲೆ ಹಿಂದಕೆ ಸಿಡಿದಽ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೧೮

ಕೇವುಲ ಸಾಹೇಬ ಶ್ರಮದಲ್ಲಿ ನಿಂತಾ
ಊರ ತೊಗ ಬೇಕು ನಮದೊಂದು ಭ್ರಾಂತ।
ಒಂದ್ಹೇಟಿಗೆ ಸತ್ತಾನೋ ಸರದಾರ ಇಂಥ
ಸುತ್ತ ದಾರಿಗಳು "ಗಂಡಿಜಾಗಂತ"ಽ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೧೯

ತಲೆಯ ಟೊಪ್ಪಿಗೆ ಎರಡು ಕೈಯಲ್ಲಿ ಹಿಡಿದು
ದೊರೆ ಬಹರಿ ಬಹದ್ದೂರಗೆ ಎದುರಾಗಿ ನಡೆದು।
ಮುಂದಿಟ್ಟು "ಪುರ್ನಿಯ ಸಲಾಮು" ಹೊಡೆದು
ದೊರೆ ನೋಡಿ ದಾಳ ಬಂತೆಂದು ನುಡಿದು
॥ ದುಂದುಮ್ಮಿಽ ಬಸವಂತನ ಹಬ್ಬ ॥ ೨೦

ಕಾಣುತಲೆ ರೋಹಿಲರಿಗೆ ಚಂದ್ರಾಹ್ಹರ ಕೊಟ್ಟ
ಸಾಹೇಬರ ಬಿಟ್ಟಽರ ಕುಲದಲ್ಲಿ ಭಟ್ಟ।
ತಲೆಯ ಕೊಯ್ಸಿರಂತೆ ಅಪ್ಪಣೆಯ ಕೊಟ್ಟ
ಧೈರ್ಯ ಸಾಲದೆ ಕುಳಿತ ಜಾಗ ತಾ ಬಿಟ್ಟ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೨೧

ಹಳೆ ಮಂದಿ ಎಲ್ಲಽರು ನಿಂತವರು ನೋಡಿ
ತಿಳಿಯಾಕ ಇಳದಾರ ಪ್ರಾಣಿಗಳ ಜೋಡಿ।
ಒತ್ತಟ್ಟ ಆಯಿತು ದಂಡ ಹಿಂದಕ್ಕೆ ನೋಡಿ
ಕವಲು ಕೊಟ್ಟರು ಸರ್ವರೆಲ್ಲರು ಕೂಡಿ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೨೨

ಅಪ್ಪರೊಳಗೆ ತಾನು ಭೀಮರಾಯ ಬಂದು
ಇನ್ನು ಈ ಊರೊಳಗೆಽ ಇರಬಾರದೆಂದು।
ಶಹರಕ್ಕೆ ನಾವು ಹೋಗೋಣ ಮುಂದು
ಹುಜೂರನ ಭೆಟ್ಟಿಯ ಮಾಡಿಸುತೇನೆಂದು
॥ ದುಂದುಮ್ಮಿಽ ಬಸವಂತನ ಹಬ್ಬ ॥ ೨೩

ರಾಜ ಸಾಹೇಬರಲ್ಲಿ ರಾಮಣ್ಣ ಬಂದು
ಶಹರದ ದಾರಿ ನೀವು ಹಿಡಿಯಿರಿ ಮುಂದು ।
ಬಳಿಯಲ್ಲಿದ್ದ ವಸ್ತು ನನಗೆ ತಾರೆಂದು
ನಾನು ಮನೆಗೆ ಹೋಗಿ ಬರುತ್ತೀನಿ ಅಂದು
|| ದುಂದುಮ್ಮಿs ಬಸವಂತನ ಹಬ್ಬ || ೨೪

ನಾಡ ಹುಟ್ಟಿವ ಮೇಲೆ ನೋಡಿಲ್ಲಾ ಇಂಥಾದ
ಪಾವ ಸೂಳೆಮಗನು ಮಾಡ್ಯಾನೋ ಭ್ರಾಂತಾ ।
ಮೊರೆ ಭೈರಿ ಬಹಾದ್ದೂರ ಭ್ರಾಂತಿಯಾಗಿ ಕುಳಿತ
ಅವ್ವ ಈಶ್ವರಮ್ಮನವರ ವರ ವೀರ ಪುತ್ರ
|| ದುಂದುಮ್ಮಿs ಬಸವಂತನ ಹಬ್ಬ || ೨೫

ಗೋಪಾಲ ಸ್ವಾಮಿಯು ಗುಡಿಗೆ ತಾ ಬಂದ
ಮನದಿ ಎನ್ನ ಮೇಲೆ ದಯವಿರಲೆಂದ ।
ಇಂದಿsಗಿ ಸುರಪುರ ಎರವಾಯಿತೆಂದ
ಶಹರದ ದಾರೀ ಹಿಡದಾನ ಮುಂದs
|| ದುಂದುಮ್ಮಿs ಬಸವಂತನ ಹಬ್ಬ || ೨೬

ಬೆಳತನಕ ಸಾಹೇಬರು ಮಾಡಿಲ್ಲ ನಿದ್ದಿ
ದಂಡಿsಗಿ ಎದುರಾಗಿ ಹೋಯಿತು ಸುದ್ದಿ
ಊರೊಳಗೆ ಯಾರಿಲ್ಲ ಮೇಲಕ್ಕೆ ಬಾ ಬುದ್ಧಿ
ಕೇಮಲ ಸಾಹೇಬ ಪುಂಡಾನೆsಸಿದ್ಧಿ
|| ದುಂದುಮ್ಮಿs ಬಸವಂತನ ಹಬ್ಬ || ೨೭

ಮೇಲಕ್ಕೆ ಬಾರಂತಿ ತಿಳಿವಲ್ದು ಫಾಸಿ
ಮೇಲಕ್ಕೆ ಬಂದsರೆ ಜೀವ ಆದಿತ್ತೋ ಫಾಸಿ ।
ಹನ್ನೆರಡು ಸಾವಿರs ತಿದ್ದಿತ್ತೋ ಮೀಸಿ
ಉದಯ ಹೊಂಡರದsಗ ಹೋಯ್ತಿಲ್ಲ ಆಶೆ
|| ದುಂದುಮ್ಮಿs ಬಸವಂತನ ಹಬ್ಬ || ೨೮

ತೈಬಾಲಿ ತಮ್ಮ ಮೊಹಮ್ಮದಾಲಿ ಊರೊಳಗ ಇದ್ದು
ಕೇಮಲ ಸಾಹೇಬನ ಪಾದಕ್ಕೆ ಬಿದ್ದು ।
ಸಾಹೇಬನ ಮುಂದೆ ಹೇಳ್ತಾನ ಸುದ್ದಿ ಆಪದ್ದು
ಊರೊಳಗೆ ಯಾರಿಲ್ಲ ಹೋಗ್ಯಾರ ಎದ್ದು
|| ದುಂದುಮ್ಮಿs ಬಸವಂತನ ಹಬ್ಬ || ೨೯

ಎಂಥ ಬಂಟರ ಟಾಗ ಉಪಾಯದಿಂದ್ಹೋಯ್ತ
ಹನ್ನೆರಡು ಸಾವಿರ 'ಹಳೆಪುಂಡಿ' ಏನಾಯ್ತೊ ।
ಸೋಮವಾರದುದಯಕ್ಕೆ ಎದುರೀಗಿ ಆಯ್ತು
ಬುದ್ಧಿವಂತರಿಲ್ಲದಚ್ಚು ಮುರದ್ಹೋಯ್ತು
॥ ದುಂದುಮ್ಮಿಽ ಬಸವಂತನ ಹಬ್ಬ ॥ ೩೦

ಕೇಮುಲ ಸಾಹೇಬ ಮೇಲಕ್ಕೆ ಬಂದಾ
ದಿಬರಿ ಮೇಲೆ ನಿಂತು ದುರುಮುಂಜಿ ನೋಡಿದ ।
ಇಂಥಾ ಠಾಣಗಳು ಸರಿಗಾಣೆನೆಂದಾ
ಅಪ್ಪಣೆ ಕೊಟ್ಟಾನು ಸುಲಗಿ ಮಾಡೆಂದು
॥ ದುಂದುಮ್ಮಿಽ ಬಸವಂತನ ಹಬ್ಬ ॥ ೩೧

ಬಂದ ಬರುತಲಿ ಸಾಹೇಬ ದರಬಾರ ಹೊಕ್ಕಽ
ಎಲ್ಲಿ ನೋಡಿದರಲ್ಲಿ ಬೆಳ್ಳಿ 'ಬಂಗಾರ' ಬದುಕಽ ।
ಏನು ಸೋಜಿಗವೆಂದು ಕೈ ಬಡಿದು ನಕ್ಕಽ
ರಾಯಪ್ಪ ರಾಚಪ್ಪ ಕೈಯೊಳಗೆ ಸಿಕ್ಕಽ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೩೨

ಗೋರ ಸಾಹೇಬರೆಲ್ಲ ಬಂದು ಕೂಡಿದರು
ಏನೇನು ಬದುಕೆಂದು ತಾರೀಪ ಮಾಡಿದರು ।
ಚಕಡಿ ಹೇರಿತಂದು ಮಾತನಾಡಿದರು
ತುಂಬಿ ಭರಣಿಮಾಡಿ ಎತ್ತ ಹೂಡಿದರು
॥ ದುಂದುಮ್ಮಿಽ ಬಸವಂತನ ಹಬ್ಬ ॥ ೩೩

ಆನೆ ಕುದುರೆ ಒಂಟೆ ಹರಾಜು ಮಾಡಿದರು
ಮಿಗಿಲಾದ ಬಂಗಾರ ವಸ್ತು ನೋಡಿದರು ।
ಚೆಲುವಾದ ಸಾಮಾನು ಒಂಟೆ ಮ್ಯಾಲೇರಿದರು
ಕೇಮುಲ ಸಾಹೇಬನ 'ಕವಲ' ಸಾರಿದರು
॥ ದುಂದುಮ್ಮಿಽ ಬಸವಂತನ ಹಬ್ಬ ॥ ೩೪

ಮರುದಿವಸ ಉದಯಕ್ಕೆ ಚಕಡಿಗಳು ಸಾಗಿ
ಊರಿಗಿರಲಿ ಅಂತ ಹೇಳಿದರು ಕೂಗಿ ।
ದಿವಸ ಪಾಡಿಲ್ಲ ಶಿವರಾತ್ರಿ ಭೋಗಿ
ಸುಲಿಗಿ ಸೇರಿತು ಲಿಂಗಸೂಗೂರಿಗೆ ಹೋಗಿ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೩೫

ಮೂರನೆ ದಿವಸಕ್ಕೆ ದೊರೆ ಶಹರಕ್ಕೆ ಹೋದಽ
ವನಪರ್ತಿ ರಾಜನ ಭೆಟ್ಟಿಯುಽ ಆದ |
ಪೈಗಂಬರ ಬಜಾರದೊಳಗೆ ಇಳಿಯಲಿಕ್ಕೆ ಹೋದಽ
ಮುಂದಿನ ಸಂಗತಿ ತಿಳಿಯಲಾರದ ಹೋದ
|| ದುಂದುಮ್ಮಿಽ ಬಸವಂತನ ಹಬ್ಬ || ೩೬

ವನಪರ್ತಿ ರಾಜ ಮಾಡಿದನು ಪಂದು
ದೇವಡಿಯಲ್ಲಿ "ಪಹರೆ" ಯಾರಿದ್ದೀರೆಂದು |
ಸುರಪುರದ ಅರಸನು ಬಂದಾನೆಂದು
ಸಾಲಾರ್ ಜಂಗನಿಗೆ ತೀವ್ರ ಹೇಳೆಂದು
|| ದುಂದುಮ್ಮಿಽ ಬಸವಂತನ ಹಬ್ಬ || ೩೭

ಸಾಲಾರ ಜಂಗ್ ದೊರೆ ಬಂದ ಸುದ್ದಿಯುಽ ಕೇಳಿ
ಸೋಲ್ಜರಿಗೆ ಜಲದಿಽ ಹೋಗೆಂದು ಹೇಳಿ |
ಸುರಪುರದ ಅರಸಽ ಎಲ್ಯಾನೆಂದು ಕೇಳಿ
ಅಂಗಡಿ ಮುಂದ ನೋಡಽ ಆದಿತ್ತು ಹೋಳಿ
|| ದುಂದುಮ್ಮಿಽ ಬಸವಂತನ ಹಬ್ಬ || ೩೮

ಮಂಗಳವಾರುದಯಕ್ಕೆ ದೊರೆ ಬಿಟ್ಟ ಊರ
ಭೈರಿ ಬಹಾದ್ದೂರ್ರೊಕ್ಕ ಗೋಲ್ಕುಂಡ ಶಹರ |
ಮುಂದೆ ಹೇಳ್ತಿವಿ ನಾವು ಸರ್ದಾರನ ವಿಸ್ತಾರ
ಅಟ್ಟಿ ಬಂದಾನಿವನು ಅಂತರಂಗದ ಫೇರಾ
|| ದುಂದುಮ್ಮಿಽ ಬಸವಂತನ ಹಬ್ಬ || ೩೯

ದೊರೀನ ಸಪರೀಗೆ ತಂದು ಮಾಡಿದರು ವಿಚಾರ
ದೊಡ್ಡ ಸರದಾರನ ತಲೆ ಹೊಡಿಸಿ ಬಂದೆಲ್ಲೊ ಚೋರ |
ಎಂಥಾದ್ದು ಮಾಡಿದ್ದಿ ಕೆಟ್ಟ ಬೇಂಡಾಽ
ಹೊಡೆಸಿ ಬಿಡುವೇನು ನಿನ್ನಽ ಜೀವದಿಂದಽ ತಾರಾ
|| ದುಂದುಮ್ಮಿಽ ಬಸವಂತನ ಹಬ್ಬ || ೪೦

ನಾನು ಹೇಳುವೆನುಽ ಕೇಳೊಽ ಸರಕಾರ
ಕೆಟ್ಟು ಬಂದೀನಿ ನಾನು ಬಿಟ್ಟು ಸುರಪೂರ
ಕಾರ್ಭಾರಿ ಮುಂದಽಲಿ ಇಡತರಸು ಶೂರಽ
ಮರುಕೋಟಿಯಲ್ಲಿ ಮಾಡೋ ಇದರ ವಿಚಾಽರ
|| ದುಂದುಮ್ಮಿಽ ಬಸವಂತನ ಹಬ್ಬ || ೪೧

ಮುಂದಾಗಿ ಲಡಾಯಿ ನೀ ಮಾಡಿದೆಂದು
ಸತ್ತು ಹೋದನು ದೊಡ್ಡ ಸರದಾರ ಮುಂದು
ಇದಕ್ಕೆ ಉತ್ತರS ನೀ ಜಲ್ದಿ ಹೇಳೆಂದು
ಕೋರ್ಟಿನ ಮುಸಲತಿ ಮಾಡತೀವೆಂದು
|| ದುಂದುಮ್ಮಿS ಬಸವಂತನ ಹಬ್ಬ || ೪೨

ಮುಂದಾಗಿ ಲಡಾಯಿ ನಾನು ಮಾಡಿಲ್ಲ
ಕಾಟಗ ಮಂದಿ ಮಾತು ನಾನು ಕೇಳಲಿಲ್ಲ
'ಲಡಾಯಿ'ಗೆ ಅಪ್ಪಣೆ ನಾನು ಕೊಟ್ಟಿಲ್ಲ
ಆದಂತ ಸುದ್ದಿಯು ಭೀಮರಾಯ ಬಲ್ಲ
|| ದುಂದುಮ್ಮಿS ಬಸವಂತನ ಹಬ್ಬ || ೪೩

ಬಡೆ ಸಾಹೇಬ ತಾ ಕೇಳಿ ಸಂತೋಷವಾಗಿ |
'ಕೋರ್ಟಿSನ ಮುಸಲSತಿ ಮಾಡಬೇಕಾಗಿS
ಟೇಲರ ಸಾಹೇಬ ಸುರಪುರಕೆ ಹೋಗಿ |
ಕಾರ್ಭಾರಿ ಜನರನ್ನು ಕಳಿಸSರಿ ಬೇಗ.
|| ದುಂದುಮ್ಮಿS ಬಸವಂತನ ಹಬ್ಬ || ೪೪

ಟೇಲರ ಸಾಹೇಬ ದೊರೆ ಬಳಿಗೆ ಬಂದು |
ನಾನು ಸುರಪುರಕೆ ಹೋಗುವೆನೆಂದು |
ಕಾರ್ಭಾರಿ ಜನರನ್ನು ಕಳಿಸುವೆನೆಂದು |
ಜವಾಬು ಕೊಡು ನೀನು ಬಹು ಧೈರ್ಯದಿಂದS
|| ದುಂದುಮ್ಮಿS ಬಸವಂತನ ಹಬ್ಬ || ೪೫

ಟೇಲರ ಸಾಹೇಬ ಸುರಪುರಕೆ ಬಂದಾ
ಕಾರ್ಭಾರಿ ಜನರನ್ನು ಶಹರಕೆ ನಡಿರೆಂದಾ
ಕೋರ್ಟSನ ಜವಾಬು ಮಾಡೀರಿ ಮುಂದಾ
ಜಲ್ದಿ ನಿಮ್ಮ ದೊರಿನ್ನ ಕಳಿಸಬೇಕೆಂದಾ
|| ದುಂದುಮ್ಮಿS ಬಸವಂತನ ಹಬ್ಬ || ೪೬

ಕಾರ್ಭಾರಿ ಮಂಡಳಿಯು ಶಹರಕೆ ಹೊರಟು
ಕುಂಪಣಿಗ ಹೇಳ್ಯಾರ ಹಣ ಹಣ ತಟ್ಟು
ಬಲ್ಲ್ಯಾ ಮುಂಡಾಸೆಲ್ಲ ಒತ್ತಿಯು ಇಟ್ಟು
ಹೋಗಿ ನಿಂತಾರS ಬಡವೇಷವ ತೊಟ್ಟು
|| ದುಂದುಮ್ಮಿS ಬಸವಂತನ ಹಬ್ಬ || ೪೭

ಸಾಹೇಬರು ಮಾಡಿದರು ಕೆಲಸಽವು ಪಕ್ಕಾ
ವ್ಯರ್ಥ ಹೊರೆಹೋಗಿ ಕೈಸೆರೆ ಸಿಕ್ಕಾ |
ಭೀಮರಾಯ ಮಾಡಿದನು ಕೆಲಸಽವು ಪಕ್ಕಾ
ರಾಮಪ್ಪ ಬರಲೆಂದು ಹೇಳ್ಯಾನ ಲೆಕ್ಕಾ
|| ದುಂದುಮ್ಮೆಽ ಬಸವಂತನ ಹಬ್ಬ || ೪೮

ಭೀಮರಾಯ ಆಲೋಚನೆ ಮಾಡಿದನು ಬಂದು
ಇನ್ನು ಈ ಮಾತು ನಮಗೆ ಬಂತೆಂದು |
ಹೊರಗೆ ಹೇಳುತಾಽರ ಮಾತು ಮುತ್ತೊಂದು
ಹೆದರಹೇಡಿ ಬುದ್ಧಿ ಕಲೆಹ್ಯೋಯ್ತೆಂದು
|| ದುಂದುಮ್ಮೆಽ ಬಸವಂತನ ಹಬ್ಬ || ೪೯

ಬುದ್ಧಿ ಹೇಳುವಂತಽ ತಾಯಿ ತಂದೆಽ ಇಲ್ಲ
ಸಜ್ಜನ್ರ ಮನುಜರ ಮಾತು ನೀ ಬೆಳಸಿದಲ್ಲ
ಹಿರಿಯ ಕಿರಿಯರ ಮಾತು ನೀ ಕೇಳಲಿಲ್ಲ |
ಸುರಪುರ ಗೋಪಾಲ ತಾ ಮುನಿದನಲ್ಲ
|| ದುಂದುಮ್ಮೆಽ ಬಸವಂತನ ಹಬ್ಬ || ೫೦

ಭೀಮರಾಯನ ಮಾತು ಹೊರೆ ತಾನು ಕೇಳಿ
ಸಾಹೇಬರ ಮುಂದ್ಹೋಗಿ ಬಿಡಲು ಮಾತು ಹೇಳಿ
ಕೇಳುತಲೆ ಸಾಹೇಬರು ಕೋಪಾವು ತಾಳಿ |
ಚಿನ್ನಪಟ್ಟಣ ದಾಟಿ ಹೊಯ್ಯಽರಂತೆ ಹೇಳಿ
|| ದುಂದುಮ್ಮೆಽ ಬಸವಂತನ ಹಬ್ಬ || ೫೧

ಹೊರೆಯನ್ನು ಭೀಮರಾಯ ಕೈಸೆರೆ ಕೊಟ್ಟಽ
ಮನಸಿನೊಳಗಽ ಇದ್ದ ಚಿಂತೆಯು ಬಿಟ್ಟ |
ನಿಶ್ಚಿಂತ ಸುರಪುರದ ಹಾದ್ಹಿಡಿದು ಹೊಂಟ
ದೌಲತ್ತು ಇವ ಹಾಳು ಮಾಡಿದನು ಕೊಂಟ
|| ದುಂದುಮ್ಮೆಽ ಬಸವಂತನ ಹಬ್ಬ || ೫೨

ವೆಂಕಟಪ್ಪ ನಾಯ್ಕಂದು ಭಕ್ತಿ ಬಹಳಿತ್ತು
ಸುತ್ತ ದೇಶದ ಜನಽ ನಡುಗುತ್ತಲಿತ್ತು !
ಹಳೆ ಮಂದಿ “ ಉಬರತ್ತು ” ಭರಪೂರ ಇತ್ತು
ವೆಂಕಟ ರಮಣನಽ ದಯವಽ ತಪ್ಪಿತ್ತು
|| ದುಂದುಮ್ಮೆಽ ಬಸವಂತನ ಹಬ್ಬ || ೫೩

ವೆಂಕಟಪ್ಪ ನಾಯಕ "ವ್ಯಗಜಾತಿ" ಶೂರ
ಕೇಳೇ ಇದ್ದಿಲ್ಲಽ ಇಂಥ ಸರದಾರ।
ಒದಗಿ ಬಂದಿತು ಬೇಗ ಕಂಪನಿ ಸರಕಾರ
ಸ್ಥಿರವಾಗಿ ಇರಲಿಲ್ಲ ಮುಂದಿನ ವಿಸ್ತಾರ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೫೪

ಫಾಲ್ಗುಣ ಪ್ರತಿಪಾದ ಹುಡುಗರು ಕೂಡಿ
ಹತವಾದ ಕಾಮನ ಬೂದಿ ಚೆಲ್ಲ್ಯಾಡಿ।
ಮಿತಿಯನಿಲ್ಲವ ಹೋಳಿ ಪದಗಳ ಪಾಡಿ
ರತಿದೇವಿ ರಮಣನ ಬೂತಿ ಚೆಲ್ಲ್ಯಾಡಿ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೫೫

ಆದಿ ಅಂತ್ಯ ಹಿಡಿದು ಪದಗಳ ಪಾಡಿ
ಬುದ್ಧಿವಂತರ ಮುಂದ ಕರ ಮುಗಿದು ಬೇಡಿ।
ಪರೀಕ್ಷೆ ಮಾಡಿರಿ ದೈವ ಒಂದೊಂದು ನೋಡಿ
ತಪ್ಪು ಕ್ಷಮೆ ಮಾಡಿಽರಿ ಶಿಶುವಿನ ನೋಡಿ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೫೬

ಭರದಿಂದ ಕರತಂತು ಇದು ಮಾಘ ಮಾಸ
ಭರದಿಂದ ಒದಗೀತು ಫಾಲ್ಗುಣ ಮಾಸ।
ಬರೆದಂಥ ಪದಗಳು ಮನಕೆ ಉಲ್ಲಾಸ
ಧರೆಯೊಳು ವಾಗಣಗೇರಿ "ಗೋಪಾಲವಾಸ"
॥ ದುಂದುಮ್ಮಿಽ ಬಸವಂತನ ಹಬ್ಬ ॥ ೫೭

ಮಂಗಲ ಮಸ್ತು ಶ್ರೀ ಗೋಪಾಲನಿಗೆ
ಮಂಗಲ ಮಸ್ತು ಶ್ರೀ ದೇವಿಯುವರಿಗೆ,
ಮಂಗಲಮ್ ನಮೋಸ್ತು ಕೋಶಲರಾಜನಿಗೆ।
ಮಂಗಲ ಮಸ್ತು ರತಿಯು ರಮಣಗೆ
॥ ದುಂದುಮ್ಮಿಽ ಬಸವಂತನ ಹಬ್ಬ ॥ ೫೮

ಸಂ: ಬಿ. ಆರ್ ಸುರಪುರ

ಶ್ರೀ ಚಂಪ್ರಪ್ಪ ಗೋಡಿಕಾರ, ಸುರಪುರ ಇವರಿಂದ ಸಂಗ್ರಹಿಸಿದ್ದು.

ಗ್ರೇ ಕವಿಯ ಶೋಕಗೀತೆ

ಸರ್ವಕಾಲಕ್ಕೂ, ಸರ್ವಜನಕ್ಕೂ ಅನ್ವಯಿಸುವಂತಹ ಶೋಕಗೀತೆ (ಎಲಿಜಿ) ಯನ್ನು ಜಗತ್ತಿಗೆ ಕಾಣಿಕೆಯಾಗಿ ಇತ್ತ ಆಂಗ್ಲಕವಿ ಥಾಮಸ್ ಗ್ರೇ. ಈತನು ಕ್ರಿ. ಶ. ೧೭೧೬ ರಲ್ಲಿ ಲಂಡನ್ನಿನಲ್ಲಿ ಜನ್ಮವೆತ್ತಿ, ೫೫ ವರ್ಷ ಕಾಲ ಬಾಳಿದನು. ಈತನ ವಿದ್ಯಾಭ್ಯಾಸ ಹೊರೇಸ್ ವಾಲ್‌ಪೋಲ್‌ನ ಜತೆಗೆ ಈಟನ್ ಮತ್ತು ಕೇಂಬ್ರಿಜ್‌ಗಳಲ್ಲಿ ನಡೆಯಿತು. ಈತನ ಕಾವ್ಯರಚನೆ ಪ್ರಾರಂಭವಾದದ್ದು ೧೭೪೨ ರಲ್ಲಿ. ಅನರ್ಘ್ಯ ಕೃತಿಯಾದ 'ಎಲಿಜಿ'ಯ ರಚನೆಯು ೧೭೫೦ ರಲ್ಲಿ ಪೂರ್ತಿಯಾಯಿತು. ಇದಕ್ಕಾಗಿ ಇಂಗ್ಲೆಂಡ್ ದೇಶವು ಈತನಿಗೆ ರಾಷ್ಟ್ರಕವಿ ಪದವಿಯನ್ನು ನೀಡಿದರೂ ಒಪ್ಪಿಕೊಳ್ಳಲಿಲ್ಲ. 'ಎಲಿಜಿ'ಯೂ ಅಲ್ಲದೆ ಇನ್ನೂ ಕೆಲವು ಕವಿತೆಗಳನ್ನೂ, ಶ್ರೇಷ್ಠ ಪತ್ರಗಳನ್ನೂ ರಚಿಸಿದ ಈತನ ಜೀವನ ೧೭೭೧ ರಲ್ಲಿ ಸಮಾಪ್ತಿಯಾಯಿತು.

ಗ್ರೇ ಕವಿಯು ರಚಿಸಿದ ಶೋಕ ಗೀತೆಯ ಪೂರ್ತಿ ಹೆಸರು "ಎಲಿಜಿ ರಿಟನ್ ಇನ್ ಎ ಕಂಟ್ರಿ ಚರ್ಚ್‌ಯಾರ್ಡ್ (ಒಂದು ಹಳ್ಳಿಯ ಶ್ಮಶಾನದಲ್ಲಿ ಬರೆದ ಶೋಕಗೀತೆ)" ಈತನ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆದದ್ದು ಇಂಗ್ಲಂಡಿನ ಬಕ್ಸ್ (ಬಕಿಂಗ್‌ಹ್ಯಾಂಶೈರ್) ಎಂಬ ಹಳ್ಳಿಯ ಸ್ಟೋಕ್ ಪೋಜಸ್‌ನ ರುದ್ರಭೂಮಿಯಲ್ಲಿ. ಪ್ರಾಯಶಃ ಇದೇ ಸ್ಥಳದಲ್ಲಿ ಕವಿ ಶೋಕ ಗೀತೆಯನ್ನು ರಚಿಸಿರಬಹುದೆಂಬ ಊಹೆ ಇದೆ.

ಈ ಕಾವ್ಯದ ಕೊನೆಯಲ್ಲಿ ಬರುವ ಸಮಾಧಿ ಲೇಖ (ಎಪಿಟಾಫ್) ಎಂಬ ಮೂರು ಪದ್ಯಗಳೂ ಸೇರಿ ಒಟ್ಟು ನಾಲ್ಕು ಸಾಲಿನ ೩೨ ಪದ್ಯಗಳಿವೆ. ಈ ಶೋಕಗೀತೆಯ ಒಂದು ವಿಶೇಷವೆಂದರೆ, ಸಾಮಾನ್ಯವಾಗಿ ಒಬ್ಬ ವ್ಯಕ್ತಿಯನ್ನು ಕುರಿತು ಶೋಕಗೀತೆಯನ್ನು ಬರೆಯುವುದು ವಾಡಿಕೆ; ಆದರೆ ಇದು ಯಾವ ಒಬ್ಬ ವ್ಯಕ್ತಿಗೆ ಮಾತ್ರ ಸಂಬಂಧಿಸಿದ್ದಲ್ಲ; ವಿವಿಧ ಪ್ರತಿಭೆಗಳಿದ್ದರೂ ಅವುಗಳನ್ನು ಉಪಯೋಗಿಸಿಕೊಳ್ಳುವ ಅವಕಾಶ ದೊರೆಯದೆ ಹಾಗೆಯೇ ಸರಳವಾದ ಬಾಳ್ವೆಯನ್ನು ಬಾಳಿಹೋದ ಲಕ್ಷಾಂತರ ಹಳ್ಳಿಯ ಜನರ ಜೀವನದ ಚಿತ್ರವಿದು. ಆ ದುರದೃಷ್ಟಶಾಲಿಗಳನ್ನು ಕವಿ ಕಂಡ ಬಗೆ ನಮಗೆ ಈ ಕಾವ್ಯದಲ್ಲಿ ಕಾಣುವುದು.

'ಎಲಿಜಿ'ಯಲ್ಲಿ ಮೊದಲು ಸಹೃದಯರನ್ನು ಆಕರ್ಷಿಸುವುದು ಸುಂದರವಾದ ಪ್ರಕೃತಿ ವರ್ಣನೆ: ರೂಢಿಯಂತೆ ಸಂಜೆಯ ಘಂಟಾನಾದವಾಗುತ್ತಿರುವಂತೆಯೇ ದನಕರುಗಳು ಹುಲ್ಲುಗಾವಲಿನಲ್ಲಿ ಶಬ್ದಮಾಡುತ್ತಾ ಹಿಂತಿರುಗುತ್ತಿರು

Thomas Gray's Elegy Written In A Country Churchyard.

ವುದು. ಅಂತೆಯೇ ಹಗಲೆಲ್ಲಾ ದುಡಿದು ಆಯಾಸಗೊಂಡ ರೈತರು ನಿಧಾನವಾಗಿ ತಮ್ಮ ತಮ್ಮ ಮನೆಗಳಿಗೆ ಹೋಗುತ್ತಿರುವುದು. (ಇಲ್ಲಿ ಕವಿ ಬಳಸಿರುವ ದೀರ್ಘ ಮಾತ್ರೆಯ ಶಬ್ದಗಳು ದುಡಿಮೆಯಿಂದಾದ ಶ್ರಮವನ್ನೂ, ಆಯಾಸದ ನಡಿಗೆಯನ್ನೂ ಸೂಚಿಸುವುದು) ಅಲ್ಲದೆ, ದಿಗಂತದ ಪ್ರಕಾರ ಮಂದವಾಗುವುದು, ಗಾಳಿಯಲ್ಲಿ ಶಾಂತತೆ ತುಂಬಿರುವುದು. ಅಲ್ಪ ಸ್ವಲ್ಪ ಶಬ್ದ ಬಂದರೆ ಅದು ಜೀರುಂಡೆಗಳ ಹಾರಾಟದಿಂದ ಉಂಟಾದುದು. ದೂರದಲ್ಲಿರುವ ಕುರಿಯ ಮಂದೆಗಳು ತೂಕಡಿಸುವಂತಾಗುವುವು. ಅಥವಾ ತನ್ನ ಏಕಾಂತದ ಆಳ್ವಿಕೆಗೆ ಭಂಗವುಂಟಾಯಿತೆಂದು ಚಂದ್ರನಲ್ಲಿ ದೂರು ಕೊಡುತ್ತಿರುವ ಗೂಬೆಯ ಶಬ್ದ, ಇಲ್ಲವೇ ಮರಗಳ ಕೆಳಗೆ ಬಿಸುಸುಯ್ಯುತ್ತಿರುವ ಹುಲ್ಲಿನ ಪ್ರದೇಶದ ಶಬ್ದ ಮಾತ್ರ ಕೇಳಿ ಬರುವುದು.

ಕವಿ ಹೇಳುವಂತೆ, ಆ ರುದ್ರ ಭೂಮಿಯಲ್ಲಿ ಹಳ್ಳಿಯ ಸಾವಿರಾರು 'ಅನಾಗರಿಕ' ಜನರು ಶಾಶ್ವತ ನಿದ್ರೆಯಲ್ಲಿದ್ದಾರೆ. ಅವರೆಲ್ಲಾ ಜೀವಂತವಾಗಿದ್ದಾಗ ಆಗುತ್ತಿದ್ದ ನಾನಾ ಅನುಭವಗಳು ಈಗ ಅವರ ಪಾಲಿಗೆ ಇಲ್ಲವಾಗಿದೆ. ಉದಾಹರಣೆಗೆ, ಸುಗಂಧ ಮಿಶ್ರಿತ ಗಾಳಿಯಿಂದ ಕೂಡಿದ ಮುಂಜಾನೆಯ ಕರೆ, ಹುಲ್ಲು ಜೋಪಡಿಯಿಂದ ಕೂಗುತ್ತಿರುವ ಹಕ್ಕಿಯ ಶಬ್ದ, ಕೋಳಿಯ ಕೂಗು ಅಥವಾ ಪ್ರತಿಧ್ವನಿ ಮಾಡುತ್ತಿರುವ ಕೊಂಬು– ಇವಾವುವೂ ಈಗ ಅವರನ್ನು ಹಾಸಿಗೆಯಿಂದ ಎಬ್ಬಿಸಲಾರವು. ಇನ್ನು ಮುಂದೆ ಅವರಿಗಾಗಿ ಅಗ್ನಿಷ್ಟಿಕೆ ಉರಿಯಲಾರದು: ಅಂತೆಯೇ ಅವರು ಸಂಜೆ ಮನೆಗೆ ಹಿಂತಿರುಗಿದಾಗ ಗೃಹಿಣಿಯು ಕೋರುತ್ತಿದ್ದ ಆದರ ಉಪಚಾರಗಳು, ಮಕ್ಕಳ ತೊದಲ್ನುಡಿ ಹಾಗೂ ಮುದ್ದಾಟ ಈಗ ಇಲ್ಲ. ಅವರು ಬೇಸಾಯ ಮಾಡುತ್ತಿದ್ದಾಗ ಎಷ್ಟೋ ಬಾರಿ, ಬೆಳೆಯನ್ನು ಕುಡುಗೋಲಿನಿಂದ ಕೊಯ್ದುದ್ದುಂಟು; ಎಷ್ಟೋ ಬಾರಿ ಗಟ್ಟಿನೆಲವನ್ನು ಉತ್ತುದ್ದುಂಟು. ಜಾನುವಾರನ್ನು ನಡೆಸುತ್ತಾ ಉಳುವಾಗ ಅವರು ಎಷ್ಟು ಆನಂದ ಪಡುತ್ತಿದ್ದರು! ಹಾಗೆಯೇ ಕಾಡಿನ ಮರಗಳನ್ನು ಎಷ್ಟು ಸುಖವಾಗಿ ಕಡಿಯುತ್ತಿದ್ದರು!

ದುರಾಸೆಯ ಹಾಗೂ ಆಡಂಬರದ ಜನರಿಗೆ ಕವಿಯ ಸ್ಪಷ್ಟೋಕ್ತಿ ಏನೆಂದರೆ ಇವರ್‍ಯಾರೂ ಹಳ್ಳಿಯವರ ಉಪಯುಕ್ತ ಕಾಯಕ, ಸ್ವಾಭಾವಿಕ ಸುಖ ಸಂತೋಷಗಳು, ಕಣ್ಣಿಗೆ ಕಾಣದ ಹಣೆಯಬರಹ ಹಾಗೂ ಅವರ ಸರಳ ಜೀವನ ವೃತ್ತಾಂತಗಳನ್ನು ಕಡೆಗಣಿಸದಿರಲಿ. ಏಕೆಂದರೆ, ಅಧಿಕಾರ, ಸಂಪತ್ತು, ವೈಭವಗಳಿಗೆ ಸಾವೇ ಕೊನೆಯಷ್ಟೆ. ಅವರಿಗಾಗಿ ಸ್ಮಾರಕಗಳಾಗಲಿ, ಪ್ರಶಂಸಾ ಗೀತೆಗಳಾಗಲಿ ಇಲ್ಲವೆಂಬ ದೋಷವನ್ನು ದುರಹಂಕಾರಿಗಳು ಆರೋಪಿಸದಿರಲಿ. ಏಕೆಂದರೆ, ಇವುಗಳು ಹೋದ ಪ್ರಾಣವನ್ನು ಹಿಂತಿರುಗಿ ತರಬಲ್ಲುವೇ?

ಗ್ರಾಮಸ್ಥರ ಪ್ರತಿಭೆ, ಸಾಮರ್ಥ್ಯಗಳಿಗೆ ತಕ್ಕ ಅವಕಾಶಗಳು ದೊರೆಯದಿದ್ದ ರೀತಿಯನ್ನು ಕವಿ ಮುಂದಿನ ಕೆಲವು ಸಾಲುಗಳಲ್ಲಿ ವಿವರಿಸುವನು: ಈ

ಯಾರೂ ಕೇಳದ ಜಾಗದಲ್ಲಿ, ಮಣ್ಣಾದ ವ್ಯಕ್ತಿಗಳಲ್ಲಿ ಹಿಂದೆ ಕೆಲವರು ಪ್ರತಿಭಾಸಂಪನ್ನರೂ, ಕೆಲವರು ಆಳುವ ಶಕ್ತಿಯಿದ್ದವರೂ, ಕೆಲವರು ಸಂಗೀತ ಕಲಾನಿಪುಣರೂ ಇದ್ದಿರಬಹುದು. ಆದರೆ, ಅವರಿಗೆ ಜ್ಞಾನಾರ್ಜನೆಯ ಅವಕಾಶವೇ ಇರಲಿಲ್ಲ. ಅಲ್ಲದೆ ಅವರ ಕಡುಬಡತನ ಅವರ ಶೌರ್ಯವನ್ನೂ ಆತ್ಮಬಲವನ್ನೂ ಕುಗ್ಗಿಸಿತ್ತು.

ಅನೇಕ ಶುದ್ಧ ರತ್ನಗಳು ಸಮುದ್ರದ ಕರಾಳ ಗರ್ಭದಲ್ಲಿ ಅಡಗಿಕೊಂಡಿರುವುವು; ಎಷ್ಟೋ ಪುಷ್ಪಗಳು ಯಾರ ಕಣ್ಣಿಗೂ ಬೀಳದಂತೆ ಜನಿಸಿ, ತಮ್ಮ ಸೌರಭವನ್ನೂ ವ್ಯರ್ಥಮಾಡಿಕೊಳ್ಳುವುವು. (ಈ ಪದ್ಯ ಜಗತ್ತಿನಲ್ಲೆಲ್ಲಾ ಅತ್ಯಂತ ಜನಪ್ರಿಯವಾದುದು.)

ಈ ಕಾವ್ಯದ ೧೫ನೇ ಪದ್ಯದ ಮೊದಲನೇ ಪಾಠದಲ್ಲಿ ಈಗಿನ ಪರಿಷ್ಕೃತ ಪಾಠದ ಹ್ಯಾಂಪ್‌ಡನ್, ಮಿಲ್ಟನ್, ಕ್ರಾಮ್‌ವೆಲ್ ಎಂಬ ಇಂಗ್ಲಿಷ್ ಹೆಸರುಗಳ ಬದಲು ಕ್ರಮವಾಗಿ ಕ್ಯಾಟೊ, ಟಲ್ಲಿ, ಸೀಜರ್ ಎಂಬ ರೋಮನ್ ಹೆಸರುಗಳಿದ್ದುವು. ಗ್ರೇ ಹೇಳುವ ಪ್ರಕಾರ, ಗತಿಸಿದ ಆ ಗ್ರಾಮಸ್ಥರಲ್ಲಿ ಕ್ರೂರಿಯಾದ ತಮ್ಮ ಭೂಮಿಯ ಒಡೆಯನನ್ನು ಧೈರ್ಯವಾಗಿ ಎದುರಿಸಿದ, ಹ್ಯಾಂಪ್‌ಡನ್‌ನಂತಹ (ಸ್ವೇಚ್ಛಾವರ್ತನೆಯ ಚಾರ್ಲ್ಸ್ ದೊರೆಯನ್ನು ಎದುರಿಸಿದವನು) ಶೂರರಿದ್ದಿರಬಹುದು. ಸರಿಯಾದ ಅವಕಾಶ ದೊರೆತಿದ್ದರೆ ಮಿಲ್ಟನ್‌ನಂತಹ ಪ್ರಸಿದ್ಧ ಕವಿಗಳಾಗಬಲ್ಲವರೂ, ಕ್ರಾಮ್‌ವೆಲ್‌ನಂತಹ ಹೋರಾಡುವ ರಾಜಕಾರಣಿಗಳಾಗಬಲ್ಲವರೂ ಇದ್ದಿರಬಹುದು.

ಜನರ ದುರದೃಷ್ಟಗಳೇ ಕೆಲವು ವೇಳೆ ಹೇಗೆ ಸುಕೃತವಾಗಬಲ್ಲವೆಂಬುದನ್ನು ಕವಿ ವಿವರಿಸುತ್ತಾ ಹೇಳುವನು: ಸಭೆಗಳಲ್ಲಿ ಚಪ್ಪಾಳೆ ಹೊಡೆಸುವಂತಹ ಭಾಷಣ ಮಾಡಲು, ಸರ್ವಾಧಿಕಾರದ ದಬ್ಬಾಳಿಕೆಯನ್ನು ಎದುರಿಸಿ ಕೀರ್ತಿಶೇಷರಾಗಲು ಆ ಹಳ್ಳಿಯವರಿಗೆ ಅದೃಷ್ಟವಿರಲಿಲ್ಲವೆಂಬುದು ನಿಜ. ಹಾಗೆಯೇ ತಮ್ಮ ದಕ್ಷ ಆಡಳಿತದಿಂದ ದೇಶವನ್ನು ಸಂಪತ್ಸಮೃದ್ಧವನ್ನಾಗಿ ಮಾಡಿ, ರಾಷ್ಟ್ರದ ಇತಿಹಾಸದ ದೃಷ್ಟಿಯಲ್ಲಿ ಅದರ ಪರಿಣಾಮವನ್ನು ನೋಡುವ ಭಾಗ್ಯವೂ ಅವರಿಗಿರಲಿಲ್ಲ. ಹೀಗೆ ಒಳ್ಳೆಯದನ್ನುಂಟು ಮಾಡುವ ಅವರ ಶಕ್ತಿ, ಅವಕಾಶಗಳನ್ನು ಅವರ ಬಡತನ ಹಾಳು ಮಾಡಿದ್ದೇನೋ ಹೌದು. ಆದರೆ, ಇದರಿಂದ ಒಂದು ಉಪಕಾರವೂ ಆಯಿತು; ಹೇಗೆಂದರೆ ದೇಶದ ಕಾರ್ಯಗಳ ನೆಪದಲ್ಲಿ ವಿಪರೀತ ಅಪರಾಧಗಳನ್ನು ಕ್ರೂರ ಕರ್ಮಗಳನ್ನೂ ಮಾಡುವ ಅವಕಾಶವೂ ಅಷ್ಟರ ಮಟ್ಟಿಗೆ ಕಡಿಮೆಯಾದಂತಾಯಿತು. ಹೇಗಾದರೂ ತಾವು ಮುಂದಕ್ಕೆ ಬರಬೇಕೆಂದು ಸತ್ಯವನ್ನು ಅದುಮಿ, ಸ್ವಭಾವತಃ ಇದ್ದ ನಾಚಿಕೆಯನ್ನು ದೂರ ಮಾಡುವವರ ಶ್ರೇಣಿಗೆ ಹಳ್ಳಿಯವರು ಸೇರುವಂತಾಗಲಿಲ್ಲ. ಅಂತೆಯೇ, ಕೇವಲ ಹಣದಾಸೆಗಾಗಿ ಶ್ರೀಮಂತರನ್ನು ಹೊಗಳುವ ಕಾವ್ಯಗಳನ್ನು ರಚಿಸುವ

ಗೋಜಿಗೂ ಅವರು ಹೋಗಲಾಗದಿದ್ದುದು ಅವರ ಸುಕೃತ. ತುಚ್ಛ ಹೋರಾಟಗಳಲ್ಲಿ ನಿರತರಾದ ಹುಚ್ಚ ಜನಸಂದಣಿಯಿಂದ ದೂರವಾಗಿದ್ದು, ಅವರು ತಮ್ಮ ಆಸೆ ಆಕಾಂಕ್ಷೆಗಳನ್ನು ಮಿತಿಯಲ್ಲಿಟ್ಟುಕೊಂಡಿದ್ದರು; ಎಲೆಮರೆಯ ಕಾಯಿಯಂತೆ ಶಾಂತವಾಗಿ ಬಾಳಿದರು.

ಆದರೂ, ಅವರ ಪಾರ್ಥಿವ ಶರೀರದ ಮೂಳೆಗಳಿಗೆ ಅವಮಾನವಾಗುವುದನ್ನು ಕವಿ ಸಹಿಸಲಾರ. ಅವನ ಪ್ರಕಾರ, ಸತ್ತವರ ಗೌರವಾರ್ಥ ಒಂದು ಸಾಮಾನ್ಯ ಸ್ಮಾರಕವಾದರೂ ಆಗಲೇಬೇಕು: ಅದರ ಮೇಲೆ ಒರಟೊರಟಾದ, ತಪ್ಪಾದ ಸಾಲುಗಳನ್ನಾದರೂ ಕೆತ್ತಿರಬಹುದು; ಅವು ದಾರಿಹೋಕನ ಹೃದಯವನ್ನು ಮಿಡಿಸುವಂತಾದರೆ ಸಾಕು. ಹಾಗೆಯೇ, ನೀತಿ ತತ್ವಗಳನ್ನು ಅರಿಯಬೇಕೆಂದಿರುವ ಇತರ ಹಳ್ಳಿಯವರಿಗೆ ಮಾರ್ಗದರ್ಶನವಾದರೆ ಸಾಕು. ಯಾರು ತಾನೆ ಸುಖಸಂತೋಷದ ಜೀವನವನ್ನು ಸಂಪೂರ್ಣವಾಗಿ ಮರೆತಾರು? ಶರೀರವನ್ನು ಬಿಟ್ಟು ಹೋಗುತ್ತಿರುವ ಜೀವಾತ್ಮಕ್ಕೆ ಬದುಕಿರುವವರಲ್ಲಿ ಕೆಲವರ ಪ್ರೀತಿಯ ಅವಲಂಬನೆ ಬೇಕು. ಪ್ರಕೃತಿಯ ಹಂಬಲದ ಧ್ವನಿಯು ಸಮಾಧಿಯಿಂದಲೇ ಕರೆಯುವುದು; ಸತ್ತವರ ಕಾಮನೆಗಳು ಅಲ್ಲಿನ ಬೂದಿಯಲ್ಲಿ ಅಡಗಿರುವುವು

ಶೋಕ ಗೀತೆಯ ಉಳಿದ ಸಾಲುಗಳಲ್ಲಿ ಕವಿ ಓರ್ವ ಕಾಲ್ಪನಿಕ ವ್ಯಕ್ತಿಯನ್ನು ಸೃಷ್ಟಿಸಿ, ತನ್ನ ಜೀವನದ ನಂತರ ತನ್ನ ಬಗ್ಗೆ ಅತ ಹೇಳಬಹುದಾದ್ದನ್ನು ಊಹಿಸುವನು. ಯಾವ ಗೌರವವೂ ಸಿಗದೆ ಮಣ್ಣಾದ ಶರೀರಗಳನ್ನು ಮರೆಯಲಾರದ ಕವಿ ಈ ಕಾವ್ಯದಲ್ಲಿ ಹೇಳಿರುವುದು ಆ ಜನರ ನಿರಾಡಂಬರವಾದ ಇತಿಹಾಸ ತಾನು ಸತ್ತ ನಂತರ, ತನ್ನ ಮನೋಭಾವವುಳ್ಳ ವ್ಯಕ್ತಿಯೋರ್ವನು ತನ್ನ ಬಗ್ಗೆ ವಿಚಾರಿಸಿದರೆ, ಒಬ್ಬ ವೃದ್ಧ ರೈತ ಹೀಗೆ ಹೇಳಬಹುದೆಂದು ಕವಿಯ ಊಹೆ:

"ಅರುಣೋದಯದ ಹೊತ್ತಿಗೇ ಮಂಜಿನ ಹನಿಗಳನ್ನು ಒರೆಸುತ್ತಾ, ಎತ್ತರದಲ್ಲಿರುವ ಹುಲ್ಲುಗಾವಲಿನ ಮೇಲಿನಿಂದ ಸೂರ್ಯನನ್ನು ಆತ ಬೇಗಬೇಗನೆ ನಡೆಯುತ್ತಿದ್ದುದನ್ನು ನಾವು ಎಷ್ಟೋ ಬಾರಿ ನೋಡಿದ್ದೇವೆ. ಮಧ್ಯಾಹ್ನದ ವೇಳೆಯಲ್ಲಿ, ಹಳೆಯ ಬೇರುಗಳುಳ್ಳ ದೂರದಲ್ಲಿ ಅಲ್ಲಾಡುತ್ತಿರುವ ವೃಕ್ಷದಡಿಯಲ್ಲಿ ಮಲಗಿದ್ದು, ಬಳಿಯಲ್ಲೇ ಜುಳು ಜುಳು ಶಬ್ದ ಮಾಡುತ್ತಿದ್ದ ತೊರೆಯನ್ನು ದೃಷ್ಟಿಸಿ ನೋಡುತ್ತಿದ್ದನು. (ಇಲ್ಲಿ ಮೊದಲನೇ ಪಾಠದಲ್ಲಿದ್ದ ಒಂದು ಪದ್ಯವನ್ನು ಕವಿಯೇ ಪರಿಷ್ಕೃತ ಪಾಠದಲ್ಲಿ ತೆಗೆದುಹಾಕಿದ್ದನು. ಅದು ಇದ್ದಿದ್ದರೆ, ಅವನ ಸಂಜೆಯ ಕಾಲಯಾಪನೆಯ ವರ್ಣನೆ ತಿಳಿಯುತ್ತಿತ್ತು.) ಜಗತ್ತಿನ ದುರಹಂಕಾರಕ್ಕೆ ತಕ್ಕ ತಿರಸ್ಕಾರವನ್ನೂ ಸೂಚಿಸುವಂತೆ ಕೆಲವು ವೇಳೆ ಮುಗುಳ್ನಗೆ ನಗುತ್ತಾ, ತನ್ನ ಅತಿರೇಕದ ಭಾವನೆಗಳನ್ನು ಬಾಯಿಯಲ್ಲಿ ಒಟ-

ಗುಟ್ಟುತ್ತಾ ದೂರದ ಕಾಡಿನ ಸಮೀಪದಲ್ಲಿ ಅಲೆಯುತ್ತಿದ್ದನು; ಎಲ್ಲಿಯೋ ಬಿಡಲ್ಪಟ್ಟವನಂತೆ ಶೋಕಭರಿತನಾಗಿ, ಅಥವಾ ಕಾತುರತೆಯಿಂದ ಹುಚ್ಚನಾಗಿ ಇಲ್ಲವೇ ಭಗ್ನಪ್ರೇಮಿಯಾಗಿ ಕೆಳಗೆ ಬಳುಕುತ್ತಿದ್ದನು."

"ಹೀಗೆ ಇರುತ್ತಿರಲು ಒಂದು ದಿನ, ಅವನು ನಿತ್ಯವೂ ಹೋಗುತ್ತಿದ್ದ ಗುಡ್ಡದ, ಮರದ ಸಮೀಪದಲ್ಲಿ ಅವನು ನನ್ನ ಕಣ್ಣಿಗೆ ಬೀಳಲಿಲ್ಲ. ಮಾರನೇ ದಿನವೂ ಬಂದಿತು. ಆದರೆ ಹುಲ್ಲುಗಾವಲಿನಲ್ಲಿ, ಕಾಡುಮೇಡುಗಳಲ್ಲಿ ಅವನ ಸುಳಿವೇ ಸಿಗಲಿಲ್ಲ. ಆ ನಂತರ ನಾನು ಕಂಡದ್ದು ದೇವಾಲಯದ ದಾರಿಯ ಮೂಲಕ ಅಂತ್ಯಯಾತ್ರೆಗೆ ಹೊರಟಿದ್ದ ಅವನ ಹೆಣ. ಅಗೋ, ದೂರದಲ್ಲಿ ಕಾಣುವ ಪೊದೆಯ ಕೆಳಗಿರುವ ಅವನ ಸಮಾಧಿಯ ಕಲ್ಲಿನ ಮೇಲೆ ಕೆತ್ತಿರುವ ಸಾಲುಗಳನ್ನು ಓದಿಕೊಳ್ಳಿ."

ಶಿಲಾಲೇಖ (ದಿ ಎಪಿಟಾಫ್): ಕವಿ ತಾನು ಬದುಕಿರುವಾಗಲೇ ತನ್ನ ಅಂತ್ಯಕ್ರಿಯೆಯನ್ನು ಊಹಿಸಿ ವಿವರಿಸಿರುವುದನ್ನು ಮತ್ತು ಶಿಲಾಲೇಖವನ್ನು ರಚಿಸಿರುವುದನ್ನು ಸುಮಾರಾಗಿ ನಮ್ಮ ಸಂಪ್ರದಾಯದಲ್ಲಿ ಸನ್ಯಾಸ ಸ್ವೀಕರಿಸುವ ಮೊದಲು ತಾನೇ ಮಾಡಿಕೊಳ್ಳುವ ಆತ್ಮಶ್ರಾದ್ಧಕ್ಕೆ ಹೋಲಿಸಬಹುದು. ಅವನ ಶಿಲಾಲೇಖದ ಒಕ್ಕಣೆ ಹೀಗಿದೆ:

"ಇಲ್ಲಿ ಭೂಮಿತಾಯಿಯ ತೊಡೆಯ ಮೇಲೆ ಅವನ ತಲೆಯು ಮಲಗಿದೆ. ಅವನೊಬ್ಬ ಅದೃಷ್ಟ, ಕೀರ್ತಿಗಳಿಗೇ ಹೊರತಾದ ಯುವಕ. ಬಡವನಾಗಿದ್ದರೂ ಜ್ಞಾನಾರ್ಜನೆ ಮಾಡಿದ್ದನು; ಮತ್ತು ಆಲೋಚನಾಪರವಾದ ದುಃಖಕ್ಕೆ ಈಡಾಗಿದ್ದನು. ಅವನು ತುಂಬಾ ಉದಾರಿ ಹಾಗೂ ಪ್ರಾಮಾಣಿಕನಾಗಿದ್ದನು. ಇದಕ್ಕೆ ತಕ್ಕ ಪ್ರತಿಫಲ ಅವನಿಗೆ ಭಗವಂತನಿಂದ ದೊರೆತಿತ್ತು. ಅವನು ದುಃಖಾರ್ತರಿಗೆ ಕೊಡುತ್ತಿದ್ದುದು ಸಹಾನುಭೂತಿಯ ಕಣ್ಣೀರು. (ಬಡವ ಇನ್ನೇನನ್ನು ಕೊಟ್ಟಾನು?) ಅವನು ಭಗವಂತನಿಂದ ಅಪೇಕ್ಷಿಸಿದ್ದೂ ಪಡೆದದ್ದೂ ಒಬ್ಬ ನಿಜವಾದ ಸ್ನೇಹಿತನನ್ನು (ಈ ಸ್ನೇಹಿತ ರಿಚರ್ಡ್ ವೆಸ್ಟ್‌ನೇ ಹೌದು. ಆದರೆ ಆತನ ಮರಣದ ಹಾಗೂ ಈ ಕಾವ್ಯರಚನೆಯ ಕಾಲಗಳನ್ನು ಸಮನ್ವಯ ಮಾಡುವುದು ಕಷ್ಟ). ಅವನ ಗುಣದೋಷಗಳು ಸಮಾಧಿಯಲ್ಲಿ ಅವನೊಂದಿಗೆ ವಿಶ್ರಾಂತಿ ಪಡೆಯುತ್ತಿವೆ; ಇನ್ನೂ ಹೆಚ್ಚಾಗಿ ಆ ಗುಣದೋಷಗಳ ಗೋಜಿಗೆ ಹೋಗಬೇಡಿ; ಏಕೆಂದರೆ ಅವು ದೇವರ ಮುಂದೆ ವಿಚಾರಣೆಯಾಗುವ ದಿನವನ್ನು ಆಸೆಯಿಂದ, ಭಯದಿಂದ ಎದುರು ನೋಡುತ್ತಿವೆ. ಅವು ದೇವರ ಹೃದಯವನ್ನು ಮರೆಹೊಕ್ಕಿವೆ."

ಇಲ್ಲಿಗೆ ಮುಗಿಯಿತು ಗ್ರೇ ಕವಿಯ ಶೋಕಗೀತೆ; ಅಂತ್ಯೆಯೇ ಶಿಲಾಲೇಖ. ಈ ಕಾವ್ಯದಲ್ಲಿ ವರ್ಣಿಸಿರುವ ಆಲೋಚನಾಲಹರಿ ಆಳವಾಗಿಲ್ಲದಿದ್ದರೂ, ಪ್ರತಿಯೊಬ್ಬ ಸಹೃದಯನ ಹೃದಯದಲ್ಲಿ ಪ್ರತಿಧ್ವನಿಸುವುದು. ಇದಕ್ಕೆ

ಮೆರುಗು ಕೊಡುವಂತಹ ಕಾವ್ಯರಚನೆಯ ಕುಶಲತೆ ಹಾಗೂ ಶಬ್ದಮಾಧುರ್ಯ ; ಪ್ರಕೃತಿಯ ಸುಂದರ ವರ್ಣನೆಯ ಜತೆಯಲ್ಲಿಯೇ ಬರುವ ಹಳ್ಳಿಯವರ ಸರಳ ಜೀವನದ ಚಿತ್ರ ; ಸದಾ ನೆನಪಿನಲ್ಲಿಡಬೇಕಾದ ಆಕರ್ಷಕ ಸಾಲುಗಳು– ಇವೆಲ್ಲದರ ಮನೋಹರ ಸಂಗಮ ಈ ಕಾವ್ಯಕ್ಕೆ ಎಲ್ಲಾ ದೇಶ, ಕಾಲಗಳಲ್ಲಿಯೂ ಕೀರ್ತಿಯನ್ನು ತಂದಿದೆ. ಗ್ರೇ ಕವಿಯ ಕಾವ್ಯರಚನೆಯ ವಿಚಾರದಲ್ಲಿ ಅಷ್ಟಾಗಿ ಒಳ್ಳೆಯ ಅಭಿಪ್ರಾಯ ಹೊಂದಿರದೇ ಇದ್ದ ಡಾ. ಜಾನ್‌ಸನ್‌ನಂತಹ ವಿಮರ್ಶಕರೂ ಕೂಡ ಈ ಕಾವ್ಯದ ಬಗ್ಗೆ ಪ್ರಶಂಸೆ ಮಾಡಲೇಬೇಕಾಯಿತು. ಸರಿಯಾದ ಪ್ರೋತ್ಸಾಹವಿಲ್ಲದೆ ವ್ಯರ್ಥವಾಗುತ್ತಿರುವ ಪ್ರತಿಭೆಯನ್ನು ಕುರಿತು ಕವಿ ಇಲ್ಲಿ ಆಡಿರುವ ಸ್ಪಷ್ಟವಾಣಿಯಿಂದ ಜಗತ್ತು ಸ್ವಲ್ಪವಾದರೂ ಜಾಗೃತವಾದಲ್ಲಿ ಕವಿಯ ಶ್ರಮ ಯತ್ಕಿಂಚಿತ್ತಾದರೂ ಸಾರ್ಥಕವಾದೀತು!

★ ಎಸ್. ಕೃಷ್ಣಭಟ್ಟ

ಪತಿವ್ರತೆ ಪಡೆದ ಫಲ

(ಕರ್ಬಲ ಹಾಡು)

ಹರುಷದಿ ಕೇಳಾರಿ ಈ ಅಕಲಾ
ಹೆಣ್ಣು ಗಂಡು ಕುಂತೀರಿ ಪೈಪೆಲ್ಲಾ
ಏರು
ಸಕಲ ಜನಾ ನೀವು ಅಕಲ ಕೇಳಾರಿ ನಕಲಿಮಾತು ಅಲ್ಲಾ
ಬಂಜಿಯ ಕಥಿ ಹೇಳುವೆನಪಲಾ
ಬ್ರಹ್ಮನ ಬರಹ ತಪ್ಪಲಿಲ್ಲಾ
ಪತಿವ್ರತೆ ಫಲ ಪಡಿದಳಲ್ಲಾ ||೧||

ಗಂಡ ಹೆಂಡರಿದ್ದರಲ್ಲಾ
ಪಾರಿಜಾತ ಮುತ್ತು ಕಳಸ ಇಲ್ಲಾ
ಹುಟ್ಟಿದ ಹದಿನೈದು ವರುಷದ ತನಕ
ಏರು
ಏನು ಕಡಿಮೆ ಇಲ್ಲಾ ಮಕ್ಕಳ ಫಲ ಆಗಲಿಲ್ಲಾ
ಶಿವನಲ್ಲಿ ಪಡೆದು ಬಂದಿಲ್ಲಾ
ಬಂಜಿಯೆಂಬ ಶಬ್ದ ತಪ್ಪಲಿಲ್ಲಾ ||೨||

ದೇವರಿಗೆ ಬೇಡಿಕೊಂಡಾಳಲ್ಲಾ
ಕಣ್ಣ ತೆಗೆದು ನೋಡ್ರಿ ನನ್ನ ಮೇಲಾ
ನನ್ನ ಹೊಟ್ಟೀಲಿ ಶಿಶುವು ಹುಟ್ಟಿದರೆ ಬಸವನ ಮೈ ಮೇಲಾ
ಏರು
ಬಂಗಾರ ಮುಚ್ಚಿ ಬಿಡುವೆ ಮೊದಲಾ
ಯಾವದ್ದೇನು ಕಡಿಮೆಯಿಲ್ಲಾ
ಒಂದು ಹರಕೆ ಹೊತ್ತಾಳಲ್ಲಾ ||೩||

ಮುಂದಿ ಮಕ್ಕಳ ಕಂಡಾಳಲ್ಲಾ
ಆ ದಿನ ಊಟ ಮಾಡಲಿಲ್ಲಾ
ಮನಸಿನೊಳಗೆ ಹೇಸಪತ್ತಿ ಕುಂತಾಳೊ ನನಗಿಷ್ಟರ ಬಾಲಾ
ಏರು
ಬಗಲಾಗ ಎತ್ತುತ್ತಿದ್ದೆನಲ್ಲಾ
ಹಾಗೀನ ಇಡುತ್ತಿದ್ದೆ ಮೈ ಮೇಲಾ
ಕಂಡ ಪ್ರೀತಿ ನಂದು ತೀರಲಿಲ್ಲಾ ||೪||

ಪತಿಗೆ ಹೇಳಿಕೊಂಡಾಳಲ್ಲ
ಕಣ್ಣು ತೆಗೆದುನೋಡ್ರಿ ನನ್ನ ಮ್ಯಾಲಾ
ಕಾಂತ ಕೇಳೊ ನೀ ಲಗ್ನ ಮಾಡಿಕೊಳ್ಳೊ ನಂದೇನು ನಂಟೆ ಇಲ್ಲಾ

ನಿರು
ಆಗುವೆ ಹೊಳಿ ಬಾವಿ ಪಾಲಾ
ಪ್ರಾಣ ಉಳುಂವಿ ಕೊಂಬರಿಲ್ಲಾ
ನನ್ನ ಬಂಜಿತನ ಹಿಂಗಲಿಲ್ಲಾ ॥ ೫ ॥

ಸತಿಯು ಹೊರಟು ನಿಂತಾಳಲ್ಲಾ
ಪತಿಗೆ ಬಾಳ್ವೆದಾಸೆಯಿಲ್ಲಾ
ಸತಿಪತಿ ಇಬ್ಬರು ಅಡವಿಗೆ ಹೋಗಿ ಹೊಳಿ ಕಂಡಾರಲ್ಲಾ
ನಿರು
ಮನದೊಳು ಹಾಕಬೇಕೋ ಅಕಲಾ
ಜತ್ತೀಲೆ ಇಬ್ಬರು ಏಕಕಾಲಾ
ಕಂಣುಕಟ್ಟಿ ಕೊಂಡರಲ್ಲಾ ॥ ೬ ॥

ಶಿವಗ ಅರಿವು ಹುಟ್ಟಿತಲ್ಲಾ
ಕೈಲಾಸದಿಂದಿಳಿದು ಬಂದನಲ್ಲಾ
ಬಾವಾನ ವೇಷತಾಳಿ ಇವರಿಗೆ ಬಂದು ನಿಂತನಲ್ಲಾ
ನಿರು
ನಿಮ್ಮ ಭಾವಕ್ಕ ಮೆಚ್ಚಿದೆನಲ್ಲಾ
ನಿಮಗೆ ಕೊಟ್ಟೆ ಮಕ್ಕಳ ಫಲಾ
ಹೀಗೆಂದು ಮಾಯವಾದನಲ್ಲಾ ॥ ೭ ॥

ಹರುಷದಿ ಮನಿಗೆ ಬಂದರಲ್ಲಾ
ದಿನ ತುಂಬಿ ಪುತ್ರನ್ನ ಹಡಿದಳಲ್ಲಾ
ಹುಟ್ಟಿದ ಹದಿಮೂರು ದಿವಸಕ್ಕ ತೊಟ್ಟಿಲ ಕಟ್ಟಿ ಬಿಟ್ಟಾರಲ್ಲಾ
ನಿರು
ಗಂಡ ಹೆಂಡರು ಕುಸಿಯಾಲಾ
ಭಕ್ತಿಲಿಂದ ನಡಿದಾರಲ್ಲಾ
ಶಿವನ ಕರುಣ ಅವರ ಮೇಲಾ ॥ ೮ ॥

ದೇಶಕ್ಕ ಹೆಸರು ಆಗಿತ್ತಲ್ಲಾ
ಹೊಸರಿತ್ತಿ ಒಳ್ಳೆ ಮಿಗಿಲಾ
ನಿರು
ತಳವಾರ ಗರಡಿ ಹುಡುಗರು ಹಾಡ್ಯರೊ ಕವಿ ಒಳ್ಳೆ ಅಸಲಾ
ತೋಡಿ ಜಲ್ದಿ ಕೊಡಬೇಕಲ್ಲಾ
ಕುಂತು ಸುರಿಸಬ್ಯಾಡ್ರೊ ಜೊಲ್ಲಾ
ಹುಡುಗರು ಹಾಕಿ ಬಿಟ್ಟೆವೋ ಕೋಲಾ ॥ ೯ ॥

ಸಂ : ಬಿ. ಎಸ್ ಹಣಜಿ

ಮುಕ್ತಗೀತಿಕೆ

೧. ಅರ್ಧಾಂಗ ಕಾರಣ

ಉದರದ್ವಯ ಭರಣಭಯಾದರ್ಧಾಂಗಾಹಿತದಾರಃ ।
ಯದಿ ನೈನಂ ತಸ್ಯ ಸುತಃ ಕಥಮದ್ಯಾಪಿ ಕುಭಾರಃ ॥

ಹೊಟ್ಟೆಗಳೆರಡನು ಹೊರೆಯಲು ಆರದೆ
ಅರೆಮೈಯೊಳಾಂತನು ಹೆಣ್ಣ,
ಇಂತಲ್ಲದಿರಲೆಂತು ಆತನ ಮಗನಿಂದು
ಭೂಭಾರವಾದನಣ್ಣ?

೨. ಬ್ರಹ್ಮಲಿಪಿ

ವಾಚಯತಿ ನಾನ್ಯಲಿಖಿತಂ ಲಿಖಿತಮನೇನಾಪಿ ವಾಚಯತಿ ನಾನ್ಯಃ ।
ಅಯಮಪರೋಽಸ್ಯ ವಿಶೇಷಃ ಸ್ವಯಮಪಿ ಲಿಖಿತಂ ಸ್ವಯಂ ನ ವಾಚಯತಿ ॥

ಓದಲು ಆರನು ಇನ್ನೊಬ್ಬ ಬರೆದುದ,
ಬೇರೊಬ್ಬರಿವ ಬರೆದುದ,
ಮತ್ತೊಬ್ಬನಿಹನಿವನ ಹೆಚ್ಚಳವೆಂದರೆ
ಓದನು ತಾ ಬರೆದುದ.

೩. ಪಾಂಥಸ್ತ್ರೀ

ರಥ್ಯಾ ರಜೋ ರುಣಿತ ಧೂಸರಿತಾಂಗಯಷ್ಟೇಃ
ಕಚ್ಚಿತ್ ಪಿತುಃಸ್ಮರಸಿ ಪುತ್ರಕ ನಿರ್ಘೃಣಸ್ಯ ।
ಉಕ್ತ್ವೈವಮಂಕಗತಯಾಯತವಾಯತಾಕ್ಷ್ಯಾ
ಪಾಂಥಸ್ತ್ರಿಯಾ ಪ್ರರುದಿತಂ ಕರುಣಂ ದಿನಾಂತೇ ॥

ಮೈ ಎಲ್ಲ ಬೀದಿಯ ಧೂಳಿಡಿದು ತೊಡೆಗೈದ
'ನಿರ್ದಯಿ ತಂದೆಯ ನೆನೆವೈ ಮಗು?'
ಇಂತೆಂದು ದಾರಿಗನ ಮಡದಿಯು ಗಟ್ಟಿಸಿ
ಅತ್ತಳು ದೈನ್ಯದಿ ಅಂದು ಬೈಗು.

೪. ಪಯಣಿಗನ ಸುದ್ದಿ

ರೇ ರೇ ಪಾಂಥ ಕುತೋ ಭವಾನ್ನಗರತೋ ವಾರ್ತಾ ನ ಚಾಪಿ ಶ್ರುತಾ
ಬಾಢಂ ಬ್ರೂಹಿ ಯುವಾ ಪಯೋದಸಮಯೇ ಹಿತ್ವಾ ಪ್ರಿಯಾಂ ಜೀವತಿ ।
ಸತ್ಯಂ ಜೀವತಿ ಜೀವತೀತಿ ಕಥಿತಾ ವಾರ್ತಾಮಯಾಪಿ ಶ್ರುತಾ
ವಿಸ್ತೀರ್ಣಾ ಪೃಥಿವೀ ಜನೋಽಪಿ ವಿವಿಧಃ ಕಿಂ ಕಿಂ ನ ಸಂಭಾವ್ಯತೇ ॥

ಅಯ್ಯ ಪಯಣಿಗ, ಎತ್ತಣಿಂದೈತಂದೆ,
ಬಂದಿಲ್ಲ ನಗರದ ಸುದ್ದಿ ಏನೂ,
ನಿಜ ಹೇಳು, ತರುಣನು ನೋಡದ ಕಾಲದಿ
ನಲ್ಲೆಯನುಳಿದುಳಿವನೇನು ?

ಖಂಡಿತ ಉಳಿದಿಹ ಉಳಿದಿಹನೆನ್ನುವ
ಸುದ್ದಿಯು ಕೇಳಿದೆ ನಾನೂ,
ಭೂಮಿಯೂ ಚಿತ್ತಾರ ಜನವೂ ತರತರ,
ಆಗದುದೇನು ಏನು?

೫. ಪಾಂಥಸಂಕೇತ

ಶೂನ್ಯಂ ವೇಶ್ಮ ಚಿರಾಯಿತೋ ಗೃಹಪತಿಃ ಜಾತಾಧುನಾ ಶರ್ವರೀ
ಸ್ಥಾತುಂ ನೋಚಿತಮತ್ರ ಗಚ್ಛ ನಿಭೃತಂ ಲೋಕೈರನಾಲಕ್ಷಿತಃ ।
ಇತ್ಥಂ ಲೋಲದೃಶಾಹ್ಯಸಾವಭಿಹಿತೋ ದಾಸೀಮುಖೇನಾಧ್ವಗಃ
ಸ್ಥಿತ್ವಾ ಕಿಂಚಿದಿವ ಕ್ವಯಾಮಿ ರಜನೀ ಪ್ರಾಪ್ತೇತ್ಯುದೀರ್ಯ ಸ್ಥಿತಃ ॥

'ಬರಿಮನೆ' ಬರಲಿಲ್ಲ ಮನೆಯ ಒಡೆಯನೂ
ಕವಿಯಿತು ಈಗಳು ಇರುಳು,
ಇಲ್ಲಿಹುದು ತರವಲ್ಲ ಮುಂದಿಗೆ ಕಾಣಿಸಿ-
ಕೊಳ್ಳದೆ ಹೊತ್ತಾಗೆ ತೆರಳು,

—ಇಂತೆಂದು ತರಳೆಯು ಆಳಿಯ ಮೂಲಕ
ಹೇಳಿಸೆ, ಪಯಣಿಗನು
ತುಸು ತಡೆದು 'ಎಲ್ಲಿಗೆ ಹೋಗಲಿ ? ಇರುಳಾಯ್ತು"
ಎಂದೊರೆದು ನಿಂತನವನು.

೬. ನಿಜಸೌಖ್ಯ

ಯಸ್ಯ ಸ್ತ್ರೀ ತಸ್ಯ ಭೋಗೇಚ್ಛಾ ನಿಸ್ತ್ರೀಕಸ್ಯಕ್ವ ಭೋಗಭೂಃ ।
ಸ್ತ್ರಿಯಂ ತ್ಯಕ್ತ್ವಾ ಜಗತ್‌ತ್ಯಕ್ತಂ ಜಗತ್‌ತ್ಯಕ್ತ್ವಾ ಸುಖೀ ಭವೇತ್ ॥

ಹೆಣ್ಣು ಉಳ್ಳವಗೆ ಭೋಗದ ಬಯಕೆಯು,
ಹೆಣ್ಣಿಲ್ಲದವನೆಲ್ಲಿ ಭೋಗವಿಹುದು?
ಹೆಣ್ಣನು ಉಳಿದರೆ ಲೋಕವನುಳಿದಂತೆ,
ಲೋಕವನುಳಿದರೆ ಸುಖವಹುದು.

೭. ವರ್ಷಾ ಪಥಿಕ

ಕಿಂಗತೇನ ಯದಿ ಸಾ ನ ಜೀವತಿ ಪ್ರಾಣಿತಿ ಪ್ರಿಯತಮಾ ತಥಾಪಿ ಕಿಂ ।
ಇತ್ಯುದೀಕ್ಷ್ಯ ನವಮೇಘಮಾಲಿಕಾಂ ನ ಪ್ರಯಾತಿ ಪಥಿಕಃ ಸ್ವಮಂದಿರಂ ॥

ಬದುಕಿರದಿರಲಾಕೆ ಹೋಗಿಯು ಫಲವೇನು,
ಕಾದಲೆ ಬದುಕೀಗಲೇನು ?
ಎಂದು ನೋಡುತ ಮೇಲೆ ಹೊಸಮೋಡಗಳಸಾಲು
ದಾರಿಗ ಮನೆಗೈದದಿಹನು

೮. ಶರದಾಗಮನ

ಪಾಥೋದ ಜಾಲ ಜಟಿಲಂ ಮಲಿನಂ ಶರದಂಗನಾ ।
ಅಂಬರಂ ಧಾವಯಾಮಾಸ ಚಂದ್ರಿಕಾಚಯ ವಾರಿಭಿಃ ॥

ಶಾರದ ನೀರೆಯು ಮಳೆಯ ಕಾಲದಿ ಸಾಲು
ಮೋಡದ ತೊಡಕಿನಿಂದ
ಹೊಲಸಾದ ಅಂಬರ ತೊಳೆವಳು ಹಬ್ಬಿದ
ಜೊನ್ನದ ನೀರಿನಿಂದ.

೯. ಹೂನೆತ್ತುವದು

ಅನ್ಯತ್ರ ಯಾಯಂ ಕುಸುಮಾವಚಾಯಂ ಕುರುಧ್ವಮತ್ರಾಸ್ಮಿ ಕರೋಮಿ ಸಖ್ಯಃ ।
ನಾಹಂ ಹಿ ದೂರಂ ಭ್ರಮಿತುಂ ಸಮರ್ಥಾ ಪ್ರಸೀದತಾಯಂ ರಚಿತೋಂಜಲಿರ್ವಃ ॥

ಸಖಿಯರೆ ಬೇರೆಡೆ ಹೂವೆತ್ತಿ ನೀವು,
ಇದೆನಿಲ್ಲಿ ನಾನೆತ್ತುವೆ,
ದೂರಕೆ ಸರಿಯಲು ಶಕ್ತಳು ನಾನಲ್ಲ,
ದಯಿದೋರಿ ಕೈಯಮುಗಿವೆ.

೧೦. ಮಳೆಗಾಲ

ಪತತ್ಯವಿರತಂ ವಾರಿ ನೃತ್ಯಂತಿ ಚ ಕಲಾಪಿನಃ !
ಅದ್ಯ ಕಾಂತಃ ಕೃತಾಂತೋ ವಾ ದುಃಖಸ್ಯಾಂತಂ ಕರಿಷ್ಯತಿ ॥

ಬೀಳುತಲಿದೆ ಮಳೆಯು ನಿಲ್ಲದೆ, ನವಿಲವು
ತೊಡಗಿವೆ ನರ್ತನವ;
ರಾಮನಾಗಲಿ ಇಂದು ಜವರಾಯನಾಗಲಿ
ಬನ್ನವ ಬಗೆಹರಿಸುವ

★ ಎಚ್. ಜಿ. ಲೋಕೂರ

ಮನ-ಆಸೆ....

ಆಕಾಶದುದ್ದಕ್ಕೂ, ನನ್ನ ಮನ–
ಸೂತ್ರ ಬಿಗಿದ ಗಾಳಿಪಟ
ಹುಚ್ಚೆದ್ದು ನೆಗೆತ – ರಭಸದ ಹಾರಾಟ–
ಕೈ ಬಿಗಿತದೊಡನೆ ಆದರ ಸೆಳೆತ
ಕಡೆಗೊಮ್ಮೆ ಸೂತ್ರ ಕಿತ್ತ–
ಗಾಳಿಪಟದ ಪರದಾಟ.
ಆದರೆ ತಿರುಗಿ ಸೂತ್ರ ಬಿಗಿದು
ಮತ್ತೆ ಹಾರಿ ಬಿಡುವ ಹಂಬಲ....

ನನ್ನಾಶೆ– ಬಸುರಿಯು ಬಯಕೆ.
ಬೇಕು ಬೇಕೆಂದಾಗಲೆಲ್ಲಾ ಬೇಡುವ ಬಯಕೆ.
–ಹೊತ್ತ ನೂರೆಂಟು ದೇವರ ಹರಕೆ.
ನೂರೆಂಟು ಬೇಕುಗಳು ಸಿಗದಾಗ
ಹತ್ತೆಂಟು ಬೇಡಗಳು ಮೇಲೆ ಬಿದ್ದು
ಬಂದಾಗ,
ನೂರೆಂಟರಲಿ ಹತ್ತೆಂಟು ಕಳೆದು
ಎದೆ ಸೆಟೆಸಿ ನಡೆವ ಹಟ....

★ ಪಿ. ಹ. ರಾಮಕೃಷ್ಣರಾವ್

ಪಂಪನ ಪ್ರಾಕೃತ ಪದಕೋಶ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಅಕ್ಷರ	ಅಕ್ಖರ	ಅಕ್ಕರ	ಪಂ. ಭಾ. ೪/೨೯
ಅಷೇಸ್	ಅಚ್ಛಿ	ಅಕ್ಷಿ	ಆ. ಪು. ೩/೨೦
ಅಂಕುಶ	ಅಂಕುಸ	ಅಂಕುಸ	ಪಂ. ಭಾ ೧೧/೪೮೮
ಅರ್ಘ	ಅಗ್ಘ	ಅಗ್ಗ	ಆ. ಪು. ೩/೯
ಅಚ್ಛ	ಅಚ್ಛ	ಅಚ್ಚ	ಪಂ. ಭಾ. ೪/೫೩ ವ
ಅಪ್ಸರಸ್	ಅಚ್ಛರಸಾ, ಅಚ್ಛರಾ	ಅಚ್ಚರಸಿ, ಅಚ್ಚರಸೆ	ಆ. ಪು. ೨/೬೫ ವ
ಆಶ್ಚರ್ಯ	ಅಚ್ಛರಾ, ಅಚ್ಛೇರ ಅಚ್ಚರಿ ಅ.	ಅಚ್ಚರಿ	ಪಂ. ಭಾ. ೧/೧೪೮ ಪಂ. ಭಾ. ೧/೧೦೭
ಅಕ್ಷ	ಅಕ್ಖ	ಅಚ್ಚು	ಪಂ. ಭಾ. ೧೮/೯೧
ಅರ್ಚಿಸ್	ಅಚ್ಚಿ	ಅರ್ಚಿ	ಪಂ. ಭಾ. ೫/೮೬
ಹಂಸ	ಹಂಸ	ಅಂಚೆ	ಪಂ. ಭಾ. ೪/೮೭ ವ
ಆರ್ಯ	ಅಜ್ಜ	ಅಜ್ಜ	ಆ. ಪು. ೩/೫೫
ಅಜ್ಞಾನಿನ್	ಅಜಾಣಣ	ಅಜ್ಞಾನಿ	ಪಂ. ಭಾ. ೮/೩
ಅತಲ	ಅತಲ	ಅಟ್ಟೆ	ಪಂ. ಭಾ. ೧೦/೬೭
ಅನೀಕ	ಅಣೀಯ	ಅಣಿ	ಪಂ. ಭಾ. ೩/೬೭
ಅರ್ಥಿನ್	ಅತ್ಥಿ	ಅರ್ಥಿ	ಪಂ. ಭಾ. ೧/೮೫
ಹನೂಮಂತ್	ಹಣುಅ (ವ)	ಅಣುವ	ಪಂ. ಭಾ. ೮/೩೩ ವ
ಅತಿ-ಮುಕ್ತಕ	ಅಇಮುತ್ತ- ಅಇಮುತ್ತಯ	ಅದಿಮುರ್ತೆ	ಆ. ಪು. ೪/[illegible]
ಅಧಸ್	ಅಧ	ಅಧ	ಆ. ಪು. ೧/೫೦
ಅಧ್ವನ್	ಅದ್ಧ, ಅದ್ಧಾಣ	ಅಧ್ವಾನ	ಪಂ. ಭಾ. ೩/೧೦ ವ
ಅಧಿಕಾರಿನ್	ಅಹಿಗಾರಿ, ಅಹಿಗಾರಿಯ	ಅಧಿಕಾರಿ	ಆ. ಪು. ೧೨/೧೨೮ ವ
ಅಧ್ಯಾಸಿನ್	ಅಜ್ಝಾಸಿ ಅಹಿಯಾಸಿ	ಅಧ್ಯಾಸಿ	ಆ. ಪು. ೨/೧೦ ವ
ಅಭಿಲಾಷಿನ್	ಅಹಿಲಾಸಿ	ಅಭಿಲಾಷಿ	ಆ. ಪು. ೧೬/[illegible] ವ
ಅನ್ವಾಯ	ಅಣ್ಣಾಯ, ಅನ್ವಾಯ	ಅನ್ವಯ, ಅನ್ವಯ	ಪಂ. ಭಾ. ೧೨/೧೭೪ ೧/೧೧೨

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಅಂಬಾ	ಅಂಬಾ	ಅಬ್ಬೆ	ಪಂ. ಭಾ. ೧/೭೫
ಅಮೃತ	ಅಮಯ	ಅಮರ್ದು	ಪಂ. ಭಾ. ೪/೩೧
ಯಮಲ	ಜಮಲ	ಅಮಳ್	ಪಂ. ಭಾ. ೨/೩
ಅರಿಕೇಸರಿ	?	ಅರಿಗ	ಪಂ. ಭಾ. ೧/೫
ಅಯಶಸ್	ಅಜಸ	ಅಯಶ	ಪಂ. ಭಾ. ೧೦/೨೭
ಅಲಕ್ತ (ಕ)	ಅಲತ್ತ, ಅಲತ್ತಯ	ಅಲತಗೆ	ಅ. ಪು. ೭/೧೧
ಅಪಘಟ	ಅವಘಡ	ಅವಗಡ	ಪಂ. ಭಾ. ೧೩/೮
ಅಭಿಜ್ಞಾನ	ಅಹಿಣ್ಣಾಣ	ಅವಿನಾಣ,ಅವಿನ್ನಾಣ	ಪಂ. ಭಾ. ೩/೪ ವ ಅ. ಪು. ೫/೩ ವ
ಅಶೋಕ	ಅಸೋಅ ಅಸೋಗ	ಅಸುಶೆ	ಅ. ಪು. ೬/೯೬.
ಅಶ್ವತ್ಥಾಮನ್	ಅಸ್ಸಿತ್ಥಾಮ	ಅಶ್ವತ್ಥಾಮ	ಪಂ.ಭಾ. ೨/೩೪
ಅರ್ಹತ್	ಅರಹ	ಅರ್ಹ	ಅಪು. ೧೦/೫೭
ಆಲೇಖ	?	ಅಳಕ	ಪಂ.ಭಾ. ೧/೧೨
ಆಕರ	ಆಯರ,ಆಗರ	ಆಗರ	ಪಂ.ಭಾ. ೧/೫೦
ಆಕಾಶ	ಆಗಾಸ.	ಆಗಸ	ಪಂ.ಭಾ. ೩/೧೩
ಆಚಾರವತ್	ಆಯಾರವಂತ	ಆಚಾರವಂತ	ಪಂ.ಭಾ. ೧/೮೫ವ
ಆಜ್ಞಪ್ತಿ	ಆಣತ್ತಿ	ಆಣತಿ	ಪಂ.ಭಾ. ೫/೩೫
ಆಜ್ಞಾ	ಆಣಾ	ಆಣೆ	ಪಂ.ಭಾ. ೧೨/೮೯
ಆತ್ಮನ್	ಅತ್ತ ಅತ	ಆತ್ಮ	ಅಪು. ೨/೯ವ
ಆಯುಸ್	ಆಯು	ಆಯು	ಪಂ.ಭಾ. ೧೩/೮೮ವ
ಹಾರ	ಹಾರ	ಆರ	ಅಪು. ೩/೪೮
ಆರಾಮ	ಆರಾಮ	ಆರವೆ	ಪಂ.ಭಾ ೧/೨೮
ಆಶಾ	ಆಸಾ	ಆಸೆ	ಪಂ.ಭಾ. ೧/೧೦೬
ಆಹಾರಿನ್	ಆಹಾರಿ	ಆಹಾರಿ	ಅಪು. ೫/೪೧ವ
ಇಚ್ಚಾ	ಇಚ್ಚಾ	ಇಚ್ಚೆ	ಪಂ.ಭಾ. ೧/೯೦
ಋಷ್ಟಿ, ಯಷ್ಟಿ ?	ಇಟ್ಟಿ ?	ಇಟ್ಟಿ	ಪಂ.ಭಾ. ೧೦/೯೪
ಇಷ್ಟಿಕಾ	ಇಟ್ಟಿಆ, ಇಟ್ಟಿಯಾ, ಇಟ್ಟಿಗಾ	ಇಟ್ಟಗೆ ಇಟ್ಟಿಗೆ	ಪಂ.ಭಾ. ೩/೪ ಅಪು. ೫/೧೯
ಇಲಾವತ್	ಇಲಾವಂತ	ಇಳಾವಂತ	ಪಂ.ಭಾ. ೪/೧೮

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಉತ್ಕಟ	ಉಕ್ಕಡ	ಉಗ್ಗಡ	ಪಂ.ಭಾ. ೩/೪
ಅಂಗುಷ್ಠ	ಅಂಗುಟ್ಠ	ಉಂಗುಟ	ಆಪು. ೯/೮೪
ಉದ್ಯಾಪನಾ	ಉಜ್ಜವಣ		
	ಉಜ್ಜವಣ	ಉಜ್ಜವಣೆ	ಪಂ.ಭಾ. ೧೩/೩೬
ಉಜ್ವಲ	ಉಜ್ಜಲ	ಉಜ್ಜಳ	ಆ. ಪು. ೧೧/೫ವ
ಉದ್ಯೋಗ	ಉಜ್ಜೋಅ,		
	ಉಜ್ಜೋಗ		
	ಉಜ್ಜೋಯ	ಉಜ್ಜುಗ	ಪಂ.ಭಾ. ೫/೧೦೭
ಉತ್ತಮೌಜಸ್	ಉತ್ತಮೋಯ	ಉತ್ತಮೌಜ	ಪಂ.ಭಾ. ೧೩/೩೮ವ
ಉಚ್ಚೈಃಶ್ರವಸ್ (ಸ)	?	ಉಚ್ಚೈಲಶ್ರವ	ಪಂ.ಭಾ. ೧೪/೨೦ವ
ಉಪದ್ರವಕಾರಿನ್	ಉವದ್ದವಗಾರಿ	ಉಪದ್ರವಕಾರಿ	ಪಂ.ಭಾ. ೯/೮೭ವ
ಉತ್ಪಟ	ಉಪ್ಪಡ	ಉಪ್ಪಟ	ಪಂ. ಭಾ. ೧೪/೫೫
ಉಪಯೋಗಿನ್	?	ಉಪಯೋಗಿ	ಆ. ಪು. ೧೧/೯
ಉದ್ದೇಶ	ಉದ್ದೇಸ	(ಉದ್ದೇಸ) ಉದ್ದೆಸ	ಆಪು. ೭/೮೫
ಉದ್ವೇಗ	ಉವ್ವೇಗ	ಉಬ್ಬೆಗ–	ಪಂ.ಭಾ. ೨/೨೮ಡ
ಉನ್ಮತ್ತ	ಉಮ್ಮತ್ತ	ಉನ್ಮಚ್ಚ	ಪಂ.ಭಾ. ೧೨/೧೭೬ ವ
ಊಷ್ಮನ್	ಉಮ್ಹ	ಉನ್ಮಳ	ಪಂ.ಭಾ. ೧/೩೭
ಉರಸ್	ಉರ	ಉರ	ಆ. ಪು. ೧೫/೧೬
ಏಕ	ಎಕ್ಕ	ಎಕ್ಕ	ಪಂ.ಭಾ. ೯/೪೬
ಏಕತುಲಾ	ಎಕ್ಕತುಲಾ	ಎಕ್ಕತುಳ	ಪಂ. ಭಾ. ೧೨/೭೬ ವ
ಏಕಭಾಕ್	ಎಕ್ಕಭಾಗ	ಎಕ್ಕಬಾಗೆ	ಪಂ. ಭಾ. ೯/೪೬
ಏಕಸರಿಕಾ	ಎಕ್ಕಸರಿಅ	ಎಕ್ಕಸರ	ಪಂ. ಭಾ. ೪/೮೬
ಏಕಾವಲಿ	ಎಕ್ಕಾವಲಿ	ಎಕ್ಕಾವಳಿ	ಆ. ಪು. ೧/೭೬
ಇಲಾ	?	ಎಳೆ	ಪಂ. ಭಾ. ೪/೪
ಉಷ್ಟ್ರ	ಉಟ್ಟ ?	ಉಟ್ಟ	ಪಂ. ಭಾ. ೧೦/೪
ಉಪಾಧ್ಯಾಯ	ಉವಜ್ಝಯ,	ಒವಜ, ಓಜ	ಆ. ಪು. ೧೧/೧೨೬
	ಉವಜ್ಝಾಯ		ಪಂ. ಭಾ. ೨/೬೧
ಓಘ	ಓಹ	ಓಗ	ಪಂ. ಭಾ. ೪/೮೭ ಆ. ಪು. ೧೩/೫೦

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಅಪವಾರಿಕಾ	ಓವಾರಿಅ	ಓವರಿ	ಪಂ. ಭಾ. ೩/೪ ವ
ಕೃಕರ	?	ಕಕ್ಕರ	ಆ. ಪು. ೪/೩೪ ವ
—	—	ಕಕ್ಕಲ	ಪಂ. ಭಾ. ೯/೫೨ ವ
ಕಕುಂದ್	ಕಉಡ-ಕಉಹ	ಕಕುಂದ	ಆ. ಪು. ೬/೬
ಕಾಂಸ್ಯ	ಕಂಸ	ಕಂಚು	ಪಂ. ಭಾ. ೩/೭೪
ಕಾರ್ಯ	ಕಜ್ಜ	ಕಜ್ಜ	ಪಂ.ಭಾ ೧/೭೭
ಕಂಚುಕಿನ್	ಕಂಚುಇ	ಕಂಚುಕಿ	ಆ. ಪು. ೮/೩೫
ಕದಂಬ	ಕಡಂಬ, ಕಲಂಬ	ಕಡವು	ಪಂ. ಭಾ. ೭/೬೯
ಕಾಂಡಪಟ	ಕಂಡವಡ	ಕಂಡಪಟ	ಪಂ. ಭಾ. ೫/೪೭
ಖನಿ	ಖಣಿ	ಕಣಿ	ಪಂ. ಭಾ. ೧/೨೮
ಕರ್ತರೀ	ಕತ್ತರಿ	ಕತ್ತರಿ	ಪಂ. ಭಾ. ೧೧/೧೦೪
ಕರ್ತೃ	ಕತ್ತಿ	ಕರ್ತಾರ	ಆ. ಪು. ೯/೯೩ ವ
ಕರ್ತ್ರಿಕಾ	ಕತ್ತಿಯಾ	ಕತ್ತಿಗೆ	ಪಂ. ಭಾ. ೮/೪೨ ವ
ಕಸ್ತೂರಿ	ಕತ್ಥುರಿ,ಕತ್ಥೂರಿಯಾ	ಕತ್ತುರಿ	ಪಂ. ಭಾ. ೨/೩೯ ವ
ಕಥಾ	ಕಹಾ	ಕತೆ	ಪಂ. ಭಾ. ೧/೧೧
ಕನ್ಯಕಾ	ಕನ್ನಗಾ, ಕಣ್ಣಗಾ	ಕನ್ನಿಕೆ	ಪಂ. ಭಾ. ೧/೯೨
ಕನ್ಯಾ	ಕನ್ನಾ, ಕಣ್ಣಾ	ಕನ್ನೆ	ಪಂ. ಭಾ. ೧/೬೮ ವ
ಸ್ಕಂಧ	ಖಂದ	ಕಂದ	ಪಂ. ಭಾ. ೪/೯೪ ವ
ಕರ್ಪೂರ	ಕಪ್ಪೂರ.	ಕಪ್ಪುರ	ಆ.ಪು. ೨/೫
ಕಾವ್ಯ	ಕವ್ವ	ಕಬ್ಬ	ಪಂ. ಭಾ. ೧/೭.೯.
ಸ್ತಂಭ. ಸ್ಕಂಭ	ಖಂಭ	ಕಂಬ ಕಂಭ	ಪಂ.ಭಾ. ೧/೫೦ ೩/೪೦
ಕರ್ಮಾರ	ಕಮ್ಮಾರ	ಕಮ್ಮರಿ ಕಮ್ಮಱ	ಆ.ಪು. ೨/೬೧
			ಪಂ.ಭಾ. ೧೨/೩
ಕರ್ಮನ್	ಕಮ್ಮ ಕಮ್ಮಾ	ಕರ್ಮ	ಪಂ.ಭಾ. ೧/೮೬ ವ
ಕರ್ಮಿನ್ ಕಾರ್ಮಿಕ	ಕಮ್ಮಿ ಕಮ್ಮಿಅ	ಕರ್ಮಿ	ಪಂ.ಭಾ. ೨/೨೦
ಖರ	ಕರ	ಕರ	ಪಂ.ಭಾ. ೧೧/೧೨೪
ಕರಕ	ಕರಗ	ಕರಗ	ಆ.ಪು. ೮/೭೦ ವ
ಕರಿನ್	ಕರಿ	ಕರಿ.	ಪಂ ಭಾ. ೧/೧೯
ಕರುಣಿನ್	ಕರುಣಿ.	ಕರುಣಿ	ಪಂ. ಭಾ. ೬/೬೬
ಕಪಿಲ	ಕವಿಲ	ಕವಿಲ್	ಪಂ. ಭಾ. ೨/೧೪

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಕ್ರಮುಕ	ಕಮುಅ, ಕಮುಗ	ಕವುಂಗು	ಆ.ಪು. ೧೧/೬೫
ಕಶಾ. ಕಸಾ.	ಕಸಾ	ಕಸೆ.	ಪಂ.ಭಾ. ೧೨/೩೧೧
ಕಲಶ	ಕಲಸ	ಕಳಸ	ಪಂ.ಭಾ. ೧/೧೦೭
ಖಾತಿಕಾ.	ಖಾಯಿಆ-ಖಾದಿಗಾ	ಕಾದಿಗಾ	ಪಂ.ಭಾ. ೪/೩೨
ಕಾಮ	ಕಾಮ	ಕಾವ	ಪಂ.ಭಾ. ೯/೪೩
ಕಾಮಿನ್	ಕಾಮಿ	ಕಾಮಿ	ಪಂ.ಭಾ. ೪/೫೦
ಕಾಮಚಾರಿನ್	ಕಾಮಚಾರಿ	ಕಾಮಚಾರಿ	ಆ.ಪು. ೧೧/೩೮
ಕಾಯಮಾನ	—	ಕಾವಣ	ಆ.ಪು. ೧೧/೭೧.
ಕಿಂಕೃತಿ	ಕಿಂಕಇ	ಕಿಂಕೊಟಿ	ಪಂ.ಭಾ. ೧/೩೨
ಕಿರೀಟಿನ್	ಕಿರೀಡಿ.	ಕಿರೀಟಿ	ಪಂ.ಭಾ. ೧/೧೪೫
—	—	ಕೀರ್ತಿಗೆ	ಪಂ.ಭಾ. ೮/೪೨ ವ
ಕುಟ್ಟನೀ– ಕುಟ್ಟಿನೀ	ಕುಟ್ಟಿಣೀ	ಕುಂಟಿಣಿ	ಪಂ.ಭಾ. ೪/೯೮
?	?	ಕುಂತಳಿಕೆ	ಪಂ.ಭಾ. ೪/೮೭ ವ
ಕೂರ್ಪಾರ	ಕುಪ್ಪಾಸ	ಕುಪ್ಪಸ ಕುಪ್ಪುಸ.	ಪಂ.ಭಾ. ೯/೧೦೩ ಆ. ಪು ೧೧/೭೩
ಕುಲಿಂಗಿನ್	ಕುಲಿಂಗಿ	ಕುಲಿಂಗಿ	ಆ.ಪು. ೧೫/೩೮
ಕ್ರೂರ	ಕೂರ	ಕೂರ	ಆ.ಪು. ೧೧/೧೨೮
ಕೃತವರ್ಮನ್	ಕಯವಮ್ಮ	ಕೃತವರ್ಮ	ಪಂ.ಭಾ. ೧೩/೭೦ ವ
ಕೇತಕ. ಕೇತಕೀ	ಕೇಅಗ. ಕೇಡಗೀ	ಕೇದಗೆ	ಆ.ಪು. ೫/೩೬
ಕೇಶ	ಕೇಸ	ಕೇಸ	ಪಂ.ಭಾ. ೩/೭೦.
ಕೇವಲಿನ್	ಕೇವಲಿ.	ಕೇವಲಿ	ಆ.ಪು. ೧/೮೦ ವ
ಕೇಸರಿನ್	ಕೇಸರಿ	ಕೇಸರಿ.	ಪಂ.ಭಾ. ೧/೧೧೨ ವ
ಕೈತವ	ಕಇಯವ	ಕೈದವ	ಪಂ ಭಾ ೧೦/೪೫
ಕ್ರೌಂಚ	ಕೊಂಚ	ಕೊಂಚೆ	ಪಂ.ಭಾ. ೪/೮೭ ವ
ಕುಂತ	ಕೊಂತ	ಕೊರಿತ	ಆ.ಪು. ೧೫/೩ ವ
ಕುಂತೀ	ಕೊಂತೀ-೧	ಕೊಂತೀ	ಪಂ.ಭಾ ೧/೮೯ ವ
ಕೋಕಿಲ	ಕೋಇಲ, ಕೋಗಿಲ	ಕೋಗಿಲೆ	ಪಂ.ಭಾ ೧/೮
ಕೌಮಾರ	ಕೋಮಾರ	ಕೋಮರಯ್ಯ	ಪಂ.ಭಾ ೧೪/೪೬
ಕೌಪೀನ	ಕೋವೀಣ	ಕೋವಣ	ಪಂ.ಭಾ ೬/೮
ಕ್ರಮುಕ	ಕಮುಅ. ಕಮುಗ	ಕೌಂಗು	ಪಂ.ಭಾ ೨/೩೯ ವ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಗದಾ	ಗಯಾ	ಗದೆ	ಪಂ.ಭಾ. ೯/೫೨
ಖಡ್ಗಿನ್	ಖಗ್ಗಿ	ಖಡ್ಗಿ	ಆ.ಪು. ೪/೯೨
ಗಣಿತ	ಗಣಿಯ ಗಣಿದ	ಗಣಿದ	ಪಂ.ಭಾ. ೫/೨೬
ಗದ್ಯಾಣಕ	ಗಜ್ಜಾಣಅ	ಗದ್ಯಾಣ	ಪಂ.ಭಾ. ೬/೭೧
ಗಂಧಿನ್	ಗಂಧಿ	ಗಂಧಿ	ಪಂ.ಭಾ. ೧/೪೦ ವ
ಗಮಕಿನ್	ಗಮಣಿ	ಗಮಕಿ	ಪಂ.ಭಾ ೩/೮೦
ಘರ್ಮನ್	ಘಮ್ಮ	ಗರ್ಮ	—
ಗೃಹ	ಗಹ	ಗರ	ಪಂ.ಭಾ. ೧/೧೦೩
ಗರುತ್ಮನ್	?	ಗರುತ್ಮ	ಪಂ.ಭಾ ೧/೧೨೧
ಘಟಿಕಾ	ಘಡಿಆ	ಗಳಿಗೆ	ಆ.ಪು. ೧೧/೧೧೮
ಗಾಯನ	ಗಾಯಣ	ಗಾಣ	ಪಂ.ಭಾ. ೫/೫೮
ಗ್ರಾವನ್	ಗಾವ, ಗಾವಾಣ	ಗ್ರಾವ	ಪಂ.ಭಾ. ೨/೩೨
ಗ್ರಾವಿಲಾಣ	ಗಾವಿಲ	ಗಾವಿಲ	ಪಂ.ಭಾ. ೩/೧೭
ಗವ್ಯೂತ	ಗಾಉ ಗಾಉದ	ಗಾವುದು ಗಾವುದ	ಪಂ.ಭಾ ೮/೧೦೮ ವ ೧೦/೫೮
ಕುಬ್ಜ	ಖುಜ್ಜ	ಗುಜ್ಜ	ಪಂ.ಭಾ. ೪/೪೦
ಕುಟೀ	ಕುಡಿ	ಗುಡಿ	ಪಂ.ಭಾ. ೯/೧೦೪ ವ
ಕುಂಡಿಕಾ	ಕುಂಡಿಗಾ	ಗುಂಡಿಗೆ	ಆ.ಪು. ೫/೨೨ ವ
ಗುಟಿಕಾ	ಗುಡಿಆ, ಗುಲಿಆ, ಗುಲಿಗಾ	ಗುಳಿಗೆ	ಪಂ.ಭಾ ೭/೬೬
ಗೋಪೇಂದ್ರ	ಗೋವಿಂದ	ಗೊಜ್ಜಿಗ	ಪಂ.ಭಾ. ೯/೫೨ ವ
ಗೋಷ್ಠೀ	ಗೊಟ್ಠೀ	ಗೊಟ್ಟಿ	ಆ.ಪು. ೧೨/೨೦
ಗುಣ	ಗುಣ	ಗೊಣೆ	ಪಂ.ಭಾ. ೪/೩೬
ಗೋಪ	ಗೋವಅ ಗೋವ	ಗೋವ	ಪಂ.ಭಾ. ೬/೫೨
ಗೋಪಾಲ	ಗೋವಾಲ	ಗೋವಳ	ಪಂ.ಭಾ. ೮/೯೫ ವ
ಘೋಷಣಾ	ಘೋಸಣಾ	ಗೋಸನೆ	ಪಂ. ಭಾ. ೧೨/೫೨ ವ
ಚಕ್ರವರ್ತಿನ್	ಚಕ್ಕವಟ್ಟಿ	ಚಕ್ರವರ್ತಿ	ಪಂ. ಭಾ. ೪/೮೧
ಚಕ್ರಿ	ಚಕ್ಕಿ	ಚಕ್ಕಿ	ಆ. ಪು. ೧/೭
ಚತ್ವರ	ಚಚ್ಚರ	ಚಚ್ಚರ; ಚೆಚ್ಚರ	ಪಂ. ಭಾ. ೪/೩೪ ೧೧/೫೧
ಛಾತ್ರ	ಛತ್ತ, ಚಟ್ಟ	ಚಟ್ಟ	ಪಂ. ಭಾ. ೨/೩೪

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಚತುರ	ಚದುರ	ಚದುರ್–ಚದುರ	ಪಂ. ಭಾ. ೧/೧೩೨ ವ. ೫/೪೫
ಚತುರಂಗ	ಚದುರಂಗ ಚಉರಂಗ	ಚದುರಂಗ	ಪಂ. ಭಾ. ೧೧/೭೦
ಚಮತ್ಕಾರಿನ್	ಚಮುಕ್ಕಾರಿ	ಚಮತ್ಕಾರಿ	ಅ. ಪು ೧೩/೪೫
ಚರ್ಮಯಷ್ಟಿ	ಚಮ್ಮಟ್ಠಿ	ಚಮ್ಮಟಿಗೆ	ಪಂ. ಭಾ. ೮/೫೪ ವ
ಚರ್ಮನ್	ಚಮ್ಮ	ಚರ್ಮ	ಅ. ಪು. ೧೧/೩ ವ
ಚರ್ಯಾ	ಚರಿಯಾ	ಚರಿಗೆ	ಅ. ಪು. ೫/೭
ಚರಣ	ಚಲಣ	ಚಳಣ	ಪಂ. ಭಾ. ೧೦/೬೦
ಛಲ	ಛಲ	ಚಲ	ಅ. ಪು. ೪/೨೭
ತ್ಯಾಗ	ಚಾಯ, ಚಾಗ	ಚಾಗ	ಪಂ. ಭಾ. ೧/೨೯
ತ್ಯಾಗಿನ್	ಚಾಇ	ಚಾಗಿ	ಪಂ. ಭಾ. ೧/೧೦೨
ಚಾತಕ	ಚಾಯಗ, ಚಾದಗ	ಚಾದಗೆ ಚಾದಗ	ಅ. ಪು. ೯/೧೦೯ ೧೨/೩೨
ಚಿತ್ರಕಾರಿನ್	ಚಿತ್ತಯಾರಿ	ಚಿತ್ತಾರಿ	ಪಂ. ಭಾ. ೨/೩೯
ಚಿತ್ರಾ	ಚಿತ್ತಾ	ಚಿತ್ತೆ	ಅ. ಪು. ೧೪/೧೪೭
ಚತುಷ್ಕ	ಚಉಕ್ಕ	ಚೌಕ	ಪಂ. ಭಾ. ೩/೭೪ ವ
?	?	ಚೌತ	ಅ. ಪು. ೧೧/೧೧೫
ಚತುಷ್ಪಥಿಕಾ	ಚಉಪ್ಪಡಿಗಾ	ಚೌಪಳಿಗೆ	ಪಂ. ಭಾ. ೨/೬೬
ಯಕ್ಷ	ಜಕ್ಖ	ಜಕ್ಕ	ಪಂ. ಭಾ. ೬/೩೨ ವ
ಚಕ್ರಪಕ್ಷಿನ್	ಚಕ್ಕವಕ್ಖಿ	ಜಕ್ಕವಕ್ಕಿ	ಪಂ. ಭಾ. ೪/೪೮
ಜಗತ್	ಜಗ, ಜಯ	ಜಗ	ಅ. ಪು. ೧/೧೬
ಜಘನ	ಜಘನ	ಜಗನ	ಪಂ. ಭಾ. ೪/೬೭
ಯಮುನಾ	ಜಉಣಾ, ಜಉಣ	ಜಗುನೆ	ಪಂ. ಭಾ. ೧/೬೮ ವ
ಯಂತ್ರ	ಜಂತ	ಜಂತ್ರ	ಪಂ. ಭಾ. ೩/೩೨ ವ
ಜಟಾ	ಜಡ, ಜಡಾ	ಜಡೆ, ಜೆಡೆ	ಪಂ. ಭಾ. ೧/೧೦೫ ಅ. ಪು. ೮/೩೯
ಯಮ ?	ಜಮ	ಜಂತೆ	ಪಂ. ಭಾ. ೩/೭೪ ವ
—	—	ಜತ್ತಪಟ್ಟ	ಅ. ಪು. ೭/೧೨೫
ಯಜ್ಞೋಪವೀತ	ಜಣ್ಣೋವಈಯ, ಜಣ್ಣೋವವೀಯ,	ಜನ್ನವಿರ	ಪಂ. ಭಾ. ೨/೯೭ ವ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಜನ್ಮನ್	ಜಮ್ಮ	ಜನ್ಮ	ಆ. ಪು. ೩/೧೭ ವ
ಝುರಿ ?	?	ಜರಿ ?	ಪಂ.ಭಾ. ೩/೨೨
ಜ್ವಲಜ್ವಲ ?	?	ಜಲಜಲ	ಪಂ.ಭಾ. ೧/೫೨
ಯಮು	ಜಮು	ಜವ	ಪಂ.ಭಾ. ೧/೧೩೯ವ
ಯವನಿಕಾ	ಜವಣಿಆ	ಜವನಿಕೆ	ಆ.ಪು. ೯/೨೦
ಯೌವನ	ಜೊವ್ವಣ, ಜೋಅಣ	ಜವ್ವನ ಜೌವನ	ಪಂ.ಭಾ. ೧/೭೬ವ ಆ.ಪು. ೨/೩೫
ಯಶಸ್	ಜಸ	ಜಸ	ಪಂ.ಭಾ. ೧/೨
ಜಾನಕೀ ?		ಜಾಕವ್ವೆ	ಪಂ.ಭಾ. ೧/೩೯
ಜಲಾದ್ರ್ಯ	ಜಲದ್ದಾ	ಜಳದೆ	ಆ.ಪು. ೨/೧೪
ಜ್ಞಾನ	ಜಾಣ	ಜಾಣ್ ಜಾಣ	ಪಂ.ಭಾ. ೨/೩೪ ಆಪು. ೩/೯೧
ಜಾತಿ	ಜಾಇ, ಜಾದಿ	ಜಾದಿ	ಪಂ.ಭಾ. ೭/೬೯
ಧ್ಯಾನ	ಝಾಣ	ಜಾಸ	ಪಂ.ಭಾ. ೧/೧೧೯
ಜ್ಞಾನಿನ್	ಜಾಣಿ	ಜ್ಞಾನಿ	ಆ.ಪು. ೨/೧೪ವ
ಯಾಮು	ಜಾಮು	ಜಾವ.	ಪಂ.ಭಾ. ೧/೧೩೯ವ
ಯಾಯಿನ್	ಜಾಇ	ಜಾಯಿಲ	ಆ.ಪು. ೧೧/೩೧
ಝುಲ್ಲರೀ	ಝುಲ್ಲರೀ	ಜಾಳರಿಗೆ	ಪಂ.ಭಾ. ೩/೭೪ವ
ಜಲೂಕಾ	ಜಲೂಗಾ	ಜಿಗುಳೆ	ಪಂ.ಭಾ. ೧/೪೬
ದ್ಯೂತ	ಜೂಅ	ಜೂದು	ಪಂ.ಭಾ. ೬/೭೧
ಜೀವಿನ್	ಜೀವಿ	ಜೀವಿ	ಆ.ಪು. ೫/೪೧ವ
ಯೋಕ್ತ್ರ, ಯೋಕ್ತ್ರಕ	ಜೊತ್ತ, ಜೊತ್ತಯು	ಜೊತ್ತಿಸು	ಪಂ.ಭಾ. ೫/೫೯
ಜುಡ್ ?	—	ಜೋಡು ಜೋಡೆ	ಪಂ.ಭಾ ೯/೨೪ ೯/೮೧ವ
ಜ್ಯೋತಿಸ್	ಜೋಇ	ಜ್ಯೋತಿ	ಆ.ಪು. ೧/೪
ಯೋಧ	ಜೋಹ	ಜೋದ	ಪಂ.ಭಾ. ೧೦/೯೨
ಯಾವನಾಳ	ಜೊಣ್ಣವಿಅ.		
	ಜವಣಾಳ	ಜೋಳ	ಪಂ.ಭಾ. ೯/೮೪
ಸ್ತಗ ?	ಡಗ, ಡಂಬಿ ?	ಟಕ್ಕು	ಪಂ.ಭಾ. ೯/೨೨
ಸ್ಥಾನ	ಠಾಣ	ಠಾಣ	ಆ.ಪು. ೧೧/೯೪

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ತಟೀ	ತಡೀ	ತಡಿ	ಪಂ.ಭಾ. ೧/೬೮ವ
ತಪಸ್	ತವ	ತಪ	ಆ.ಪು. ೧/೫೩
ತಂತ್ರೀ	ತಂತೀ	ತಂತಿ	ಪಂ.ಭಾ. ೬/೧೦
ತಪಸ್ವಿನ್	ತವಸಿ. ತಪಸ್ಸಿ	ತವಸಿ ತಪಸ್ವಿ	ಪಂ ಭಾ. ೧/೧೧೩
			ಆಪು. ೨/೪೦
ತಾಂಬೂಲ	ತಂಬೋಲ	ತಂಬುಲ	ಪಂ.ಭಾ. ೩/೭೯ವ
ತನುಸ್	ತನು	ತನು	ಆ.ಪು. ೧/೧೬
ತ್ವರ	ತರ	ತರತರ	ಪಂ.ಭಾ. ೭/೩೮ ವ
ಸ್ತರಸ್ತರ (ಸ್ತೃ) ?	ಥರಥರ	ತರಂತರ	ಆ.ಪು. ೬/೧೦೬
ಸ್ಥಾಲಿಕಾ	ಥಾಲಿಯಾ (ಗಾ.)	ತಳಿಗೆ	ಪಂ.ಭಾ. ೪/೩೪ ವ
	ಥಲ್ಲಿಯಾ		ಪಂ.ಭಾ. ೪/೩೪ ವ
ಸ್ಥಾನ —	ಥಾಣ	ತಾಣ	ಪಂ.ಭಾ. ೨/೯೬ ವ
ತಾರಕಾ	ತಾರಗಾ	ತಾರಗೆ	ಪಂ.ಭಾ. ೮/೧೫
ತಾಲಾವರ್ತ	ತಾಲಾವಚ್ಚ	ತಾಳವಟ್ಟ	ಪಂ.ಭಾ. ೧೨/೧೩೫ ವ
ತಾಲು(ಕಾ)	ತಾಲು (ಗಾ).	ತಾಳುಗೆ	ಆ.ಪು. ೧೨/೨೯
ತಿರ್ಯಕ್-ಚ್	ತಿರಿಕ್ಖ-ತಿರಿಚ್ಛ	ತಿರಿಕ	ಆ.ಪು. ೫/೨೭ ವ
ತ್ರಿಸರಕ	ತಿಸರಯ	ತಿಸರ	ಪಂ.ಭಾ. ೩/೨೨
ತ್ರಿಶೂಲ	ತಿಸೂಲ	ತಿಸುಳ	ಪಂ.ಭಾ. ೧/೬
ತ್ವರಿತ	ತುರಿಅ.	ತುರಿಪ	ಪಂ.ಭಾ. ೫/೮
ತೇಜಸ್	ತೇಅ	ತೇಜ	ಆ.ಪು. ೧೪೭೮
ತೇಜಸ್ವಿನ್	ತೇಅಂಸಿ ತೇಅಸ್ಸಿ	ತೇಜಸ್ವಿ	ಆ.ಪು. ೬/೨೪ ವ
ತೇಜೋವತ್	ತೇಅವಂತ	ತೇಜೋವಂತ	ಪಂ.ಭಾ. ೪/೧೮
ದಂಡಿಕಾ	ದಂಡಿಆ (ಗಾ)	ದಂಡಿಗೆ	ಪಂ.ಭಾ. ೯/೧೦೪ ವ
ದಂತಿನ್	ದಂತಿ	ದಂತಿ	ಪಂ.ಭಾ. ೧/೪೩
ದ್ವಸಿ	ದಸಿ ಧುಸಿ ಝುಸಿ	ದಸಿ	ಆ.ಪು. ೪/೯
ದಂಷ್ಟ್ರಾ	ದಾಢಾ	ದಾಡೆ	ಪಂ.ಭಾ. ೩/೧೩
ಧಾತ್ರೀ	ಧತ್ತೀ ಧಾಈ, ಧಾವೀ	ದಾದಿ	ಪಂ.ಭಾ ೪/೫೯ ವ
ದಾಮನ್	ದಾಮ	ದಾಮ	ಪಂ.ಭಾ. ೪/೪೩ ವ
ದಾಯುಕ	ದಾಯುಗ	ದಾಯುಗ	ಪಂ. ಭಾ. ೨/೯೧

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಜಪಾಸುಮನಸ್	ಜಾಸುಮಣ, ಜಾಸು-ವಿಣ? ದಾಸವಣ, ಜಾಸುಯಣ		ಪಂ. ಭಾ. ೧೧/೧೪೦ ವ
ದೃಷ್ಟಿ	ದಿಟ್ಠಿ	ದಿಟ್ಟಿ	ಆ. ಪು. ೩/೯೦
ದಿವ್ಯ	ದಿವ್ವ	ದಿಬ್ಯ	ಪಂ. ಭಾ ೦/೭೦
ದೀಪಾವಲೀ	ದೀವಾವಲೀ	ದೀವಳಿಗೆ	ಪಂ. ಭಾ. ೪/೯೩
ದೀಪಿಕಾ	ದೀವಿ ಅ(ಗಾ).	ದೀವಿಗೆ	ಪಂ. ಭಾ. ೨/೮೭ ವ
ದುಕೂಲ	ದುಅಲ್ಲ, ದುಲುಲ್ಲಕ ದುಗುಲ್ಲ	ದುಗುಲ	ಆ. ಪು. ೪/೩೬
ದ್ವಿಸರಕ	ದುಸರಯ	ದುಸರ	ಆ. ಪು. ೫/೩೩
ದುರ್ಯೋಧನ	ದುಜ್ಜೋಹಣ	ದುಜ್ಜೋಧನ	ಪಂ. ಭಾ. ೭/೧೯
ದುರ್ವಾಸಸ್	ದುವ್ವಾಸ	ದುರ್ವಾಸ	ಪಂ. ಭಾ, ೧/೮೯
ದೂತ	ದೂಅ, ದೂದ	ದೂದ ದೂದವ	ಪಂ. ಭಾ. ೪/೧೦೨ ೪/೮೧ ವ
ದೂತೀ	ದೂಈ, ದೂದೀ	ದೂದವಿ.	ಪಂ. ಭಾ. ೪/೮೧ ವ
ದೈವ	ದಇವ ದಇವ್ವ	ದೆಯ್ವ	ಪಂ. ಭಾ. ೨/೧೧.
ದಿವಸ	ದಿಅಸ	ದಿವಸ.	ಪಂ. ಭಾ. ೧/೭೬ ವ
ದಿಶಾ	ದಿಸಾ.	ದೆಸೆ	ಆ. ಪು. ೨/೧೦
ದೇವಕುಲ.	ದೇಲಲು, ದೇಗುಲ	ದೇಗುಲ	ಪಂ. ಭಾ. ೮/೯೫
ದೇಶ್ಯ	ದೇಸಿಅ	ದೇಸಿ ದೇಸೆ.	ಪಂ. ಭಾ. ೧/೮ ಆ. ಪು. ೨/೭೦
ದೋಷ	ದೋಸ.	ದೋಸ.	ಪಂ. ಭಾ. ೩/೬೫
ದೋಹದ	ದೋಹಲ.	ದೋಹಳ	ಪಂ. ಭಾ. ೧/೧೪೨
ದೌಷ್ಯಂತಿ	—	ದೌಷ್ಯಂತಿ	ಪಂ. ಭಾ. ೧/೬೨
ಧಾತೃ	ಧಾಉ	ಧಾತ್ರ	ಆ. ಪು. ೪/೧೮
ನರ್ತಕ.	ಣಟ್ಟಿಅ–ಣಟ್ಟಿಗ.	ನಟ್ಟುವ	ಆ. ಪು. ೪/೧೫
—	—	ನರಗ?	ಪಂ. ಭಾ. ೧/೩೬
ನರಸಿಂಹ	ಣರಸಿಂಘ	ನರಸಿಂಗ	ಪಂ. ಭಾ. ೧/೨೩
ನನಾಂದೃ	ಣಣಂದಾ.	ನಾದುನಿ	ಪಂ. ಭಾ. ೪/೯೮
ನಾಮನ್	ಣಾಮ.	ನಾಮ	ಪಂ. ಭಾ. ೧/೫೧ ವ
ನಾರಸಿಂಹ	ಣಾರಸಿಂಘ	ನಾರಸಿಂಗ	ಪಂ. ಭಾ. ೧೨/೧೫೨ ವ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ನಾ	ಣಾವಾ	ನಾವೆ.	ಆ.ಪು. ೭/೧೦೯
ನಿಗಡ	ಣಿಗಡ ಣಿಗಲ	ನಿಗಳ	ಪಂ.ಭಾ. ೪/೧೨
ನಿತ್ಯ	ಣಿಚ್ಚ	ನಿಚ್ಚ	ಆ.ಪು. ೧/೨೬
ನಿಃಶ್ರೇಣೀ	ಣಿ ಸೇಣಿ	ನಿಚ್ಚಣಿಗೆ	ಆ. ಪು. ೨/೩೧
ನಿಶ್ಚಲ	ನಿಚ್ಚಟ	ನಿಚ್ಚಟ	ಪಂ.ಭಾ. ೧೧/೬೫
ನಿಷ್ಠಾ	ನಿಟ್ಠಾ	ನಿಟ್ಟ. ನಿಟ್ಟೆ	ಆ.ಪು. ೪/೫೪ ವ ಪಂಭಾ. ೬/೭೧
ನಿಸ್ತರ	ಣಿತ್ತರ	ನಿತ್ತರಿಸು.	ಪಂ.ಭಾ. ೩/೭೧.
ನಿದ್ರಾ	ಣಿದ್ದಾ	ನಿದ್ದೆ	ಪಂ.ಭಾ. ೧/೧೩೬
ನಿಸ್ಪೃಷ್ಟ	ಣಿಪ್ಪಟ್ಠ	ನಿಪ್ಪಟ.	ಆ.ಪು ೮/೬೨
ನಿರಪೇಕ್ಷ	ಣಿರವ–ಇ–ಕ್ಖ	ನಿರಾಪೇಕ್ಷ	ಪಂ.ಭಾ. ೧೩/೧೩೬
ನಿರುದ್ಯೋಗಿನ್	ನಿರುಜ್ಜುಗಿ	ನಿರುದ್ಯೋಗಿ	ಪಂ.ಭಾ. ೪/೧೧
ನಿಯೋಗಿನ್	ಣಿ ಓಗಿ.	ನಿ ಯೋಗಿ.	ಪಂ.ಭಾ. ೫/೬೭ ವ
ನಿಬರ್ಂಧ	ಣಿಬ್ಬಂಧ	ನಿರ್ವಂದ	ಪಂ.ಭಾ. ೮/೩೨ ವ
ನಿಷಾದಿನ್	ಣಿಸಾಇ, ಣಿಸಾದಿ.	ನಿಷಾದಿ	ಪಂ.ಭಾ. ೧೦/೯೨
ನಿಷೇಕ	ಣಿಸೇಯ	ನಿಸೇಕ	ಪಂ.ಭಾ. ೯/೪೯
ಯುಗ	ಜುಗ	ನೊಗ	ಪಂ. ಭಾ. ೧೦/೯೧
ಪಕ್ಷ	ಪಕ್ಖ	ಪಕ್ಕ	ಪಂ. ಭಾ. ೧/೧೪೮ ವ
ಪಕ್ಷರಕ್ಷಾ	ಪಕ್ಖರಕ್ಖಾ	ಪಕ್ಕರೆ	ಪಂ. ಭಾ. ೩/೬೭
ಪಕ್ಷ್ಮನ್	ಪಹ್ಮ	ಪಕ್ಷ್ಮ	ಆ. ಪು. ೩/೨೦
ಪಕ್ಷಿನ್	ಪಕಿ	ಪಕ್ಕಿ ಪಕ್ಷಿ	ಆ. ಪು. ೧೧/೪೮ ೧೧/೮೨
ಪಕ್ಷ	ಪಕ್ಖ	ಪಕ್ಸ್ಯ	ಪಂ. ಭಾ. ೪/೧೨
ಪಕ್ಷಪಾತಿನ್	ಪಕ್ಖವಾಇ(ಲ್ಲಿ)	ಪಕ್ಷಪಾತಿ	ಪಂ. ಭಾ. ೯/೨೭
ಪ್ರಕರಣ	ಪಗರಣ	ಪಗಕರಣ	ಆ. ಪು. ೧೭/೯೮
ಪ್ರಜ್ಜ್ವಲ	ಪಜ್ಜಲ	ಪಜ್ಜಳ	ಪಂ. ಭಾ. ೧೦/೭೬
ಪದ್ಯಾ	ಪಜಾ	ಪಜ್ಜೆ	ಪಂ. ಭಾ. ೫/೪೩
ಪಟ್ಟ ಶಾಲಾ	ಪಟ್ಟ ಸಾಲಾ	ಪಟ್ಟ ಸಾಲೆ	ಆ. ಪು. ೩/೪೫ ವ
ಪಟವಿದ್ಧ	ಪಡವಿಜ್ಝಾ	ಪಟ್ಟವಿದ್ದೆ	ಪಂ. ಭಾ. ೪/೮೧
ಪತನ	ಪಡಣ	ಪಡಣ	ಪಂ. ಭಾ. ೪/೫೧

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಪಟಲಕ	ಪಡಲಯೆ, ಪಡಲಗ	ಪಡಲಗೆ ಪಡಲಿಗೆ	ಆ. ಪು೪/೩೦.
			ಪಂ. ಭಾ. ೫/೬೭ ವ
ಪತದ್ಗ್ರಹ,	ಪಡಿಗ್ಗಹ	ಪಡಿಗ	ಪಂ. ಭಾ. ೪/೪೩ ವ
ಪ್ರತಿಗ್ರಹ			
ಪ್ರತಿಚ್ಛಂದ	ಪಡಿಚ್ಛಂದ	ಪಡಿಚಂದ	ಪಂ. ಭಾ. ೧೨/೪೧
ಪ್ರತೀಹಾರ	ಪಡಿಹಾರ	ಪಡಿಯಱ	ಆ. ಪು. ೧೧/೧೩೧
ಪ್ರತೀಕ್ಷಣ	ಪಡಿಕ್ಖಣ	ಪಡಿಸಣ	ಆ. ಪು. ೭/೨೧ ವ
ಪತತ್ರಿನ್	—	ಪತತ್ರಿ	ಪಂ. ಭಾ. ೧೦/೮೭
ಪತ್ರಿಕಾ	ಪತ್ತಿಆ	ಪತ್ತಳೆ	ಪಂ. ಭಾ. ೭/೩೬
ಪ್ರತಾಪಿನ್	ಪಯಾವಿ	ಪ್ರತಾಪಿ	ಪಂ. ಭಾ. ೧/೭೩ ವ
ಪತ್ರಿನ್	ಪತ್ತಿ	ಪತ್ರಿ	ಪಂ. ಭಾ. ೧೧/೪೩ ವ
ಪದ್ಮ	ಪಉಮ, ಪದುಮ	ಪದುಮ	ಪಂ. ಭಾ. ೨/೧೧೫ ವ
ಪ್ರಯಾಣ	ಪಯಣ	ಪಯಣ	ಪಂ. ಭಾ. ೨/೯೬ ವ
ಪರೀಕ್ಷಾ	ಪರಿಕ್ಖಾ	ಪರಿಕಿಸು	ಪಂ. ಭಾ. ೮/೬೦
ಪರಿಚಯ	ಪರಿಯಯ	ಪರಿಜೆ ?	ಆ. ಪು. ೪/೪೧ ವ
ಸ್ಪರ್ಶ	ಪರಸ	ಪರುಸ	ಪಂ. ಭಾ. ೧/೨೮
ಫಲಕ	ಫಲಿಗ	ಪಲಗೆ	ಆ. ಪು. ೪/೬೩ ವ
ಪರ್ಯಾಣ	ಪಲ್ಲಾಣ	ಪಲ್ಲಣ	ಪಂ. ಭಾ. ೧೩/೩೩
ಪ್ರಮಾಣ	ಪಮಾಣ	ಪವಣ್	ಪಂ. ಭಾ. ೭/೨೧
ಪ್ರವಾಲ	ಪವಾಲ	ಪವಳ	ಪಂ. ಭಾ. ೨/೨೯ ವ
ಪ್ರಸಾಧನ	ಪಸಾಹಣ	ಪಸದನ	ಪಂ. ಭಾ. ೧/೧೩೭
ಪ್ರಸರ	ಪಸರ	ಪಸರ	ಪಂ. ಭಾ. ೧/೭೫
ಪ್ರಸಾದ	ಪಸಾಯ	ಪಸಾದ ಪಸಾಯ	ಪಂ. ಭಾ. ೬/೧೬
			ಆ. ಪು. ೧೦/೨೭
ಪಶು	ಪಸು	ಪಸು	ಪಂ. ಭಾ. ೭/೫೮
ಫಲ	ಫಲ	ಪಳ	ಆ. ಪು. ೧೧/೯೭
ಫಲಬದ್ಧ	ಫಲಬದ್ಧ	ಪಲಬದ್ಧ	ಪಂ. ಭಾ. ೯/೯೫ ವ
ಪ್ರಲಾಪ	ಪಲಾವ	ಪಳಯಿಸು	ಪಂ. ಭಾ. ೨/೨೨ ವ
ಪತಾಕಿಕಾ	ಪಡಾಇಆ	ಪಱ(ೞ)ಯಿಗೆ,	ಆ. ಪು. ೩/೯೧
		ಪವಿವಿಗೆ	ಪಂ. ಭಾ. ೩/೪೦ ವ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಪಟಿ	ಪಡೆ	ಪಟಿ	ಪಂ. ಭಾ. ೩/೪೦ ವ
ಸ್ಫಟಿಕ	ಫಲಹ	ಪಳಿಕು, ಪಳುಕು	ಆ.ಪು. ೪/೩೪ ವ ೪/೩೧
		ಪಳ್ಕು	ಪಂ.ಭಾ. ೪/೩೯ ವ
ಪ್ರಾಭೃತ	ಪಾಹುಡ	ಪಾಗುಡ	ಪಂ.ಭಾ. ೯/೯೫ ವ
ಪ್ರತಿಪದ್	ಪಾಡಿವಯಾ	ಪಾಡಿವ	ಪಂ.ಭಾ. ೨/೨೩ ವ
ಪಾರದಾರಿಕ	ಪಾರದಾರಿಯ	ಪಾರದರ	ಪಂ.ಭಾ. ೮/೪೧
ಪಾರಾಪತ	ಪಾರೇವಯ	ಪಾರಿವ	ಪಂ.ಭಾ. ೯/೧೦೩
ಪಾದುಕಾ	ಪಾಉಆ, ಪಾ ಉಗಾ	ಪಾವುಗೆ	ಆ.ಪು. ೧೫/೩ ವ
ಪಾಶಕ	ಪಾಸಗ	ಪಾಸಗೆ ಪಾಸಂಗೆ	ಪಂ.ಭಾ. ೬/೬೮ವ ೭೧ವ
ಪಾಶ	ಪಾಸ	ಪಾಸು	ಆ.ಪು. ೫/೭೦
—	—	ಪುಚ್ಚವಣ ?	ಪಂ.ಭಾ. ೧/೯೦
ಪಿತೃ	ಪಿಯುರ	ಪಿತರ	ಪಂ.ಭಾ. ೭/೩೩ ವ
ಪೂರ್ವ	ಪುಬ್ಬ	ಪುಬ್ಬ	ಆ.ಪು. ೧/೫೨
ಪುಟಿಕಾ	ಪುಡಿಯಾ	ಪುಡಿ	ಪಂ.ಭಾ. ೪/೮೭
ಪುರೂರವಸ್	ಪುರೂರವ	ಪುರೂರವ	ಪಂ.ಭಾ. ೭/೧೬
ಪೂರಕ	ಪೂರಗ	ಪೂರಿಗೆ	ಆ.ಪು. ೫/೧೯
ಪೇಟಿಕಾ	ಪೇಡಿಅ	ಪೇಳಿಗೆ ಪೇಟಿಗೆ	ಪಂ.ಭಾ. ೮/೫೩ ವ ೧೨/೫೬ ವ
ಪೃಥಿವೀ	ಪುಢವೀ	ಪೊಡವಿ	ಪಂ.ಭಾ. ೪/೬
ಪುಸ್ತಕ	ಪೊತ್ಥಗ	ಪೊತ್ತಗೆ	ಪಂ.ಭಾ. ೧೧/೪೬
ಫಣಿನ್	ಫಣಿ	ಫಣಿ	ಪಂ.ಭಾ. ೧/೨
ವೈಶ್ಯ	ವೆಸ್ಸ	ಬಚ್ಚ	ಪಂ.ಭಾ. ೧/೫೮
—	—	ಬಚ್ಚೆ	ಪಂ.ಭಾ ೧೪/೫೬
ವೃತ್ತ	ವಟ್ಟ	ಬಟ್ಟ, ಬಟ್ಟು ೩	ಪಂ.ಭಾ. ೧/೧೦೮ ೧೧/೯೩ ವ
—	—	ಬಂಜಿಸು ?	೧೩/೫೩
ವರ್ತುಲ	ವಟ್ಟುಲ	ಬಟ್ಟಲು	ಆಪು. ೧೧/೧೧೩
ವೃತ್ತಿಕಾ ಫಲಕ	ವಟ್ಟಿಗಾ ಫಲಗ ?	ಬಟ್ಟಿಗೆ ಪಲಗೆ	ಆಪು. ೪/೬೩ವ
ವರ್ತ್ಮ	ವಟ್ಟ	ಬಟ್ಟೆ	ಆ.ಪು. ೧/೧೮
ವರ್ಧನ	ವಡ್ಢಣ	ಬಡ್ದಿಸು	ಆ.ಪು. ೭/೩೧

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಭಂಡಣ	ಭಂಡಣ	ಬಂಡಣ	ಪಂ ಭಾ. ೧/೭೬
ವರ್ಣ	ವಣ್ಣ	ಬಣ್ಣ	ಪಂ.ಭಾ. ೧/೧೧೫ ವ
ವರ್ಣ ವರ್ಣಿಕಾ	ವಣ್ಣ ವಣ್ಣಿಆ (ಗಾ)	ಬಣ್ಣ ವಣ್ಣಿಗೆ	ಆಪು. ೪/೩೪ವ
ವರ್ಣಪೂರ	ವಣ್ಣಉರ	ಬಣ್ಣವುರ	ಪಂ.ಭಾ. ೭/೨೪
ವರ್ಣಶರ	ವಣ್ಣಸರ	ಬಣ್ಣಸರ	ಆಪು. ೯/೩೧
ವರ್ಧಮಾನ	ವಡ್ಢಮಾನ	ಬದ್ದವಣ	ಆಪು. ೭/೭೩
ಬಂಧಿನ್	ಬಂಧಿ	ಬಂಧಿ	ಪಂ.ಭಾ. ೬/೭೨ವ
ಭದ್ರಿಕ	ಭದ್ದಿಗ	ಬದ್ದೆಗ	ಪಂ.ಭಾ. ೧/೨೩
ಭಗ್ನ	ಭಗ್ಗ	ಬನ್ನ	ಪಂ.ಭಾ. ೧/೮೧
ವಪ್ತೃ	ಬಪ್ಪೋ	ಬಪ್ಪುವ	ಪಂ.ಭಾ. ೯/೫೨ವ
ವರ್ಷ	ವರಿಸ	ಬರಿಸ	ಆಪು. ೧/೪೨
ಭ್ರಮರ	ಬಮರ	ಬವರ	ಆಪು. ೧೧/೧೪೧
ವಲ್ಲಭ	ವಲ್ಲಹ	ಬಲ್ಲಹ	ಪಂ ಭಾ. ೧೪/೫೫
ವಶ	ವಸ	ಬಸ	ಪಂಭಾ. ೧/೮೦
ವಸತಿ	ವಸಇ ವಸಧಿ	ಬಸದಿ	ಆಪು. ೧/೬೬
ವ್ಯಸನ	ವಸಣ	ಬಸನ	ಪಂ.ಭಾ. ೪/೯೨
ವ್ಯಸನಿನ್	ವಸಣಿ	ಬಸನಿ	ಆಪು. ೧೧/೯೮
ಬ್ರಹ್ಮನ್	ಬಮ್ಹ	ಬ್ರಹ್ಮ	ಪಂ.ಭಾ. ೧/೫೯
ಭಾಗ	ಭಾಅ	ಬಾಗ	ಪಂ.ಭಾ. ೧೪/೬
ವಾದ್ಯ	ವಾಇಅ ವಜ್ಜ	ಬಾಜಿಸು	ಪಂ.ಭಾ.೧/೧೩೩ ವ
ವಾಚನ	ವಾಯಣ	ಬಾಚಿಸು	ಆಪು. ೪/೮೬
ವಾಟ	ವಾಡ	ಬಾಡ	ಪಂ.ಭಾ.೨/೫೩
ಮಹಾನಸ	ಮಹಾಣಸ	ಬಾಣಸ	ಪಂ.ಭಾ. ೫/೪೭ ವ
ವಾದ	ವಾಯ	ಬಾದು	ಪಂ.ಭಾಂ. ೬/೧೩
ವಾಪೀ	ವಾವೀ	ಬಾವಿ	ಪಂ.ಭಾ ೪/೧೦
—	—	ಬಾಸಿಗ ಬಾಸಿಂಗ	ಪಂ.ಭಾ. ೩/೯೫ ಆಪು-೧/೭೫
ಭಾಷಾ	ಬಾಸೆ	ಬಾಸೆ	
ಬಾಹಿರಿಕ	ಬಾಹಿರಿಯ	ಬಾಹಿಗೆ	ಪಂ. ಭಾ. ೭/೨೦ ವ
ವಿಸ್ತೃತ	ವಿತ್ಥಡ, ವಿತ್ಥಾಯ	ಬಿಚ್ಚಳಿಸು, ಬಿಚ್ಚಲಿಸು	ಪಂ. ಭಾ. ೧೧/೪೩ ೧/೧೧
		ಬಿಚ್ಚತ	ಪಂ. ಭಾ. ೫/೩೨

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
—	—	ಬಿಜ್ಜ ?	ಪಂ. ಭಾ. ೧೧/೬೧
ವ್ಯಜನ	ವೀಅಣ	ಬಿಜ್ಜಣಿಗೆ	ಆ. ಪು. ೧/೭೫
ವಿದ್ಯಾ	ವಿಜ್ಜಾ	ಬಿಜ್ಜೆ	ಆ. ಪು ೯/೭೫
ವಿಷ್ಟಿ	ವಿಟ್ಠಿ	ಬಿಟ್ಟಿ	ಪಂ. ಭಾ. ೬/೩೦
ವಿಸ್ತರ	ವಿತ್ಥರ	ಬಿತ್ತರ	ಪಂ. ಭಾ. ೩/೨
ವಿಷ್ಟರ	ವಿತ್ಥರ	ಬಿತ್ತರಿಗೆ	ಪಂ. ಭಾ. ೪/೨೪
ವಿಧಿ	ವಿಹಿ	ಬಿದಿ	ಆ. ಪು. ೧/೮೨
ವಿಧು	ವಿಹು	ಬಿದು	ಪಂ. ಭಾ. ೧೦/೧೦೩
ದ್ವಿತೀಯಾ	ಬೀಅ	ಬಿದಿಗೆ	ಆ. ಪು. ೭/೩೨ ವ
ವಿದ್ ವಿದ್ಯಾ	ವಿಜ್ಜ ವಿಜ್ಜಾ	ಬಿತ್ತಿಗ	ಪಂ. ಭಾ. ೧೦/೭೩
ವಿನೋದ	ವಿಣೋಅ	ಬಿಸದ	ಪಂ. ಭಾ. ೨/೯೪
ಭಿನ್ನ	ಭಿನ್ನ	ಬಿನ್ನ	ಆ. ಪು. ೩/೩ವ
ವಿಜ್ಞಾನ	ವಿಣ್ಣಾಣ, ವಿನ್ನಾಣ	ಬಿನ್ನಣ, ಬಿನ್ನಾಣ	ಪಂ. ಭಾ. ೮/೫೪
			೮/೫೩ವ
ವಿಜ್ಞಾಪನಾ	ವಿಣ್ಣಾವಣಾ	ಬಿನ್ನಪ	ಪಂ. ಭಾ. ೫/೪೦ವ
ವ್ಯಯ	ವಯ	ಬಿಯ	ಪಂ. ಭಾ. ೧/೪೮
ವಿರಹಿನ್	ವಿರಹಿ	ಬಿರಯಿ	ಪಂ. ಭಾ. ೨/೧೩
ವಿಸ್ಮಾಪನ	ವಿಸ್ಮಾವಣ	ಬಿಸವಂದ	ಪಂ. ಭಾ. ೬/೩
ವೀಥಿ ವೀಥೀ	ವೀಹಿ, ವೀಹೀ	ಬೀದಿ	ಪಂ. ಭಾ. ૩/೯೪
ಬುದ್ಧಿಮತ್	ಬುದ್ಧಿವಂತ	ಬುದ್ಧಿವಂತ	ಪಂ. ಭಾ. ೧/೪೫
ಭೂತಿ	ಭೂಇ, ಭೂದಿ	ಬೂದಿ	ಪಂ. ಭಾ. ೭/೭೪
ಬೃಹನ್ನಲಾ	ಬಿಹಣ್ಣಲಾ	ಬೃಹಂದಳ–ಳೆ	ಪಂ. ಭಾ. ೫/೭೭ವ
			೮/೨೯
ವೈದ್ಯ	ವಿಜ್ಜ ಬೆಜ್ಜ	ಬೆಜ್ಜ	ಪಂ. ಭಾ. ೧೧/೨ವ
ವ್ಯವಸಾಯ	ವವಸಾಯ	ಬೆವಸಾಯ	ಪಂ. ಭಾ. ೧೩/೧೦
ವ್ಯಸನ	ವಸನ	ಬೆಸನ	ಪಂ. ಭಾ. ೬/೬೭ವ
ವಹಿತ್ರ	ಬೋಹಿತ್ಥ	ಬ್ಯಿತ್ರ ಭ್ಯಿತ್ರ	ಆ. ಪು. ೧೨/೮೩ವ
			ಪಂ. ಭಾ. ೧೩/೩೫
ಭುಜಗ ಭುಜಂಗ	ಭುಅಗ, ಭುಅಂಗ	ಬೊಜಂಗ	ಪಂ. ಭಾ. ೪/೫೭
ಬ್ರಹ್ಮನ್	ಬಮ್ಹ	ಬೊಮ್ಮ	ಪಂ. ಭಾ. ೨/೭೬

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಭಾಂಡಾಗಾರ	ಭಂಡಾರ, ಭಂಡಾಗಾರ	ಭಂಡಾರ	ಅ. ಪು. ೨/೧೫
ಭಾಗಿನ್	ಭಾಗಿ.	ಭಾಗಿ	ಪಂ.ಭಾ. ೧/೭೪
ಭಾವಃ.	—	ಭಾವ	ಪಂ.ಭಾ. ೨/೫೦ವ
ಭೋಗಿನ್	ಭೋಇ, ಭೋಇಣಿ.	ಭೋಗಿ	ಪಂ.ಭಾ. ೪/೦೬
ಭೂರಿಶ್ರವಸ	ಭೂರಿಸ್ಸವ.	ಭೂರಿಶ್ರವ ೨	ಪಂ.ಭಾ. ೨/೬೬ವ
ಮಘವನ್	ಮಘವ	ಮಘವ	ಪಂ.ಭಾ. ೫/೮೨
ಮತ್ಸರ	ಮಚ್ಛರ.	ಮಚ್ಚರ	ಅ.ಪು. ೦೨/೪೬
ಮಂಡಪ	ಮಂಡವ	ಮಂಟಪ	ಪಂ.ಭಾ. ೧/೧೦೭
ಮಂಡವಿಕಾ	ಮಂಡವಿಅ(ಗಾ)	ಮಂಡವಿಗೆ	ಪಂ.ಭಾ. ೩/೨
ಮಂತ್ರಣ	ಮಂತಣ.	ಮಂತಣ	ಪಂಭಾ. ೪/೬೩ವ
ಮಂತ್ರಿನ್	ಮಂತಿ.	ಮಂತ್ರಿ	ಪಂ.ಭಾ. ೧/೨೦
ಮದಪಟ್ಟಿಕಾ	ಮದವಟ್ಟಿ	ಮದವಟ್ಟಿ	ಪಂ.ಭಾ. ೩/೭೬
ಮನಸ್	ಮಣ	ಮನ	ಪಂ.ಭಾ. ೧/೬೬
ಮನಃಕ್ಷತ	ಮಣಕ್ಖತ	ಮನಕತ	ಪಂ.ಭಾ. ೧/೧೦೫
ಮನಸ್ವಿನ್	ಮಣಂಸಿ	ಮನಸ್ವಿ	ಅ.ಪು. ೯/೧೧
ಮರುವಕ	ಮರುಅಅ. (ಗ)	ಮರುವ	ಅ. ಪು. ೧೧/೨೩
ಮಲ್ಲಿಕಾ	ಮಲ್ಲಿಅ-ಮಲ್ಲಿಗಾ	ಮಲ್ಲಿಗೆ	ಪಂ.ಭಾ ೧/೫೫
ಮಸೂರಕ	ಮಸೂರಅ, ಮಸೂರಗ	ಮಸುರಿಗೆ	ಅ. ಪು. ೧೧/೭೬
ಮಹಿಮನ್	ಮಹಿಮಾ.	ಮಹಿಮೆ. ಮೈಮೆ.	ಪಂ. ಭಾ. ೧/೯೦ ಅ. ಪು. ೧/೭೨
ಮಾಣಿಕ್ಯ	ಮಾಣಿಕ	ಮಾಣಿಕ	ಪಂ. ಭಾ. ೧/೫೭
ಮಹಾದೇವ	ಮಹಾದೇವ	ಮಾದೇವ.	ಪಂ. ಭಾ. ೪/೯೬
ಮಾನುಷ	ಮಾಣುಸ	ಮಾನಸ	ಅ. ಪು. ೩/೪೩ವ
ಮಹಾನವಮಿ	ಮಹಾಣವಮಿ	ಮಾನಾಮಿ	ಪಂ. ಭಾ. ೪/೯೫
ಮಹಾಮಾತ್ರ	ಮಹಾಮೇತ್ತ	ಮಾವರಿತ	ಪಂ. ಭಾ. ೧೧/೮೭
ಮಹಾಸಾದಿ	ಮಹಾಸಾದಿ	ಮಾಸಾವಿ	ಪಂ. ಭಾ. ೧/೫೪
ಮೃಗ	ಮಿಅ. ಮಿಗ	ಮಿಗ	ಪಂ. ಭಾ. ೧/೧೧೩
ಮೃತ್ಯು	ಮಚ್ಚು	ಮಿಚ್ಚು	ಪಂ. ಭಾ. ೧/೧೩
ಶ್ಮಶ್ರು	ಮಂಸು	ಮಿಸೆ	ಪಂ. ಭಾ. ೧/೦೯ವ
ಮುಖಿನ್	ಮುಹಿ	ಮುಖಿ	ಪಂ. ಭಾ. ೬/೮

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಮೌಂಜಿ	ಮುಂಜಿ	ಮುಂಜಿ	ಪಂ. ಭಾ. ೬/೮
ಮುಷ್ಟಿ	ಮುಟ್ಠಿ	ಮುಟ್ಟಿ	ಪಂ. ಭಾ ೦೯/೭೭
ಮೂಕ	ಮೂಅ, ಮುಕ್ಕ, ಮೂಗ	ಮೂಗು	ಪಂ. ಭಾ. ೪/೩೧
ಮೂರ್ತಿಮತ್	ಮುತ್ತಿಮಂತ	ಮೂರ್ತಿಮಂತ	ಪ. ಭಾ. ೨/೩ ನ
ಮುಖ	ಮುಹ	ಮೊಗ	ಪಂ. ಭಾ. ೧/೪೨
ಮುಖಪಟ್ಟ	ಮುಹವಡ	ಮೊಗವಡ	ಪಂ. ಭಾ. ೧೦೫೧ನ
—	—	ಯುಜ	ಪಂ. ಭಾ. ೨/೬೦
ಯಶಸ್ವಿನ್	ಜಸಂಸಿ	ಯಶಸ್ವಿ	ಆ. ಪು. ೬/೬೦
ಯಶಸ್	ಜಸ	ಯಶ	ಪಂ. ಭಾ. ೨/೭೫
ಯಾಜಿನ್	ಜಾಯಿ, ಜಾಜಿ	ಯಾಜಿ	ಪಂ. ಭಾ. ೧೪/೪೩
ಯೋಗಿನ್	ಜೋಗಿ	ಯೋಗಿ	ಪಂ. ಭಾ. ೮/೮೫
ಯುವನ್	ಜುವ	ಯುವ	ಪಂ. ಭಾ. ೧/೬೮ನ
ರಾಕ್ಷಸ	ರಕ್ಖಸ	ರಕ್ಕಸ	ಪಂ. ಭಾ. ೨/೯೪
ರಾಕ್ಷಸೀ	ರಕ್ಖಸೀ	ರಕ್ಕಸಿ	ಪಂ. ಭಾ. ೭/೨೬ನ
ರಜಸ್	ರಜ, ರಯ	ರಜ	ಪಂ. ಭಾ. ೧/೫೮
ರತ್ನ	ರಯಣ	ರನ್ನ ರತುನ	ಆ. ಪ್ರ. ೪/೩೩ ಪಂ. ಭಾ. ೩/೨೨
ರಥಿನ್	ರಹಿ	ರಥಿ	ಪಂ. ಭಾ. ೧೦/೮೮
ರಮ್ಯ	ರಮ್ಮ	ರಯ್ಯ	ಪಂ. ಭಾ. ೪/೫
ರಾಜನ್	ರಾಯ	ರಾಮ–ರಾಜ	ಪಂ. ಭಾ. ೧೩/೩೮ ೧/೩೬
ರಾಗಿನ್	ರಾಇ	ರಾಗಿ	ಪಂ. ಭಾ. ೪/೫ನ
ರಾಜ್ಞೀ ರಾಜ್ಞಿಕಾ	ರಾಣೀ, ರಾಣಿಆ, ರಣ್ಣೀ	ರಾಣಿ	ಪಂ. ಭಾ. ೫/೮೭ನ
ಋತು	ರಿಉ	ರುತು	ಪಂ. ಭಾ. ೩/೪೫
ಅರಘಟ್ಟ	ಅರಹಟ್ಟ	ಜಾಟಳ	ಆ. ಪ್ರ. ೩/೭೧
ಲಕ್ಷ	ಲಕ್ಖ	ಲಕ್ಕ ಲಕ್ಕೆ	ಪಂ. ಭಾ. ೨/೯೨ನ. ಆ. ಪ್ರ. ೨/೨೩ನ
ಲಕ್ಷಣ	ಲಕ್ಖಣ	ಲಕ್ಕಣ	ಪಂ. ಭಾ. ೭/೩೨ನ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಲಂಘನ	ಲಂಘಣ	ಲಂಗಿಸು	ಪಂ. ಭಾ. ೫/೯೨
ರಟಭ? ಲಟಭ	ರಡಹ	ಲಟಹ	ಆ. ಪು. ೧/೪೫
ಲಡ್ಡುಕ	ಲಡ್ಡುಅ. ಲಡ್ಡುಗ	ಲಡ್ಡುಗೆ	ಪಂ. ಭಾ. ೨/೩೨ವ
ಲಂಪಟ	ಲಂಪಡ	ಲಂಪಳ	ಆ. ಪು. ೪/೭೩
ಲಂಬನ	ಲಂಬಣ	ಲಂಬಣ	ಪಂ. ಭಾ. ೫/೬ವ
ಲಾವಕ	ಲಾವಗ	ಲಾವಗೆ	ಪಂ. ಭಾ. ೫/೧೦೦ವ
ಲಾಟ	ಲಾಡ	ಲಾವಿ	ಪಂ. ಭಾ. ೧/೩೩
ಲೇಖ	ಲೇಹ	ಲೆಕ್ಕ	ಪಂ. ಭಾ. ೧/೧೨
ಲೇಖನೀ	ಲೇಹನೀ	ಲೆಕ್ಕಣಿಕೆ	ಆ.ಪು. ೪/೧೪
ಲೋಕ	ಲೋಗ	ಲೋಗ	ಪಂ.ಭಾ. ೧೯೭
ಲೋಹಪಕ್ಷರಕ್ಷಾ	ಲೋಹಪಕ್ಖರಕ್ಖಾ	ಲೋಹವಕ್ಕರೆ	ಪಂ.ಭಾ. ೧೦/೫೧ ವ
ವಜ್ರೀ	ವಜ್ಜಿ	ವಜ್ರಿ	ಪಂ. ಭಾ. ೪/೨೪
ವಂದಿನ್	ವಂದಿ	ವಂದಿ	ಆ.ಪು. ೨/೩
ವರ್ಮನ್	ವಮ್ಮ	ವರ್ಮ	ಪಂ.ಭಾ. ೪/೩೩ ವ
ವಯಸ್	ವಯ	ವಯಸ	ಆ. ಪು. ೮/೫೮
ವಶ	ವಸ	ವಸ	ಪಂ.ಭಾ. ೧೨/೧೮೨
ವಾಗ್ಮಿನ್	—	ವಾಗ್ಮಿ	ಪಂ.ಭಾ. ೩/೮೦
ವಾದಿನ್	ವಾಇ	ವಾದಿ	ಪಂ.ಭಾ. ೩/೮೦
ವಾಡವ	ವಾಡವ	ವಾರುವ	ಪಂ.ಭಾ ೧೨/೫೩ ವ
ವಾಸುಕಿ	ವಾಸುಗಿ	ವಾಸುಗಿ	ಆ: ಪು. ೧೦/೫೪
ವಿಟಪಿನ್	ವಿಡವಿ	ವಿಟಪಿ	ಪಂ.ಭಾ. ೩/೧೦ ವ
ವೃಂದ	ವಿಂದ-ವಂದ	ವಿಂದೆ	ಪಂ.ಭಾ. ೧೧/೧೪೬ ವ
ವಿಧಾತೃ	ವಿಧಾಉ	ವಿಧಾತ್ರ	ಪಂ.ಭಾ. ೧/೫೮ ವ
ವಿಯೋಗಿನ್	ವಿಜೋಗಿ	ವಿಯೋಗಿ	ಪಂ.ಭಾ. ೨/೧೫
ವಿರಹಿನ್	ವಿರಹಿ	ವಿರಹಿ	ಪಂ ಭಾ. ೪/೫೨
ವಿಶಸನ	ವಿಸಸಣ	ವಿಸಸನ	ಪಂ.ಭಾ. ೧/೧೧೭
ವೇದಿನ್	ವೇದಿ	ವೇದಿ	ಪಂ.ಭಾ. ೧/೨೮
ವೇಷಿನ್	ವೇಸಿ	ವೇಷಿ	ಪಂ.ಭಾ, ೫/೭೧ ವ
ವೈರಿನ್	ವಇರಿ, ವಇರಿ ಅ,	ವೈರಿ	ಪಂ.ಭಾ. ೨/೯೨
ಶರ್ಮನ್	ಸಮ್ಮ	ಶರ್ಮ	ಪಂ.ಭಾ. ೧೮/೫೭ ವ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಶರದ್	ಸರಯು, ಸರದ	ಶರದ	ಪಂ.ಭಾ ೭/೬೯
ಶರದ್ವತ್	—	ಶರದ್ವತ	ಪಂ.ಭಾ. ೭/೩೨ ನ
ಶಶಿನ್	ಸಸಿ	ಶಶಿ	ಪಂಭಾ. ೮/೧೦
ಶಾಖಿನ್	ಸಾಹಿ	ಶಾಖಿ	ಆ.ಪು. ೭/೬೧
ಶಿಖಂಡಿನ್	ಸಿಹಂಡಿ	ಶಿಖಂಡಿ	ಆ.ಪು. ೪/೫೪ ನ
ಶಿಖರಿನ್	ಸಿಹರಿ	ಶಿಖರಿ	ಪಂ.ಭಾ, ೨/೩೯ ವ
ಶಿಖಿನ್	ಸಿಹಿ	ಶಿಖಿ	ಪಂ.ಭಾ. ೧/೨
ಶಿರಸ್	ಸಿರ	ಶಿರ	ಪಂ.ಭಾ. ೧೧/೧೫೪
ಶ್ರೇಷ್ಠಿನ್	ಸೆಟ್ಠಿ	ಶ್ರೇಷ್ಠಿ, ಸೆಟ್ಟಿ	ಆ.ಪು. ೪/೮೯ ವ ಪಂ.ಭಾ. ೧೭/೧೭೫
ಶಕಲ	ಸಯಲ	ಸಕಳ	ಆ.ಪು. ೪/೩೪ವ
ಶಕಲವಸ್ತ್ರ	ಸಯಲವತ್ಥ	ಸಕಳವಟ್ಟೆ	ಪಂ.ಭಾ. ೩/೪೦ ವ
ಶಲ್ಕ	ಸಕ್ಕ	ಸಕ್ಕ	ಪಂ.ಭಾ. ೧೮/೯೩
ಶೃಂಖಲ	ಸಿಂಖಲ	ಸಂಕಲೆ	ಪಂ.ಭಾ. ೪/೯೨
ಸಾಕ್ಷಿನ್	ಸಕ್ಖಿ	ಸಕ್ಕಿ	ಆಪು. ೯/೧೧೫
ಶಂಕು	ಸಂಕು	ಸಂಕು	ಪಂ.ಭಾ. ೧೮/೯೪
ಶಂಕಾ	ಸಂಕಾ	ಸಂಕೆ	ಪಂ.ಭಾ. ೫/೧೫
ಸಖ್ಯ	ಸಕ್ಖ	ಸಖ	ಪಂ.ಭಾ. ೯/೭೯
?	?	ಸಗಣ	ಪಂ.ಭಾ. ೩/೨
ಸ್ಪರ್ಶ	ಸಗ್ಗ	ಸಗ್ಗ	ಪಂ.ಭಾ. ೬/೩೮
ಸಂಘಾತ	ಸಂಘಾಯ,ಸಂಘಾಡ	ಸಂಗಡ	ಪಂ.ಭಾ. ೪/೮೭
"	" "	ಸಗಾಟಿಸು	ಪಂ.ಭಾ. ೪/೯೨
"	" "	ಸಂಗಳಿಸು	ಪಂ.ಭಾ. ೩/೧೭
ಸತ್ಯಂಕಾರ	ಸಚ್ಚಂಕಾರ	ಸಂಚಕರ	ಆಪು. ೪/೨
ಸರ್ಜರಸ	ಸಜ್ಜರಸ	ಸಜ್ಜರಸ	ಪಂ.ಭಾ. ೩/೩
ಸಂಧ್ಯಾ	ಸಂಝಾ	ಸಂಜೆ	ಪಂ.ಭಾ. ೪/೫೦
ಸಟಾ	ಸಡಾ	ಸಟೆ	ಪಂ.ಭಾ. ೧೨/೭
ಶಿಥಿಲ	ಸಢಿಲ	ಸಡಿಲ	ಪಂ.ಭಾ. ೨/೧೯
ಶಣ	ಸಣ	ಸಣಂಬು	ಪಂ.ಭಾ. ೭/೩
ಶ್ಲಕ್ಷ್ಣ	ಸಣ್ಹ, ಲಣ್ಹ.	ಸಣ್ಣಗೆ, ಸಣ್ಣಸು	ಆಪು ೫/೯೩ ಪಂ.ಭಾ. ೧೦/೧೧೭ನೆ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಶಂತ	ಸಂತ	ಸಂತ	ಆ.ಪು. ೧/೭೮
ಸಂತೋಷ	ಸಂತೋಸ	ಸಂತಸ	ಪಂ.ಭಾ. ೧/೮೬
ಛತ್ರ	ಸತ್ತ	ಸತ್ತಿಗೆ ಸತ್ತಿ	ಪಂ.ಭಾ. ೯/೧೦೪
			ಆ.ಪು. ೮/೧೫ ವ
ಸಂಸ್ಥಾ	ಸಂಥಾ	ಸಂತೆ	ಪಂ ಭಾ. ೪/೮೦
ಶಬ್ದ	ಸದ್ದ	ಸದ್ದ	ಪಂ.ಭಾ ೧೨/೨೧೮
ಸಂಧಾನ	ಸಂಧಾಣ	ಸಂದಣಿ	ಪಂ.ಭಾ. ೧/೧೦೭
ಸಂದೇಹ	ಸಂದೇಯು	ಸಂದೆಯು	ಆ.ಪು. ೩/೮೩ ವ
ಸನ್ನಾಹ	ಸಣ್ಣಾಹ ಸನ್ನಾಹ	ಸನ್ನಣ	ಪಂ.ಭಾ. ೩೦/೪೯
ಶನಿ	ಸನಿ	ಸನಿ	ಪಂ.ಭಾ. ೪/೯೮
ಸ್ತನಿನ್	ಥಣಿ	ಸ್ತನಿ	ಪಂ.ಭಾ. ೧/೯೦
ಸನ್ನಿಹಿತ	ಸಣ್ಣಿಹಿಅ(ದ)	ಸನ್ನಿದ	ಪಂ.ಭಾ. ೧೦/೩೧
ಸಂಜ್ಞಾ	ಸನ್ನಾ	ಸನ್ನೆ	ಪಂ.ಭಾ.೪/೮
ಸಂಪದ್	ಸಂಪಯು ಸಂಪದ	ಸಂಪದ	ಪಂ. ಭಾ. ೧೧/೫೭
ಶವ	ಸವ	ಸಬ	ಪಂ.ಭಾ. ೮/೧೦೪
ಸಭ್ಯ	ಸಬ್ಬ	ಸಬ್ಬವ	ಪಂ.ಭಾ. ೧/೯೫ ವ
ಸಂಬಂಧಿನ್	ಸಂಬಂಧಿ	ಸಂಬಂಧಿ	ಪಂ. ಭಾ. ೮/೨೭ ವ
ಸಮ್ಮತ	ಸಮ್ಮಯು	ಸಮ್ಮದ	ಆ ಪು. ೨/೬೭
ಶಂಬಲ	ಸಂಬಲ	ಸಂಬಳ	ಪಂ.ಭಾ. ೭/೬೮
ಸಂಪುಟ	ಸಂಪುಡ	ಸಂಬಳಿಗೆ	ಪಂ.ಭಾ. ೮/೧೬
ಸ್ವಯಂವರ	ಸಯಂವರ	ಸಯಂಬರ	ಪಂ.ಭಾ. ೩/೩೯
		ಸೊಯಂಬರ	ಆ.ಪು. ೧೦/೨೦
ಸ್ವರ	ಸರ	ಸರ	ಪಂ.ಭಾ. ೧/೧೧೧
ಶರ	ಸರ	ಸರ	ಪಂ.ಭಾ. ೨/೫೨
ಸರಕ	ಸರಯು	ಸರ	ಪಂ.ಭಾ. ೪/೪೦ ವ
ಶರಣ	ಸರಣ	ಶರಣ್	ಪಂ.ಭಾ. ೭/೬೧
—	—	ಸರಿಗೆ ?	ಪಂ ಭಾ ೧/೪೪
ಚುರುಕ	—	ಸರುಗ	ಆ.ಪು. ೧೫/೪
ಚರುಕ	—	ಸರುಗ	ಆ.ಪು. ೧೫/೪
ಶಲಾಕಾ	ಸಲಾಗಾ	ಸಲಗು	ಪಂ. ಭಾ. ೫/೮

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಸಂಲಗ್ನ ?	—	ಸಲಿ	ಆ.ಪು. ೪/೫೨ ವ
ಸಮು	ಸಮು	ಸಮು	ಪಂ ಭಾ. ೫/೫೭
—	—	ಸವಂಗ	ಪಂ.ಭಾ. ೯/೧೦೩
ಸಪತ್ನೀ	ಸವತ್ತೀ	ಸವತಿ	ಪಂ.ಭಾ. ೧೧/೧
ಯಮಲ	ಜಮಲ	ಸವಡಿ	ಆ.ಪು. ೧೧/೪೧
ಸಂಸಾರಿನ್	ಸಂಸಾರಿ	ಸಂಸಾರಿ	ಆ.ಪು. ೧೦/೬೩ ವ
ಶಶಿನ್	ಸಸಿ	ಸಸಿ	ಪಂ.ಭಾ. ೫/೧೫ ವ
ಸಹಜ	ಸಹಜ	ಸಾಜ	ಪಂ.ಭಾ. ೧೪/೫೪
ಶಾಣ	ಸಾಣ	ಸಾಣೆ	ಪಂ.ಭಾ. ೨/೩೯ ವ
ಸ್ವಾಮಿನ್	ಸಾಮಿ	ಸ್ವಾಮಿ	ಪಂ.ಭಾ. ೫/೪೩ ವ
ಸಾಹಸ	ಸಾಯಸ	ಸಾಯಸ	ಪಂ ಭಾ. ೭/೫೯ ವ
ಸಾಹಸಿಕ	ಸಾಹಸಿ ಅ. (ಗ)	ಸಾಸಿಗ ಸಾರಿಕೆ	ಆ.ಪು. ೬/೫
ಶಾರಿ	ಸಾರಿ	ಸಾರಿಕೆ	ಪಂ ಭಾ. ೪/೮೩
ಶಾಲಾ	ಸಾಲಾ	ಸಾಲೆ	ಪಂ.ಭಾ. ೩/೪೦
—	—	ಸಾಹಿಂಯಾಣ	ಆ ಪು. ೪/೩೪ ವ
ಸಿಂಹ	ಸಿಂಘ	ಸಿಂಗ	ಪಂ. ಭಾ. ೧/೩೪
ಸಿಂದೂರ	ಸಿಂದೂರ.	ಸಿಂದುರ	ಆ. ಪು. ೧೧/೧೧೮
ಶಿವಿಕಾ	ಸಿವಿಮಾ, ಸಿವಿಗಾ	ಸಿಜಿಗೆ ಸಿವಿಗೆ	ಆ. ಪು. ೧೪/೯೦ ವ ಪಂ. ಭಾ. ೨/೪೮ ವ
ಶ್ರೀ	ಸಿರೀ ಸಿರಿ.	ಸಿರಿ.	ಪಂ. ಭಾ ೧/೧೭ ಆ. ಪು. ೧೫/೬೫
ಶ್ರೀಖಂಡ	ಸಿರಿಖಂಡ	ಸಿರಿಕಂಡ, ಸಿರಿಖಂಡ	ಪಂ. ಭಾ. ೪/೨೧
ಶಿಲಾ	ನೀಲಾ	ಸಿಲೆ ಸೆಲೆ	ಪಂ. ಭಾ. ೫/೪೭
ಶಿಸು	ಸಿಸು	ಸಿಸು	ಪಂ. ಭಾ. ೧೧/೧೧೮
ಶೀತೋದಾ	ಸೀಓಅ.	ಸೀತೋದೆ	ಆ. ಪು. ೧/೫೪
ಸೀಧು	ಸೀಹು.	ಸೀದು	ಪಂ. ಭಾ. ೪/೮೮
ಸೀಮನ್	ಸೀಮಅ ಸೀಮಾ	ಸೀಮೆ.	ಆ. ಪು. ೬/೫೭
ಸೌಖ್ಯ	ಸುಕಖ	ಸುಕ	ಪಂ. ಭಾ. ೧/೧೩೪
ಚೂರ್ಣ	ಚುಣ	ಸುಣ್ಣ	ಪಂ. ಭಾ. ೪/೮೭ ವ

ಸಂಸ್ಕೃತ	ಪ್ರಾಕೃತ	ಕನ್ನಡ	ಆಕರ
ಶ್ರುತಿ	ಸುಇ.	ಸುತಿ.	ಪಂ. ಭಾ. ೭/೮೮
ಶುದ್ಧಕ	ಸುದ್ಧಅ (ಗ)	ಸುದ್ದಗೆ	ಪಂ. ಭಾ. ೧/೩೪
—	—	ಸುಯ್ಯಾಣ, ಸುಯ್ಯತಾಣ	ಪಂ ಭಾ ೩/೪೦ವ ೧೮/೧೫ ವ
ಛುರಿಕಾ	ಛುರಿಕಾ	ಸುರಗೆ, ಸುರಿಗೆ	ಪಂ ಭಾ ೫/೩೬ ೧೦/೭೯
ಸೂಚೀ	ಸೂಈ	ಸೂಜಿ	ಪಂ.ಭಾ ೧೧/೬೫ವ
ಶಯ್ಯಾ	ಸೆಜ್ಜ ಸೆಜ್ಜಾ	ಸೆಜ್ಜೆ	ಆ. ಪು. ೫/೨೨ ಪ
ಶಿರಾ ಸಿರಾ	ಸಿರಾ	ಸೆರೆ	ಪಂ ಭಾ. ೨/೩೯ ವ
ಶೇಷಾ	ಸೇಸಾ	ಸೇಸೆ	ಆ. ಪು. ೨/೫೭
ಸಹನ	ಸಹಣ	ಸೈರಣೆ, ಸೈರಿಸು	ಪಂ.ಭಾ ೪/೭೫ವ ೨/೪೯ ವ
ಸೌಖ್ಯ	ಸುಕ್ಖ	ಸೊಕ ಸೊಗ	ಪಂ.ಭಾ ೭/೬೫ ೧/೧೩೬.
ಸೌಭಾಗ್ಯ	ಸೋಹಗ್ಗ	ಸೊಬಗು	ಆ.ಪು ೩/೧೫
ಶೋಧನ	ಸುಜ್ಝವಣ	ಸೋದಿಸು	ಪಂ.ಭಾ. ೨/೬೫ವ
ಪ್ರಾಣ	ಪಾಣ	ಹರಣ	ಪಂ.ಭಾ ೧೦/೯೫
ಅರಿಕೇಸರಿ	—	ಹರಿಗ ?	ಪಂ ಭಾ ೧/೬೦
ಹಸ್ತಿನ್	ಹತ್ತಿ	ಹಸ್ತಿ	ಪಂ ಭಾ. ೨/೨೯ವ
ಹಲಿನ್	ಹಲಿ	ಹಳಿ	ಪಂ. ಭಾ. ೧೩/೭೫
ಭೂ ಹೋ	ಹವ	ಹೋ ಹೋ	ಪಂ.ಭಾ. ೬/೬೦

★ ಎಚ್. ಜಿ. ಬೆಂಗೇರಿ

ಒರೆಗಲ್ಲು

ಕನ್ನಡ ಭಾಗವತದ ಕರ್ತೃವಿಚಾರ

ಕನ್ನಡ ಭಾಗವತಕಾವ್ಯದ ಕರ್ತೃ 'ನಿತ್ಯಾತ್ಮಶುಕ'—ಎಂಬ ಪರಂಪರೆಯ ಹೆಸರು, ಯಾವ ಮಹಾಶಯರ ಕಲ್ಪನೆಯೊ ಕಾಣೆನೋ ಏನೋ! ಇದುವರೆಗೂ ಅದು ನಡೆದು ಕೊಂಡು ಬಂದಿದೆ. ಕನ್ನಡ ಕವಿಚರಿತೆಯ ಎರಡನೆಯ ಭಾಗದಲ್ಲಿ ಆ. ಆರ್. ನರಸಿಂಹಾಚಾರ್ಯರು 'ಚಾಟುವಿಠಲನಾಥ' ಎಂಬವನು ಈ ಕೃತಿಯ ಕರ್ತೃವೆಂದು ಹೇಳಿರುವರಲ್ಲದೆ, 'ಸದಾನಂದ' ಎಂಬುದು ಅವನ ಮತ್ತೊಂದು ಹೆಸರಾಗಿರಬಹು ದೆಂದೂ ಬರೆದಿದ್ದಾರೆ; ಆದರೆ ಈಗ ಸುಮಾರು ೧೨-೧೩ ವರ್ಷಗಳ ಹಿಂದೆ, ಕ. ಸಾ. ಪರಿಷತ್ ಪತ್ರಿಕೆಯಲ್ಲಿ ನಾನು ಬರೆದ 'ಕನ್ನಡ ಭಾಗವತದ ಕವಿಗಳಾರು?' ಎಂಬ ಲೇಖನವನ್ನು ನೋಡಿದ ಮೇಲೆ, ಆ. ಆರ್. ನರಸಿಂಹಾಚಾರ್ಯರು ತಮ್ಮ ಮೂರನೆಯ ಭಾಗ ಕವಿಚರಿತೆಯ ಶೋಧನಪತ್ರಿಕೆಯಲ್ಲಿ ನನ್ನ ವಿಧಾನವನ್ನು ಒಪ್ಪಿಕೊಂಡು, ನಾನು ಹೇಳಿದ ಬೇರೆ ಬೇರೆ ಕರ್ತೃಗಳ ಹೆಸರುಗಳನ್ನು ಸ್ವೀಕರಿಸಿ, ಕವಿಗಳ ಪರಿವಿಡಿಯಲ್ಲಿ ಅವರ ಹೆಸರುಗಳನ್ನೂ ಸೇರಿಸಿದ್ದಾರೆ.

ಹಿಂದೆ ನಾನು ಭಾಗವತಕೃತಿಯ ಕವಿಗಳನ್ನು ಕುರಿತು ಬರೆದಾಗ, ಕನ್ನಡ ಭಾಗವತದ ಎರಡೇ ಹಸ್ತಪ್ರತಿಗಳು ದೊರೆತಿದ್ದುವು. ಮೊದಲನೆಯದು ಧಾರವಾಡದ ನಾಯಕರ ಮನೆತನದಲ್ಲಿದ್ದ ೧೨ ಸ್ಕಂಧಗಳನ್ನೊಳಗೊಂಡ ಉರುಟುಕಾಗದದ ಪ್ರತಿ. ಎರಡನೆಯದು ಮಾಸ್ತಿ ದಿವಾಕರರು ಗೇರುಸೊಪ್ಪೆಯಿಂದ ಸಂಪಾದಿಸಿ ತಂದ ೧೧.೧೨ನೆಯ ಸ್ಕಂಧಗಳಿದ್ದ ತಾಳೆಗರಿಯ ಪ್ರತಿ. ಆ ಮೇಲೆ ಕುರ್ತಕೋಟಿಯ ಶ್ರೀ. ಮೈಲಾರಗೌಡರ ಬಳಿಯಲ್ಲಿದ್ದ ೧೨ ಸ್ಕಂಧಗಳುಳ್ಳ ಉರುಟುಕಾಗದದ ಪ್ರತಿಯೂ ನನಗೆ ನೋಡಲು ಸಿಕ್ಕಿತು. ಈ ಮೂರೂ ಹಸ್ತಪ್ರತಿಗಳಲ್ಲಿಯೂ ೧೨ನೆಯ ಸ್ಕಂಧವನ್ನು ಬರೆದ ಕವಿ 'ನಿರ್ವಾಣನಾಥ' ಎಂಬ ಹೆಸರಿನವನೆಂಬುದು ನನಗೆ ಗೊತ್ತಾಯಿತು. ಈ ಕವಿಯು ತನ್ನ ಕೃತಿಪ್ರಾರಂಭದಲ್ಲಿ ಹೇಳಿದ ಪ್ರಾಸ್ತಾವಿಕ ಪದ್ಯ ಹೀಗಿದ್ದಿತು:

'ಸ್ಕಂಧ ಹತ್ತಕೆ ಪದವನಾರಾ-
ಧ್ಯೇಂದ್ರ ಕವಿ ವಿರಚಿಸಿದನಾ ಸದ-
ನಂದವರಯೋಗೀಂದ್ರನೇಕಾದಶವ ನಿರ್ಮಿಸಿದ ||
ಇಂದು ಮುಕ್ತಿನತೆನ್ನ ಮತಿ ಬಂ-
ದಂದದಲಿ ನಾನೊರೆವೆ ......'

ನಾನು ನೋಡಿದ ಮೂರೂ ಹಸ್ತಪ್ರತಿಗಳಲ್ಲಿಯೂ ಈ ಪದ್ಯ ಇದ್ದಿತು. ಇದರಿಂದ ನನಗೆ ಆರಾಧ್ಯೇಂದ್ರ, ಸದಾನಂದಯೋಗೀಂದ್ರ, ನಿರ್ವಾಣನಾಥ ಎಂಬ ಮೂವರು ಮಂದಿ ಭಾಗವತದ ಕರ್ತೃಗಳೆಂಬುದು ಗೊತ್ತಾಯಿತು. ಆಗಲೇ ನಾನು ಬೆಂಗಳೂರು ಕಲಾನಿಧಿ

ಮುದ್ರಣಾಲಯದಿಂದ ಬೆಳಕಿಗೆ ಬಂದಿದ್ದ ಕನ್ನಡ ಭಾಗವತದ ಮುದ್ರಿತಪ್ರತಿಯನ್ನು ಸಂಶೋಧಕ ದೃಷ್ಟಿಯಿಂದ ಓದಿ ನೋಡಿದಾಗ, ೮ನೆಯ ಸ್ಕಂಧದಲ್ಲಿಯ ವಾಮನಾವತಾರದ ಕಥೆಯನ್ನಷ್ಟೇ ಬರೆದ ಕವಿ 'ವಿದ್ಯಾಯೋಗಿ' ಎಂಬುದು ತಿಳಿಯಿತು. ಇವನು ತನ್ನ ಆ ಕೃತಿಭಾಗಕ್ಕೆ ಪ್ರತ್ಯೇಕವಾಗಿ ಮಂಗಲಾಚರಣ ಪದ್ಯಗಳನ್ನೂ ರಚಿಸಿದ್ದಾನೆ. ಈ ಮುದ್ರಿತ ಪ್ರತಿಯಲ್ಲಿಯ ೧೨ನೆಯ ಸ್ಕಂಧವು, ನಿರ್ವಾಣನಾಥನದಾಗಿರದೆ 'ಚಾಟುವಿಠಲ' ಎಂಬ ಕವಿಯದಾಗಿದ್ದು, ನಿರ್ವಾಣನಾಥನ ಕೃತಿಭಾಗಕ್ಕಿಂತ ಚಿಕ್ಕದಾಗಿದೆ. ಈ ಎಲ್ಲ ಕವಿಗಳೂ ತಮ್ಮ ಗುರುವೆಂದು 'ಅಚ್ಯುತಾರಣ್ಯಯತಿ' ಎಂಬವರನ್ನು ಭಕ್ತಿಯಿಂದ ಕೊಂಡಾಡಿದ್ದಾರೆ. ಇವೆಲ್ಲ ವಿಷಯವನ್ನೂ ನಾನು ಕ. ಸಾ. ಪರಿಷತ್ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ವಿಶದಪಡಿಸಿದ್ದೇನೆ. ಆರಾಧ್ಯೇಂದ್ರ, ಸದಾನಂದಯೋಗಿ ಇವರ ಸಂಧ್ಯಂಕಿತ 'ನಿತ್ಯಾತ್ಮ' ಎಂದಿದೆ; ನಿರ್ವಾಣನಾಥನ ಅಂಕಿತ 'ನಿರ್ವಾಣ' ಎಂದಿದೆ. ಚಾಟುವಿಠಲನದು 'ಚಾಟುವಿಠಲನಾಥ' ಎಂದಿದೆ. ಈ ಚಾಟುವಿಠಲನಾಥನು ಹನ್ನೊಂದನೆಯ ಸ್ಕಂಧವನ್ನೂ ಸಂಕ್ಷೇಪದಲ್ಲಿ ಬರೆದ ಹಸ್ತಪ್ರತಿಯನ್ನೂ ನಾನು ನೋಡಿದ್ದೇನೆ, ಅದು ಪ್ರಕಟವಾಗಿಲ್ಲ.

ಈ ಕವಿಗಳ ದೇಶ-ಕಾಲಗಳ ವಿಷಯ ಇದುವರೆಗೂ ಅಜ್ಞಾತವಾಗಿಯೇ ಇತ್ತು. ಸಮಗ್ರ ಭಾಗವತವನ್ನು ಚಾಟುವಿಠಲನಾಥನೇ ಬರೆದಿರುವನೆಂದು ಭಾವಿಸಿದ ಕವಿಚರಿತಕಾರರು, ಈ ಕವಿಯ ಕಾಲ ಕ್ರಿ.ಶ. ೧೫೩೦ ಎಂದು ಊಹಿಸಿ ಬರೆದಿದ್ದಾರೆ; ಆದರೆ ೧೫೯೯ ರಲ್ಲಿ ಬರೆದ ಹಸ್ತಪ್ರತಿಯೆ ದೊರೆತಿದೆಯೆಂದಮೇಲೆ. ಅದಕ್ಕಿಂತ ಮೊದಲೇ ಈ ಕೃತಿಯು ರಚಿತವಾಗಿದೆಯೆಂದು ಹೇಳಬಹುದಾಗಿದೆ. ಅದರಂತೆಯೆ ನಿತ್ಯಾತ್ಮಾಂಕಿತದ ಕವಿಯೆ ಒಬ್ಬ 'ಪೌಲೋಮಾಸ್ತಿಕಪರ್ವ'ವನ್ನು ರಚಿಸಿ. ಕುಮಾರವ್ಯಾಸ ಭಾರತದಲ್ಲಿ ಸೇರಿಸಿರುವುದನ್ನು ನೋಡಿದರೆ, ಭಾಗವತದ ಕವಿಗಳು ಕುಮಾರವ್ಯಾಸ ಕವಿಯ ತರುವಾಯದವರಿರಬಹುದೆಂದು ಕಂಡುಬರುತ್ತದೆ. ಕುಮಾರವ್ಯಾಸ ಕವಿಯ ಕಾಲವೇ ೧೪ ರಿಂದ ೧೫ ನೇಯ ಶತಮಾನದವರೆಗೆ ಓಡಾಡುತ್ತಿರುವಾಗ, ಈ ಕವಿಗಳ ಕಾಲವನ್ನು ನಿರ್ಣಯಾತ್ಮಕವಾಗಿ ಹೇಳುವ ಬಗೆ ಹೇಗೆ ?

ಗದುಗಿನ ವೀರನಾರಾಯಣ. ತೊರವೆಯ ನರಹರಿ ಇವರ ಅಂಕಿತಗಳನ್ನು ಹೇಳಿದ ಕುಮಾರವ್ಯಾಸ. ಕುಮಾರವಾಲ್ಮೀಕಿಗಳ ದೇಶಗಳನ್ನು ಊಹಿಸುವುದು ಸುಲಭವಾಯ್ತು; ಆದರೆ ಭಾಗವತದ ಕವಿಗಳು ತಮ್ಮ ತಮ್ಮ ಅಂಕಿತಗಳನ್ನು ಮಾತ್ರ ಹೇಳಿರುವರೇ ಹೊರತು ಯಾವುದೇ ಸ್ಥಳದ ನಿರ್ದೇಶವನ್ನು ಮಾಡಿರುವುದಿಲ್ಲ. ಇವರ ಬಗೆಗೆ ಕುತೂಹಲಿಯಾಗಿ ಮತ್ತೆ ಮತ್ತೆ ಭಾಗವತದ ಹಸ್ತಪ್ರತಿಗಳನ್ನು ಶೋಧಿಸುತ್ತಿರುವಾಗ, ೧೦ನೇಯ ಸ್ಕಂಧದ ಕೊನೆಯಲ್ಲಿರುವ ಈ ಪದ್ಯ ನನಗೆ ನೋಡಲು ಸಿಕ್ಕಿತು :

ಕರ್ತೃವಿವಕೆ ಹರಿತಕೀಪ್ಪುರ
ಭರ್ತೃ ಗೋಪೀನಾಥನಾಜ್ಞಾ
ಕರ್ತೃ ಲೇಖಕ ನಾನು ಕೃತಿಗಿಂತೆನೆ ನಿಧಾನಿಸಲು ||

ವಕ್ತ್ರವಿನ ಗುಣದೋಷ ಲೇಖನ
ಕರ್ತೃವಿಂಗೆತ್ತಣದು ವಚನ ವಿ-
ವೀಕ್ಷ್ಯ ನಿತ್ಯಾತ್ಮಕನೆ ರಕ್ಷಿಸುಗಖಿಳ ಸಜ್ಜನರ ||
(ಸಂಧಿ ೧೦೩–ಪದ್ಯ ೩೫)

ಈ ಪದ್ಯವನ್ನೋದಿದಾಗ ನನ್ನ ಮನಸ್ಸು ಸಂಭ್ರಮಗೊಂಡು ಕುಣಿಯಿತು. ಅನೇಕದಿನದ ನನ್ನ ಪ್ರಶ್ನೆಗೆ 'ಹರೀತಕೀಪುರಭರ್ತೃ ಗೋಪೀನಾಥ' ಎಂಬ ಮಾತು ಉತ್ತರವಾಗಿ ದೊರೆಯಿತು. ಬಳಿಕ ಹರೀತಕೀಪುರ ಯಾವುದು ? ನಾಡಿನ ಯಾವ ಭಾಗದಲ್ಲಿದೆ? ಎಂಬ ಪ್ರಶ್ನೆಗಳು ಮಿದುಳನ್ನು ಕೆರಳಿಸತೊಡಗಿದುವು. 'ಹರೀತಕೀ' ಎಂಬ ಸಂಸ್ಕೃತಮಾತಿನ ಅರ್ಥ 'ಅಳಲೆ' (ಅಳಿಲೆ) ಎಂಬ ಮರದ ಹೆಸರಾಗುವುದು. ಅಳಲೆಮರ ಸಹ್ಯಾದ್ರಿಯ ತಪ್ಪಲು ಪ್ರದೇಶದಲ್ಲಿಯೆ ಹೆಚ್ಚಾಗಿ ಬೆಳೆಯುವುದು. ಆದುದರಿಂದ, ಭಾಗವತದ ಕವಿಗಳು ಪಶ್ಚಿಮಘಟ್ಟದ ಪ್ರದೇಶದಲ್ಲಿರುವ ಯಾವುದೋ ಒಂದು ಗ್ರಾಮದ ಗೋಪೀನಾಥನ ಭಕ್ತರಾಗಿರಬಹುದೆಂದು ಭಾವಿಸಿ, ಹರೀತಕೀಪುರವನ್ನು ಶೋಧಿಸತೊಡಗಿದೆ.

೧೯೬೦ ನೆಯ ಜನವರಿತಿಂಗಳಲ್ಲಿ, ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದುದ್ದಕ್ಕೂ ತಿರುಗಾಡುವ ಸುಯೋಗ ನನಗೆ ಒದಗಿ ಬಂದಿತು. ಅಲ್ಲಿಯ ಹವ್ಯಕ ಬ್ರಾಹ್ಮಣರನೇಕರ ಮನೆಗಳಲ್ಲಿ ಕನ್ನಡಭಾಗವತದ ತಾಳೆಗರಿಗಳ ಪ್ರತಿಗಳಿರುವುದನ್ನೂ, ಅದರ ಬಗೆಗಿರುವ ಅಲ್ಲಿಯ ಜನರ ಶ್ರದ್ಧೆಯನ್ನೂ ನೋಡಿದಾಗ, ಭಾಗವತದ ಕವಿಗಳು ಆ ಪ್ರದೇಶದವರೇ ಆಗಿರಬೇಕೆಂದು ಹೆಚ್ಚು ಹೆಚ್ಚು ಮನವರಿಕೆಯಾಗತೊಡಗಿತು. ಅಲ್ಲಿ ದೊರೆತ ಅನೇಕ ಪ್ರತಿಗಳಲ್ಲಿಯೂ ೧೨ ನೆಯ ಸ್ಕಂಧ ನಿರ್ವಾಣನಾಥನದೇ ಆಗಿದ್ದಿತು. ಅವೆಲ್ಲ ಪ್ರತಿಗಳಲ್ಲಿಯೂ 'ಸ್ಕಂಧ ಹತ್ತಕೆ ಪವನಾರಾಧ್ಯೇಂದ್ರಕವಿವಿರಚಿಸಿದ....' ಎಂಬ ಪದ್ಯ ಇದ್ದೇ ಇದ್ದಿತು.

ಅಲ್ಲಿ ತಿರುಗಾಡುತ್ತಿದ್ದಾಗ, ಹರೀತಕೀಪುರದ ವಿಷಯವನ್ನು ಅನೇಕ ಜನರೆದುರು ಎತ್ತಿದೆ. ಆದರೆ ಅವರಾರಿಗೂ ಗೊತ್ತಿಲ್ಲದ ವಿಷಯ. ಶಿರಾಲಿ ಕನ್ನಡ ಶಾಲೆಯಲ್ಲಿ ಶಿಕ್ಷಕರಾಗಿರುವ ಶ್ರೀ. ರಾಮಯ್ಯ ಪಟಗಾರ ಎಂಬವರಿಂದ ತಿಳಿಯಿತು :

"ಕುಮಟೆಯಿಂದ ಶಿರಸಿಗೆ ಹೋಗುವಹಾದಿಯಲ್ಲಿ ಘಟ್ಟವನ್ನೇರುವಾಗ, ಯಾಣಕ್ಕೆ ದಾರಿ ಒಡೆಯುವ ಸ್ಥಳದಲ್ಲಿ 'ಹರೀಟೆ' ಎಂಬ ಹೆಸರಿನ ಹಾಳು ಗ್ರಾಮವಿದೆ. ಅದು ದೊಡ್ಡ ನಗರವಾಗಿರಬಹುದೆಂಬುದರ ಪ್ರಾಚೀನ ಕುರುಹುಗಳೂ ಅಲ್ಲಿ ಸಾಕಷ್ಟಿವೆ. ಆ ಗ್ರಾಮದ ಬಗೆಗೆ ಆಖ್ಯಾಯಿಕೆಗಳೂ ಸಾಕಷ್ಟಿವೆ. ಆ ಪ್ರದೇಶವೆಲ್ಲ ಈಗ ಹರೀಟೆ ಸೀಮೆ ಎಂದು ಕರೆಯಿಸಿಕೊಳ್ಳುತ್ತದೆ! ಹಿಂದಿನ ಕಾಲದಲ್ಲಿ ಅಲ್ಲಿ ಗೋಪೀನಾಥನ ದೇವಾಲಯ ಇದ್ದಿರಲೂ ಬಹುದು!"

ಕನ್ನಡ ಹರೀಟೆ, ಸಂಸ್ಕೃತದಲ್ಲಿ 'ಹರೀತಕೀಪುರ' ಎಂದಾಗಿರುವುದು ನನಗೆ ಅಸಂಭವವಾಗಿ ಕಾಣಲಿಲ್ಲ. ನಾನು ನನ್ನ ನಾಲ್ಕೈದು ಜನ ಸ್ನೇಹಿತರೊಂದಿಗೆ ಆ ಹಾಳು

ಗ್ರಾಮದ ನಿವೇಶನವನ್ನು ಪ್ರತ್ಯಕ್ಷವಾಗಿ ನೋಡಿದೆ. ಒಂದು ಕಾಲದಲ್ಲಿ ಒಂದು ಅಗ್ರಹಾರವೇ ಅಲ್ಲಿ ನೆಲಸಿರಬಹುದೆಂದು ಎನಿಸಿತು. ಹಳೆಯ ಕಾಲದ ಹಾಳು ದೇವಾಲಯಗಳ ಬೀಳುಗಳನ್ನೂ ನೋಡಿದೆ. ಒಂದು ದೇವಾಲಯದ ಗರ್ಭಾಗಾರದ ಸ್ಥಳದಲ್ಲಿ ಮುಸಲ್ಮಾನರದೊಂದು ಗೋರಿಯಿದ್ದುದನ್ನೂ ಕಂಡೆ. ಈ ಹಾಳೂರನ್ನು ನೋಡಿ ಮನಸ್ಸು ಮರುಗಿತಾದರೂ, ಭಾಗವತದ ಕವಿಗಳ ಹರೀತಕೀಪುರದ ಸಂಶೋಧನೆಯಾಯಿತಲ್ಲ—ಎಂಬ ಸಮಾಧಾನವು ಮನಸ್ಸನ್ನು ಸಂತವಿಸಿತು.

ಕ್ರಿ. ಶ. ೧೩, ೧೪, ೧೫ ನೆಯ ಶತಮಾನದಲ್ಲಿ ಭಾಗವತಪಂಥವು ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಸರ್ವತ್ರವ್ಯಾಪಿಸಿರಬಹುದು. ಅದರ ಕುರುಹುಗಳಾಗಿ ವಿಷ್ಣುವಿನ ಬೇರೆ ಬೇರೆ ರೂಪದ ವಿಗ್ರಹಗಳು, ಕರಾವಳಿ ಪ್ರದೇಶದಲ್ಲಿಯೂ ಅರಣ್ಯಪ್ರದೇಶದಲ್ಲಿಯೂ ಸಾಕಷ್ಟು ಇವೆ. ಭಾಗವತರ ಆಟದ ಪರಂಪರೆ, ಅಲ್ಲಿ ಅಂದಿನಿಂದಲೂ ನಡೆದುಕೊಂಡುಬಂದಿದೆ. ಗೋರೆಯ ಗೋಪೀನಾಥ ದೇವಸ್ಥಾನಕ್ಕೆ ಸ್ಥಳಪುರಾಣವೂ ಇದೆ. ಅಲ್ಲಿಯ ಹವ್ಯಕರು ಇಂದು ಶಿವಭಕ್ತರಾಗಿಯೋ ಗಣಪತಿ ಭಕ್ತರಾಗಿಯೋ ಕಾಣುತ್ತಿದ್ದರೂ, ಅನೇಕ ಮನೆತನಗಳ ಕುಲದೈವತ ಗೋಪಾಲಕೃಷ್ಣ, ಕೇಶವ, ವೆಂಕಟೇಶ ಮೊದಲಾದ ವಿಷ್ಣುವಿನ ಪರ್ಯಾಯರೂಪಗಳಾಗಿವೆ. ಇಷ್ಟೇ ಅಲ್ಲ, ಕನ್ನಡ ಭಾಗವತ ಗ್ರಂಥ ಅಲ್ಲಿ ಮನೆಮನೆಗಳಲ್ಲಿಯೂ ಪಾರಾಯಣಗ್ರಂಥವಾಗಿ ಪೂಜೆಗೊಳ್ಳುತ್ತದೆ. ಇದೆಲ್ಲವನ್ನೂ ನೋಡಿದಾಗ, ಭಾಗವತದ ಹರೀತಕೀಪುರದ ಕವಿಗಳ ಜನ್ಮಭೂಮಿ ಉತ್ತರಕನ್ನಡ ಜಿಲ್ಲೆಯೇ ಎಂಬುದು ಸಿದ್ಧವಾಗುತ್ತದೆ.

★ **ಬೆಟಗೇರಿ ಕೃಷ್ಣಶರ್ಮ**

ಗ್ರಂಥಾವಲೋಕನ

ಜಾನಪದ ಸಾಹಿತ್ಯ : (೧೯೭೨) ಬೆಲೆ ರೂ. ೧

ಹೊಲಮನಿಯು ಪದಗಳು : (೧೯೭೦)–ಬೆಲೆ ರೂ. ೨-೦೦ ಈ ಸಂಪಾದಕರು ಹಾಗೂ ಪ್ರಕಾಶಕರು : ಕೆ. ವಿರುಪಾಕ್ಷಗೌಡ, ಕಲ್ಲೇಶ ಇಟ್ಟಿಗಿ ಹಾಗೂ ಪಾಟೀಲ ಕರವೀರನಗೌಡ, ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿ ಬೊಮ್ಮನಹಳ್ಳಿ (ಬಳ್ಳಾರಿ ಜಿಲ್ಲೆ)

ಕನ್ನಡಿಗರಿಗೆ ಅಂಟಿಕೊಂಡಿದ್ದ ಹಲವಾರು ಶಾಪಗಳಲ್ಲಿ ಕಂಠದ ವಾಙ್ಮಯವಾದ ಜಾನಪದ ಸಾಹಿತ್ಯವನ್ನು ಶೇಖರಿಸಿ, ಗ್ರಂಥಸ್ತಪಡಿಸಿ ಪ್ರಚುರಗೊಳಿಸಿದ್ದುದು ಒಂದು. ಸುಮಾರು ಅರ್ಧಶತಮಾನದ ಹಿಂದೆ ಈ ಗ್ರಾಮ್ಯ ಸಾಹಿತ್ಯ ಹಲವರ ತೆರೆದ ಕಣ್ಣಿಗೆ ಗೋಚರವಾದುದು ತನ್ಮೂಲಕ ಆಕರ್ಷಿಸಿದುದು ಒಂದು ಸುಯೋಗವೆಂದೇ ಹೇಳಬೇಕು. ಅಲ್ಲಿಂದೀಚೆಗೆ ಈ ಅವಧಿಯಲ್ಲಿ ಶೇಖರಿಸಿದ ಈ ಸಾಹಿತ್ಯದ ಪ್ರಮಾಣ ಗಮನಾರ್ಹವಾಗಿದ್ದರೂ ಇನ್ನೂ ಕಂಠದಿಂದ ಕಾಗದವನ್ನು ಕಾಣಬೇಕಾದುದು ಬಹಳವಿದ್ದಂತೆ ತೋರುತ್ತಿದೆ.

ಈ ದಿಶೆಯಲ್ಲಿ ಕೆ. ವಿರುಪಾಕ್ಷಗೌಡ, ಕಲ್ಲೇಶ ಇಟ್ಟಿಗಿ ಮತ್ತು ಪಾಟೀಲ ವೀರನಗೌಡರು ಮೇಲಿನ ಸಂಗ್ರಹಗಳನ್ನು ಬೆಳಕಿಗೆ ತರುವ ಮಹತ್ವದ ಕಾರ್ಯವನ್ನು ಎಸೆದಿದ್ದಾರೆ.

ನಾಲ್ವತ್ತೆರಡು ಪುಟದ **ಜಾನಪದ ಸಾಹಿತ್ಯ** ಸಂಕಲನವು ಇಪ್ಪತ್ತೆರಡು ಪುಟಗಳ ವರೆಗೆ ವಿವಿಧ ಅನುಭವಗಳಿಂದ ಅನುಭವಿಸಿರುವ ವಿವಿಧ ಬಗೆಯ ಹಾಡುಗಳನ್ನು ಒಳಗೊಂಡಿದೆ ಇನ್ನುಳಿದ ಪುಟಗಳಲ್ಲಿ ಒಗಟುಗಳು, ಗಾದೆ, ಒಡಪು ಸೇರಿಕೊಂಡಿವೆ. ಈ ಮೊದಲೇ ಬೇರೆಡೆ ಪ್ರಕಟವಾದ ಹಾಡುಗಳು ಇಲ್ಲಿ ಮರುಕಳಿಸದಂತೆ ಸಂಗ್ರಹಕಾರರು ಎಚ್ಚರ ವಹಿಸಿರುವದು ಸಂತಸದ ಸಂಗತಿಯಾಗಿದೆ. ಅಪ್ಪಿ ತಪ್ಪಿ ಬಂದಿರಬಹುದಾದ ಹಲವು ಸಾಲುಗಳನ್ನು ಎತ್ತಿ ತೋರಿಸುವದರಲ್ಲಿ ಹುರುಳಿಲ್ಲ.

ಇಲ್ಲಿರುವ ನುಡಿಗಳನ್ನು ಸಂಗ್ರಹಕಾರರಿಗೆ ಸರಿಯಾಗಿ ವರ್ಗೀಕರಣ ಮಾಡಿ, ಉಚಿತವಾದ ಶೀರ್ಷಿಕೆಯನ್ನು ಕೊಟ್ಟು ವ್ಯವಸ್ಥಿತಗೊಳಿಸುವದಾಗಿಲ್ಲ-ವೆಂದು ಭಾಸವಾಗುತ್ತದೆ. ಇದು ಪ್ರತಿಯೊಬ್ಬ ಸಂಪಾದಕನೂ ಎದುರಿಸಲೇಬೇಕಾದ ಹಾಗೂ ಜಾಣತನದಿಂದ ನಿರ್ವಹಿಸಬೇಕಾದ ಪ್ರಮೇಯವಾಗಿದೆ. ಇಲ್ಲಿರುವ ಎರಡುನೂರಾ ತೊಂಬತ್ತೊಂದು ಗಾದೆಮಾತುಗಳು ನಮ್ಮ ಜಾನಪದದ ಅರಿವಿಗೆ ದರ್ಪಣ ಹಿಡಿಯುವಂತೆ ಗೋಚರವಾಗುತ್ತದೆ. ಹಲವು ಗಾದೆಗಳು ಅಶ್ಲೀಲವೆನಿಸಬಹುದಾದರೂ ಅವುಗಳ ಅರ್ಥಸಂಪತ್ತು ವಿಶೇಷ ಆಕರ್ಷಣೆಯನ್ನು ಹೊಂದಿವೆ.

'ಹೊಲಮನಿಯ ಪದಗಳು' ಎಂಬ ಸಂಕಲನದಲ್ಲಿ ಕೇವಲ ಪದಗಳಿರದೆ, ಒಗಟುಗಳೂ ಸಂಕಲಿತವಾಗಿರುವದರಿಂದ ಈ ಪುಸ್ತಕಕ್ಕೆ ಬೇರೆ ಸಮಂಜಸವಾದ ಶೀರ್ಷಿಕೆಯನ್ನು ಆಯ್ದುಕೊಳ್ಳಬಹುದಿತ್ತು.

ಇಲ್ಲಿಯ ಹಾಡುಗಳಲ್ಲಿ ನಮ್ಮ ಹಳ್ಳಿಗರ ನೂರಾರು ಭಾವನೆಗಳು ರಸ-ವತ್ತಾಗಿ ಮೈತಳೆದು ನಿಂತಿದೆ. ಹಳ್ಳಿಗಳು ಅನೇಕರು ತಿಳಿದಿರುವಂತೆ ಬರಿ ಭಕ್ತಿಯ ಬಿಡಾರುಗಳಲ್ಲ, ಅಲ್ಲಿಯೂ ವಿವಿಧ ರಸಗಳ ಸಂಚಾರವಿರುವದನ್ನು ಈ ಸಂಗ್ರಹದ 'ಕಾಮ–ಪ್ರೇಮ'ಗಳಂಥ ತ್ರಿಪದಿಗಳಲ್ಲಿ ಗುರುತಿಸಬಹುದಾಗಿದೆ. ಈ ನುಡಿಗಳ ಎದೆಯಲ್ಲಿ ಹಲವಾರು ಸಲ ಅಶ್ಲೀಲತೆಯ ಸ್ಪಂದನ ಸ್ಪಷ್ಟವಾಗಿ ಗೋಚರವಾಗುತ್ತದೆ 'ಹಾಸ್ಯದ ಹಂತಿ' ಯಲ್ಲಿಯೂ ಇದೇ ಬಗೆಯ ಸಂವೇದನೆಯ ಮಿಡಿತವನ್ನು ಕಾಣಬಹುದಾಗಿದೆ.

ಇಲ್ಲಿ ರೇಖಿಸಲ್ಪಟ್ಟ ಹಾಡುಗಳ ಭಾವನೆಗಳು ಇನ್ನುಳಿದ ಜಾನಪದ ಕಾವ್ಯದಲ್ಲಿಯ ಭಾವನೆಗಳಿಗಿಂತ ಭಿನ್ನವಾಗಿಲ್ಲವಾದರೂ ತನ್ನದೇ ಆದ ನುಡಿಗಳಲ್ಲಿ ಹೇಳಿರುವದು ಜನಪದದ ಸಾಹಿತ್ಯ ಶಕ್ತಿಯ ಸಂಕೇತವಾಗಿದೆ. ಒಂದೇ ಭಾವನೆಯನ್ನು ವಿವಿಧ ನುಡಿಗಳಲ್ಲಿ ಎರಕ ಹೊಯ್ದು ಮೈತಳೆಯುವಂತೆ ಮಾಡುವ ಮೋಡಿತನವನ್ನು ನೋಡಲು ಇವುಗಳ ಅಭ್ಯಾಸ ಅವಶ್ಯವೆಂದೆನಿಸುತ್ತದೆ.

ಸಂಪದ್ಭರಿತ ಸಾಹಿತ್ಯದಿಂದ ಕೂಡಿರುವ ಈ ಗ್ರಂಥಗಳು ಒಳ್ಳೆಯ ಅಚ್ಚು ಹಾಗೂ ಮುಖಪುಟಗಳನ್ನು ಹೊಂದಿದ್ದರೆ ಇನ್ನೂ ಆಕರ್ಷಕವಾಗಬಹುದಿತ್ತು.

ಜನಪದ ಸಾಹಿತ್ಯವು ಒಂದು ಪ್ರಾದೇಶಿಕ ಭಾಷೆಯಲ್ಲಿ ಮೈದಳೆದಿರುವದರಿಂದ ಅಲ್ಲಿಯ ಹಲವಾರು ಶಬ್ದಗಳು ಭಿನ್ನ ಪ್ರದೇಶದ ಜನತೆಗೆ ಅರ್ಥವಾಗಲಿಕ್ಕಿಲ್ಲ. ಇಂಥ ಅಪರಿಚಿತ ಶಬ್ದಗಳಿಂದ ಹಲವಾರು ಸಲ ರಸಗ್ರಹಣಕ್ಕೆ ಭಂಗ ಬರಬಹುದಾಗಿದೆ. ಆದುದರಿಂದ ಅಂಥ ಪದಗಳನ್ನು ಹೆಕ್ಕಿ ಅವುಗಳಿಗೆ ಸಮಾನವಾದ-ಎಲ್ಲರಿಗೂ ತಿಳಿಯಬಹುದಾದ ಪದಗಳನ್ನು ಕೊಟ್ಟರೆ ಈ ಪುಸ್ತಕಗಳ ಉಪಯೋಗ ಇನ್ನೂ ಹೆಚ್ಚಬಹುದು.

★ ಶಿವಪ್ರಕಾಶ ಶಿಗ್ಲಿ

ನಮ್ಮ ಪ್ರವಾಸ : ಲೇಖಕರು : ಕೆ. ಕೊಟ್ರಗೌಡ ಬಿ.ಕಾಮ್ ಬಿ.ಎಲ್. ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿ ಬೊಮ್ಮನಹಳ್ಳಿ ಬೆಲೆ ೨-೫೦ ಪೈಸೆ (೧೯೬೯).

ಶ್ರೀ ಕೆ. ಕೊಟ್ರಗೌಡರು ವೈ. ಎಂ. ಗಂಗಾಧರಪ್ಪನವರ ಜೊತೆ ಭಾರತಾದ್ಯಂತ ಪ್ರವಾಸ ಮಾಡಿದ ಅನುಭವ(?)ವನ್ನು ಇಲ್ಲಿ ಪ್ರಕಟಿಸಿದ್ದಾರೆ. ನಲ್ವತ್ತೆರಡು ಪುಟದುದ್ದಕ್ಕೂ ನಡೆಯುವ ಈ ಕಥನವನ್ನು ೧೮ ಪ್ರಕರಣಗಳಲ್ಲಿ ' ವರದಿಸಿ 'ದ್ದಾರೆ.

ನಾನು ಬರೆಯುತ್ತಿರುವದು ಒಂದು ಪುಸ್ತಕದ ವಿಮರ್ಶೆಯಾದುದರಿಂದ ಮುನ್ನುಡಿಯಲ್ಲಿರಬಹುದಾದ ಸುಳ್ಳಿಗೆ ಇಲ್ಲಿ ಅವಕಾಶ ಕೊಟ್ಟು, ವಿಮರ್ಶೆಯನ್ನು ವ್ಯಕ್ತಿನಿಷ್ಠಗೊಳಿಸುವ ಕಾರ್ಯವನ್ನು ಮಾಡಬೇಕಾಗಿಲ್ಲ. ಪ್ರವಾಸ ಸಾಹಿತ್ಯ ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗುವ ವರದಿ–ಎರಡೂ ಎಲ್ಲ ದೃಷ್ಟಿಗಳಲ್ಲಿಯೂ ಒಂದೇ ಜಾತಿಗೆ ಸೇರಿದ ಪ್ರಕಾರಗಳಲ್ಲವೆಂಬುದನ್ನು ಒಪ್ಪಿಕೊಂಡರೆ **'ನಮ್ಮ ಪ್ರವಾಸ'** ಸಾಹಿತ್ಯಿಕ ಬರಹವಾಗಿಲ್ಲ ಎಂದೆನಿಸುತ್ತದೆ. ತನ್ನ ಪ್ರವಾಸ, ನೋಡಿದ ಪಟ್ಟಣ, ಆದ ಘಟನೆ, ದಿನಾಂಕಗಳನ್ನು ಬೆತ್ತಲೆಯಾಗಿ ನಿರೂಪಣೆ ಮಾಡಿದರೆ ಅದು ಪ್ರವಾಸ ಸಾಹಿತ್ಯ ಆಗಲಾರದು. ನೈಜ ಘಟನೆಗಳನ್ನು ನಿರೂಪಣೆ ಮಾಡುವದರ ಜೊತೆಗೆ, ರಂಗು ರಂಗಾಗಿ ಹೇಳುವ ಕಲಾವಂತಿಕೆ, ಓದಿಸಿಕೊಂಡು ಹೋಗುವ 'ಕಾದಂಬರಿ ಗುಣ' ಅಂಥ ಬರವಣಿಗೆಯ ಅವಿಭಾಜ್ಯ ಅಂಗವಾಗಬೇಕು. ಹೀಗೆಂದ ಮಾತ್ರಕ್ಕೆ ಸತ್ಯವನ್ನು ಸಂಪೂರ್ಣವಾಗಿ ಮರೆಮಾಚಿ ಕೇವಲ ಕಲ್ಪನಾಲೋಕದಲ್ಲಿ ವಿಹರಿಸಬೇಕು-ಎಂದು ಇದರ ಅರ್ಥವಲ್ಲ. ಸಾಹಿತ್ಯದ ಯಾವುದೇ ಪ್ರಕಾರಕ್ಕೂ ಕಲ್ಪನೆಯ ಅಂಶ ಅವಶ್ಯ ತಾನೆ?

ಈ ಪುಸ್ತಕದಲ್ಲಿಯ ದೋಷಗಳನ್ನು ಈ ರೀತಿಯಾಗಿ ಯಾದಿ ಮಾಡಬಹುದು.

೧. ಸಾಹಿತ್ಯದ ಅಂಶವನ್ನು ಕೂಡಿರದ ಶುಷ್ಕ ಬರಹ

೨. ಸರಿಯಾದ ವಾಕ್ಯರಚನೆಯ ಅಭಾವ, ಹಲವೆಡೆ ಅರ್ಥಕೊಡದ. ಮೇಲಾಗಿ ಅಪಾರ್ಥವನ್ನುಂಟು ಮಾಡುವ ವಾಕ್ಯವೃಂದ.

೩. ಅನಾವಶ್ಯಕವಾದ ಇಂಗ್ಲಿಷ ಪದಗಳ ಮಿತಿ ಮೀರಿದ ವ್ಯರ್ಥ ಉಪಯೋಗ ಹಾಗೂ

೪. ಅಚ್ಚಿನ (?) ಅಗಣಿತ ದೋಷಗಳು.

ಇಲ್ಲಿಯ ಪ್ರಥಮ ಅಂಶ ಈ ಪುಸ್ತಕದ ಪ್ರತಿ ಪುಟದಲ್ಲಿ ಲಭ್ಯವಿರುವದರಿಂದ ಅದನ್ನು ಹಿಂಜಿ ತೋರಿಸುವ ಯತ್ನವನ್ನು ಮಾಡಬೇಕಿಲ್ಲ.

" ಗಾಂಧೀಜಿಯವರು ನಮ್ಮ ಸ್ವಾತಂತ್ರ್ಯಕ್ಕೆ ಜೀವ ಸವೆಸಿ ಅದರಲ್ಲೇ ಪ್ರಾಣಬಿಟ್ಟರಷ್ಟೆ? ಅವರ ಬಗ್ಗೆ ಎಲ್ಲಾ ರಾಷ್ಟ್ರದವರು ನಮ್ಮ ದೇಶಕ್ಕೆ ಬಂದವರೆಲ್ಲಾ ಸಮಾಧಿಗೆ ಬಂದು "ಶಾಂತಿದೂತನಿಗೆ" ವಂದನೆ ಸಲ್ಲಿಸಿ ಹೋಗುತ್ತಾರೆ." ಈ ಹೇಳಿಕೆಯಲ್ಲಿ ಗಾಂಧಿಜಿಯವರನ್ನು ಲೇಖಕರು "ಶಾಂತಿದೂತ"ನೆಂದು ಸಂಬೋಧಿಸಿ, ಹಾಸ್ಯಾಸ್ಪದವೆನಿಸುವ ಅಸತ್ಯವನ್ನು ಸೇರಿಸಿದ್ದಾರೆ.

"ರೈಲಿನ ಗಾಲಿಗಳನ್ನು Original ಪ್ರದೇಶಗಳಿಂದ ತರಿಸಿಕೊಂಡು ಇಲ್ಲಿಯ ರಿಪೇರಿಗೆ ಬಂದ ರೈಲುಗಳಿಗೆ ಹೊಂದಿಸುತ್ತಾರೆ." (ಪುಟ ೪೨) ಇಲ್ಲಿ Original ಗಾಲಿ Original ಪರದೇಶವಾಗಿ ಅಸಹ್ಯವೆನಿಸುವ ಅರ್ಥವನ್ನು ಹುಟ್ಟಿಸುತ್ತದೆ.

ಇನ್ನು ಕೆಲವು ಆಂಗ್ಲಪದಗಳನ್ನು ಇಲ್ಲಿ ನೋಡಬಹುದು. University Compass (ಪು ೮) ಮಾರ್ಕ್, ಟೆಂಪರೇಚರ್, Advocate, Supreme ಕೋರ್ಟ್ ಕ್ಯೂ, ಹೀಗೆ ಅನೇಕ ಪದಗಳ 'ಕ್ಯೂ'ವನ್ನು ಇಲ್ಲಿ ಕಾಣಬಹುದು. ಸುಮಾರು ಒಂದೂವರೆ ಪುಟ ತಿದ್ದುಪಡಿಯನ್ನು ಕೊಟ್ಟಿದ್ದರೂ ಇನ್ನೂ ಅಜ್ಞಾನ (?) ದೋಷಗಳು ಗಮನಾರ್ಹ ಪ್ರಮಾಣದಲ್ಲಿ ಉಳಿದಿರುವದು ವಿಷಾದನೀಯ. ಏಕವಚನ ಹಾಗೂ ಬಹುವಚನಗಳ ಸರಿಯಾದ ಪ್ರಯೋಗ ಇಲ್ಲಿ ಅನೇಕ ಕಡೆ ಕಾಣುವದಿಲ್ಲ. ಇಷ್ಟೆಲ್ಲ ದೋಷಗಳನ್ನು ಇಟ್ಟುಕೊಂಡು, ಬೇಗ ಪ್ರಕಟಿಸಬೇಕೆಂಬ ಹಂಬಲವನ್ನು ಅದೇಕೆ ಇವರು ಹೊಂದಿದರೋ ಅರ್ಥವಾಗದು.

ಮುಂದಿನ ಬರಹದಲ್ಲಿ ಶ್ರೀ ಕೊಟ್ರಗೌಡರ ಬರಹ ಸಾಹಿತ್ಯಿಕವಾಗುವುದರ ಜೊತೆಗೆ, ಅಂದವಾದ, ದೋಷರಹಿತ ಪುಸ್ತಕವನ್ನು ಹೊರತರಬಹುದೆಂದು ಆಶಿಸುತ್ತೇನೆ.

★ ಶಿವಪ್ರಕಾಶ ಶಿಗ್ಲಿ

ಪ್ರಾಯೋಗಿಕ ವಿಮರ್ಶೆ : ಸಂಪಾದಕರು : ಜಿ. ಎಸ್. ಶಿವರುದ್ರಪ್ಪ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ. ಪ್ರಕಾಶಕರು : ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್. ಪ್ರಕಟಣ ಮತ್ತು ಪ್ರಸಾರೋಪನ್ಯಾಸ ವಿಭಾಗ, ಬೆಂಗಳೂರ ವಿಶ್ವವಿದ್ಯಾಲಯ, ಬೆಂಗಳೂರು-೧ ಪುಟ : 172+XVI, ಬೆಲೆ : ೬-೦೦ ರೂ,

ಒಂದು ಕಾಲದಲ್ಲಿ ಸಮಾಲೋಕನ, ಸಮೀಕ್ಷೆಗಳ ಸ್ತರಗಳ ಕೆಲಸ ಮಾಡುತ್ತಿದ್ದ ವಿಮರ್ಶೆ ಇಂದು ತನ್ನ ನೈಜ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಲಿದೆ. ಒಂದು ಕೃತಿಯ ಒಳಹೊಕ್ಕು, ಅದರ ಪದರು ಪದರುಗಳನ್ನು ಬಿಚ್ಚಿ ನೋಡಿ, ಸೋಲು ಗೆಲುವುಗಳನ್ನು ಕಳೆದು ಕೂಡಿಸಿ ಅದರ ಬೆಲೆಯನ್ನು ನಿಗದಿ ಮಾಡುವ ಕಾರ್ಯ ಈಗ ನಡೆದಿದೆ. ಸಂಕ್ರಮಣ, ಸಾಕ್ಷಿ, ಮನ್ವಂತರಗಳಲ್ಲದೆ ಪ್ರಜಾವಾಣಿ, ಕನ್ನಡಪ್ರಭಗಳಂಥ ಪತ್ರಿಕೆಗಳೂ ಇಂಥ ವಿಮರ್ಶೆಗೆ ಅವಕಾಶವನ್ನು ನೀಡುತ್ತಲಿವೆ. ಸ್ವತಂತ್ರ ಕೃತಿರಚನೆಗಿರುವಷ್ಟೇ ಮಹತ್ವವು ಇಂದು ವಿಮರ್ಶನ ಕಾರ್ಯಕ್ಕೂ ಬಂದಿದೆಯೆಂದು ಹೇಳಬಹುದು. ವಸ್ತುನಿಷ್ಠವಾದ ವಿಮರ್ಶೆ ಈಚೆಗೆ ಬೆಳೆಯುತ್ತಿರುವದು ಗಮನಾರ್ಹವಾದುದು. ಆದಾಗ್ಯೂ ವಿಮರ್ಶಾ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ಈ ದಿಶೆಯಲ್ಲಿ ಬೆಂಗಳೂರ ವಿಶ್ವವಿದ್ಯಾಲಯದವರು ಪ್ರಕಟಿಸಿದ 'ಪ್ರಾಯೋಗಿಕ ವಿಮರ್ಶೆ' ಒಂದು ಮಹತ್ವದ ಸಾಧನೆಯೆಂದು ಹೇಳಬಹುದು.

ಈ ಗ್ರಂಥದಲ್ಲಿ ಪಂಪನಿಂದ ರಾಮಾನುಜನ್‌ರವರೆಗಿನ ಕವಿಗಳ ಕಾವ್ಯ ಖಂಡ ಹಾಗೂ ಕವನಗಳ ವಿಮರ್ಶೆಯಿದೆ. ಪರಿವಿಡಿಯಿಂದಲೇ ಇಲ್ಲಿ ಹಳಗನ್ನಡ, ನಡುಗನ್ನಡ, ನವೋದಯ, ನವ್ಯ ಕಾವ್ಯದ ಭಾಗಗಳು ವಿಮರ್ಶಿಸಲ್ಪಟ್ಟಿರುವುದು ತಿಳಿದುಬರುತ್ತದೆ. ಒಟ್ಟು ಹತ್ತೊಂಬತ್ತು ವಿಮರ್ಶಾ ಲೇಖನಗಳಲ್ಲಿ ನವ್ಯ ಕಾವ್ಯದ ವಿಮರ್ಶೆಗೆ ಸಿಂಹಪಾಲು ದೊರಕಿದೆ,

ಇಲ್ಲಿಯ ವಿಮರ್ಶಕರಲ್ಲಿ ಟಿ. ಎಸ್. ವೆಂಕಣ್ಣಯ್ಯ, ಕುವೆಂಪು ಅವರನ್ನು ಬಿಟ್ಟರೆ, ಉಳಿದವರೆಲ್ಲ ವಿಮರ್ಶೆಯ ಹೊಸ ಒಲವುಗಳಿಗೆ ಬದ್ಧರಾದವರು. ವೆಂಕಣ್ಣಯ್ಯ, ಕುವೆಂಪು ಅವರ ವಿಮರ್ಶೆಯಲ್ಲಿ ಕಾವ್ಯಭಾಗವನ್ನು ಸಾಧ್ಯವಿದ್ದಷ್ಟು ವಿವರವಾಗಿ ಅರ್ಥೈಸುವ, ಕವಿ ಕಲ್ಪನಾಶಕ್ತಿಯ ಭವ್ಯ ದರ್ಶನ ಮಾಡಿಕೊಡುವ ದೃಷ್ಟಿಯಿದ್ದರೆ, ಉಳಿದವರಲ್ಲಿ ಕಾವ್ಯದಲ್ಲಿ ಮೂರ್ತಗೊಂಡ ಮೂಲಭೂತ ಸಂವೇದನೆಗಳನ್ನು ಆಯಾ ಕವಿಗಳು ಎಷ್ಟು ಸಾರ್ಥಕವಾಗಿ, ಧ್ವನಿಯುಕ್ತವಾಗಿ ಅಭಿವ್ಯಕ್ತಗೊಳಿಸಿದ್ದಾರೆಂಬುದನ್ನು ವಿಶ್ಲೇಷಿಸುವ ಪ್ರಯತ್ನವಿದೆ. ಕವಿತೆಯ ಬಂಧ, ಭಾಷೆಗಳನ್ನೂ ಇವರು ವಿಮರ್ಶೆಗೆ ಒಳಪಡಿಸುತ್ತಾರೆ. ಪದ–ಪದಗಳನ್ನು ವೆಂಕಣ್ಣಯ್ಯ, ಕುವೆಂಪು ಹಿಗ್ಗಿಸಿ ನೋಡುತ್ತಿದ್ದರೆ, ಇವರು ಉಜ್ಜಿ ನೋಡುತ್ತಾರೆ. ಕವಿಯ ಅಂತರಂಗವನ್ನು ಹೊಕ್ಕು, ಆತನ ಇಂಗಿತವನ್ನು ಗ್ರಹಿಸಿಕೊಂಡು, ಕವಿತೆಯಲ್ಲಿಯ ಭಾವಾನುಭೂತಿಯು ಝಗ್ಗನೆ ಪ್ರಕಾಶಿಸುವಂತೆ ಮಾಡುವುದು ವೆಂಕಣ್ಣಯ್ಯ ಮತ್ತು ಕುವೆಂಪು ಅವರ ವಿಮರ್ಶೆ. ಇದನ್ನು ವಿಮರ್ಶೆಯನ್ನುವದಕ್ಕಿಂತ ಚಿಂತನಶೀಲ ಕಾವ್ಯಾನು-ಸಂಧಾನ ಎಂದು ಕರೆಯುವದು ಉಚಿತವೆನಿಸುತ್ತದೆ. ಆದರೂ ಕಾವ್ಯವೊಂದನ್ನು ಅದರ ಮುಖ್ಯ ವಿವರಗಳಲ್ಲಿ ಅರ್ಥೈಸುವ ದೃಷ್ಟಿಯಲ್ಲಿರುವದರಿಂದ ಇದೂ 'ಪ್ರಾಯೋಗಿಕ ವಿಮರ್ಶೆ'ಯ ಲಕ್ಷಣವುಳ್ಳದ್ದಾಗಿ ಅದರ ವ್ಯಾಪ್ತಿಯೊಳಗೇ ಬರುವಂತಾಗಿದೆ.

ಪೂರ್ಣಚಂದ್ರ ತೇಜಸ್ವಿ, ಎಚ್. ಎಂ. ಚೆನ್ನಯ್ಯ, ಎಂ. ಜಿ. ಕೃಷ್ಣಮೂರ್ತಿ, ಜಿ. ಎಸ್. ಸಿದ್ಧಲಿಂಗಯ್ಯ, ಅ. ರಾ. ಮಿತ್ರ ಇವರು ಹಿಂದಿನ ಕಾವ್ಯ ಭಾಗಗಳನ್ನು ಆಯ್ದುಕೊಂಡು, ಆಧುನಿಕ ವಿಮರ್ಶೆಯ ಮಾನದಂಡದಿಂದ ಮೌಲ್ಯಮಾಪನ ಮಾಡ ಹೊರಟಿದ್ದಾರೆ. ಇವರು ಹೆಚ್ಚಾಗಿ ಕಾವ್ಯ ಬಂಧನ ಹಾಗೂ ಭಾಷೆಯ ಹೊಲಿಗೆಗಳನ್ನು ಬಿಚ್ಚುತ್ತ, ಅದರ ಒಳತೋಟಿಯನ್ನು ತೆರೆದಿಡುತ್ತ, ಕವಿಯ ಅಭಿವ್ಯಕ್ತಿಯ ಕೌಶಲ್ಯ, ಸಾಮರ್ಥ್ಯಗಳನ್ನು ತೂಕ ಮಾಡುತ್ತ, ಕಾವ್ಯದ ಒಟ್ಟು ಮೌಲ್ಯವನ್ನು ಕಂಡು ಹಿಡಿಯಲು ಯತ್ನಿಸುತ್ತಾರೆ, ಇವರ ವಿಮರ್ಶೆ ಕವಿಯ ಕೇಂದ್ರಭಾವದೊಂದಿಗೆ ಬೆಳೆದು ಬರುತ್ತಿದ್ದು ಕೆಲವು ಸಂದರ್ಭಗಳಲ್ಲಿ ಕವಿಯ ದೃಷ್ಟಿಗೂ ಮೀರಿದುದೆನ್ನಬಹುದಾದ ಹೊಸ ವಿಚಾರವೊಂದನ್ನು ಮಿಂಚಿಸಿ, ಕವಿತೆಗೆ ಹೊಸ ಆಯಾಮವನ್ನು ನಿರ್ಮಿಸಿ

ಕೊಡುತ್ತದೆ ಇದು ಪ್ರಾಯೋಗಿಕ ವಿಮರ್ಶೆಯಲ್ಲಿ ಮಹತ್ವದ ಅಂಶವೆಂದು ಹೇಳಬಹುದು ಆದರೆ ಒಮ್ಮೊಮ್ಮೆ ಇಷ್ಟೆಲ್ಲ ಅರ್ಥವನ್ನು ಸ್ಫುರಿಸುವಂತೆ ಕವಿಯು ಅಭಿವ್ಯಕ್ತಿಯಲ್ಲಿ ಜಾಣ್ಮೆ ತೋರಿಸಿದ್ದಾನೆಯೇ ಎಂಬ ಸಂದೇಹಕ್ಕೆಡೆಗೊಡುವಷ್ಟು ವಿಮರ್ಶಕರ ಊಹೆ ಕಾಣಿಸಿಕೊಳ್ಳುತ್ತದೆ. ಎಂ. ಜಿ. ಕೃಷ್ಣಮೂರ್ತಿಯವರ ಬಹುಶೈಲಿಯುಳ್ಳ ವಿಮರ್ಶೆಯಲ್ಲಿ ಇಂಥ ಊಹೆ ಬೆಳೆದು ಬಂದಿದ್ದುದನ್ನು ಕಾಣಬಹುದು. ಹೀಗೆ ಊಹೆ ನಿರಂಕುಶವಾಗಿ ಬೆಳೆದರೆ ವಿಮರ್ಶೆ ಅತಿವ್ಯಾಪ್ತಿಯ ದೋಷಕ್ಕೆ ಪಕ್ಕಾಗುವ ಅಪಾಯವಿಲ್ಲದಿಲ್ಲ. ಈ ವಿಭಾಗದಲ್ಲಿ ಪೂರ್ಣಚಂದ್ರತೇಜಸ್ವಿ ಮತ್ತು ಅ. ರಾ. ಮಿತ್ರ ಅವರು ಅಗತ್ಯಕ್ಕಿಂತ ಹೆಚ್ಚಾಗಿ ಮಾತಾಡದ ವಿಮರ್ಶಕರು.

ಸುಮತೀಂದ್ರ ನಾಡಿಗ, ಎಂ. ಎಸ್. ಜಯರಾಂ, ಜಿ ಎಸ್. ಶಿವರುದ್ರಪ್ಪ ಇವರು ನವೋದಯ ಕಾಲದ ಮೂವರು ಮಹತ್ವದ ಕವಿಗಳ ಒಂದೊಂದು ಕವಿತೆಯನ್ನು ವಿಮರ್ಶೆಗೆ ಆಯ್ದುಕೊಂಡಿದ್ದಾರೆ. ಬೇಂದ್ರೆಯವರ 'ಜೋಗಿ' ಕವಿತೆಯನ್ನು ವಿಶ್ಲೇಷಿಸಲು ನಾಡಿಗರು ಮಾಡಿದ ಪ್ರಯತ್ನ ಸಂಪೂರ್ಣ ಫಲಕಾರಿಯಾಗಿದೆಯೆಂದು ಹೇಳಲಿಕ್ಕಾಗದು. ಆಧ್ಯಾತ್ಮಿಕ ಅನುಭವವುಳ್ಳ ಈ ಕವಿತೆ ಅಂಥ ಅನುಭವವುಳ್ಳ ಇನ್ನೊಬ್ಬ ವ್ಯಕ್ತಿಗೆ ಇನ್ನೂ ಹೆಚ್ಚಿನ ಅರ್ಥವನ್ನು ಕೊಡಬಲ್ಲುದು. ಎಂ. ಎಸ್. ಜಯರಾಂ ಅವರು ಕೊಡುವ ತೀರ್ಪುಗಳು ಕುವೆಂಪು ಅವರ 'ದೇವರ ರುಜು ಮಾಡಿದನು' ಕವಿತೆಗೆ ಕೊನೆಯ ಮಾತುಗಳೇನೂ ಆಗಲಿಕ್ಕಿಲ್ಲ. ನವೋದಯ ಸಂಪ್ರದಾಯದ ಭೂಮಿಕೆಯ ಮೇಲೆ ನಿಂತು ನೋಡಿದಾಗ 'ಕವನದ ಕೊಲೆ,' 'ಶೋಷಣೆಯಾಗಿದೆ' ಎಂಬ ಕಟೂಕ್ತಿಗಳು ಇನ್ನೂ ಸೌಮ್ಯವಾಗಬಹುದಿತ್ತು ಎನಿಸುತ್ತದೆ ಪು. ತಿ. ನ. ಅವರ "ಪ್ರತೀಕ್ಷೆ" ಕವಿತೆಯಲ್ಲಿ ಅಭಿವ್ಯಕ್ತಿಯೇ ಸರಸವಾಗಿದ್ದುದರಿಂದ ಜಿ. ಎಸ್. ಶಿವರುದ್ರಪ್ಪನವರ ವಿಶ್ಲೇಷಣೆ ಸುಗಮವಾಗಿ ಸಾಗುತ್ತದೆ. ಇದೊಂದು ಏರಿಳಿತಗಳಿಲ್ಲದ ಚೊಕ್ಕಟವಾದ ವಿಮರ್ಶೆಯೆಂದು ಹೇಳಬಹುದು

ಎಂ. ಜಿ ಕೃಷ್ಣಮೂರ್ತಿಯವರ "ಭೂಮಿಗೀತ"ದ ವಿಮರ್ಶೆಯಿಂದ ನವ್ಯ ಕಾವ್ಯದ ವಿಮರ್ಶೆ ಪ್ರಾರಂಭವಾಗುತ್ತದೆ. ಇವರ ಈ ಹಿಂದಿನ "ಐದು ವಚನಗಳು" ವಿಮರ್ಶೆಗಿಂತ ಇದು ಹೆಚ್ಚು ಪರಿಣಾಮಕಾರಿಯಾಗಿದೆ ಅಡಿಗರ ಅತ್ಯಂತ ಮಹತ್ವದ ಸಂಕೀರ್ಣವಾದ-ಜಟಿಲವಾದ-ಈ "ಭೂಮಿಗೀತ"ದ ಬಗೆ ಬಂದ ವಿಮರ್ಶೆಗಳಲ್ಲಿಯೇ ಇದು ಮಿಗಿಲಾದದ್ದೆನಿಸುತ್ತದೆ. ಯು. ಆರ್. ಅನಂತಮೂರ್ತಿಯವರು ಬಹಳ ಜತನದಿಂದ ವಿಮರ್ಶೆ ಮಾಡಬಲ್ಲವರಾದರೂ "ಭೂತ" ಕವಿತೆಯ ವಿಮರ್ಶೆಯ ಆರಂಭದಲ್ಲಿ ಪ್ರಶ್ನಾತ್ಮಕವಾಗಿ ಸಾಗುವ ವಿವರಣೆ ಅಡ್ಡಗೋಡೆಯ ಮೇಲಿಟ್ಟ ದೀಪದಂತಿದೆ. ಈ Style ನಲ್ಲಿ ಕಂಡುಬರುವ ಒಂದು ಬಗೆಯ ದುರೂಹತೆ ವಿಮರ್ಶಕನ ಅಸಹಾಯಕತೆಯನ್ನು ಸೂಚಿ

ಸುತ್ತದೆ. ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಮಾಡಿದ "ಪರ್ಥಮಾನ"ದ ವಿಮರ್ಶೆ ಹಿತಮಿತವಾದುದು. ಎಚ್. ಎಂ. ಚೆನ್ನಯ್ಯ ಅವರು ಕೆ. ಎಸ್. ನ. ಅವರ ಎರಡು ಕವಿತೆಗಳನ್ನು ಆಯ್ದುಕೊಂಡು, ಪ್ರತ್ಯೇಕವಾಗಿ ವಿಶ್ಲೇಷಿಸುವದರ ಜೊತೆಗೆ ಪರಸ್ಪರ ತೂಗಿ ನೋಡಿದ್ದು ಗಮನಾರ್ಹವಾಗಿದೆ. ಚಂದ್ರಶೇಖರ ಕಂಬಾರರು ಜಿ. ಎಸ್. ಶಿವರುದ್ರಪ್ಪನವರ ಒಂದು Typical ಕವಿತೆ (ತಂತ್ರ ದೃಷ್ಟಿಯಿಂದ) "ಮುಂಬೈ ಜಾತಕ"ವನ್ನು ವಿಮರ್ಶೆಗೆ ಆಯ್ದುಕೊಂಡಿದ್ದಾರೇನೋ ನಿಜ. ಕವಿತೆಯ ವಿಮರ್ಶೆಗಿಂತ, ಆಧುನಿಕ ಕವಿಗಳಲ್ಲಿ ಶಿವರುದ್ರಪ್ಪನವರ ಸ್ವಂತಿಕೆಯ ವೈಶಿಷ್ಟ್ಯವನ್ನು ಪ್ರಸ್ತಾಪಿಸುವದರ ಕಡೆಗೇ ಲಕ್ಷ್ಯವಿಟ್ಟದ್ದರಿಂದ, ವಿಮರ್ಶೆ ಉತ್ತರ ನೋಡಿ ಲೆಕ್ಕಬಿಡಿಸಿದಂತಾಗಿದೆ. ಜಿ. ಎಚ್. ನಾಯಕರು ಅದೇ ಕವಿಯ "ಮಬ್ಬಿನಿಂದ ಮಬ್ಬಿಗೆ" ಕವಿತೆಯ ವಿಮರ್ಶೆಯನ್ನು ನೇರವಾಗಿ ಮಾಡಿ, "ಪ್ರಾಯೋಗಿಕ ವಿಮರ್ಶೆ"ಗೆ ಒಂದು ಸಾರ್ಥಕ ಮಾದರಿ ಹಾಕಿಕೊಟ್ಟಿದ್ದಾರೆ. ಹೀಗಿದ್ದೂ ಇವರ ದಾಕ್ಷಿಣ್ಯ ಭಾವ ಆಯಾ ಹೊತ್ತಿನಲ್ಲಿ ವಿಮರ್ಶೆಯ ಬಿಗುವನ್ನು ಸಡಿಲುಗೊಳಿಸುವದನ್ನು ಅಲ್ಲಲ್ಲಿ ಕಾಣಬಹುದು. ಕವಿತೆಯ ಅರ್ಥವಂತಿಕೆಯನ್ನು ಗುರುತಿಸುವ ಆಯಕಟ್ಟಿನ ಪ್ರಸಂಗಗಳಲ್ಲಿ ನಾಯಕರು "ಅದು ಎಷ್ಟರಮಟ್ಟಿಗೆ ಸಾರ್ಥಕವಾಗಿದೆ, ಎನ್ನುವದು ಪ್ರಶ್ನೆ" ಎಂದು ಮೂಗೆಳೆದು ಜಾರಿಕೊಳ್ಳಲು ಯತ್ನಿಸುತ್ತಾರೆ. ಅವರ ಈ ಒಂದು ವಿಮರ್ಶೆಯಲ್ಲಿಯೇ ಇಂಥ ಐದು ವಾಕ್ಯಗಳು ಕಂಡುಬರುವದು ನಿರ್ಲಕ್ಷಿಸುವಂಥದಲ್ಲ. ಆರ್. ಸಿ. ಕುಲಕರ್ಣಿಯವರು ಚೆನ್ನವೀರ ಕಣವಿಯವರ "ಕಾಲ ನಿಲ್ಲುವದಿಲ್ಲ" ಎಂಬ ಕವಿತೆಯನ್ನು ವಿಶ್ಲೇಷಣೆಗೊಳಪಡಿಸುವ ಮೊದಲು, ಕವಿಯ ಈ ವರೆಗಿನ ಕಾವ್ಯಸೃಷ್ಟಿಯನ್ನೇ ವಕ್ರದೃಷ್ಟಿಯಿಂದ ನೋಡಲು ಹೊರಟಂತೆ ತೋರುತ್ತದೆ. ಅವರ ಪೀಠಿಕೆಯ ವಾಕ್ಯಾವಳಿಯಲ್ಲಿ ಇದನ್ನು ಗಮನಿಸಬಹುದು. ಅಷ್ಟಲ್ಲದೆ ನಾಲ್ಕು ಪುಟದ ಒಂದು ಕವಿತೆಯನ್ನು ಎರಡು ಪುಟಗಳಲ್ಲಿ ವಿಶ್ಲೇಷಿಸಲು, ಬೆಲೆ ಕಟ್ಟಲು ಹೊರಟಿದ್ದುದು ವಿಸ್ಮಯಕಾರಿಯಾಗಿದೆ. ಹೀಗೆಂದಾಗ "ಪ್ರಾಯೋಗಿಕ ವಿಮರ್ಶೆ"ಯಲ್ಲಿ ಸಂಕ್ಷಿಪ್ತತೆಗೆ ಅವಕಾಶವೇ ಇರುವದಿಲ್ಲವೆಂದರ್ಥವಲ್ಲ. ಅದು ಸಂಕ್ಷಿಪ್ತವಾದಾಗ ಸಾಂದ್ರವಾಗಿ, ಸೂತ್ರಬದ್ಧವಾಗಿ, ಕವಿತೆಯ ಎಲ್ಲ ಸಾಧ್ಯತೆಗಳನ್ನು ಕ್ರೋಢೀಕರಿಸಿದ್ದಾಗಿರಬೇಕು. ಇಲ್ಲಿ ಹಾಗೆ ಮಾಡಿದ್ದು ಕಂಡುಬರುವದಿಲ್ಲ. ಗೌರೀಶ ಕಾಯ್ಕಿಣಿಯವರು "ಸಂಕ್ರಮಣ"ದಲ್ಲಿ ಬಹಳ ದಿನಗಳ ಹಿಂದೆ ಕಣವಿಯವರ ಈ ಕವಿತೆ ಮತ್ತು ಚಿತ್ತಾಲರ "ಹರಿವ ನೀರಿದು" ಕವಿತೆ ಎರಡನ್ನೂ ತೌಲನಿಕವಾಗಿ ವಿಶ್ಲೇಷಿಸಿದ ವಿಮರ್ಶೆಯನ್ನು ಓದಿದವರಿಗೆ ಆರ್. ಸಿ. ಕುಲಕರ್ಣಿಯವರ ಈ ವಿಮರ್ಶೆ ನಿರಾಶೆಯನ್ನುಂಟುಮಾಡುತ್ತದೆ. ಡಿ. ಎ. ಶಂಕರ ಅವರ ವಿಮರ್ಶೆ ಈ ಗ್ರಂಥದಲ್ಲಿಯೇ ವಿಶಿಷ್ಟವಾದುದು. ರಾಮಾನುಜನ್‌ರ ಕಾವ್ಯ ಶಕ್ತಿಯ

ಕೆಲವು ಸ್ಯಾಂಪಲ್‌ಗಳನ್ನು ಎದುರಿಗಿಡುತ್ತ, ಅಲ್ಲಿಯ ಹೇಳಿಕೆಗಳು, ಪ್ರತಿಮೆಗಳು ಎಂಥವೆಂಬುದನ್ನು ಅವರು ತೋರಿಸಿಕೊಡುತ್ತಾರೆ. ಒಂದು ಸೆಮಿನಾರಿನಲ್ಲಿ ಪ್ರತಿಪಾದಿಸುವ ವಾದಸರಣಿಯಂತೆ ವಿಮರ್ಶೆ ಸಾಗುತ್ತದೆ. ವಿಮರ್ಶನದ ಜೊತೆಗೆ ಅನುಬಂಧದ ಕವಿತೆಯನ್ನು ನೋಡುತ್ತ ಹೊರಟರೆ ಒಂದಿಷ್ಟು ಗೊಂದಲವುಂಟಾಗುವಂತಿದೆ. ಯಾಕೆಂದರೆ ಪೂರ್ವಾರ್ಧದಲ್ಲಿ ಸೂಚಿತವಾದ ಪದ್ಯಗಳ ಸುಳಿವೇ ಅನುಬಂಧದಲ್ಲಿಲ್ಲ. ಅಂತೂ ಕೊನೆಯ ಗಳಿಗೆಯಲ್ಲಿ ಸಂಪಾದಕರು ಅಭ್ಯಾಸಿಗಳಿಗೆ ಕೈ ಕೊಟ್ಟಂತಾಯಿತೇನೋ ?

ಪೀಠಿಕೆಯಲ್ಲಿ ಸೂಚಿಸಿದಂತೆ "ಪ್ರಾಯೋಗಿಕ ವಿಮರ್ಶೆ"ಯ ಬಹುಪಾಲು ಲಕ್ಷಣಗಳನ್ನು ಇಲ್ಲಿಯ ಲೇಖನಗಳು ಒಳಗೊಂಡಿವೆ. ವಿಮರ್ಶಕನ ಅಭಿರುಚಿ, ಅಭ್ಯಾಸಗಳಿಗನುಗುಣವಾಗಿ ಕಾವ್ಯದ ಶೋಧನೆ, ವಿಶ್ಲೇಷಣೆ, ಮೌಲ್ಯ ಮಾಪನ ಇಲ್ಲಿ ನಡೆದಿದೆ. ಕನ್ನಡದ ಮಹತ್ವದ ಕವಿ-ವಿಮರ್ಶಕರು ಹೆಚ್ಚಾಗಿ ಇಲ್ಲಿಯ ಲೇಖಕರಾದ್ದರಿಂದ ಒಂದೊಂದು ಲೇಖನವೂ ಮತ್ತೆ ಮತ್ತೆ ಓದಿ ಚಿಂತಿಸುವಂತಿದೆ. ಕವಿತೆಯ ಸ್ಪಂದನದ ವಿವಿಧ ತರಂಗಗಳನ್ನು ಮೀಟುವ ಈ "ಪ್ರಾಯೋಗಿಕ ವಿಮರ್ಶೆ"ಯು ಕನ್ನಡ ವಿಮರ್ಶಾ ಸಾಹಿತ್ಯದಲ್ಲಿ ನಿಸ್ಸಂದೇಹವಾಗಿ ಒಂದು ಮೈಲುಗಲ್ಲಾಗದಿರದು.

★ ಗುರುಲಿಂಗ ಕಾಪಸೆ

ಕರುಣೆ : ಕೆ. ವಿರೂಪಾಕ್ಷಗೌಡ, ಶ್ರೀ ಕೊಟ್ಟೂರೇಶ ಪ್ರಕಾಶನ, ಬಾಂಚಿಗೊಂಡನಹಳ್ಳಿ, ಜಿ. ಬಳ್ಳಾರಿ. ಬೆಲೆ ರೂ. ೧-೦೦ (೧೯೭೨).

ಮೂವತ್ನಾಲ್ಕು ಪುಟಗಳ ಈ ಸಂಕಲನದಲ್ಲಿ ೨೨ ಕವನಗಳು ಹಾಗೂ ಮೂವತ್ತೆರಡು ಚುಟುಕುಗಳೂ ಅಚ್ಚನ್ನು ಕಂಡಿವೆ. ಈಗಾಗಲೇ ೫-೬ ಕವನ ಸಂಗ್ರಹಗಳನ್ನು ಬರೆದು ಪ್ರಕಟಿಸಿರುವ ಕೆ. ವಿರೂಪಾಕ್ಷಗೌಡರು ಈ ಸಂಕಲನದಲ್ಲಿ ಓದಲೇಬೇಕಾದ ಹಲವು ಕವನಗಳನ್ನಾದರೂ ಕೊಡದೇ ಇದ್ದುದು ತೀರಾ ಅನಿರೀಕ್ಷಿತವಲ್ಲವಾದರೂ ವಿಷಾದದ ಸಂಗತಿಯಾಗಿದೆ. ಬೆಳೆಯುವ ಕವಿ ಒಂದು ಸಂಕಲನದಿಂದ ಮತ್ತೊಂದು ಸಂಕಲನಕ್ಕೆ ಒಂದರ್ಥದಲ್ಲಿ ಭಿನ್ನವಾಗಿ ಹೋಗುತ್ತ. ಬೇರೆ ಬೇರೆ ದೃಷ್ಟಿಕೋನಗಳನ್ನು ತೋರುತ್ತ ಮುನ್ನಡೆಯುತ್ತಾನೆ. ಈ ದೃಷ್ಟಿಕೋನ ಆರೋಗ್ಯಕರವೇ? ಅಥವಾ ಬೇರೆಯೋ ಎಂಬ ಮಾತು ಬೇರೆ. ಒಂದು ಒಳ್ಳೆಯ ಕವಿತೆ ಹುಟ್ಟಬೇಕಾದರೆ ಬರಿ ಬರೆಯಬೇಕೆಂಬ ಛಲ ಮುಖ್ಯವಲ್ಲವೆಂಬ ಮಾತು ಈ ಕವನ ಸಂಗ್ರಹವನ್ನು ಅಭ್ಯಸಿಸುವವರಿಗೆ ಮನವರಿಕೆಯಾಗದಿರಲಾರದು.

ಕೇವಲ ಸಂಖ್ಯೆಯನ್ನು ಅಧಿಕಗೊಳಿಸುವ ಏಕೈಕ ಅರ್ಥತೂನ್ಯ ಆಸೆಯಿಂದ, ಕೊನೆಯ ಪಕ್ಷ ಸುಂದರವಾದ ಗದ್ಯವೂ ಆಗದ ಹಲವು ಕವನಗಳು ಇಲ್ಲಿ ತಲೆ ಎತ್ತಿವೆ. 'ಕವಿವಾತು' ಎಂಬ ಕವನ ಇದಕ್ಕೆ ಉದಾಹರಣೆಯಾಗಬಹುದು :

ಅಹಂಕಾರ ಹೂಂಕರಿಸುವ
ಹಂದಿಯಂತೆ ಚಿಮ್ಮಿ ನಡೆವ
ವ್ಯಕ್ತಿ ಕಾಣೆ ದೂರಿರು

ಅವನ ಸ್ನೇಹ ಸೆಣಸು ಬಿಟ್ಟು
ಬಹಳ ದೂರ ಹಾರು
ಎಂತಿದ್ದರೂ ಹೊಲಸು ನೀರು
ಸಿಡಿಯಬಹುದು ತುಂತುರು.

ವಿರೂಪಾಕ್ಷಗೌಡರೇ ಇನ್ನೊಮ್ಮೆ – ಅಚ್ಚು ಹಾಕುವ ಪೂರ್ವದಲ್ಲಿ ಈ ಕವನವನ್ನು ಓದಿದ್ದರೆ ಒಂದು ಕೆಟ್ಟ ಕವನವನ್ನಾದರೂ ಕಡಿಮೆ ಮಾಡಬಹುದಿತ್ತೇನೋ. ಈ ಮಾತು ಇಲ್ಲಿರುವ ಅನೇಕ ಚುಟುಕುಗಳಿಗೂ ಅನ್ವಯಿಸುವ ಶರಾವಾಗಿದೆ. ಚುಟುಕಿನ ಲಕ್ಷಣ ಕೇವಲ ಉದ್ದದಲ್ಲಿ ಗಿಡ್ಡವಾಗಿರುವುದಲ್ಲ. ಓದಿದೊಡನೆ ಸಹೃದಯನ ಚಿತ್ತವನ್ನು ಸೆರೆ ಹಿಡಿಯುವಂತಿರಬೇಕು. ಇಂತಹ ಚಿತ್ತಾಕರ್ಷಕ ಶಕ್ತಿ, ಕಣ್ಸೆಳೆವ ಕಲಾವಂತಿಕೆ ಬಹುತೇಕ ಇಲ್ಲಿಯ ಯಾವ ಕವನಕ್ಕೂ ಇಲ್ಲದುದರಿಂದ, ಕವನ ಸಂಗ್ರಹ ತೀರಾ ಸಪ್ಪೆಯಾಗಿದೆ ಎನ್ನದೆ ವಿಧಿಯಿಲ್ಲ.

ಈ ಸಂಕಲನದಲ್ಲಿ ನಾಲ್ಕು 'ಶಿಶು ಗೀತೆ'ಗಳೂ ಇವೆ. ಬಾಲಕರಿಗಾಗಿ ಬರೆದ ಈ ಕವನಗಳು ಬಾಲಿಶವಾಗಿವೆ. ಶಿಸು ಗೀತೆಗಳಲ್ಲಿರಬಹುದಾದ ಗೇಯತೆ, ಸರಳತನ, ಪದ ಲಾಲಿತ್ಯ ಇವುಗಳ ಸೋಂಕೂ ಇಲ್ಲಿಲ್ಲ. ಮೂರು ಕವನಗಳು ನವ್ಯ ಕಾವ್ಯದ ಧಾಟಿಯಲ್ಲಿ ಬರೆಯಲ್ಪಟ್ಟಿವೆಯಾದರೂ. ಅದರಲ್ಲಿರಬೇಕಾದ ಶಕ್ತಿವಿಶೇಷ ಅರ್ಥ, ಅರ್ಥಸಂಪತ್ತು ಇಲ್ಲದುದು ಸುಸ್ಪಷ್ಟವಿದೆ. ಕೇವಲ ಮುಕ್ತ ಛಂದದಲ್ಲಿ ಗೀಚಿದರೆ ನವ್ಯಕವನ ಆವಿಷ್ಕಾರ ಗೊಂಡಿತು ಎಂಬ ಭ್ರಮೆ ಇನ್ನೂ ಹಲವರಲ್ಲಿ ಬೇರೂರಿದಂತಿದೆ. ಕೆಲವು ಕವನಗಳಲ್ಲಿ (ಉದಾ : 'ಪುಸ್ತಕ ವಿಮರ್ಶೆ' 'ಪ್ರಕಟಣೆ' 'ಅಧಿಕಾರಿ ಕಸಬು' 'ಅರಮನೆ–ಚಿಕ್ಕ') ಕವಿ ಅನ್ಯಾಯವಾಗುತ್ತಿರುವುದನ್ನು ಕಂಡು ವಿಷಾದಿಸುತ್ತಾನೆ. ಆದರೆ ಇಲ್ಲಿ ಸೂಕ್ಷ್ಮವಾಗಿ ಹೇಳಬೇಕಾದುದು ತೀರ ವಾಚ್ಯವಾಗಿದೆ.

ಆದರೂ ಅಲವಡೆ ಕೆಲವು ಸಾಲುಗಳು ಇದ್ದುದರಲ್ಲಿ ಸುಂದರವಾಗಿ ಬಂದಿವೆ. ಕೆಲವನ್ನಿಲ್ಲಿ ಮೇಲಂಕಾಡಿಸಬಹುದು :

" ಸತ್ತೆಮ್ಮೆ ಗೊಡ್ಡಿನ ತೊಗಲು ಸುಲಿದಂತಿಹುದು
ಸೀಸದಂತಹ ಕಲ್ಲು ಕೆದರಿ ಗುಡ್ಡ " (ಪ್ರೇಸಿಂಗ ಉಪ್ಪಾಮು)

" ಕಸಬರಿಗೆ ಮುಸಮುಸನೆ ನೆಲನೆಕ್ಕಿ
ಕಸಕಡ್ಡಿಯನು ತಾಕಿ
ಅತ್ತೊಮ್ಮೆ ಇತ್ತೊಮ್ಮೆ ಆಡುತ್ತದೆ ಹಾಕಿ
.... " (ನಪ್ಯಾಮಂದಯ)

★ ಶಿವಪ್ರಕಾಶ ಶಿಗ್ಲಿ

ಸಾದರ ಸ್ವೀಕಾರ

೧. **ಬೆನ್ನ ಹಿಂದಿನ ಬೆಳಕು** (ಕವನ ಸಂಕಲನ):

ಸಂ: ಶ್ರೀ ಶಾಂತರಸ ರಾಯಚೂರು; ಪ್ರ: ಸತ್ಯಸ್ನೇಹ ಪ್ರಕಾಶನ, ರಾಯಚೂರು; ಪುಟ: ೨೬೫ + viii; ಬೆಲೆ: ೧೫ ರೂಪಾಯಿ, ಕ್ಯಾಲಿಕೋ ಪ್ರತಿ: ೨೦ ರೂಪಾಯಿ; ೧೯೭೨.

೨. **ಕಣ್ಣು ನಾಲಗೆ ಕಡಲು** (ಕವನ ಸಂಕಲನ):

ಲೇ: ದೊಡ್ಡರಂಗೇಗೌಡ; ಪ್ರ: ಅಭಿಜಾತ ಪ್ರಕಾಶನ, ಬೆಂಗಳೂರು; ಪುಟ: viii + ೫೦; ಬೆಲೆ: ಮೂರು ರೂಪಾಯಿ. ೧೯೭೨.

೩. **ನನ್ನ ಪಯಣ** (ಕವನ ಸಂಕಲನ):

ಲೇ: ರಘುರಾಮರಾವ್ ಬೈಕಂಪಾಡಿ; ಪ್ರ: ಗೀತಾ ಬುಕ್ ಹೌಸ್, ಮೈಸೂರು; ಪುಟ: xx + ೯೨; ಬೆಲೆ: ೫ ರೂಪಾಯಿ. ೧೯೭೨.

೪. **ಬೆಂಕಿ – ಬೇರು** (ಕವನ ಸಂಕಲನ):

ಲೇ: ಸರಜೂ. ಹ. ಕಾಟಕರ ಮತ್ತು ಸತೀಶ ಕುಲಕರ್ಣಿ: ಪ್ರ: ವಿವೇಕಾನಂದ ಪ್ರಕಾಶನ, ನರಗುಂದ; ಪುಟ: ೪೦; ಬೆಲೆ: ೧–೫೦ ಪೈಸೆ; ೧೯೭೨.

೫. **ಪುಷ್ಪಹಾರ** (ಕವನ–ಚುಟುಕುಗಳು):

ಲೇ: ವೆಂಕಟೇಶ ಹುಣಶೀಕಟ್ಟಿ: ಪ್ರ: ಪ್ರೊ. ವೆಂಕಟೇಶ ಹುಣಶೀಕಟ್ಟಿ. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜ, ಹೊನ್ನಾವರ (ಉ. ಕ); ಪುಟ: x + ೬೪; ಬೆಲೆ: ೨–೫೦; ೧೯೭೨.

೬. **ಗಿರಿಯ ಪರಂಜ್ಯೋತಿ** (ಪದ್ಯ ಸಂಗ್ರಹ):

ಲೇ: ಎಸ್. ಎಸ್. ಕೋತೀನ; ಪ್ರ: ಅಪರ್ಣಾ ಪ್ರಕಾಶನ, ಚಿಕ್ಕೋಡಿ; ಪುಟ: xi + ೭೦; ಬೆಲೆ: ಮೂರು ರೂಪಾಯಿ, ೧೯೭೨.

೭. **ಮೂರು ದೀಪಾವಳಿ** (ಕಾದಂಬರಿ):

ಲೇ: ಬೆಳಗೆರೆ ಪಾರ್ವತಮ್ಮ; ಪ್ರ: ಪ್ರದೀಪ ಪ್ರಕಾಶನ, iv ಕ್ರಾಸ್ ರೋಡ್, ಸತ್ಯನಾರಾಯಣಪೇಟೆ, ಬಳ್ಳಾರಿ: ಪುಟ: ೧೯೬: ಬೆಲೆ: ೨-೫೦: ೧೯೭೨.

೮. **ಮಹಾಕವಿ ಕುವೆಂಪು** (ವ್ಯಕ್ತಿ ಚಿತ್ರ):

ಲೇ: ಮಲ್ಲೇಶ ಬಾರ್ಕರ್ (ಬಾಮ); ಪ್ರ: ಆರ್. ಭರಮಲಿಂಗಪ್ಪ ಮಾಸ್ತರ್, 'ಗಂಗೋತ್ರಿ' ಪ್ರಕಾಶನ, ರಾಮಸಾಗರ (ಬಳ್ಳಾರಿ ಜಿಲ್ಲೆ): ಪುಟ: ೩೬ + ೮; ಬೆಲೆ: ೦–೫೦ ಪೈಸೆ; ೧೯೭೨.

೯. **ಕರ್ನಾಟಕ ಸಂಘ ಮತ್ತು ವಾಚನಾಲಯ** (ಸ್ಮರಣ ಸಂಚಿಕೆ):

ಸಂ: ಅನಂತ ಕಲ್ಲೋಳ. ಪ್ರ: ಕರ್ನಾಟಕ ಸಂಘ, ಸಾಹಿತ್ಯೋತ್ಸವ ಸಮಿತಿ, ಬೆಳಗಾವಿ; ಪುಟ: ೪೦. ಬೆಲೆ: ೦–೫೦ ಪೈಸೆ: ೧೯೭೨.

ಸಂಪಾದಕೀಯ

ಕುಲಪತಿ ಡಾ. ಎಚ್. ನರಸಿಂಹಯ್ಯನವರಿಗೆ ಸ್ವಾಗತ

ಶಿಕ್ಷಣಕ್ಷೇತ್ರವನ್ನೇ ತಮ್ಮ ಜೀವನದ ಧ್ಯೇಯವನ್ನಾಗಿರಿಸಿಕೊಂಡ ಹಾಗೂ ವಿದ್ಯಾರ್ಥಿಸಮೂಹದ ಅಪಾರ ಪ್ರೇಮಾದರಗಳಿಗೆ ಪಾತ್ರರಾದ ಡಾ. ಎಚ್. ನರಸಿಂಹಯ್ಯನವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳನ್ನಾಗಿ ನಿಯಮಿಸಿ, ರಾಜ್ಯ ಸರಕಾರ ತನ್ನನ್ನು ತಾನೇ ಗೌರವಿಸಿಕೊಂಡಿದೆ. ಶಿಸ್ತು, ತ್ಯಾಗ, ಸರಳಜೀವನ ಮೊದಲಾದ ಗುಣಗಳಿಗೆ ಹೆಸರಾದ ಡಾ. ನರಸಿಂಹಯ್ಯನವರು ಇಂದಿನ ಯುವಜನಾಂಗದಲ್ಲಿ ಆ ಗುಣಗಳನ್ನು ಬಿತ್ತಲು ಸಮರ್ಥರು. ಆ ಕಾರ್ಯದಲ್ಲಿ ಅವರಿಗೆ ಯಶ ದೊರೆಯಲಿ ಎಂದು ಹಾರೈಸಿ 'ಭಾರತಿ' ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ

ಹೆಸರಾಂತ ವಿದ್ವಾಂಸರೂ, ಹಿರಿಯ ಪ್ರಾಧ್ಯಾಪಕರೂ ಆದ ಪ್ರೊ. ಎಸ್. ಎಸ್. ಭೂಸನೂರಮಠ ಅವರ "ಶೂನ್ಯ ಸಂಪಾದನೆಯ ಪರಾಮರ್ಶೆ" ಎಂಬ ಗ್ರಂಥಕ್ಕೆ ೧೯೭೨ ನೆಯ ವರ್ಷದ ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ ದೊರೆತುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಎಪ್ಪತ್ತಕ್ಕೂ ಮಿಗಿಲಾಗಿ ವಚನಕಾರರ, ಸುಮಾರು ೨೦೦೦ ವಚನಗಳನ್ನೊಳಗೊಂಡ ಈ ಕೃತಿ ಪ್ರೊ. ಭೂಸನೂರಮಠ ಅವರ ಜೀವನ ಪಕ್ವಫಲ. ಲೋಕಮಾನ್ಯ ಟಿಳಕರ ಗೀತಾರಹಸ್ಯ ಮೊದಲಾದ ಉದ್ಗ್ರಂಥಗಳ ಸಾಲಿನಲ್ಲಿ ನಿಲ್ಲುವ ಈ ಕನ್ನಡ ಗದ್ಯಮಹಾಕಾವ್ಯಕ್ಕೆ ಸಂದ ಗೌರವ ಕರ್ನಾಟಕಕ್ಕೇ ಸಂದ ಗೌರವ. ಅವರಿಂದ ಕನ್ನಡ ಸಾಹಿತ್ಯ ಕಣಜ ಇನ್ನೂ ಅಭಿವೃದ್ಧಿಯಾಗಲಿ ಎಂದು 'ಭಾರತಿ' ಹೃತ್ಪೂರ್ವಕವಾಗಿ ಅಭಿವಂದಿಸುತ್ತದೆ.

ರಾಜ್ಯಸರಕಾರದಿಂದ ಸಾಹಿತಿಗಳಿಗೆ ಪುರಸ್ಕಾರ:

ಮೈಸೂರು ರಾಜ್ಯದ ಸಾಹಿತ್ಯಅಕಾಡೆಮಿ ಪ್ರತಿವರುಷ ಉನ್ನತ ಮಟ್ಟದ ಗ್ರಂಥಗಳಿಗೆ ಬಹುಮಾನ ನೀಡುವುದರ ಮೂಲಕ ವಿವಿಧ ಕ್ಷೇತ್ರಗಳ ಸಾಹಿತಿಗಳನ್ನು ಗೌರವಿಸುತ್ತಲಿದೆ. ಈ ವರುಷ ಈ ಗೌರವ ಗಳಿಸಿದವರು: **ಕಾದಂಬರಿ:** ದ್ವಿತೀಯ ಬಹುಮಾನ ಶ್ರೀ ಸೂರ್ಯನಾರಾಯಣ ಚಡಗ ಅವರ "ಮನೆತನ" **ಕಾವ್ಯ :** ಪ್ರಥಮ ಬಹುಮಾನ: ಶ್ರೀ ಸಮೇತನಹಳ್ಳಿ ರಾಮರಾಯರು ಅವರ "ಶಾಕುಂತಲ" ದ್ವಿತೀಯ ಬಹುಮಾನ: ಶ್ರೀ ಸೋಮಶೇಖರ ಇಮ್ರಾಪೂರ ಅವರ, "ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ"; **ಸಣ್ಣ ಕಥೆ:** ಶ್ರೀ ಸಮಾ

ಶಿವ ಅವರ "ಅಪರಿಚಿತರು"; ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ: ಪ್ರಥಮ ಶ್ರೀ ಜಿ. ಆರ್. ಲಕ್ಷ್ಮಣರಾವ್ ಅವರ "ವಿಜ್ಞಾನ ವಿಚಾರ"; ದ್ವಿತೀಯ: ಡಾ. ಪಿ. ಎಸ್ ಶಂಕರ ಅವರ "ಹೃದಯ ರೋಗಗಳು"; ಶಾಸ್ತ್ರೀಯ ಗ್ರಂಥ: ಪ್ರಥಮ: ಶ್ರೀ ಎಂ. ಜಿ. ವೆಂಕಟೇಶಯ್ಯ ಅವರ "ಶಬ್ದಾವರ್ತ ನಿರುಕ್ತ"; ದ್ವಿತೀಯ: ಡಾ. ಜಿ. ಎಸ್. ಕುಳ್ಳಿ ಅವರ: "ವರ್ಣನಾತ್ಮಕ ಭಾಷಾ ವಿಜ್ಞಾನ"; **ಅನುವಾದ**: ಪ್ರಥಮ ಡಾ. ಎನ್. ಎಸ್. ಅನಂತರಂಗಾಚಾರ್ಯ ಅವರ "ಯತೀಂದ್ರಮತದೀಪಿಕೆ"; ದ್ವಿತೀಯ: ಶ್ರೀ ಶಂಭು ಶರ್ಮಾ ನಾಜುಗಾರ ಅವರ "ಧರ್ಮಸಿಂಧು"; **ಪ್ರಾಚೀನ ಕಾವ್ಯಸಂಪಾದನೆ** ಪ್ರಥಮ: ಶ್ರೀ ಬಿ. ಎನ್. ಚಂದ್ರಯ್ಯ ಅವರ "ಶಾಂತೇಶನ ಸಿದ್ಧೇಶ್ವರ ಪುರಾಣಂ"; ದ್ವಿತೀಯ: ಡಾ. ಕೆ. ಜಿ. ಶಾಸ್ತ್ರಿ ಅವರ "ಸದಾನಂದ ವಿರಚಿತ ಪೌಲೋಮ ಆಸ್ತೀಕ ಪರ್ವ"; **ಪ್ರವಾಸ ಸಾಹಿತ್ಯ**: ಪ್ರಥಮ: ಶ್ರೀ ಕು.ಶಿ. ಹರಿದಾಸ ಭಟ್ಟ ಅವರ "ಇಟಲಿಯ ನಾನು ಕಂಡಂತೆ."

ಈ ಪರಂಪರೆಯನ್ನು ಪ್ರಾರಂಭಿಸಿದ ಸರಕಾರಕ್ಕೆ, ಈ ಗೌರವವನ್ನು ಗಳಿಸಿದ ಮೇಲಿನ ಎಲ್ಲ ಸಾಹಿತಿಗಳಿಗೆ 'ಭಾರತಿ' ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಶ್ರದ್ಧಾಂಜಲಿ

ಭಾರತದ ಹಿರಿಯ ಮುತ್ಸದ್ದಿ, ಸಾಹಿತಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಇನ್ನಿಲ್ಲ. ೧೯೭೨ನೆಯ ಡಿಸೆಂಬರ್ ೨೫ರ ಸಂಜೆ ಅವರು ತಮ್ಮ ಜೀವನದ ಕೊನೆಯುಸಿರೆಳೆದರು. ದಿ. ರಾಜಾಜಿಯವರದು ೯೪ ವರುಷಗಳ ತುಂಬು ಜೀವನ. ಕೊನೆಯವರೆಗೂ ಹೋರಾಟಗಾರರಾಗಿಯೇ ಬದುಕಿದರು. ಸ್ವಾತಂತ್ರ್ಯಾನಂತರದ ಭಾರತದ ಮೊದಲ ಗವರ್ನರ್ ಜನರಲ್ಲರಾಗಿ, ಮದ್ರಾಸಿನ ಮುಖ್ಯ ಮಂತ್ರಿಯಾಗಿ, ರಾಜ್ಯಪಾಲರಾಗಿ, ಒಂದು ರಾಷ್ಟ್ರೀಯ ಪಕ್ಷದ ಸಂಸ್ಥಾಪಕರಾಗಿ ಹಾಗೂ ಖ್ಯಾತ 'ಸ್ವರಾಜ್ಯ' ಪತ್ರಿಕೆಯ ಸಂಪಾದಕರಾಗಿ ರಾಷ್ಟ್ರಕ್ಕೆ ಅವರು ನೀಡಿದ ಸೇವೆ ಹಿರಿದಾಗಿದೆ. ದಿವಂಗತರು ಸಾಹಿತ್ಯ ಕ್ಷೇತ್ರದಲ್ಲಿಯೂ ಅಪಾರ ಸೇವೆ ಸಲ್ಲಿಸಿದ್ದಾರೆ. ತಮಿಳು ಹಾಗೂ ಇಂಗ್ಲಿಷ್‌ನಲ್ಲಿಯ ಸಾಹಿತ್ಯ, ಅವರು ರಚಿಸಿದ ರಾಮಾಯಣ, ಮಹಾಭಾರತ ಹಾಗೂ ಉಪನಿಷತ್ತು ಮತ್ತು ತತ್ವಜ್ಞಾನಗಳ ಬಗ್ಗೆ ನಿರ್ಮಿಸಿದ ಸಾಹಿತ್ಯ ಮುಂಬರುವ ಪೀಳಿಗೆಗೆ, ಜಿಜ್ಞಾಸುಗಳಿಗೆ ಜ್ಞಾನಾಮೃತ ನೀಡುತ್ತಲೇ ಇರುವವು. ಅವರ ನಿಧನ ದೇಶಕ್ಕೆ ತುಂಬಿ ಬಾರದ ಹಾನಿ. ಅವರಂಥವರು ದೊರೆಯುವುದು ಅಪರೂಪ. 'ಭಾರತಿ' ಅಗಲಿದ ಭಾರತ ರತ್ನನಿಗೆ ತನ್ನ ಶ್ರದ್ಧಾಂಜಲಿಗಳನ್ನರ್ಪಿಸುತ್ತ, ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂದು ಪ್ರಾರ್ಥಿಸುತ್ತದೆ

ಹಿರಿಯ ತಲೆಮಾರಿನ ಕನ್ನಡ ಪ್ರಾಧ್ಯಾಪಕರೂ, ಜಮಖಂಡಿ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದ ಪ್ರಿ. ಎಚ್. ಕೆ. ಲಗಳಿಯವರ ನಿಧನದಿಂದ ಕರ್ನಾಟಕ ಓರ್ವ ಖ್ಯಾತ ವಿದ್ವಾಂಸರನ್ನು ಕಳೆದುಕೊಂಡಿದೆ. ಕ. ವಿ. ವಿ ದ ಅಕೆಡೆಮಿಕ್ ಕೌನ್ಸಿಲ್ಲಿನ ಸದಸ್ಯರೂ ಆಗಿದ್ದ ದಿವಂಗತರು ಉತ್ತರ ಕರ್ನಾಟಕದಲ್ಲಿ ಕನ್ನಡದ ಅಭಿವೃದ್ಧಿಗೆ, ಶಿಕ್ಷಣದ ಸಂವರ್ಧನೆಗೆ ವಿಶೇಷ ದುಡಿದವರು. ಅವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ ಎಂದು ಪ್ರಾರ್ಥಿಸುತ್ತ, 'ಭಾರತಿ' ತನ್ನ ಕಂಬನಿಗಳನ್ನರ್ಪಿಸುತ್ತದೆ.

ಲೇಖಕರ ಪರಿಚಯ

೧. ಶ್ರೀ ಸೋಮಶೇಖರ ಇಮ್ರಾಪೂರ :
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ., ಧಾರವಾಡ.

೨. ಶ್ರೀ ಪ್ರ. ಗೋ. ಕುಲಕರ್ಣಿ :
ಹಿರಿಯ ವಿದ್ವಾಂಸರು, ಹಿಂದವಾಡಿ, ಬೆಳಗಾವಿ.

೩. ಶ್ರೀ ಸಿಂಪಿ ಲಿಂಗಣ್ಣ :
ಹೆಸರಾಂತ ಸಾಹಿತಿಗಳು, ಚಡಚಣ (ಬಿಜಾಪುರ ಜಿಲ್ಲೆ).

೪. ಡಾ. ಎಂ. ಎಂ. ಕಲಬುರ್ಗಿ :
ರೀಡರ್, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೫. ಶ್ರೀ ಕೆಳದಿ ಗುಂಡಾ ಜೋಯಿಸ್ :
ಕೆಳದಿ ವಸ್ತುಸಂಗ್ರಹಾಲಯ, ಕೆಳದಿ.

೬. ಶ್ರೀ ವಿಲ್ಯಂ ಮಾಡ್ತಾ :
ಭಾಷಾಶಾಸ್ತ್ರದ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ.

೭. ಡಾ. ಆರ್. ಎನ್. ಗುರವ :
ವಿಶ್ರಾಂತ ರೆವಿನ್ಯೂ ಅಧಿಕಾರಿಗಳು, ಸಿವ್ಹಿಲ್ ಆಸ್ಪತ್ರೆ ರಸ್ತೆ, ಧಾರವಾಡ.

೮. ಶ್ರೀ ಎನ್. ಪ್ರಭುಸ್ವಾಮಿ :
ಅರ್ಥಶಾಸ್ತ್ರ ವಿಭಾಗ, ಮಹಾರಾಜಾ ಕಾಲೇಜು, ಮೈಸೂರು.

೯. ಶ್ರೀ ಬಿ. ಆರ್. ಸುರಪುರ :
ಪ್ರಿನ್ಸಿಪಾಲ್, ಸರ್ಕಾರಿ ಕಾಲೇಜು, ಸಿಂಧನೂರು (ರಾಯಚೂರು).

೧೦. ಶ್ರೀ ಎಸ್. ಕೃಷ್ಣಭಟ್ಟ :
ಇಂಗ್ಲೀಷ್ ವಿಭಾಗ, ಆಚಾರ್ಯ ಪಾಠಶಾಲೆ ಸಂಜೆ ಕಾಲೇಜು, ಬೆಂಗಳೂರು.

೧೧. ಶ್ರೀ ಬಿ. ಎಸ್. ಹಣಜಿ :
ಕನ್ನಡ ಅಧ್ಯಾಪಕರು, ನರಗುಂದ.

೧೨. ಶ್ರೀ ಎಚ್. ಜಿ. ಲೋಕೂರ :
ಕನ್ನಡ ಅಧ್ಯಾಪಕರು, ಲಿಂಗರಾಜಾ ಕಾಲೇಜು, ಬೆಳಗಾವಿ.

೧೩. ಶ್ರೀ ಪಿ. ಹ. ರಾಮಕೃಷ್ಣರಾವ್ :
ಹಿಂದಿ ಅಧ್ಯಾಪಕರು, ಎಸ್. ಜೆ. ವಿ. ಪಿ. ಕಾಲೇಜು, ಹರಿಹರ.

೧೪. ಶ್ರೀ ಎಚ್. ಜಿ. ಬೆಂಗೇರಿ :
ವಿಜಯನಗರ ಕಾಲೋನಿ, ಹುಬ್ಬಳ್ಳಿ

೧೫. ಶ್ರೀ ಶಿವಪ್ರಕಾಶ ಶಿಗ್ಲಿ :
ಇಂಗ್ಲೀಷ್ ಅಧ್ಯಾಪಕರು, ಎಂ.ವಿ ಕಾಲೇಜು, ಲಕ್ಷ್ಮೇಶ್ವರ (ಧಾರವಾಡ ಜಿಲ್ಲೆ)

೧೬. ಶ್ರೀ ಗುರುಲಿಂಗ ಕಾಪಸೆ :
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

---

೧೨೧. ಸಾಮಾಜಿಕ ಭದ್ರತೆ — ಎಚ್. ವಿ. ನಾಗೇಶ್

೧೨೨. ಸಾಮಾಜಿಕ ಸಮಸ್ಯೆಗಳು — ಕೆ. ಜಿ. ಜೋಶಿ

೧೨೩. ಕರ್ನಾಟಕದಲ್ಲಿ ನವಶಿಲಾಯುಗ — ಬಾ. ರಾ. ಗೋಪಾಲ್

೧೨೪. ಜೀವಾವಶೇಷಗಳು — ಎಂ. ಎಸ್. ಮನ್ನಿಕೇರಿ

೧೨೫. ವಿಜಯನಗರ ಕಾಲದ ಧಾರ್ಮಿಕ ಜೀವನ — ಸದ್ಯೋಜಾತ ಸ್ವಾಮೀಜಿ

೧೨೬. ಡಾ. ಬೊರಾನಾ ಅವರ ಸಂಶೋಧನೆಗಳು — ಎಚ್. ಕೆ. ಮಲ್ಲಿಕಾರ್ಜುನಪ್ಪ

೧೨೭. ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ — ಎಲ್. ಜಿ. ಜೋಶಿ

೧೨೮. ಕಾರ್ಮಿಕ ಮತ್ತು ಯೋಜನೆ — ಟಿ. ಕೆ. ಪೇಟಿ

೧೨೯. ಭಾರತೀಯ ಹಬ್ಬಗಳು — ಸಿ. ವಿ. ಕೆರಿಮನಿ

೧೩೦. ಕುಷ್ಠರೋಗ ನಿವಾರಣೆ — ಎಸ್. ಜಿ. ನಾಗಲೋಟಿಮಠ

೧೩೧. ಶ್ರವಣಾತೀತ ಧ್ವನಿ — ಡಿ. ಆರ್. ಬಳೂರಗಿ

೧೩೨. ಸಿಮೆಂಟ್ ಕಾಂಕ್ರೀಟ್ — ಬಸವರಾಜ ಪುರಾಣಿಕ

೧೩೩. ಜನಪದ ಕಾವ್ಯ — ಗಿರಡ್ಡಿ ಗೋವಿಂದರಾಜ

೧೩೪. ಜಂತುರೋಗಗಳು — ಪಿ. ಎಸ್. ಶಂಕರ

೧೩೫. ಶ್ರೀ ಅರವಿಂದರ ಮಹಾಕಾವ್ಯ : 'ಸಾವಿತ್ರಿ' — ಪ್ರಲ್ಹಾದ ನರೇಗಲ್ಲ

೧೩೬. ಧರ್ಮ–ಸಂಸ್ಕೃತಿ–ಸಮಾಜ — ಎನ್. ಕೆ. ಕಜೆತೋಟದ

೧೩೭. ನೈತಿಕ ಶಿಕ್ಷಣ — ಕೆ. ಶಾಂತಯ್ಯ

೧೩೮. ಬಸವಣ್ಣನವರು ಕಟ್ಟಬಯಸಿದ ಸಮಾಜ — ಸಂಗಣ್ಣ ಕುಪ್ಪಸ್ತ

೧೩೯. ಕುಮಾರವ್ಯಾಸನ ಭಾಗವತ ದೃಷ್ಟಿ — ಎ. ಆರ್. ಬುರ್ಲಿ

೧೪೦. ಹರಿಹರನ ಮೂರು ರಗಳೆಗಳು — ಎಂ. ಎಸ್. ಲಠ್ಠೆ

೧೪೧. ಪ್ರಾಚ್ಯವಸ್ತು ಸಂಶೋಧನೆ — ಅ. ಸುಂದರ

೧೪೨. ನವೋದಿತ ಬಂಗ್ಲಾದೇಶ —ಎ. ಎಂ. ರಾಜಶೇಖರಯ್ಯ

೧೪೩. ಕನ್ನಡದಲ್ಲಿ ಶತಕಸಾಹಿತ್ಯ —ಬಿ. ವ್ಹಿ. ಗುಂಜೆಟ್ಟಿ

೧೪೪. ಕನ್ನಡದಲ್ಲಿ ಲಲಿತ ಪ್ರಬಂಧಗಳು —ವಿ. ಎಸ್. ಸಿಂಪಿ

೧೪೫. ಇಕ್ಕೇರಿ ಅರಸರು —ಕೆ. ಗುಂಡಾಜೋಯಿಸ

೧೪೬. ಭೂಕಂಪಗಳು ಹಾಗೂ ಜ್ವಾಲಾಮುಖಿಗಳು —ಎಂ. ಎಫ್. ಕರೆಣ್ಣವರ

೧೪೭. ಟೀಕಾಚಾರ್ಯರು —ಪಿ. ಎಂ. ಗಲಗಲಿ

೧೪೮. ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು —ಬಿ. ಎಂ. ಪಂಡಿತ

೧೪೯. ರವೀಂದ್ರರ ಶೈಕ್ಷಣಿಕ ತತ್ವಜ್ಞಾನ —ಅನಂತ ಕುಲಕರ್ಣಿ

೧೫೦. ಶೇಕ್ಸ್‌ಪಿಯರನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ —ವಿ. ಕೆ. ನವಲಗುಂದ

೧೫೧. ಗುಪ್ತ ರೋಗಗಳು —ಎಸ್. ಜಿ. ನಾಗಲೋಟಿಮಠ

೧೫೨. ನಾರುಹುಣ್ಣು —ಎಸ್. ಎಸ್. ಸರಸಣಗಿ

ವಿಶೇಷ ವಾಙ್ಮಯ ಪ್ರಸಾರ ಪುಸ್ತಕ ಮಾಲೆ :

೯. ರೆವರೆಂಡ್ ಚೆನ್ನಪ್ಪ ಉತ್ತಂಗಿ : ಜೀವನ ಹಾಗೂ ಕೃತಿಗಳು ೨–೫೦

೧೦. ಸಿದ್ಧರಾಮ ಸಾಹಿತ್ಯ ಸಮೀಕ್ಷೆ ೨–೫೦

೧೧. ಅರವಿಂದರ 'ಸುಪ್ರಮಾನಸ ದರ್ಶನ' ೨–೫೦

ವಿಶೇಷ ಉಪನ್ಯಾಸ ಗ್ರಂಥಮಾಲೆ :

೧. ತಿರುಮಲಾರ್ಯ ಮತ್ತು ಚಿಕ್ಕದೇವರಾಜ ಒಡೆಯರು { ಸಾದಾ ೪–೦೦ / ಕೆಲಿಕೋ ೬–೦೦ }

—ಎಲ್. ಬಸವರಾಜು

ಜನಪದ ಕಾವ್ಯಮಾಲೆ :

೧. ಜೀವನ ಜೋಕಾಲಿ : ಚೌಪದನಗಳು ೪–೦೦

—ಸಂ. ಎಂ. ಎಸ್. ಸುಂಕಾಪುರ

೨. ಜೀವನ ಜೋಕಾಲಿ : ಸರಸ—ವಿರಸ ೪–೦೦

—ಸಂ. ಎಂ. ಎಸ್. ಸುಂಕಾಪುರ

೩. ಜೀವನ ಜೋಕಾಲಿ : ಗರತಿಯರ ಗುಂಮು ೫–೦೦

—ಸಂ. ಎಂ. ಎಸ್. ಸುಂಕಾಪುರ

೪. ಪರಮೇಶ್ವರಿಯ ಪದಗಳು ೫–೦೦

—ಸಂ. ಎಲ್. ಆರ್. ಹೆಗಡೆ

ಇತರ ಪ್ರಕಟನೆಗಳು :

೧.	ಶೂನ್ಯಸಂಪಾದನೆ (ಶಿವಗಣ ಪ್ರಸಾದಿ ಮಹದೇವಯ್ಯ ವಿರಚಿತ) —ಸಂ. ಆರ್. ಸಿ. ಹಿರೇಮಠ	೧೨-೦೦
೨.	ವೀರಶೈವ ಚಿಂತಾಮಣಿ —ಸಂ. ಆರ್. ಸಿ. ಹಿರೇಮಠ	೭-೦೦
೩.	ಶಿಕ್ಷಣ: ಆಧಾರ ಮತ್ತು ಪ್ರಥಮ ತತ್ವಗಳು —ಅನು. ವಿ. ಕೆ. ಜವಳಿ	೧೨-೦೦
೪.	ವಿಶೇಷಾನುಭವ ಷಟ್‌ಸ್ಥಲ —ಸಂ. ಆರ್. ಸಿ. ಹಿರೇಮಠ	೧೪-೦೦
೫.	ಶೂನ್ಯಸಂಪಾದನೆ (ಗುಮ್ಮಳಾಪುರದ ಸಿದ್ಧಲಿಂಗದೇವರು) —ಸಂ. ಆರ್. ಸಿ. ಹಿರೇಮಠ	೧೫-೦೦

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :
೧೦೦ ಕ್ಕೆ ೧೫ ರಂತೆ

ಇತರ ಎಲ್ಲ ಪ್ರಕಟನೆಗಳು (ಪಠ್ಯಪುಸ್ತಕ ನಿರ್ದೇಶನಾಲಯದ ಪ್ರಕಟನೆಗಳು ಹಾಗೂ ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ ರೂ.ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ:
೧೦೦ ಕ್ಕೆ ೨೫ ರಂತೆ

೫,೦೦೦ ರೂ.ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :
೧೦೦ಕ್ಕೆ ೩೩ ⅓ ರಂತೆ

* * * * *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ — ರೂ. ೨–೫೦ (ಅಂಚೆ ವೆಚ್ಚ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨–೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ೧೦೦ ರೂ. ಕಳಿಸಿ
ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"
ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು.
ಪತ್ರಿಕೆ ಪ್ರಕಟವಾದಂತೆಲ್ಲಾ ಅವರಿಗೆ ಪ್ರತಿ-
ಗಳನ್ನು ಕಳುಹಿಸುವ ವ್ಯವಸ್ಥೆ
ಮಾಡಲಾಗುವದು.

(ಹಣವನ್ನು ಮನಿಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಕನ್ನಡ ಅಧ್ಯಯನಪೀಠದ ಪ್ರಕಟನೆಗಳು

ಪ್ರಾಚೀನ ಕಾವ್ಯತರಂಗ

೧.	ರಾಜಶೇಖರ ವಿಳಾಸ ಸಂಗ್ರಹ	೨–೦೦
೨.	ಸೋಮನಾಥ ಚರಿತ್ರಂ	೫–೦೦
೩.	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ–೧	೬–೦೦
೪.	ರಾಜಶೇಖರ ವಿಳಾಸಂ	೧೦–೦೦
೫.	ತ್ರಿಷಷ್ಟಿ ಪುರಾತನ ಚಾರಿತ್ರಂ	೧೨–೦೦
೬.	ಆರು ರಗಳೆಗಳು	೩–೫೦
೭.	ಬಸವರಾಜ ವಿಜಯಂ	೨೦–೦೦
೮.	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ–೨	೮–೦೦

ವಚನಸಾಹಿತ್ಯ ತರಂಗ

೧.	ಚನ್ನಬಸವಣ್ಣನವರ ವಚನಗಳು	೨೦–೦೦
೨.	ಸಿದ್ಧರಾಮೇಶ್ವರ ವಚನಗಳು	೨೦–೦೦
೩.	ಬಸವಣ್ಣನವರ ವಚನಗಳು	೨೦–೦೦
೪.	ಶಿವಶರಣೆಯರ ವಚನಗಳು	೨೦-೦೦
೫.	ಮಹಾದೇವಿಯಕ್ಕನ ವಚನಗಳು	೭–೦೦
೬.	ನೀಲಮ್ಮನ ಮತ್ತು ಲಿಂಗಮ್ಮನ ವಚನಗಳು	೫–೦೦
೭.	ಇಪ್ಪತ್ತೇಳು ಶಿವಶರಣೆಯರ ವಚನಗಳು	೫–೦೦
೮.	ಅಮುಗೆರಾಯಮ್ಮನ ಮತ್ತು ಅಕ್ಕಮ್ಮನ ವಚನಗಳು	೫–೦೦
೯.	ವೀರಶೈವ ಚಿಂತಾಮಣಿ	೭–೦೦
೧೦.	ವಿಶೇಷಾನುಭವ ಷಟ್ಸ್ಥಲ	೧೪–೦೦
೧೧.	ಮುಕ್ತಿ ಕಂಠಾಭರಣ	೬–೦೦
೧೨.	ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ	೧೨–೦೦
೧೩.	ಗುಮ್ಮಳಾಪುರ ಸಿದ್ಧಲಿಂಗದೇವನ ಶೂನ್ಯಸಂಪಾದನೆ	೧೫–೦೦
೧೪.	ಸಕಲ ಪುರಾತನರ ವಚನಗಳು, ಭಾಗ–೧.	೧೮–೦೦

ವೀರಶೈವ ಸಾಹಿತ್ಯ ತರಂಗ

೧.	ಶೂನ್ಯ ಸಂಪಾದನೆ (ಇಂಗ್ಲಿಷ)	೧೨–೦೦
೨.	" "	೨೦–೦೦
೩.	" "	೨೦–೦೦
೪.	ಶೂನ್ಯ ಸಂಪಾದನೆ (ಇಂಗ್ಲಿಷ)	೨೦–೦೦
೫.	" "	೨೦–೦೦
೬.	ಷಟ್ಸ್ಥಲ ಪ್ರಭೆ	೧೦–೦೦

ಜೈನ ಸಾಹಿತ್ಯ ತರಂಗ

೧.	ನೇಮಿನಾಥ ಪುರಾಣಂ	೬–೦೦
೨.	ಜೀವಂಧರ ಚರಿತೆ	೭–೦೦

ಬ್ರಾಹ್ಮಣ ಸಾಹಿತ್ಯ ತರಂಗ

೧.	ಅಕ್ರೂರ ಚರಿತ್ರೆ	೪–೦೦
೨.	ಪೌಲೋಮ ಆಸ್ತೀಕ ಪರ್ವ	೮–೦೦

ಜನಪದ ಸಾಹಿತ್ಯ ತರಂಗ

೧.	ಜೀವನ ಜೋಕಾಲಿ ೧	೪–೦೦
೨.	" ೨	೪–೦೦
೩.	" ೩	೫–೦೦

ಶಾಸನ ಶಾಸ್ತ್ರ ತರಂಗ

೧.	ಶಾಸನ ಸಂಪದ	೨–೦೦

ಭಾಷಾಶಾಸ್ತ್ರ ತರಂಗ

೧.	Structure of Kannada	೫–೦೦

ಮಹಾಪ್ರಬಂಧ ತರಂಗ

೧.	ಕನ್ನಡ ಸಾಹಿತ್ಯದಲ್ಲಿ ಹಾಸ್ಯ	೮–೦೦
೨.	ನೇಮಿಚಂದ್ರ	೧೨–೦೦
೩.	The Havyaka dialect	೧೨–೦೦